ಶನಿವಾರ, ಜೂನ್ 14, 2025 | ₹ 7.00

● www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹುಲಿಗಳ ಆಟ

ಜೈಪುರದ ನಾಹರ್‌ಗರ್ ಜೈವಿಕ ಉದ್ಯಾನದಲ್ಲಿರುವ ಬಿಳಿ ಹುಲಿ 'ಭೀಮ್' ಮತ್ತು ಬಂಗಾಳ ಹುಲಿ 'ಸ್ಕಂದಿ'ಯ ಆಟ ಶುಕ್ರವಾರ ಕ್ಯಾಮೆರಾ ಕಣ್ಣಿಗೆ ಸಿಕ್ಕಿದ್ದು ಹೀಗೆ...



ಸಂಕ್ಷಿಪ್ತ ಸುದ್ದಿ

ಆಗುಂಬೆ ಘಾಟಿ: ಭಾರಿ ವಾಹನಗಳ ಸಂಚಾರ ನಿಷೇಧ



ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಘಾಟಿಯ ರಸ್ತೆ ತಿರುವಿನ ನೋಟ

ಉಡುಪಿ: ರಾಷ್ಟ್ರೀಯ ಹೆದ್ದಾರಿ 169 ಎ ತೀರ್ಥಹಳ್ಳಿ-ಮಲ್ಪೆ ರಸ್ತೆಯ ಆಗುಂಬೆ ಘಾಟಿಯಲ್ಲಿ ಜೂನ್ 15 ರಿಂದ ಸೆಪ್ಟೆಂಬರ್ 30 ರ ವರೆಗೆ ಲಘು ವಾಹನ ಸಂಚಾರಕ್ಕೆ ಮಾತ್ರ ಅನುವು ಮಾಡಿ, ಭಾರಿ ವಾಹನ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಕೆ. ವಿದ್ಯಾಕುಮಾರಿ ಆದೇಶಿಸಿದ್ದಾರೆ.

ಉಡುಪಿಯಿಂದ ತೀರ್ಥಹಳ್ಳಿಗೆ ಸಂಚರಿಸುವ ಭಾರಿ ವಾಹನಗಳು ಉಡುಪಿ-ಕುಂದಾಪುರ-ಸಿದ್ದಾಪುರ-ಮಾಸ್ತಿಕಟ್ಟೆ-ತೀರ್ಥಹಳ್ಳಿ ಮಾರ್ಗವಾಗಿ ಸಂಚರಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

‘ಬಿಜೆಪಿ ಸಂಘಟಿಸಲು ವಂಚನೆ ಹಣ ಬಳಕೆ’



ಸಂತೋಷ ಲಾಡ್

ಹುಬ್ಬಳ್ಳಿ: ‘ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್, ವಂಚನೆ ಮತ್ತು ಗೋಮಾಂಸ ಸಾಗಿಸುವ ಕಂಪನಿಗಳಿಂದ ಚಂದಾ ಎತ್ತುವ ಮೂಲಕ ಬಿಜೆಪಿಯನ್ನು ಕಟ್ಟಲಾಗಿದೆ’ ಎಂದು ಸಚಿವ ಸಂತೋಷ ಲಾಡ್ ಆರೋಪಿಸಿದರು.

ಕುಂದಗೋಳದಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಚುನಾವಣೆಗೂ ಮುನ್ನ ಬಿಜೆಪಿ ಮಾಡಿಕೊಂಡಿದ್ದ ಚುನಾವಣಾ ಬಾಂಡ್ ಹಣ ಮತ್ತು ಪ್ರಧಾನಮಂತ್ರಿ ಕೇರ್ ಹಣ ಎಲ್ಲಿ ಹೋಗಿದೆ ಎಂಬ ಬಗ್ಗೆ ಮಾಧ್ಯಮದಲ್ಲಿ ವಿಸ್ತೃತ ಚರ್ಚೆ ಆಗಬೇಕಿದೆ’ ಎಂದರು.

ಸಾಣೇಹಳ್ಳಿ: ರಂಗ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹೊಸದುರ್ಗ (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನ ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾಸಂಘ ನಡೆಸುವ ಶಿವಕುಮಾರ ರಂಗಪ್ರಯೋಗ ಶಾಲೆಯ ಒಂದು ವರ್ಷ ಅವಧಿಯ ರಂಗ ಡಿಪ್ಲೊಮಾ ಕೋರ್ಸ್‌ಗೆ ರಂಗಾಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

18ರಿಂದ 30 ವರ್ಷ ವಯೋಮಿತಿಯ ಯುವಕ, ಯುವತಿಯರು ತರಬೇತಿಗೆ ಅರ್ಜಿ ಸಲ್ಲಿಸಬಹುದು. ತಲಾ 20 ಯುವಕ, ಯುವತಿಯರನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ತರಬೇತಿಗೆ ಕನಿಷ್ಠ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು. ತರಬೇತಿ, ಊಟ, ವಸತಿ ಸೌಲಭ್ಯ ಉಚಿತವಾಗಿರುತ್ತದೆ.

ಅರ್ಜಿಗಾಗಿ ವೆಬ್‌ಸೈಟ್; www.theatreschoolsanehalli.org ಸಂಪರ್ಕಿಸಬೇಕು. ಅರ್ಜಿಗಳನ್ನು ಜೂನ್ 25ರೊಳಗೆ ಪ್ರಾಚಾರ್ಯರು, ಶಿವಕುಮಾರ ರಂಗಪ್ರಯೋಗ ಶಾಲೆ, ಸಾಣೇಹಳ್ಳಿ– 577515 ವಿಳಾಸಕ್ಕೆ ಕಳುಹಿಸಬೇಕು. ಜೂನ್ 27 ಹಾಗೂ 28ರಂದು ರಂಗಪ್ರಯೋಗ ಶಾಲೆ ಆವರಣದಲ್ಲಿ ಸಂದರ್ಶನ ನಡೆಯಲಿದೆ. ಮಾಹಿತಿಗೆ ಮೊ; 8861043553 ಅಥವಾ 9972007015 ಸಂಪರ್ಕಿಸಲು ಕಲಾಸಂಘದ ಕಾರ್ಯದರ್ಶಿ ಪರಮೇಶ್ವರಯ್ಯ ಪ್ರಕಟಣೆಯಲ್ಲಿ ಕೋರಿದ್ದಾರೆ.

ಅರಣ್ಯ ಇಲಾಖೆಯ ಅನುಮೋದನೆ • ಅಂದಾಜು ಹದಿನೇಳು ಸಾವಿರ ಮರಗಳ ಹನನ ಸಾಧ್ಯತೆ

ಸಾರಂಗಪಾಣಿ ಗಣಿಗಾರಿಕೆಗೆ ಅಸ್ತು

• ಯತೀಶ್ ಕುಮಾರ್ ಜಿ.ಡಿ.

ಬೆಂಗಳೂರು: ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಅಂದಾಜು 120 ಎಕರೆ ಅರಣ್ಯ ಪ್ರದೇಶದ ಭೂ ಪರಿವರ್ತನೆಗಾಗಿ ಶಿಫಾರಸು ಮಾಡಿರುವ ರಾಜ್ಯ ಅರಣ್ಯ ಪಡೆ ಮುಖ್ಯಸ್ಥರು, ಗಣಿಗಾರಿಕೆ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮೊದಲನೇ ಹಂತದ ಅನುಮತಿ ಪಡೆಯುವಂತೆಯೂ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

ಅರಣ್ಯ ಪ್ರದೇಶದ ವ್ಯಾಪ್ತಿ ಕುಸಿತದಲ್ಲಿ ದೇಶದಲ್ಲಿ ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ ಎಂದು ಭಾರತೀಯ ಅರಣ್ಯ ಸಮೀಕ್ಷೆಯ ವರದಿ ಹೇಳಿರುವ ಹೊತ್ತಿನಲ್ಲೇ ರಾಜ್ಯದ ಅರಣ್ಯಗಳಿಗೆ ಮತ್ತೊಂದು ಆಪತ್ತು ಬರುವ ಸಾಧ್ಯತೆಯಿದೆ. ಅರಣ್ಯದಲ್ಲಿ ಒಂದು ಮರ ಕಡಿದರೂ ಶಿಕ್ಷೆ ಖಚಿತ ಎಂದು ಅರಣ್ಯ ಸಚಿವರು ಹೇಳಿರುವ ಬೆನ್ನಲ್ಲೇ ಅರಣ್ಯ ಇಲಾಖೆಯಿಂದಲೇ ಈ ಅನುಮೋದನೆ ದೊರಕಿದೆ.



ಮಿನರಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯು ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಗಣಿಗಾರಿಕೆ ಯೋಜನೆಗಾಗಿ ತುಮಕೂರು ಜಿಲ್ಲೆಯ ಗೊಲ್ಲರಹಳ್ಳಿ, ಲಕ್ಕೇನಹಳ್ಳಿ, ಕೋಡಿಹಳ್ಳಿ, ಹೊಸಹಳ್ಳಿ, ತೋನಲಾಪುರ ಗ್ರಾಮಗಳಲ್ಲಿ ಅಂದಾಜು 48 ಹೆಕ್ಟೇರ್ ಅರಣ್ಯ ಭೂಮಿ ಪರಿವರ್ತನೆ ಕೋರಿ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿತ್ತು. ತುಮಕೂರು ವಿಭಾಗದ ಡಿಸಿಎಫ್ ಮತ್ತು ಹಾಸನ ವೃತ್ತದ ಸಿಸಿಎಫ್ ಪ್ರಸ್ತಾವನೆಯನ್ನು ಶಿಫಾರಸು ಮಾಡಿದ್ದರು.

ಪ್ರಸ್ತಾಪಿತ ಪ್ರದೇಶವು ಬುಕ್ಕಾಪಟ್ಟಣ ಚಿಂಕಾರಾ ಅಭಯಾರಣ್ಯದ ಪರಿಭಾವಿತ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯಲ್ಲಿದೆ.

ಉದ್ದೇಶಿತ ಗಣಿ ಯೋಜನೆಯಿಂದ 17,000ಕ್ಕೂ ಹೆಚ್ಚು ಮರಗಳು ನಾಶವಾಗಲಿದ್ದು ಮಾನವ- ವನ್ಯಜೀವಿ ಸಂಘರ್ಷ ಹೆಚ್ಚಾಗಿ, ಸ್ಥಳೀಯ ಜನಜೀವನದ ಮೇಲೆ ಪರಿಣಾಮ ಬೀರಲಿದ್ದು ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಅವರು ಅರಣ್ಯ ಸಚಿವರಿಗೆ ಕಳೆದ ವರ್ಷ ಡಿಸೆಂಬರ್‌ನಲ್ಲಿ ಪತ್ರ ಬರೆದು ಮನವಿ ಮಾಡಿದ್ದರು. ಸಾಮಾಜಿಕ ಹೋರಾಟಗಾರರಾದ ಎಸ್. ಆರ್.ಹಿರೇಮಠ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸಹ ಯೋಜನೆಗೆ ಅನುಮತಿ ನೀಡದಂತೆ ಒತ್ತಾಯ ಮಾಡಿದ್ದರು. ಈ ಎಲ್ಲಾ ವಿರೋಧಗಳ ಮಧ್ಯೆಯೂ ಅರಣ್ಯ ಇಲಾಖೆಯು ಪ್ರಸ್ತಾವನೆಗೆ ಹಸಿರು ನಿಶಾನೆ ನೀಡಿದೆ.

ಇದೇ ಅರಣ್ಯ ಪ್ರದೇಶಗಳಿಗೆ ಹೊಂದಿಕೊಂಡಂತಿರುವ ಗಣಿಗಾರಿಕೆಯ ಎರಡು ಪ್ರಸ್ತಾಪಗಳಿಗೆ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯ ಅನುಮತಿ ನೀಡುವುದು ಬೇಡ ಎಂದು 2017 ರಲ್ಲಿ ಶಿಫಾರಸು ಮಾಡಿತ್ತು. ಈ ಅಂಶವನ್ನು ಪ್ರಸ್ತಾಪಿಸಿ ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಜೂನ್ ಆರರಂದು ಗಿರಿಧರ ಕುಲಕರ್ಣಿ ಪತ್ರ ಬರೆದಿದ್ದರು.

ಗೋವಾ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಯರೆಕಟ್ಟೆ ಹಾಗೂ ಹೊಂಬಳಘಟ್ಟ ಎಂಬ ಗ್ರಾಮಗಳಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ ನಡೆಸಲು ಅಂದಾಜು 117 ಹೆಕ್ಟೇರ್ ಅರಣ್ಯ ಪ್ರದೇಶದ ಪರಿವರ್ತನೆ ಕೋರಿ ಕೆಲ ವರ್ಷದ ಹಿಂದೆ ಪ್ರಸ್ತಾವನೆ ಸಲ್ಲಿಸಿತ್ತು.

ರಾಜ್ಯ ಅರಣ್ಯ ಇಲಾಖೆ ಹಾಗೂ ರಾಜ್ಯ ಸರ್ಕಾರಗಳೆರಡೂ ಪ್ರಸ್ತಾವನೆಗೆ ಶಿಫಾರಸ್ಸು ಮಾಡಿದ್ದವು. ಆದರೆ ಸ್ಥಳ ಪರಿಶೀಲನೆ ನಡೆಸಿದ್ದ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯ ಅಂದಿನ ಡಿಸಿಎಫ್ ಆರ್.ಪದ್ಮಾವತೆ ಅವರು ಯೋಜನೆಗೆ ಅನುಮತಿ ನೀಡುವುದು ಬೇಡ ಅಂದು 2017ರಲ್ಲಿ ಶಿಫಾರಸು ಮಾಡಿದ್ದರು.

ಗುತ್ತಿಗೆಗೆ ಪ್ರಸ್ತಾಪಿಸಲಾದ ಅರಣ್ಯ ಭೂಮಿಯಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ, ಕರಡಿ, ಮೊಲ, ಜಿಂಕೆ, ಕಾಡುಕುರಿ, ಕಾಡುಹಂದಿ, ಮುಳ್ಳುಹಂದಿ, ನವಿಲು, ನರಿ, ಸೇರಿದಂತೆ ಅನೇಕ ವನ್ಯಜೀವಿಗಳು ಕಂಡುಬಂದಿವೆ. ಈ ಪ್ರದೇಶದಲ್ಲಿ ಲಭ್ಯವಿರುವ ಕಬ್ಬಿಣದ ಅದಿರು ಕಡಿಮೆ ದರ್ಜೆಯ ಹೆಮಟೈಟ್ ಆಗಿದೆ. ಪ್ರಶ್ನೆಯಲ್ಲಿರುವ ಭೂಮಿಯು ದೊಡ್ಡ ಗುಡ್ಡದ ಭಾಗವಾಗಿದ್ದು, ಅಲ್ಲಿ 1952ರಿಂದ ಗಣಿಗಾರಿಕೆ ಈಗಾಗಲೇ ನಡೆಸಲಾಗುತ್ತಿತ್ತು. ಒಟ್ಟು 25 ಗಣಿಗಳು ಈ ಪ್ರದೇಶದಿಂದ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರನ್ನು ಹೊರತೆಗೆದಿವೆ. ಈ ಪ್ರದೇಶದಲ್ಲಿ ಆರಂಭದಲ್ಲಿ ಸಾರಂಗಪಾಣಿ ಮುದಲಿಯಾರ್ ಅವರು 1952ರಿಂದ 1998ರವರೆಗೆ ಗಣಿಗಾರಿಕೆ ನಡೆಸುತ್ತಿದ್ದರು. 1999ರಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಬದಿಗೊತ್ತಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಮೂಲ ಗುತ್ತಿಗೆಯನ್ನು ಅನೇಕ ಗಣಿಗಾರಿಕಾ ಕಂಪನಿಗಳಿಗೆ ವಿಭಜಿಸಿತ್ತು.

ಬೆಂಗಳೂರಿನ ಬಾಬಣ್ಣ ಎಂಬುವವರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅರವಟ್ಟಿಗೆ ಹಾಗೂ ಹೊಸಹಳ್ಳಿ ಎಂಬ ಗ್ರಾಮಗಳಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ ನಡೆಸಲು ಅಂದಾಜು 155 ಹೆಕ್ಟೇರ್ ಅರಣ್ಯ ಪ್ರದೇಶದ ಪರಿವರ್ತನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದರು. ರಾಜ್ಯ ಅರಣ್ಯ ಇಲಾಖೆ ಹಾಗೂ ರಾಜ್ಯ ಸರ್ಕಾರಗಳೆರಡೂ ಪ್ರಸ್ತಾವನೆಗೆ ಶಿಫಾರಸು ಮಾಡಿದ್ದವು. ಆದರೆ ಸ್ಥಳ ಪರಿಶೀಲನೆ ನಡೆಸಿದ್ದ ಪದ್ಮಾವತೆ ಅವರು ಗೋವಾ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಯೋಜನೆ ಕುರಿತು ಮಾಡಿದ ಪ್ರಸ್ತಾಪ ಮಾಡಿದ ಬಹುತೇಕ ಅಂಶಗಳನ್ನೇ ಈ ಯೋಜನೆಯ ಸ್ಥಳ ಪರಿಶೀಲನಾ ವರದಿಯಲ್ಲೂ ಸಹ ಉಲ್ಲೇಖಿಸಿ ಯೋಜನೆಗೆ ಅನುಮತಿ ನೀಡುವುದು ಬೇಡ ಅಂದು 2017ರಲ್ಲಿ ಶಿಫಾರಸು-ಮಾಡಿದ್ದರು.

ಇದೀಗ ಇದೇ ಪ್ರದೇಶದಲ್ಲಿ ರಾಜ್ಯ ಅರಣ್ಯ ಇಲಾಖೆಯು ಇಂತಹುದೇ ಮತ್ತೊಂದು ಪ್ರಸ್ತಾವನೆಗೆ ಅಸ್ತು ಎನ್ನುವ ಮೂಲಕ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯದ ಶಿಫಾರಸುಗಳನ್ನು ಮೂಲೆಗೆ ತಳ್ಳಿದೆ ಎಂಬ ಆರೋಪ ಕೇಳಿ ಬಂದಿದೆ.

ಡಿಸಿಎಫ್ ಶಿಫಾರಸು ಏನಾಗಿತ್ತು?

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಈ ಅರಣ್ಯ ಪ್ರದೇಶವು ತುಮಕೂರು ಅರಣ್ಯ ವಿಭಾಗದ ತೀರ್ಥಪುರ ಮೀಸಲು ಅರಣ್ಯಗಳಲ್ಲಿ ಬರುತ್ತದೆ. ಪ್ರಸ್ತುತ ಈ ಕಾಡಿನಲ್ಲಿ ಉತ್ತಮ ಪುನರುತ್ಪಾದನೆಯನ್ನು ತೋರಿಸುತ್ತಿದೆ. ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಜಿಂಕೆ ಮತ್ತು ಮೊಲಗಳು ಕಂಡವು. ಜೊತೆಗೆ ಕರಡಿ ಮತ್ತು ಚಿರತೆಗಳ ಪರೋಕ್ಷ ಇರುವಿಕೆ ಕಂಡುಬಂದಿರುತ್ತದೆ. ಈ ಪ್ರದೇಶವು ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಿಂದ ಭದ್ರಾಗೆ ವಲಸೆ ಬರುವ ಆನೆಗಳ ಗುಂಪಿಗೆ ಆಶ್ರಯ ನೀಡುತ್ತದೆ. ಚಿಕ್ಕನಾಯಕನಹಳ್ಳಿಯ ವಲಯ ಅರಣ್ಯ ಅಧಿಕಾರಿಯಿಂದ ಪಡೆದ ಮಾಹಿತಿಯ ಪ್ರಕಾರ, 2015-16ರಲ್ಲಿ ಬೆಟ್ಟದ ಸುತ್ತಮುತ್ತಲಿನ ಹಳ್ಳಿಗಳಲ್ಲಿ 1,01,430 ರೂಪಾಯಿ ಮಾನವ-ವನ್ಯಜೀವಿ ಸಂಘರ್ಷಕ್ಕಾಗಿ ಪರಿಹಾರವನ್ನು ನೀಡಲಾಗಿದೆ. ಆದ್ದರಿಂದ, ಈ ಪ್ರದೇಶದಲ್ಲಿ ಗಣಿಗಾರಿಕೆಯು ಈಗಾಗಲೇ ಅಸ್ತಿತ್ವದಲ್ಲಿರುವ ಸಂಘರ್ಷವನ್ನು ಹೆಚ್ಚಿಸುತ್ತದೆ. ‘ಇದಲ್ಲದೆ, ತುಮಕೂರು ಜಿಲ್ಲೆಯು ಬರಪೀಡಿತ ಪ್ರದೇಶವಾದ ಚಿಕ್ಕನಾಯಕನಹಳ್ಳಿ ಸುತ್ತಮುತ್ತಲಿನ ಹಳ್ಳಿಗಳಿಗೆ ಇದು ಏಕೈಕ ಜಲಾನಯನ ಪ್ರದೇಶವಾಗಿದೆ. ಈ ಕಾರಣಗಳನ್ನು ಹೊರತುಪಡಿಸಿ, ಜಲಾನಯನ ದೃಷ್ಟಿಕೋನವನ್ನು ಇಟ್ಟುಕೊಂಡು ಈ ಪ್ರದೇಶವನ್ನು ಗಣಿಗಾರಿಕೆಗೆ ತಿರುಗಿಸುವ ಅಗತ್ಯವಿಲ್ಲ. ಇದು ಈಗಾಗಲೇ ಗಣಿಗಾರಿಕೆ ಮಾಡಿದ ಪ್ರದೇಶವಾಗಿರುವುದರಿಂದ ಪರಿಸರ ಮರುಸ್ಥಾಪನೆಯನ್ನು ಗಮನದಲ್ಲಿಟ್ಟುಕೊಂಡು ಈ ಪ್ರದೇಶವನ್ನು ಹಾಗೆಯೇ ಬಿಡುವುದು ಸೂಕ್ತ ಎಂದು ಅಂದಿನ ಡಿಸಿಎಫ್ ಆರ್.ಪದ್ಮಾವತೆ ಶಿಫಾರಸು ಮಾಡಿದ್ದರು.

ಕರಾವಳಿ: ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು/ಮಡಿಕೇರಿ: ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಸೇರಿದಂತೆ ರಾಜ್ಯದ ಕೆಲವೆಡೆ ಶುಕ್ರವಾರವೂ ಧಾರಾಕಾರ ಮಳೆ ಮುಂದುವರಿದಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯ ಬಿರುಸು ತಗ್ಗಿದ್ದು, ಕೊಡಗು ಜಿಲ್ಲೆಯಲ್ಲಿ ಜಿಟಿಜಿಟಿ ಮಳೆ ಮುಂದುವರಿದಿದೆ.

ಹಾರಂಗಿ ಜಲಾಶಯ ಮಟ್ಟ 2851.50 ಅಡಿ ಇದ್ದು, (ಗರಿಷ್ಠ ಮಟ್ಟ 2,859 ಅಡಿ) ಸದ್ಯ, 2,411 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಮುಂಜಾಗ್ರತಾ ಕ್ರಮವಾಗಿ 2 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ದಕ್ಷಿಣ ಕನ್ನಡದಲ್ಲಿ ದಿನವಿಡೀ ಬಿಟ್ಟುಬಿಟ್ಟು ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆಗಳಲ್ಲಿ ಗುಡ್ಡ ಕುಸಿತ ಆಗಿದೆ. ಹಲವೆಡೆ ಮರ ಬಿದ್ದು ಮನೆಗೆ ಹಾನಿ, ಸಂಚಾರಕ್ಕೆ ಅಡ್ಡಿಯಾಗಿದೆ. ಮೂಲ್ಕಿ ತಾಲ್ಲೂಕಿನಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ. ವಿಟ್ಲದ ಕಲ್ಲಮರೆಯಿಯಲ್ಲಿ ಕಾಲುದಾರಿ ಕುಸಿದು, ಪರ್ಯಾಯ ದಾರಿ ಇಲ್ಲದೆ ಜನರು ಪರದಾಡಿದರು. ಉಡುಪಿ ಜಿಲ್ಲೆಯ ಬೈಂದೂರು ಮತ್ತು ಬ್ರಹ್ಮಾವರದ ಕೆಲವು ಪ್ರದೇಶಗಳು ಜಲಾವೃತವಾಗಿವೆ.

ಬೀದರ್ ವರದಿ: ಜಿಲ್ಲೆಯ ಔರಾದ್ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಬಿರುಸಿನ ಮಳೆಯಾಗಿದೆ. ಔರಾದ್ ತಾಲ್ಲೂಕಿನ ಜೋಜನಾ ಗ್ರಾಮದ ಹತ್ತಕ್ಕೂ ಹೆಚ್ಚು ಮನೆಗಳಿಗೆ ಮಳೆ ನೀರು ನುಗ್ಗಿ ಸಮಸ್ಯೆಯಾಗಿದೆ. ಮನೆಯೊಳಗಿದ್ದ ಬಿತ್ತನೆ ಬೀಜ, ರಸಗೊಬ್ಬರ, ದವಸ ಧಾನ್ಯ ಸೇರಿ ಹಲವು ವಸ್ತುಗಳು ಹಾಳಾಗಿವೆ. ಬೀದರ್ ನಗರ ಹಾಗೂ ತಾಲ್ಲೂಕಿನ ಹಲವೆಡೆ ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಗುರುವಾರ ತಡರಾತ್ರಿ ಮಳೆಯಾಗಿದ್ದು, ಕೆಲವೆಡೆ ಮನೆಗಳಿಗೆ ನೀರು ನುಗ್ಗಿದೆ. ರಾಯಚೂರು, ಲಿಂಗಸುಗೂರು ಹಾಗೂ ಮುದಗಲ್‌ನಲ್ಲಿ ಶುಕ್ರವಾರ ಸಂಜೆ ಮಳೆಯಾಗಿದೆ. ಕಲಬುರಗಿಯಲ್ಲಿ ತುಂತುರು ಮಳೆಯಾಗಿದೆ.

ಕೊಚ್ಚಿಹೋದ ವ್ಯಕ್ತಿ ಶವವಾಗಿ ಪತ್ತೆ (ಹುಬ್ಬಳ್ಳಿ ವರದಿ): ಇಲ್ಲಿನ ನೇಕಾರನಗರ ಪಕ್ಕದ ಗಣೇಶನಗರದಲ್ಲಿ ಬುಧವಾರ ತಡರಾತ್ರಿ ಮಳೆನೀರಿನಲ್ಲಿ ಕೊಚ್ಚಿಹೋಗಿದ್ದ ಬೀರಬಂದ ಓಣಿ ನಿವಾಸಿ ಹುಸೇನಸಾಬ್ ಕಳಸ (54) ಅವರು ಶುಕ್ರವಾರ ಮಧ್ಯಾಹ್ನ ಕರ್ಕಿಹಳ್ಳದ ಬೆಳಗಲಿ ಸೇತುವೆ ಬಳಿ ಶವವಾಗಿ ಪತ್ತೆಯಾಗಿದ್ದಾರೆ.

ಹುಸೇನಸಾಬ್ ಅವರು ನೇಕಾರ ನಗರದ ಮಾವನೂರು ಸೇತುವೆ ಬಳಿ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ದುರ್ಘಟನೆ ನಡೆದಿತ್ತು. ಚರಂಡಿಯಲ್ಲಿ ಬಿದ್ದು, ನೀರಿನ ಸೆಳೆತಕ್ಕೆ ಹುಸೇನಸಾಬ್ ಅವರ ಮೃತದೇಹ ನೇಕಾರ ನಗರದಿಂದ 2 ಕಿ.ಮೀ. ದೂರದಲ್ಲಿರುವ ನಾಲಾದ ಗಿಡಗಂಟಿಗಳ ಮಧ್ಯೆ ಸಿಲುಕಿತ್ತು. ಅವರ ಪತ್ತೆಗಾಗಿ ಬೆಳಗಾವಿಯಿಂದ ರಾಜ್ಯ ವಿಪತ್ತು ನಿರ್ವಹಣಾ ತಂಡ, ನಗರದ ಅಗ್ನಿಶಾಮಕ ದಳ ಹಾಗೂ ಪಾಲಿಕೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು’ ಎಂದು ಹುಬ್ಬಳ್ಳಿ ಶಹರ ತಹಶೀಲ್ದಾರ್ ಕಲಗೌಡ ಪಾಟೀಲ ತಿಳಿಸಿದರು.

ಆಲಮಟ್ಟಿ ಜಲಾಶಯದ ಒಟ್ಟು ಸಂಗ್ರಹ ಸಾಮರ್ಥ್ಯದ ಅರ್ಧದಷ್ಟು ಜೂನ್ ಎರಡನೆಯ ವಾರದಲ್ಲೇ ಭರ್ತಿ ಆಗಿದೆ. 123.081 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಶುಕ್ರವಾರ 62.271 ಟಿಎಂಸಿ ಅಡಿ ನೀರು ಸಂಗ್ರಹವಾಗಿತ್ತು.



ಮಂಗಳೂರಿನ ಸುಲ್ತಾನ್ ಬತ್ತೇರಿ ರಸ್ತೆಯಲ್ಲಿ ವಿದ್ಯಾರ್ಥಿಗಳು ಮಳೆಯಲ್ಲೇ ಶಾಲೆಯಿಂದ ಮರಳಿದರು– ಚಿತ್ರ:ಫಕ್ರುದ್ದೀನ್ ಎಚ್

ಸುದ್ದಿ 2 ನಿಮಿಷ

‘ಆಂಬುಲೆನ್ಸ್ ನಿರ್ವಹಣೆ: ₹250 ಕೋಟಿ ಉಳಿತಾಯ’

ಬೆಂಗಳೂರು: ‘ರಾಜ್ಯದಲ್ಲಿ 108 ಆಂಬುಲೆನ್ಸ್ ಸೇವೆಯನ್ನು ಆರೋಗ್ಯ ಇಲಾಖೆಯೇ ನಿರ್ವಹಣೆ ಮಾಡುವುದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ₹250 ಕೋಟಿ ಉಳಿತಾಯ-ವಾಗಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಆಂಬುಲೆನ್ಸ್ ಸೇವೆಯನ್ನು ಖಾಸಗಿ ಹಿಡಿತದಿಂದ ಮುಕ್ತಗೊಳಿಸಿ, ಈ ಸೇವೆ ನಿಯಂತ್ರಣ ಮಾಡುವ ‘ಕಮಾಂಡ್ ಕಂಟ್ರೋಲ್’ ಕೇಂದ್ರವನ್ನು ಇಲಾಖೆಯ ಅಧೀನಕ್ಕೆ ಒಳಪಡಿಸುವ ಪ್ರಸ್ತಾವಕ್ಕೆ ಸರ್ಕಾರದ ಅನುಮೋದನೆ ದೊರೆತಿದೆ.

‘ಈ ಕ್ರಮದಿಂದಾಗಿ 108 ಆರೋಗ್ಯ ಕವಚ ಸೇವೆಯಲ್ಲಿ ಸಾಕಷ್ಟು ಸುಧಾರಣೆಯಾಗುವ ವಿಶ್ವಾಸವಿದೆ. ಈ ಸೇವೆಯಡಿ 715 ಆಂಬುಲೆನ್ಸ್‌ಗಳ ನಿರ್ವಹಣೆಗೆ ‘ಕಮಾಂಡ್ ಕಂಟ್ರೋಲ್’ ಕೇಂದ್ರ ಪ್ರಾರಂಭಿಸಲಾಗುವುದು. ಇದಕ್ಕಾಗಿ ‘112 ಎನ್‌ಜಿ-ಇಆರ್‌ಎಸ್‌ಎಸ್’ ತಂತ್ರಾಂಶ ಬಳಸಿಕೊಳ್ಳಲಾಗುತ್ತದೆ. ಪ್ರತಿ ಜಿಲ್ಲೆಯಲ್ಲಿಯೂ 108 ಕಂಟ್ರೋಲ್ ಸೆಂಟರ್‌ಗಳು ಇರಲಿವೆ. ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ನಿರ್ವಹಣೆಯ ಜವಾಬ್ದಾರಿ ವಹಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಆಂಬುಲೆನ್ಸ್‌ಗಳಿಗೆ ಚಾಲಕರು ಹಾಗೂ ಸಿಬ್ಬಂದಿಯನ್ನು ಜಿಲ್ಲಾ ಮಟ್ಟದಲ್ಲಿಯೇ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುವುದು. ಪ್ರಾಯೋಗಿಕವಾಗಿ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾರಂಭಿಸಲಾಗುತ್ತಿದೆ. 108 ಆಂಬುಲೆನ್ಸ್‌ಗಳ ಜತೆಗೆ ರಾಜ್ಯದ ಸಾವಿರಕ್ಕೂ ಅಧಿಕ ಆಂಬುಲೆನ್ಸ್‌ಗಳನ್ನೂ 108 ಕಮಾಂಡ್ ಸೆಂಟರ್ ಅಧೀನಕ್ಕೆ ತರುವ ಉದ್ದೇಶವಿದೆ’ ಎಂದು ತಿಳಿಸಿದ್ದಾರೆ.



ಎಂಜಿನಿಯರಿಂಗ್ ಪ್ರವೇಶ 1.35 ಲಕ್ಷ ಸೀಟುಗಳು ಲಭ್ಯ

ಬೆಂಗಳೂರು: ಸಿಇಟಿಯಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ 2025–26ನೇ ಸಾಲಿನಲ್ಲಿ ಎಂಜಿನಿಯರಿಂಗ್ ಪ್ರವೇಶಕ್ಕೆ 1.35 ಲಕ್ಷ ಸೀಟುಗಳು ಲಭ್ಯವಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಸುಮಾರು 6,000 ಸೀಟುಗಳು ಕಡಿಮೆಯಾಗಿವೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಶುಕ್ರವಾರ ವಿವಿಧ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ 64,047 ಸೀಟುಗಳೂ ಸೇರಿ 1,35,969 ಸೀಟುಗಳ ಕರಡು ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ಕಳೆದ ವರ್ಷ ಎಂಜಿನಿಯರಿಂಗ್ ಸೀಟುಗಳ ಸಂಖ್ಯೆ 1.41 ಲಕ್ಷ ಇತ್ತು. ಕರಡು ಪಟ್ಟಿಯಲ್ಲಿ ಕಂಪ್ಯೂಟರ್ ಸೈನ್ಸ್ ಸೀಟುಗಳನ್ನು ಕಡಿಮೆ ಮಾಡಲಾಗಿದೆ. ಕಂಪ್ಯೂಟರ್ ಸೈನ್ಸ್‌ಗೆ ಒಟ್ಟು 33,813 ಸೀಟುಗಳು ಲಭ್ಯವಿದ್ದು, ಅವುಗಳಲ್ಲಿ 15,754 ಸೀಟುಗಳನ್ನು ಕೆಇಎ ಭರ್ತಿ ಮಾಡುತ್ತದೆ. 2024ರಲ್ಲಿ ಕಂಪ್ಯೂಟರ್ ಸೈನ್ಸ್‌ಗೆ ಒಟ್ಟು 35,013 ಸೀಟುಗಳು ಲಭ್ಯವಾಗಿದ್ದವು.

ಸೀಟುಗಳನ್ನು ಸೇರಿಸಲು ಅಥವಾ ಅಳಿಸಲು ಕಾಲೇಜುಗಳಿಗೆ ಏಳು ದಿನಗಳ ಕಾಲಾವಕಾಶ ನೀಡಲಾಗಿದೆ. ಅನುದಾನಿತ ಕಾಲೇಜುಗಳು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ (ಎಐಸಿಟಿಇ) ವಿಸ್ತರಣೆಯ ಅನುಮತಿ ಪಡೆಯದೇ ಇರುವುದು. ಆನ್‌ಲೈನ್‌ನಲ್ಲಿ ದಾಖಲೆಗಳನ್ನು ಸಲ್ಲಿಸುವ ಲೋಪಗಳ ಕಾರಣ ಸೀಟುಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗಿರಬಹುದು. ಅಂತಿಮ ಪಟ್ಟಿ ಬಿಡುಗಡೆಯ ನಂತರ ಈ ಸಂಖ್ಯೆಯಲ್ಲಿ ಏರಿಕೆಯಾಗುವ ನಿರೀಕ್ಷೆ ಇದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ ದ್ವಂದ್ವ ನೀತಿ: ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಆರೋಪ

ಜಾತಿವಾರು ಸಮೀಕ್ಷೆ: ಉಸ್ತುವಾರಿ ಸಮಿತಿ ರಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿವಾರು ಮರು ಸಮೀಕ್ಷೆಯನ್ನು ಕಾಲಮಿತಿಯೊಳಗೆ ನಡೆಸಬೇಕು. ವಿಳಂಬ ನೀತಿ ಅನುಸರಿಸಿ ಹಿಂದಿನ ಸಮೀಕ್ಷಾ ವರದಿಗೆ ಬಂದ ಗತಿ ಮರು ಸಮೀಕ್ಷೆಗೂ ಬಾರದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ನಿಗಾ ವಹಿಸಲು ಮೇಲುಸ್ತುವಾರಿ ಸಮಿತಿ ರಚಿಸಬೇಕು ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ‘ಎಲ್ಲ ಸಮುದಾಯಗಳನ್ನು ಒಳಗೊಂಡ ಜನಪ್ರತಿನಿಧಿಗಳು, ಮುಖಂಡರು ಮೇಲುಸ್ತುವಾರಿ ಸಮಿತಿಯಲ್ಲಿರಬೇಕು. ಸಮೀಕ್ಷೆಗಾಗಿ ತಜ್ಞರ ತಂಡ ರಚಿಸಬೇಕು’ ಎಂದು ಒತ್ತಾಯಿಸಿದರು.

‘₹165 ಕೋಟಿ ವೆಚ್ಚ ಮಾಡಿ ಹಿಂದೆ ನಡೆಸಿದ ಸಮೀಕ್ಷೆಯಲ್ಲಿ ವೈಜ್ಞಾನಿಕ–ಅವೈಜ್ಞಾನಿಕ ಏನಿದೆ ಎಂಬುದು ಜನರಿಗೂ ಗೊತ್ತಾಗಬೇಕು. ಅದಕ್ಕಾಗಿ ಆ ವರದಿಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು’ ಎಂದು ಹೇಳಿದರು.

ವರದಿ ಜಾರಿಗೊಳಿಸುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿಯೇ ತಿಳಿಸಿತ್ತು. ಯಾರೋ ಒಬ್ಬರನ್ನು ತೃಪ್ತಿ ಪಡೆಸಲು ಕಾಂಗ್ರೆಸ್ ಪಕ್ಷವನ್ನೇ ಬಲಿ ಕೊಡುವ ಹುನ್ನಾರ ನಡೆಸಲಾಗುತ್ತಿದೆ. ರಾಹುಲ್ ಗಾಂಧಿ ಕೂಡ ಜಾತಿವಾರು ಸಮೀಕ್ಷೆ ಪರವಾಗಿ ದೇಶ ವಿದೇಶಗಳಲ್ಲಿ ಭಾಷಣ ಮಾಡಿದ್ದರು. ಆದರೆ, ಕಾಂಗ್ರೆಸ್ ಹೈಕಮಾಂಡ್ ಸಮೀಕ್ಷೆಯನ್ನು ತಿರಸ್ಕರಿಸಿರುವುದು ಗೊಂದಲ ಉಂಟು ಮಾಡಿದೆ ಎಂದು ಹೇಳಿದರು.

90 ದಿನಗಳಲ್ಲಿ ಮರುಸಮೀಕ್ಷೆ ನಡೆಸುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಆದರೆ, ಅದಕ್ಕೆ ಮಾನದಂಡವೇನು ಎಂಬುದು ತಿಳಿಸಿಲ್ಲ. ಸಮೀಕ್ಷೆಗೆ ಆಧಾರ್ ಕಾರ್ಡ್ ಇಲ್ಲವೇ ಪಡಿತರ ಚೀಟಿಯನ್ನು ಸಂಯೋಜಿಸಬೇಕು. ತಪ್ಪುಗಳಾಗದಂತೆ ನೋಡಿಕೊಳ್ಳಬೇಕು ಎಂದರು. ವಿವಿಧ ಶೋಷಿತ ಸಮುದಾಯಗಳ ಒಕ್ಕೂಟದ ಮುಖಂಡರೊಂದಿಗೆ ಜೂನ್ 20ರಂದು ಸಭೆ ನಡೆಸಿ ನಮ್ಮ ಮುಂದಿನ ನಡೆಯ ಬಗ್ಗೆ ನಿರ್ಧರಿಸಲಾಗುವುದು ಎಂದರು.

ಚಿನ್ನಪ್ಪರೆಡ್ಡಿ ಆಯೋಗ, ಹಾವನೂರು ಆಯೋಗ ಸೇರಿದಂತೆ ವಿವಿಧ ಆಯೋಗಗಳು ನಡೆಸಿರುವ ಸಮೀಕ್ಷೆಗಳನ್ನು ಒಕ್ಕಲಿಗ, ಲಿಂಗಾಯತ ಸಮುದಾಯಗಳು ವಿರೋಧಿಸಿದ್ದವು. ಕಾಂತರಾಜ ವರದಿಗೂ ಅದೇ ರೀತಿಯ ವಿರೋಧವನ್ನು ವ್ಯಕ್ತಪಡಿಸಿದ್ದವು. ಹಾಗಾಗಿ ಮರು ಸಮೀಕ್ಷೆಯನ್ನು ವಿರೋಧಿಸುವುದಿಲ್ಲ ಎನ್ನುವ ನಂಬಿಕೆ ಇಲ್ಲ. ಮರು ಸಮೀಕ್ಷೆ ವಿರೋಧಿಸಿದವರಿಗೆ ಚುನಾವಣೆಯಲ್ಲಿ ಪಾಠ ಕಲಿಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಸಂಚಾಲಕರಾದ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಆರ್. ರಾಮಕೃಷ್ಣಪ್ಪ, ಅನಂತ ನಾಯ್ಕ್, ಸಂಚಾಲನ ಸಮಿತಿ ಸದಸ್ಯ ಜಿ.ಡಿ.ಗೋಪಾಲ್, ಕೆ.ವೆಂಕಟಸುಬ್ಬರಾಜು ಉಪಸ್ಥಿತರಿದ್ದರು.

‘ಜಾತಿವಾರು ಸಮೀಕ್ಷೆಗೆ ವಿರೋಧ ಬೇಡ’

ಹೊಸದಾಗಿ ಜಾತಿವಾರು ಸಮೀಕ್ಷೆ ನಡೆಸಲು ನಿರ್ಧರಿಸಿರುವ ರಾಜ್ಯ ಸರ್ಕಾರಕ್ಕೆ ಎಲ್ಲಾ ಸಮುದಾಯಗಳು ಹಾಗೂ ರಾಜಕೀಯ ಪಕ್ಷಗಳು ಬೆಂಬಲ ನೀಡಬೇಕು. ಸಂಘದ ವತಿಯಿಂದ ಪ್ರತ್ಯೇಕವಾಗಿ ಡಿಜಿಟಲ್ ಸರ್ವೆ ಮಾಡಿಸಲಾಗುವುದು ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ.ಕೆಂಚಪ್ಪಗೌಡ ಹೇಳಿದರು.

ಎಚ್.ಕಾಂತರಾಜ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷೆಯ ವರದಿಯನ್ನು ಕೈಬಿಟ್ಟಿರುವುದು ಸರಿಯಾಗಿದೆ. ಹೊಸ ಸಮೀಕ್ಷೆಗೆ ಸಂಘದ ವತಿಯಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಹಿಂದೆ ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು, ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹಳೆಯ ವರದಿ ಪರಿಶೀಲಿಸಿ, ಸರಿಪಡಿಸುವಂತೆ ಹೇಳುವುದು ಸರಿಯಲ್ಲ. ಡಿಜಿಟಲ್ ಸೌಲಭ್ಯ ಬಳಸಿಕೊಂಡು ಹೊಸದಾಗಿ ಸಮೀಕ್ಷೆ ನಡೆಸಬೇಕು. ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮೀಕ್ಷೆ ನಡೆಸುವುದು ಸೂಕ್ತ. ಮೂರು ತಿಂಗಳಲ್ಲಿ ಸಮೀಕ್ಷೆ ನಡೆಸಲು ಸಾಧ್ಯವಿಲ್ಲ. ಸ್ವಲ್ಪ ನಿಧಾನವಾದರೂ ನಿಖರವಾಗಿರಬೇಕು ಎಂದು ಅಭಿಪ್ರಾಯಪಟ್ಟರು.



ಬಿ.ಕೆಂಚಪ್ಪಗೌಡ

ವೀರಶೈವರು, ಒಕ್ಕಲಿಗರು, ಕುರುಬರು, ಬ್ರಾಹ್ಮಣರು ಸೇರಿ ಇತರೆ ಸಮುದಾಯಗಳು ಕಾಂತರಾಜ ವರದಿ ಬಗ್ಗೆ ಆಕ್ಷೇಪ ಎತ್ತಿದ್ದವು. ಕೇಂದ್ರ ಮತ್ತು ರಾಜ್ಯ ಸರ್ಕಾರ ಸಮೀಕ್ಷೆ ನಡೆಸಿದರೂ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರ ಸೂಚನೆಯಂತೆ ಸಂಘದಿಂದ ಡಿಜಿಟಲ್ ಸರ್ವೆ ಮಾಡಿಸಲಾಗುವುದು. ಇದು ಯಾವುದೇ ಪಕ್ಷ ಹಾಗೂ ಸರ್ಕಾರಕ್ಕೆ ಸಂಬಂಧವಿಲ್ಲ. ಸಮುದಾಯಕ್ಕೆ ಅನ್ಯಾಯವಾಗಬಾರದು ಎಂಬ ಕಾರಣಕ್ಕೆ ಸಮೀಕ್ಷೆ ಮಾಡಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಸಂಘದ ಕಾರ್ಯಾಧ್ಯಕ್ಷ ಬಿ.ಪಿ. ಮಂಜೇಗೌಡ ಮಾತನಾಡಿ, ಸಮೀಕ್ಷೆಗೆ ಪ್ರತಿ ಪಕ್ಷಗಳು ವಿರೋಧ ಮಾಡುವ ಬದಲು ಸಹಕಾರ ನೀಡಬೇಕು. ರಾಜ್ಯದಲ್ಲಿ 6 ಸಾವಿರಕ್ಕೂ ಅಧಿಕ ಗ್ರಾಮಗಳಿವೆ. ಪ್ರತಿ ಹಳ್ಳಿಗೂ ಅಧಿಕಾರಿಯೊಬ್ಬರನ್ನು ನೇಮಿಸಿ ಸಮರ್ಪಕವಾಗಿ ಅಂಕಿ ಅಂಶ ಕ್ರೋಡೀಕರಿಸಿದರೆ ಸಮಗ್ರ ಮಾಹಿತಿ ಸಿಗುತ್ತದೆ. ಸಮೀಕ್ಷೆ ಬಳಿಕ ಆಕ್ಷೇಪಣೆ ಸಲ್ಲಿಕೆಗೂ ಅವಕಾಶ ನೀಡಬೇಕು ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಕೋನಪ್ಪ ರೆಡ್ಡಿ ಮಾತನಾಡಿ, ಹೊಸದಾಗಿ ನಡೆಸುವ ಜಾತಿವಾರು ಸಮೀಕ್ಷೆಗೆ ಆಧಾರ್ ಲಿಂಕ್ ಮಾಡಬೇಕು. ಜಿಯೊ ಟ್ಯಾಗ್ ಮಾಡಿದರೆ ಆಯಾ ಕುಟುಂಬದ ಆರ್ಥಿಕತೆಯ ಮಾಹಿತಿ ಪಡೆಯಬಹುದು ಎಂದರು.

ಸಂಘದ ಉಪಾಧ್ಯಕ್ಷ ಎಲ್. ಶ್ರೀನಿವಾಸ್, ಗೌರವಾಧ್ಯಕ್ಷ ಎಲುವಳ್ಳಿ ರಮೇಶ್, ಪದಾಧಿಕಾರಿಗಳಾದ ಜೆ. ರಾಜು, ವೆಂಕಟರಾಮೇಗೌಡ ಇದ್ದರು.

ವಿನಯ ಕುಲಕರ್ಣಿ ಶರಣು: ನ್ಯಾಯಾಂಗ ಬಂಧನಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಆರೋಪಿಯಾಗಿರುವ ಧಾರವಾಡ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರು ಶುಕ್ರವಾರ ಇಲ್ಲಿನ ಜನಪ್ರತಿನಿಧಿಗಳ ಕೋರ್ಟ್‌ಗೆ ಶರಣಾದರು.

ಸುಪ್ರೀಂ ಕೋರ್ಟ್ ಆದೇಶದ ಅನುಸಾರ ಬೆಳಿಗ್ಗೆ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಶರಣಾದ ವಿನಯ ಕುಲಕರ್ಣಿ ಅವರನ್ನು ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.‘ಪ್ರಕರಣದ ಸಾಕ್ಷಿಗಳಿಗೆ ಬೆದರಿಕೆ ಹಾಕಿರುವ ಆರೋಪದಡಿ ವಿನಯ ಕುಲಕರ್ಣಿ ಅವರ ಜಾಮೀನು ರದ್ದುಪಡಿ-ಸಬೇಕು’ ಎಂದು ಸಿಬಿಐ ಕೋರಿತ್ತು. ಈ ಹಿನ್ನೆಲೆಯಲ್ಲಿ ಅವರ ಜಾಮೀನು ರದ್ದಾಗಿದೆ.



ಪ್ರಕರಣವೇನು?: ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶ್‌ಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಆನೆಗೊಂದಿಯ ನವ ವೃಂದಾವನ ಗಡ್ಡೆಯ ಪೂಜಾ ವಿವಾದ

ಮಂತ್ರಾಲಯ, ಉತ್ತರಾದಿಮಠ ಶ್ರೀಗಳ ಭೇಟಿ

ಪ್ರಜಾವಾಣಿ ವಾರ್ತೆ

ರಾಯಚೂರು: ಆನೆಗೊಂದಿಯ ನವ ವೃಂದಾವನ ಗಡ್ಡೆಯಲ್ಲಿನ ಯತಿಗಳ ವೃಂದಾವನ ಪೂಜೆ ವಿಚಾರದ ವಿವಾದವನ್ನು ಸೌಹಾರ್ದ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠ ಹಾಗೂ ಉತ್ತರಾದಿಮಠದ ಶ್ರೀಗಳು ಚೆನ್ನೈನಲ್ಲಿ ಗುರುವಾರ ಭೇಟಿ ಮಾಡಿದರು.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಂಜಯ್ ಕೌಲ್ ಮಧ್ಯಸ್ಥಿಕೆಯಲ್ಲಿ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಹಾಗೂ ಉತ್ತರಾದಿಮಠದ ಸತ್ಯಾತ್ಮ ತೀರ್ಥರು ಭೇಟಿ ಮಾಡಿ ಮಾತುಕತೆ ನಡೆಸಿದರು.

ಈ ವೇಳೆ ಪ್ರತಿಕ್ರಿಯೆ ನೀಡಿದ ಉಭಯ ಶ್ರೀಗಳು, ‘ಉಭಯ ಮಠಗಳ ಭಕ್ತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇವೆ. ಸಮಾಜದ ಹಿತಕ್ಕಾಗಿ ಆದಷ್ಟು ಬೇಗನೆ ವಿವಾದಗಳು ಪರಿಹಾರವಾಗಿ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಬೇಕಿದೆ. ಎಲ್ಲರೂ ಒಗ್ಗಟ್ಟಾಗಿ ಪರಿಹಾರ ಕಂಡುಕೊಳ್ಳಲು ಪ್ರಯತ್ನ ಮಾಡುತ್ತೇವೆ’ ಎಂದು ಹೇಳಿದರು.

ಆನೆಗೊಂದಿಯ ನವ ವೃಂದಾವನ ಗಡ್ಡೆಯಲ್ಲಿನ ಯತಿಗಳ ವೃಂದಾವನ ಪೂಜೆ ಹಕ್ಕು ಪಡೆದುಕೊಳ್ಳುವ ವಿಷಯದಲ್ಲಿ ಎರಡು ಮಠಗಳ ನಡುವೆ ವಿವಾದವಿದೆ. ಯತಿಗಳ ಆರಾಧನೆ ವೇಳೆ ನವವೃಂದಾವನ ಗಡ್ಡೆಯಲ್ಲಿ ಬಹಳ ಸೂಕ್ಷ್ಮ ಪರಿಸ್ಥಿತಿ ನಿರ್ಮಾಣವಾಗುತ್ತದೆ. ವಿವಾದ ಇತ್ಯರ್ಥಕ್ಕೆ ಉಭಯ ಮಠಗಳು ನ್ಯಾಯಾಲಯದ ಮೆಟ್ಟಿಲೇರಿವೆ.

ಸ್ಥಳೀಯ ನ್ಯಾಯಾಲಯಗಳು ಎರಡೂ ಮಠಕ್ಕೂ ಒಂದೂವರೆ ದಿನದ ಆಧಾರದಲ್ಲಿ ಪೂಜೆಗೆ ಅವಕಾಶ ಮಾಡಿಕೊಟ್ಟಿವೆ. ಆದರೆ, ವಿವಾದ ಇತ್ಯರ್ಥಗೊಂಡಿಲ್ಲ. ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಸುಪ್ರೀಂಕೋರ್ಟ್ ಸೂಚನೆ ನೀಡಿರುವುದು ಭಕ್ತರಲ್ಲಿ ಆಶಾಭಾವನೆ ಮೂಡಿಸಿದೆ.



ಚೆನ್ನೈನಲ್ಲಿ ಗುರುವಾರ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಹಾಗೂ ಉತ್ತರಾದಿಮಠದ ಸತ್ಯಾತ್ಮ ತೀರ್ಥರು ಭೇಟಿ ಮಾಡಿದರು

ಮೇಯರ್ ಮೀಸಲಾತಿ ತಡೆಯಾಜ್ಞೆ ತೆರವು

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 24ನೇ ಅವಧಿಯ ನೂತನ ಮೇಯರ್ ಸ್ಥಾನಕ್ಕೆ ನಿಗದಿ ಆಗಿದ್ದ ಮೀಸಲಾತಿ ವಿರುದ್ಧದ ತಡೆಯಾಜ್ಞೆ ಧಾರವಾಡ ಹೈಕೋರ್ಟ್ ಪೀಠದಲ್ಲಿ ತೆರವು ಆಗಿದೆ. ಅರ್ಜಿದಾರ, ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ ಸ್ವತಃ ಪ್ರಕರಣವನ್ನು ಹಿಂಪಡೆದಿದ್ದಾರೆ.

‘ತಡೆಗೆ ಸಂಬಂಧಿಸಿ ಹೈಕೋರ್ಟ್‌ನಲ್ಲಿ ಎಷ್ಟು ದಿನ ಪ್ರಕರಣ ನಡೆಯುತ್ತದೆ ಎಂಬ ಬಗ್ಗೆ ಅಂದಾಜಿಲ್ಲ. 5 ವರ್ಷದ ಆಡಳಿತದ ಅವಧಿಯಲ್ಲಿ ಈಗಾಗಲೇ ಮೂರು ವರ್ಷ ಮುಕ್ತಾಯವಾಗಿದೆ. ಎರಡು ವರ್ಷ ಮಾತ್ರ ಬಾಕಿಯಿದೆ. ಅನಗತ್ಯ ಕಾನೂನು ಸಂಘರ್ಷ ಬೇಡವೆಂದು ಪ್ರಕರಣ ಹಿಂಪಡೆದಿರುವೆ’ ಎಂದು ಶಿವು ಮೆಣಸಿನಕಾಯಿ ತಿಳಿಸಿದರು.

ಪ್ರಸ್ತುತ ಪಾಲಿಕೆಯ ಐದು ವರ್ಷದ ಆಡಳಿತ ಅವಧಿಯಲ್ಲಿ, ಮೇಯರ್ ಸ್ಥಾನವು ಸಾಮಾನ್ಯ ವರ್ಗಕ್ಕೆ ಒಂದೇ ಬಾರಿ ಮೀಸಲಾತಿ ನೀಡಿದ್ದನ್ನು ಪ್ರಶ್ನಿಸಿ, ಶಿವು ಮೆಣಸಿನಕಾಯಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಅದರಂತೆ ಹೈಕೋರ್ಟ್ ಮೀಸಲಾತಿ ವಿರುದ್ಧ ತಡೆಯಾಜ್ಞೆ ನೀಡಿತ್ತು.

ಹಾಲಿ ಮೇಯರ್ ಅವಧಿ ಇದೇ 28ರಂದು ಮುಕ್ತಾಯವಾಗಲಿದೆ. ನಂತರ ಅವಧಿಗೆ ಮೇಯರ್ ಸ್ಥಾನ ಸಾಮಾನ್ಯ ಮಹಿಳೆಗೆ ಮತ್ತು ಉಪ ಮೇಯರ್ ಸ್ಥಾನ ಹಿಂದುಳಿದ ವರ್ಗ ‘ಬಿ’ಗೆ ಮೀಸಲಾಗಿದೆ. ಚುನಾವಣೆ ನಡೆಸುವ ಕುರಿತು ಪಾಲಿಕೆ ಆಯುಕ್ತರು ಈಗಾಗಲೇ ಬೆಳಗಾವಿಯ ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದು, ಸೂಚಿಸಿದ್ದಾರೆ. ಜುಲೈ ಎರಡನೇ ವಾರದಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ.

ಶನಿವಾರ, ಜೂನ್ 14, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಯದ ಕನಸು ಬಿತ್ತಿದ ಮರ್ಕರಂ

ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪಂದ್ಯದ ಮೂರನೇ ದಿನವಾದ ಶುಕ್ರವಾರ ಆಸ್ಟ್ರೇಲಿಯಾ ತಂಡವು ಒಡ್ಡಿದ್ದ 282 ರನ್ ಗುರಿಯನ್ನು ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡದ ಹೋರಾಟಕ್ಕೆ ಏಡನ್ ಮರ್ಕರಂ ಬಲ ತುಂಬಿದರು

102*	157	11
ರನ್	ಎಸೆತ	ಬೌಂಡರಿ



ಡ್ರೋನ್ ಬಳಸಿ ಇರಾನ್ ನೆಲದಿಂದಲೇ ದಾಳಿಗೆ ತಂತ್ರ; ಪ್ರತೀಕಾರದ ಎಚ್ಚರಿಕೆ

ಇರಾನ್‌ಗೆ ಶಸ್ತ್ರಾಸ್ತ್ರ ಸಾಗಿಸಿದ್ದ ಮೊಸಾದ್

ದುಬೈ/ ಟೆಹರಾನ್ (ಎಪಿ/ಎಎಫ್‌ಪಿ): ಇಸ್ರೇಲ್‌ನ ಇಂಟೆಲಿಜೆನ್ಸ್ ಏಜೆನ್ಸಿ ಮೊಸಾದ್, ಶುಕ್ರವಾರದ ದಾಳಿಗೆ ಮುಂಚಿತವಾಗಿ ಇರಾನ್‌ಗೆ ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಣೆ ಮಾಡಿತ್ತು ಎಂದು ಭದ್ರತಾ ಏಜೆನ್ಸಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳ್ಳಸಾಗಣೆ ಮಾಡಿದ ಶಸ್ತ್ರಾಸ್ತ್ರಗಳನ್ನು ಬಳಸಿ ಇರಾನ್‌ನ ನೆಲದಿಂದಲೇ ಆ ದೇಶದ ಸೇನಾ ನೆಲೆಗಳು ಮತ್ತು ಸೇನೆಯ ಹಿರಿಯ ಅಧಿಕಾರಿಗಳನ್ನು ಗುರಿಯಾಗಿಸಲಾಗಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಗಳು ಹೇಳಿದ್ದಾರೆ.

ಸ್ಫೋಟಕಗಳನ್ನು ಹೊಂದಿರುವ ಡ್ರೋನ್‌ಗಳನ್ನು ಹಾರಿಸಲು ಇರಾನ್‌ನ ನೆಲದಲ್ಲೇ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಗುರಿಗಳನ್ನು ನಿಖರವಾಗಿ ಧ್ವಂಸಗೊಳಿಸಬಲ್ಲ ಶಸ್ತ್ರಾಸ್ತ್ರಗಳನ್ನೂ ಸಾಗಿಸಿ, ಅವುಗಳನ್ನು ವಾಹನಗಳಿಂದ ಹಾರಿಸಲು ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು.

ಶುಕ್ರವಾರದ ವೈಮಾನಿಕ ದಾಳಿಯ ವೇಳೆ ಈ ವ್ಯವಸ್ಥೆಗಳನ್ನು ಸಕ್ರಿಯಗೊಳಿಸಲಾಯಿತು. ಕ್ಷಿಪಣಿ ಲಾಂಚರ್‌ಗಳು ಮತ್ತು ನೆಲದಿಂದ ಆಗಸಕ್ಕೆ ಕ್ಷಿಪಣಿ ಹಾರಿಸುವ ವ್ಯವಸ್ಥೆಯನ್ನು ಇರಾನ್‌ನ ನೆಲದಿಂದಲೇ ಧ್ವಂಸಗೊಳಿಸಲಾಯಿತು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ದಾಳಿಯ ವೇಳೆ ಇಸ್ರೇಲ್‌ನ ಯುದ್ಧ ವಿಮಾನಗಳು ಇರಾನ್‌ನ ವಾಯು ಪ್ರದೇಶವನ್ನು ಪ್ರವೇಶಿಸಿತ್ತೇ ಅಥವಾ ನೆರೆಯ ದೇಶದ ವಾಯುಪ್ರದೇಶದಿಂದಲೇ ಕ್ಷಿಪಣಿ ಪ್ರಯೋಗಿಸಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ದಾಳಿ ಸಂದರ್ಭದಲ್ಲಿ ಯುದ್ಧ ವಿಮಾನಗಳ ಹಾರಾಟದ ಸದ್ದು ಕೇಳಿಸಿದೆ ಎಂದು ಇರಾಕ್‌ನ ಜನರು ತಿಳಿಸಿದ್ದಾರೆ. ಇಸ್ರೇಲ್ ಈ ಹಿಂದೆ ಇರಾಕ್‌ನ ವಾಯುಪ್ರದೇಶದಿಂದ ಇರಾನ್ ಮೇಲೆ ದಾಳಿ ನಡೆಸಿತ್ತು.

ದಾಳಿಯಲ್ಲಿ ಪಾತ್ರವಿಲ್ಲ: ಈ ದಾಳಿಯಲ್ಲಿ ತನ್ನ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿರುವ ಅಮೆರಿಕ, ತನ್ನ ಹಿತಾಸಕ್ತಿಗಳ ಮೇಲೆ ದಾಳಿ ಮಾಡದಂತೆ ಇರಾನ್‌ಗೆ ಎಚ್ಚರಿಕೆ ನೀಡಿದೆ. ಆದರೆ ಈ ದಾಳಿಗೆ ಅಮೆರಿಕ ಕೂಡಾ 'ಹೊಣೆಗಾರ' ಎಂದಿರುವ ಇರಾನ್, 'ಅಮೆರಿಕದ ನೆರವು ಮತ್ತು ಅನುಮತಿಯಿಲ್ಲದೆ ಇಸ್ರೇಲ್ ಈ ಕಾರ್ಯಾಚರಣೆ ನಡೆಸಲು ಸಾಧ್ಯವಿಲ್ಲ' ಎಂದು ಹೇಳಿದೆ.

ಹೊಸ ಮುಖ್ಯಸ್ಥರ ನೇಮಕ: ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರು ಇಸ್ರೇಲ್ ದಾಳಿಯಿಂದ ಮೃತಪಟ್ಟ ಸೇನಾಧಿಕಾರಿಗಳ ಸ್ಥಾನಗಳಿಗೆ ಹೊಸಬರನ್ನು ನೇಮಿಸಿದ್ದಾರೆ. ಮೊಹಮ್ಮದ್ ಪಕ್ಪೂರ್ ಅವರನ್ನು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್‌ನ ಕಮಾಂಡರ್ ಆಗಿಯೂ, ಅಬ್ದುಲ್‌ರಹೀಮ್ ಮೌಸವಿ ಅವರನ್ನು ಸಶಸ್ತ್ರ ಪಡೆಗಳ ಮುಖ್ಯಸ್ಥರಾಗಿಯೂ ಶುಕ್ರವಾರ ನೇಮಕ ಮಾಡಿದ್ದಾರೆ.



ಟೆಹರಾನ್‌ನಲ್ಲಿರುವ ತಾಣವನ್ನು ಗುರಿಯಾಗಿಸಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ದಟ್ಟ ಹೊಗೆ ಎದ್ದಿರುವುದು –ಎಪಿ ಚಿತ್ರ

ಒಪ್ಪಂದ ಮಾಡಿಕೊಳ್ಳಿ: ಟ್ರಂಪ್

ಇಸ್ರೇಲ್‌ನಿಂದ ಇನ್ನಷ್ಟು ದಾಳಿ ಎದುರಿಸುವುದನ್ನು ತಪ್ಪಿಸಲು ತನ್ನ ಪರಮಾಣು ಕಾರ್ಯಕ್ರಮದ ಕುರಿತು ಒಪ್ಪಂದ ಮಾಡಿಕೊಳ್ಳುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್‌ಅನ್ನು ಒತ್ತಾಯಿಸಿದ್ದಾರೆ.

'ಈಗಾಗಲೇ ಸಾಕಷ್ಟು ಸಾವು ಮತ್ತು ಹಾನಿ ಸಂಭವಿಸಿದೆ. ಇಸ್ರೇಲ್‌ನ ಮುಂದಿನ ದಾಳಿ ಇನ್ನಷ್ಟು ಕ್ರೂರವಾಗಿರಲಿದೆ. ಒಪ್ಪಂದಕ್ಕೆ ಬರದಿದ್ದರೆ, ಇರಾನ್‌ಗೆ ಉಳಿಗಾಲವಿಲ್ಲ' ಎಂದು ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಬರೆದಿದ್ದಾರೆ.

ಯಶಸ್ವಿ ದಾಳಿ: ಇಸ್ರೇಲ್

ಜೆರುಸಲೇಂ (ಪಿಟಿಐ): ಇರಾನ್ ಸೇನೆಯ ಹಿರಿಯ ಕಮಾಂಡರ್‌ಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿದ ಕಾರ್ಯಾಚರಣೆಯನ್ನು 'ಅತ್ಯಂತ ಯಶಸ್ವಿ ಆರಂಭಿಕ ದಾಳಿ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಶುಕ್ರವಾರ ಬಣ್ಣಿಸಿದ್ದಾರೆ.

'ನಮ್ಮ ಆರಂಭಿಕ ದಾಳಿ ಯಶಸ್ವಿಯಾಗಿದೆ. ದೇವರ ದಯೆಯಿಂದ ಇನ್ನೂ ಹೆಚ್ಚಿನ ಯಶಸ್ಸು ಸಾಧಿಸಲಿದ್ದೇವೆ' ಎಂದು ನೆತನ್ಯಾಹು ಹೇಳಿದರು.

'ಇರಾನ್‌ನ ಪರಮಾಣು ಕಾರ್ಯಕ್ರಮಗಳ ಪ್ರಮುಖ ಕೇಂದ್ರವನ್ನು ಹೊಡೆದಿದ್ದೇವೆ. ನಟಾನ್ಜ್‌ನಲ್ಲಿರುವ ಘಟಕ ಮತ್ತು ಇರಾನ್‌ನ ಅಣ್ವಸ್ತ್ರ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಪ್ರಮುಖ ವಿಜ್ಞಾನಿಗಳನ್ನು ಗುರಿಯಾಗಿಸಿದ್ದೇವೆ. ಇರಾನ್‌ನ ಗುರಿ ನಿರ್ದೇಶಿತ ಕ್ಷಿಪಣಿ ಕಾರ್ಯಕ್ರಮದ ಹೃದಯಭಾಗಕ್ಕೂ ಹೊಡೆದಿದ್ದೇವೆ' ಎಂದು ನೆತನ್ಯಾಹು ಹೇಳಿದ್ದಾರೆ.

ಮೋದಿಗೆ ಕರೆ ಮಾಡಿದ ನೆತನ್ಯಾಹು

ಇರಾನ್ ವಿರುದ್ಧದ ದಾಳಿಗೆ ಅಂತರರಾಷ್ಟ್ರೀಯ ಬೆಂಬಲವನ್ನು ಗಿಟ್ಟಿಸುವ ಪ್ರಯತ್ನದಲ್ಲಿ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ವಿಶ್ವದ ವಿವಿಧ ದೇಶಗಳ ನಾಯಕರ ಜತೆ ಮಾತನಾಡಿದ್ದಾರೆ ಎಂದು ಅವರ ಕಚೇರಿ ಶುಕ್ರವಾರ ತಿಳಿಸಿದೆ.

ಭಾರತದ ಕಳವಳವನ್ನು ನೆತನ್ಯಾಹು ಜತೆ ಹಂಚಿಕೊಂಡಿದ್ದು, ಶಾಂತಿ ಮತ್ತು ಸ್ಥಿರತೆಯನ್ನು ಮರುಸ್ಥಾಪಿಸುವ ಅಗತ್ಯವನ್ನು ಒತ್ತಿ ಹೇಳಿದೆ
ನರೇಂದ್ರ ಮೋದಿ, ಪ್ರಧಾನಿ

ಭಾರತದ ಪ್ರಧಾನಿ ನರೇಂದ್ರ ಮೋದಿ, ಜರ್ಮನಿಯ ಚಾನ್ಸಲರ್ ಫ್ರೆಡರಿಕ್ ಮೆರ್ಜ್ ಮತ್ತು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರೊಂದಿಗೆ ಮಾತನಾಡಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹಾಗೂ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಜತೆ ಮಾತನಾಡಲಿದ್ದಾರೆ ಎಂದು ಕಚೇರಿಯ ಪ್ರಕಟಣೆ ತಿಳಿಸಿದೆ.



ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇನಲ್ಲಿ ಶುಕ್ರವಾರ ವಿಮಾನಗಳು ನಿಂತಿದ್ದ ದೃಶ್ಯ. ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷದಿಂದ ಭಾರತದ ಹಲವು ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ –ಪಿಟಿಐ ಚಿತ್ರ

ನಟಾನ್ಜ್ ಪರಮಾಣು ಘಟಕ ಗುರಿ

ಟೆಹರಾನ್ (ಎಪಿ): ಇರಾನ್ ತನ್ನ ಪರಮಾಣು ಯೋಜನೆಗಳಿಗೆ ಬೇಕಾದ ಯುರೇನಿಯಂ ಉತ್ಪಾದಿಸುವ ಅತಿದೊಡ್ಡ ಕೇಂದ್ರ, ನಟಾನ್ಜ್‌ನಲ್ಲಿರುವ ಪರಮಾಣು ಘಟಕದ ಮೇಲೂ ದಾಳಿ ನಡೆದಿದೆ. ಭೂಮಿಯಡಿಯಲ್ಲಿರುವ ಈ ಘಟಕಕ್ಕೆ ಭಾರಿ ಹಾನಿಯಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ನಟಾನ್ಜ್ ಮೇಲೆ ದಾಳಿ ನಡೆದಿರುವುದನ್ನು ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ (ಐಎಇಎ) ದೃಢಪಡಿಸಿದೆ. 'ವಿಕಿರಣ ಸೋರಿಕೆಯಾಗಿದೆಯೇ ಎಂಬುದನ್ನು ಪರಿಶೀಲಿಸಲು ಸಂಸ್ಥೆಯು ಇರಾನ್‌ನ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ. ಇರಾನ್‌ನಲ್ಲಿರುವ ನಮ್ಮ ಅಧಿಕಾರಿಗಳ ಜತೆಯೂ ಮಾತುಕತೆ ನಡೆಸಿದ್ದೇವೆ' ಎಂದು ಐಎಇಎ ಮುಖ್ಯಸ್ಥ ರಫೇಲ್ ಗ್ರಾಸಿ ಹೇಳಿದ್ದಾರೆ.

ಟೆಹರಾನ್‌ನ ವಸತಿ ಸಮುಚ್ಚಯಗಳಿಗೂ ದಾಳಿಯಿಂದ ಹಾನಿಯಾಗಿದ್ದು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಹಲವು ನಾಗರಿಕರು ಮೃತಪಟ್ಟಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಮಾಧ್ಯಮ ತಿಳಿಸಿದೆ. ಆರು ಪರಮಾಣು ವಿಜ್ಞಾನಿಗಳು ಮೃತಪಟ್ಟಿರುವುದಾಗಿ ತಸ್ನಿಮ್ ಸುದ್ದಿ ಸಂಸ್ಥೆ ತಿಳಿಸಿದೆ.

ಕಾರ್ಯಾಚರಣೆಗೆ 200 ಯುದ್ಧ ವಿಮಾನಗಳನ್ನು ಬಳಸಲಾಗಿದ್ದು, 100 ತಾಣಗಳನ್ನು ನಿಖರವಾಗಿ ಧ್ವಂಸಗೊಳಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಸೇನಾ ನೆಲೆಗಳ ಮೇಲಿನ ದಾಳಿಯಲ್ಲಿ ಹಲವು ರೇಡಾರ್ ವ್ಯವಸ್ಥೆ ಮತ್ತು ನೆಲದಿಂದ ಆಗಸಕ್ಕೆ ಕ್ಷಿಪಣಿ ಹಾರಿಸುವ ಲಾಂಚರ್‌ಗಳನ್ನು ನಾಶಪಡಿಸಲಾಗಿದೆ ಎಂದಿದೆ.

ದಾಳಿಯ ಬೆನ್ನಲ್ಲೇ ಟೆಹರಾನ್‌ನ ಇಮಾಮ್ ಖೊಮೇನಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಯಿತು. ಇರಾಕ್ ಮತ್ತು ಜೋರ್ಡನ್ ಕೂಡ ತಮ್ಮ ವಾಯುಪ್ರದೇಶವನ್ನು ಮುಚ್ಚಿ ಎಲ್ಲ ವಿಮಾನ ಸಂಚಾರವನ್ನು ಸ್ಥಗಿತಗೊಳಿಸಿದವು.

ಎಮಿರೇಟ್ಸ್, ಕತಾರ್ ಏರ್‌ವೇಸ್, ಏರ್ ಫ್ರಾನ್ಸ್ ಮತ್ತು ಲುಫ್ತಾನ್ಸಾ ಸೇರಿದಂತೆ ಹಲವಾರು ವಿಮಾನಯಾನ ಸಂಸ್ಥೆಗಳು ಈ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ತಮ್ಮ ವಿಮಾನಗಳನ್ನು ರದ್ದುಗೊಳಿಸಿದವು.

ಮಾರ್ಗ ಬದಲು: (ನವದೆಹಲಿ): ಲಂಡನ್–ಬೆಂಗಳೂರು ವಿಮಾನ ಸೇರಿದಂತೆ ಏರ್ ಇಂಡಿಯಾದ 16 ವಿಮಾನಗಳ ಹಾರಾಟದ ಮಾರ್ಗವನ್ನು ಬದಲಾಯಿಸಲಾಯಿತು.

ಲಂಡನ್‌ನ ಹೀಥ್ರೂ–ಬೆಂಗಳೂರು ಮಾರ್ಗದ ಏರ್ ಇಂಡಿಯಾ ವಿಮಾನವನ್ನು ಶಾರ್ಜಾಕ್ಕೆ ಕಳುಹಿಸಲಾಯಿತು. ಲಂಡನ್, ನ್ಯೂಯಾರ್ಕ್, ವಾಷಿಂಗ್ಟನ್, ನೇವಾರ್ಕ್ ಮತ್ತು ಟೊರೊಂಟೊಕ್ಕೆ ತೆರಳಿದ್ದ 16 ವಿಮಾನಗಳ ಪೈಕಿ ಐದು ವಿಮಾನಗಳನ್ನು ಮುಂಬೈ, ದೆಹಲಿಗೆ ಕಳುಹಿಸಲಾಯಿತು.

ಇಸ್ರೇಲ್, ಇರಾನ್ ಸಂಘರ್ಷ ತೀವ್ರ

ಟೆಹರಾನ್/ಜೆರುಸಲೇಮ್ (ಎಪಿ/ಎಎಫ್‌ಪಿ): ಇರಾನ್ ಮೇಲಿನ ದಾಳಿಯನ್ನು ಇಸ್ರೇಲ್ ಶುಕ್ರವಾರ ರಾತ್ರಿಯೂ ತೀವ್ರಗೊಳಿಸಿದೆ. ಇದಕ್ಕೆ ಪ್ರತಿಯಾಗಿ, ಇಸ್ರೇಲ್‌ನ ಪ್ರಮುಖ ಸ್ಥಳಗಳನ್ನು ಗುರಿಯಾಗಿಸಿ ಇರಾನ್ ಕೂಡ ದಾಳಿ ನಡೆಸಿದ್ದು, ಸಂಘರ್ಷ ತೀವ್ರಗೊಂಡಿದೆ.

ಇರಾನ್ ರಾಜಧಾನಿ ಟೆಹರಾನ್ ಗುರಿಯಾಗಿಸಿ ಇಸ್ರೇಲ್ ಪಡೆಗಳು ಮತ್ತಷ್ಟು ದಾಳಿ ನಡೆಸಿವೆ. ಇಸ್‌ಫಹಾನ್‌ನಲ್ಲಿರುವ ಅಣು ಸ್ಥಾವರ ಸೇರಿ 200ಕ್ಕೂ ಹೆಚ್ಚು ಸ್ಥಳಗಳನ್ನು ಗುರಿಯಾಗಿಸಿ ದಾಳಿ ಮಾಡಿದ್ದಾಗಿ ಇಸ್ರೇಲ್ ಪಡೆಗಳ ಹೇಳಿಕೆ ಉಲ್ಲೇಖಿಸಿ ಬಿಬಿಸಿ ವರದಿ ಮಾಡಿದೆ.

ಫೋರ್ದೊ ಅಣು ಸ್ಥಾವರ ಸಮೀಪ ಎರಡು ಪ್ರಬಲ ಸ್ಫೋಟಗಳು ಕೇಳಿಸಿವೆ ಎಂದೂ ಮೂಲಗಳನ್ನು ಉಲ್ಲೇಖಿಸಿ ಬಿಬಿಸಿ ವರದಿ ಮಾಡಿದೆ.

ಇರಾನ್ ಪಡೆಗಳು ವಾಯು ರಕ್ಷಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಿದ್ದು, ಇಸ್ರೇಲ್ ದಾಳಿಗೆ ಪ್ರತಿರೋಧ ಒಡ್ಡುತ್ತಿವೆ.

ಜೆರುಸಲೇಮ್ ಗುರಿಯಾಗಿಸಿ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ನಗರದಲ್ಲಿ ಕನಿಷ್ಠ ಒಂದು ಕಡೆ ಭಾರಿ ಸ್ಫೋಟವಾಗಿದೆ ಎಂದು ಇಸ್ರೇಲ್ ಹೇಳಿದೆ. ಇದರ ಬೆನ್ನಲ್ಲೇ, ವೈಮಾನಿಕ ದಾಳಿ ಕುರಿತು ಎಚ್ಚರಿಕೆ ನೀಡುವ ಸೈರನ್‌ಗಳು ಜೆರುಸಲೇಮ್‌ನಲ್ಲಿ ಮೊಳಗಿದವು.

ರೂಪಾನಿ: 'ಅದೃಷ್ಟ' ಸಂಖ್ಯೆಯೇ 'ಅಂತಿಮಯಾತ್ರೆ'ಯ ದಿನವಾಯಿತು

ಅಹಮದಾಬಾದ್ (ಪಿಟಿಐ): ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟಿರುವ ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ ರೂಪಾನಿ ತಮ್ಮ ಅದೃಷ್ಟ ಸಂಖ್ಯೆಯಾಗಿ '1206' ಬಳಸುತ್ತಿದ್ದರು. ವಿಮಾನ ಪತನಗೊಂಡು ಅವರು ಮೃತಪಟ್ಟ ದಿನವೂ ಇದೇ ಸಂಖ್ಯೆಯೊಂದಿಗೆ (ಜೂನ್ 12) ತಳಕು ಹಾಕಿಕೊಂಡಿದೆ.

ರೂಪಾನಿ ತಾವು ಬಳಸುತ್ತಿದ್ದ ಎಲ್ಲ ವಾಹನಗಳಿಗೆ ಇದೇ ಸಂಖ್ಯೆಯನ್ನು ಹಾಕಿಕೊಂಡಿದ್ದರು. ಅವರ ಸ್ವಂತ ಊರಾದ ರಾಜ್‌ಕೋಟ್‌ನಲ್ಲಿ '1206' ನೋಂದಣಿಯ ಕಾರು ನೋಡುತ್ತಿದ್ದಂತೆ ಜನರಿಗೆ ಇದು ರೂಪಾನಿ ಅವರಿಗೆ ಸೇರಿದ ವಾಹನ ಎನ್ನುವುದು ತಿಳಿಯುತ್ತಿತ್ತು. ಅವರ ಬಳಿ ಇದ್ದ ದ್ವಿಚಕ್ರ ವಾಹನಕ್ಕೂ ಇದೇ ಸಂಖ್ಯೆ ಇತ್ತು ಎನ್ನುತ್ತಾರೆ ಸ್ಥಳೀಯರು.



ವಿಜಯ ರೂಪಾನಿ

ಲಂಡನ್‌ನಲ್ಲಿರುವ ತಮ್ಮ ಮಗಳನ್ನು ಭೇಟಿಯಾಗಲು ರೂಪಾನಿ ಏರ್ ಇಂಡಿಯಾ ವಿಮಾನದಲ್ಲಿ 12/06ರಂದು ಪ್ರಯಾಣ ಬೆಳೆಸಿದ್ದರು.

ವಿಮಾನ ಪತನಗೊಳ್ಳುವ ಮೂಲಕ ಇದು ಅವರ ಅಂತಿಮ ಯಾತ್ರೆಯ ದಿನವಾಗಿ ಬದಲಾಯಿತು. ಬಿಜೆಪಿಯ ಸಕ್ರಿಯ ಕಾರ್ಯಕರ್ತೆಯೂ ಆಗಿರುವ ಅವರ ಪತ್ನಿ ಅಂಜಲಿಬೆನ್ ಸಹ ಲಂಡನ್‌ನಲ್ಲಿದ್ದರು. ಶುಕ್ರವಾರ ಬೆಳಿಗ್ಗೆ ಅಂಜಲಿಬೆನ್ ಗಾಂಧಿನಗರಕ್ಕೆ ವಾಪಸ್ ಬಂದಿದ್ದಾರೆ.

ಎರಡು ದಿನಗಳ ಹಿಂದೆ ವಿವಾಹ

ವಡೋದರ: ದುರಂತದಲ್ಲಿ ಮೃತಪಟ್ಟ ಭವಿಕ್ ಮಹೇಶ್ವರಿ (26) ಅವರು ಎರಡು ದಿನಗಳ ಹಿಂದಷ್ಟೇ ಸರಳ ವಿವಾಹವಾಗಿದ್ದರು. ಲಂಡನ್‌ಗೆ ತುರ್ತಾಗಿ ಹೊರಡಬೇಕಿದ್ದ ಕಾರಣ ರಿಜಿಸ್ಟರ್ ಮದುವೆ ಆಗಿದ್ದರು. ಲಂಡನ್‌ನಿಂದ ಮತ್ತೆ ವಾಪಸ್ ಬಂದಾಗ ಅದ್ದೂರಿ ಕಾರ್ಯಕ್ರಮ ಆಯೋಜಿಸಲು ಪೋಷಕರು ಯೋಜಿಸಿದ್ದರು. ಆದರೆ ವಿಧಿಯ ಲೆಕ್ಕಾಚಾರವೇ ಬೇರೆಯಾಗಿತ್ತು...

'ಎರಡು ವಾರದ ಹಿಂದೆ ಭವಿಕ್ ವಡೋದರಕ್ಕೆ ಬಂದಿದ್ದ. ಇದೇ ಸಮಯದಲ್ಲೇ ಮದುವೆ ಮಾಡಲು ಕುಟುಂಬಸ್ಥರು ನಿರ್ಧರಿಸಿದೆವು. ಕುಟುಂಬಸ್ಥರ ಸಮ್ಮುಖದಲ್ಲಿ ಸರಳ ವಿವಾಹ ಮಾಡಿದೆವು' ಎಂದು ಹೇಳುವಾಗ ಭವಿಕ್ ಅವರ ತಂದೆ ಅರ್ಜುನ್ ಮಹೇಶ್ವರಿ ಅವರ ಕಣ್ಣಾಲಿಗಳು ತುಂಬಿದ್ದವು.

'ಕೊನೆಯ ಸಲ ಫೋನ್ ಮಾಡಿದ್ದ ಮಗ, ವಿಮಾನವು ಟೇಕ್ ಆಫ್ ಆಗಲು ಸಿದ್ಧವಾಗಿದೆ ಎಂದು ಹೇಳಿದ' ಎಂದರು.

'ಭವಿಕ್‌ರನ್ನು ಲಂಡನ್‌ಗೆ ಕಳುಹಿಸಲು ಪತ್ನಿ ವಿಮಾನ ನಿಲ್ದಾಣದವರೆಗೂ ಬಂದಿದ್ದರು. ಮನೆಗೆ ವಾಪಸ್ ಹೋಗುವ ದಾರಿ ಮಧ್ಯೆಯೇ ದುರಂತ ಸುದ್ದಿ ಕಿವಿಗೆ ಅಪ್ಪಳಿಸಿತು' ಎಂದು ಸಂಬಂಧಿಕರೊಬ್ಬರು ತಿಳಿಸಿದರು.

ಡಾ.ಪ್ರತೀಕ್ ಕಲಿತಿದ್ದು ಬೆಳಗಾವಿಯಲ್ಲಿ...

ಪ್ರಜಾವಾಣಿ ವಾರ್ತೆ

ಬೆಳಗಾವಿ: ಏರ್ ಇಂಡಿಯಾ ವಿಮಾನದಲ್ಲಿ ಸಾವನ್ನಪ್ಪಿದ ರಾಜಸ್ಥಾನದ ಉದಯಪುರ ಮೂಲದ ಡಾ.ಪ್ರತೀಕ್ ಜೋಶಿ ಅವರು, ಇಲ್ಲಿನ ಕೆಎಲ್‌ಇ ಉನ್ನತ ಶಿಕ್ಷಣ ಅಕಾಡೆಮಿಯ (ಕಾಹೆರ್) ಜವಾಹರ ಲಾಲ್ ನೆಹರೂ ವೈದ್ಯಕೀಯ ಕಾಲೇಜಿನ (ಜೆಎನ್‌ಎಂಸಿ) ಹಳೆಯ ವಿದ್ಯಾರ್ಥಿ.

ಡಾ.ಪ್ರತೀಕ್ 2000ರಿಂದ 2005ರವರೆಗೆ ಜೆಎನ್‌ಎಂಸಿಯಲ್ಲಿ ಎಂಬಿಬಿಎಸ್ ಓದಿದ್ದರು. ಲಂಡನ್‌ನಲ್ಲಿ ವೃತ್ತಿ ಕೈಗೊಂಡಿದ್ದ ಅವರು, ತಮ್ಮ ಕುಟುಂಬ ಸದಸ್ಯರೊಂದಿಗೆ ಅಲ್ಲಿಯೇ ನೆಲೆಸಲು ಬಯಸಿದ್ದರು.

ಪತ್ನಿ ಡಾ.ಕೋಮಿ, ಪುತ್ರಿ ಮಿರಾಯಾ (8), ಅವಳಿ ಪುತ್ರರಾದ ನಕುಲ್ (5) ಮತ್ತು ಪ್ರದ್ಯುತ್(5) ಅವರನ್ನು ಕರೆದೊಯ್ಯಲು ಉದಯಪುರಕ್ಕೆ ಬಂದಿದ್ದರು. ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳಲು ವಿಮಾನ ಹತ್ತಿದ್ದ ಅವರು, ವಿಮಾನದಲ್ಲೇ ಸೆಲ್ಫಿ ಕ್ಲಿಕ್ಕಿಸಿಕೊಂಡು ಸ್ನೇಹಿತರು ಮತ್ತು ಸಂಬಂಧಿಕರಿಗೆ ಕಳುಹಿಸಿ ಖುಷಿಪಟ್ಟಿದ್ದರು. ಅದೇ ಅವರ ಕೊನೆಯ ಚಿತ್ರ ಆಯಿತು.

'ಡಾ.ಪ್ರತೀಕ್ ನಮ್ಮ ಕಾಲೇಜಿನ ಹಳೆಯ ವಿದ್ಯಾರ್ಥಿ. 2021ರಲ್ಲಿ ಲಂಡನ್‌ಗೆ ತೆರಳಿ, ಡರ್ಬಿ ಯುನಿವರ್ಸಿಟಿಯಲ್ಲಿ ಕನ್ಸಲ್ಟೆಂಟ್ ರೇಡಿಯಾಲಜಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು. ದುರ್ಘಟನೆಯಲ್ಲಿ ಇಡೀ ಕುಟುಂಬ ಮೃತಪಟ್ಟ ವಿಷಯ ತಿಳಿದು ಬೇಸರವಾಗಿದೆ' ಎಂದು ಜೆಎನ್‌ಎಂಸಿ ಪ್ರಾಚಾರ್ಯರಾದ ಡಾ. ಎನ್.ಎಸ್.ಮಹಾಂತಶೆಟ್ಟಿ ಸುದ್ದಿಗಾರರಿಗೆ ತಿಳಿಸಿದರು.

ಕೋಲಾರದಲ್ಲಿ ಪಿ.ಜಿ

ಕೋಲಾರ: ಡಾ.ಪ್ರತೀಕ್ ಜೋಶಿ ಕೋಲಾರದ ಟಮಕದಲ್ಲಿರುವ ಶ್ರೀದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿ. ಅವರು 2008ರಿಂದ 2010ರಲ್ಲಿ ರೇಡಿಯಾಲಜಿಯಲ್ಲಿ ಡಿಪ್ಲೊಮಾ (ಡಿಎಂಆರ್‌ಡಿ) ಪೂರೈಸಿದ್ದರು. ಎರಡು ವರ್ಷ ಇಲ್ಲಿನ ಹಾಸ್ಟೆಲ್‌ನಲ್ಲಿ ಇದ್ದು ವ್ಯಾಸಂಗ ಮಾಡಿದ್ದರು. ಇವರು ಈಗ ವಿಭಾಗದ ಮುಖ್ಯಸ್ಥರಾಗಿರುವ ಡಾ.ಅನಿಲ್ ಸಕ್ಲೇಚ ಅವರ ವಿದ್ಯಾರ್ಥಿ ಕೂಡ.

'ಡಾ.ಪ್ರತೀಕ್ ಜೋಶಿ ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿ ಆಗಿದ್ದರು. ಅವರ ಹಾಗೂ ಕುಟುಂಬದವರ ಸಾವು ಬೇಸರ ತರಿಸಿದೆ' ಎಂದು ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ವಿನೂತಾ ಶಂಕರ್ ಹೇಳಿದರು.



ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುತ್ತಿದ್ದ ವಿಮಾನದಲ್ಲಿ ಡಾ.ಪ್ರತೀಕ್ ತಮ್ಮ ಕುಟುಂಬದೊಂದಿಗೆ ತೆಗೆದುಕೊಂಡು ಕೊನೆಯ ಸೆಲ್ಫಿ

ಕ್ಲೈವ್ ನೆನಪಿಸಿಕೊಂಡ ಸಂಬಂಧಿಗಳು



ಮಂಗಳೂರು: ವಿಮಾನದ ಸಹ ಪೈಲೆಟ್ ಕ್ಲೈವ್ ಕುಂದರ್ ಚಿಕ್ಕಂದಿನಿಂದಲೇ ವಿಮಾನ ಯಾನದ ಬಗ್ಗೆ ಅತೀವ ಆಸಕ್ತಿ ಹೊಂದಿದ್ದರು ಎಂದು ನೆನಪಿಸಿಕೊಂಡರು ಅವರ ಕುಟುಂಬದ ಒಡನಾಡಿ. ಕ್ಲೈವ್ ತಂದೆ ಕ್ಲಿಫರ್ಡ್ ಕುಂದರ್ ಮಂಗಳೂರಿನವರು, ನಂತರ ಅವರ ಕುಟುಂಬ ಮುಂಬೈನ ಸಾಂತಾಕ್ರೂಸ್ ಕಲಿನಾದಲ್ಲಿ ವಾಸವಾಗಿತ್ತು.

'ಕ್ಲಿಫರ್ಡ್ ಆಯ್ಲ್ ರಿಗ್‌ನಲ್ಲಿ ಕೆಲಸ ಮಾಡುತ್ತಿದ್ದರೆ, ತಾಯಿ ರೇಖಾ 33 ವರ್ಷ ಗಗನಸಖಿಯಾಗಿ ಕೆಲಸ ನಿರ್ವಹಿಸಿದವರು. ಪಾಲಕರ ಪ್ರೋತ್ಸಾಹದಿಂದ ಕ್ಲೈವ್, ಬಾಂಬೆ ಫ್ಲೈಯಿಂಗ್ ಕ್ಲಬ್‌ನ ಕಾಲೇಜ್ ಆಫ್ ಏವಿಯೇಷನ್‌ನಲ್ಲಿ ಪದವಿ ಪಡೆದು, ಪ್ಯಾರಿಸ್‌ನಲ್ಲಿ ಪೈಲೆಟ್ ತರಬೇತಿ ಪಡೆದರು. 2012ರಲ್ಲಿ ಪೈಲೆಟ್ ಆಗಿ ಕೆಲಸ ಪ್ರಾರಂಭಿಸಿದ ಅವರು, 2017ರಲ್ಲಿ ಏರ್ ಇಂಡಿಯಾಕ್ಕೆ ಸೇರಿದರು. 13 ವರ್ಷಗಳಲ್ಲಿ 1,100 ಗಂಟೆಗಳ ಹಾರಾಟದ ಅನುಭವ ಪಡೆದುಕೊಂಡಿದ್ದರು' ಎಂದು ಕ್ಲೈವ್ ಅವರ ಬದುಕಿನ ವೃತ್ತಾಂತ ಬಿಚ್ಚಿಟ್ಟರು ಕುಟುಂಬದ ಒಡನಾಡಿ.

ಮಗಳ ಜೊತೆ ಇರುವ ಪಾಲಕರು, ಒಬ್ಬನೇ ಪುತ್ರನಾಗಿದ್ದ ಕ್ಲೈವ್ ಅಂತ್ಯ ಸಂಸ್ಕಾರಕ್ಕೆ ಭಾರತಕ್ಕೆ ಮರಳಲಿದ್ದಾರೆ.

ಕುಟುಂಬಕ್ಕೆ ಆಸರೆಯಾಗಿದ್ದ ಮಗಳ ಸಾವಿನಿಂದ ಊಟ ತ್ಯಜಿಸಿದ ತಾಯಿ

ವಿಮಾನ ದುರಂತದ ನೋವಿನ ಕತೆಗಳು

ಇಂಫಾಲ್/ ಕಂಗ್ಪೋಕ್ಪಿ (ಪಿಟಿಐ): ವಿಮಾನ ದುರಂತದಲ್ಲಿ ಮೃತಪಟ್ಟ ಮಣಿಪುರ ಮೂಲದ ವಿಮಾನದ ಸಿಬ್ಬಂದಿ ಲಾಮ್‌ನುಂಥೆಮ್ ಸಿಂಗ್ಸೋನ್ (26) ಅವರ ದುಡಿಮೆಯಿಂದಲೇ ಅವರ ಕುಟುಂಬದ ಜೀವನ ಸಾಗುತ್ತಿತ್ತು. ರಾಜ್ಯದಲ್ಲಿನ ಜನಾಂಗೀಯ ಹಿಂಸಾಚಾರದಿಂದ ನಲುಗಿದ್ದ ಕುಟುಂಬಕ್ಕೆ ಇವರೊಬ್ಬರೇ ಆಸರೆಯಾಗಿದ್ದರು.

'ಜೂನ್ 11ರಂದು ಅವರ ತಾಯಿಗೆ ಕರೆ ಮಾಡಿ, 'ಗುರುವಾರ ಲಂಡನ್‌ಗೆ ಹೋಗುವುದಿದೆ. ಹೀಗಾಗಿ ಇಂದು (ಬುಧವಾರ ರಾತ್ರಿ) ಆದಷ್ಟು ಬೇಗ ಮಲಗಬೇಕು' ಎಂದಿದ್ದರು. ಅದೇ ತಾಯಿ–ಮಗಳ ಕೊನೆಯ ಮಾತುಕತೆ' ಎಂದು ಸಂಬಂಧಿಯೊಬ್ಬರು ತಿಳಿಸಿದರು.

ಮಣಿಪುರ ಹಿಂಸಾಚಾರ ಸಂದರ್ಭದಲ್ಲಿ ಕುಕಿ ಸಮುದಾಯಕ್ಕೆ ಸೇರಿದ ಇವರ ಕುಟುಂಬವು ಇಂಫಾಲ್‌ನಿಂದ ಓಡಿ ಬಂದಿತ್ತು. ಸದ್ಯ ಕುಟುಂಬವು ಕಂಗ್ಪೋಕ್ಪಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದೆ.

ತಂದೆಯನ್ನು ಕಳೆದುಕೊಂಡಿರುವ ಸಿಂಗ್ಸೋನ್, ತಾಯಿ ಮತ್ತು ಮೂವರು ಸಹೋದರರ ಜವಾಬ್ದಾರಿಯನ್ನು ಹೊತ್ತಿದ್ದರು. ಹಿರಿಯ ಸಹೋದರ ದೀರ್ಘಕಾಲದಿಂದ ಅನಾರೋಗ್ಯಕ್ಕೆ ಒಳಗಾಗಿದ್ದಾರೆ, ಉಳಿದ ಇಬ್ಬರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಅವರು ತಿಳಿಸಿದರು.

'ಸಿಂಗ್ಸೋನ್ ಅವರ ಸಾವಿನ ಸುದ್ದಿ ತಿಳಿದು ಅವರ ತಾಯಿ ಆಘಾತಕ್ಕೊಳಗಾಗಿದ್ದಾರೆ. ಊಟವನ್ನೇ ತ್ಯಜಿಸಿದ್ದಾರೆ' ಎಂದು ಮನೆಯಲ್ಲಿನ ಸೂತಕದ ಛಾಯೆಯನ್ನು ವಿವರಿಸಿದರು.

ಸಿಂಗ್ಸೋನ್ ಅವರ ಮೃತದೇಹವನ್ನು ಇನ್ನಷ್ಟೇ ಪತ್ತೆ ಮಾಡಬೇಕಿದೆ ಎಂದು ಏರ್ ಇಂಡಿಯಾ ಸಿಬ್ಬಂದಿ ತಿಳಿಸಿದ್ದಾರೆ ಎಂದು ಅವರು ಹೇಳಿದರು.



ದುರಂತದಲ್ಲಿ ಮೃತಪಟ್ಟ ಸಂತ್ರಸ್ತರ ಕುಟುಂಬಸ್ಥರು ಅಹಮದಾಬಾದ್ ಆಸ್ಪತ್ರೆ ಎದುರು ಕಣ್ಣೀರು ಹಾಕಿದರು –ಪಿಟಿಐ ಚಿತ್ರ

ನವವಿವಾಹಿತೆಯ ಬಯಕೆ ಭಸ್ಮ

ಅಹಮದಾಬಾದ್ (ಪಿಟಿಐ): ಬ್ರಿಟನ್‌ನಲ್ಲಿ ಪತಿಯೊಂದಿಗೆ ಹೊಸ ಜೀವನ ಆರಂಭಿಸಲು ಹೊರಟಿದ್ದ ನವವಿವಾಹಿತೆ ಅಂಕಿತ ಪಟೇಲ್ ಅವರ ಕನಸಗಳು ವಿಮಾನದೊಂದಿಗೆ ಭಸ್ಮವಾಗಿವೆ.

ಹೌದು, ಅಂಕಿತ ಮತ್ತು ವಸಂತ್ ಅವರು ಕಳೆದ ಡಿಸೆಂಬರ್ 14ರಂದು ವಿವಾಹವಾಗಿದ್ದರು. ಬ್ರಿಟನ್‌ನಲ್ಲಿ ಅಂಗಡಿ ಇಟ್ಟಿರುವ ವಸಂತ್ ಮದುವೆಯಾದ 12 ದಿನಕ್ಕೇ ಬ್ರಿಟನ್‌ಗೆ ತೆರಳಿದ್ದರು. ಕಳೆದ ಆರು ತಿಂಗಳಿನಿಂದ ವೀಸಾ ಪ್ರಕ್ರಿಯೆಗಾಗಿ ಕಾಲಸವೆಸಿದ್ದ ಅಂಕಿತ ಕೊನೆಗೂ ವೀಸಾ ಪಡೆದು ಪತಿಯನ್ನು ಕಾಣುವ ಆಸೆಗಣ್ಣಿನಿಂದ ಗುರುವಾರ ವಿಮಾನ ಏರಿದ್ದರು.

ಅಂಕಿತಾ ಅವರನ್ನು ಕಳುಹಿಸಲು ಕುಟುಂಬಸ್ಥರು ವಿಮಾನ ನಿಲ್ದಾಣದವರೆಗೂ ಬಂದಿದ್ದರು. ದುರಂತದ ಬಳಿಕ ಆಕೆಯ ಪಾರ್ಥಿವ ಶರೀರಕ್ಕಾಗಿ ಕಾಯುತ್ತಿದ್ದೇವೆ ಎಂದು ಅತ್ತಿಗೆ ಗಾಯತ್ರಿ ಪಟೇಲ್ ತಿಳಿಸಿದರು.

ಬರಸಿಡಿಲು

ಮುಂಬೈ: ವಿಮಾನದ ಪೈಲಟ್‌ಗಳಲ್ಲಿ ಒಬ್ಬರಾದ ಕ್ಯಾಪ್ಟನ್ ಸುಮೀತ್ ಸಭರ್ವಾಲ್ ಅವರು ಒಳ್ಳೆಯ ವ್ಯಕ್ತಿಯಾಗಿದ್ದರು ಎಂದು ಕುಟುಂಬದ ಸ್ನೇಹಿತ ವಿಂಗ್ ಕಮಾಂಡರ್ (ನಿವೃತ್ತ) ಸಂಜಯ್ ಪೈ ತಿಳಿಸಿದರು.

'ಸಾವಿನ ಸುದ್ದಿ ತಿಳಿದಾಗಿನಿಂದ ಬರಸಿಡಿಲು ಬಡಿದಂತಾಗಿದೆ. ಸಭರ್ವಾಲ್ ಅವರು ತಂದೆ ಪುಷ್ಕರಾಜ್ ಅವರೊಂದಿಗೆ ವಾಸವಿದ್ದರು' ಎಂದರು.

ಅಹಮದಾಬಾದ್ ವಿಮಾನ ದುರಂತದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ಸೂಕ್ಷ್ಮಗ್ರಾಹಿ' ಅಲ್ಲದ ಹೇಳಿಕೆ ನೀಡಿದ್ದು, ಕನಿಷ್ಠ ಪಕ್ಷ ಹೊಣೆಗಾರಿಕೆಯ ಭರವಸೆ ನೀಡಲಿ. ಅನಗತ್ಯ ಭಾಷಣದ ಮೂಲಕ ಜವಾಬ್ದಾರಿಯಿಂದ ನುಣುಚಿಕೊಳ್ಳಬಾರದು. ಅಪಘಾತ ತಡೆಯಲು ಸಾಧ್ಯವಾಗದಿದ್ದರೆ, ನಮಗೆ ಈ ಎಲ್ಲ ಸಚಿವರಾದರೂ ಏಕಾಗಿ ಇರಬೇಕು
ಪವನ್ ಖೇರಾ, ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ

ವಿಮಾನದೊಂದಿಗೆ ಕನಸುಗಳೂ ಭಗ್ನ

ಪುಣೆ: ವಿಮಾನದ ಮತ್ತೊಬ್ಬರು ಸಿಬ್ಬಂದಿ ಇರ್ಫಾನ್ ಸಮೀರ್ ಶೇಖ್ (22) ಅವರು ಎರಡು ವರ್ಷಗಳ ಹಿಂದೆ ದೊಡ್ಡ ಕನಸಿನೊಂದಿಗೆ ವಿಮಾನಯಾನ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ್ದರು. ಅವರ ಕನಸೆಲ್ಲಾ ಈಗ ನುಚ್ಚುನೂರಾಗಿದೆ ಎಂದು ಸಂಬಂಧಿಯೊಬ್ಬರು ಕಣ್ಣೀರು ಹಾಕಿದರು.

ಇರ್ಫಾನ್, ಬಕ್ರೀದ್ ದಿನ ಮನೆಗೆ ಬಂದು ಕುಟುಂಬಸ್ಥರೊಂದಿಗೆ ಹಬ್ಬ ಆಚರಿಸಿದ್ದರು ಎಂದು ತಿಳಿಸಿದರು.

'ವಿಮಾನ ಅಪಘಾತಕ್ಕೀಡಾದ ಸುದ್ದಿ ತಿಳಿಯುತ್ತಿದ್ದಂತೆಯೇ ಇರ್ಫಾನ್ ಅವರ ತಾಯಿ ಆಘಾತಕ್ಕೆ ಒಳಗಾಗಿದ್ದಾರೆ. ತಾಯಿ, ತಂದೆ ಮತ್ತು ಸಹೋದರ ಕೂಡಲೇ ಅಹಮದಾಬಾದ್‌ಗೆ ಪ್ರಯಾಣಿಸಿದ್ದಾರೆ. ಅಧಿಕಾರಿಗಳು ಡಿಎನ್‌ಎ ಪರೀಕ್ಷೆಗಾಗಿ ಇರ್ಫಾನ್ ಅವರ ಅಣ್ಣನ ಡಿಎನ್‌ಎ ಮಾದರಿಯನ್ನು ಪಡೆದಿದ್ದಾರೆ' ಎಂದು ಚಿಕ್ಕಪ್ಪ ಫಿರೋಜ್ ಶೇಖ್ ಹೇಳಿದರು.

ತಾಯಿ ನೋಡಲು ಬಂದಿದ್ದರು

ಮುಂಬೈ: ಅನಾರೋಗ್ಯಪೀಡಿತ ತಾಯಿಯನ್ನು ನೋಡಲು ಬ್ರಿಟನ್‌ನಿಂದ ಮುಂಬೈಗೆ ಬಂದಿದ್ದ ಕುಟುಂಬವು ವಿಮಾನ ಅಪಘಾತದಲ್ಲಿ ಮೃತಪಟ್ಟಿದೆ.

ಭಾರತೀಯ ಮೂಲದ ಜಾವೇದ್ ಅಲಿ (37) ಅವರು ಬ್ರಿಟನ್ ಮೂಲದ ಮರಿಯಂ ಅಲಿ (35) ಅವರನ್ನು ವಿವಾಹವಾಗಿದ್ದರು. ದಂಪತಿಗೆ ಎಂಟು ವರ್ಷದ ಪುತ್ರ ಮತ್ತು ನಾಲ್ಕು ವರ್ಷದ ಪುತ್ರಿ ಇದ್ದರು. ಅನಾರೋಗ್ಯಪೀಡಿತರಾಗಿದ್ದ ಜಾವೇದ್ ಅವರ ತಾಯಿಯನ್ನು ನೋಡಲು ನಾಲ್ವರೂ ಮುಂಬೈಗೆ ಬಂದಿದ್ದರು. ಗೋರೆಗಾಂವ್‌ನಲ್ಲಿ ಒಂದು ವಾರ ಇದ್ದ ಕುಟುಂಬವು ಗುರುವಾರ ನತದೃಷ್ಟ ಏರ್‌ಇಂಡಿಯಾ ವಿಮಾನದಲ್ಲಿ ವಾಪಸ್ ಲಂಡನ್‌ಗೆ ಹೊರಟಿತ್ತು.

'ರಜೆ ಇದ್ದ ಕಾರಣ ಮುಂಬೈಗೆ ಬಂದಿದ್ದರು. ಈಗ ಎಲ್ಲರೂ ಇನ್ನಿಲ್ಲವಾಗಿದ್ದಾರೆ' ಎಂದು ಕುಟುಂಬ ಸದಸ್ಯರು ನೋವು ತೋಡಿಕೊಂಡರು.

ಮೊದಲ ವರ್ಷದ ವೈದ್ಯ ವಿದ್ಯಾರ್ಥಿ ಸಾವು

ಗ್ವಾಲಿಯರ್/ಅಹಮದಾಬಾದ್ (ಪಿಟಿಐ): ಗ್ವಾಲಿಯರ್ ಜಿಲ್ಲೆಯ ಜಿಗ್‌ಸಾವಳಿ ಗ್ರಾಮದ ಆರ್ಯನ್ ರಜಪೂತ್ ಅವರು ಅಹಮದಾಬಾದ್ ವಿಮಾನ ಅಪಘಾತದಲ್ಲಿ ಮೃತಪಟ್ಟವರಲ್ಲಿ ಸೇರಿದ್ದಾರೆ.

ರೈತನ ಮಗನಾಗಿದ್ದ ಆರ್ಯನ್, ಬಿ.ಜೆ.ಮೆಡಿಕಲ್ ಕಾಲೇಜಿನಲ್ಲಿ ಮೊದಲ ವರ್ಷದ ಎಂಬಿಬಿಎಸ್ ಓದುತ್ತಿದ್ದರು. ಏರ್ ಇಂಡಿಯಾ ವಿಮಾನ ಅಪಘಾತದಿಂದಾಗಿ, ವೈದ್ಯನಾಗಬೇಕು ಎಂಬ ಆರ್ಯನ್ ಅವರ ಕನಸು ಕಮರಿಹೋಗಿದೆ.

14 ವರ್ಷದ ಬಾಲಕ ಸಾವು: ಬಿ.ಜೆ. ಮೆಡಿಕಲ್ ಕಾಲೇಜು ಬಳಿ ತನ್ನ ಕುಟುಂಬ ನಡೆಸುತ್ತಿರುವ ಚಹಾ ಅಂಗಡಿ ಸಮೀಪದ ಮರದಡಿ ಮಲಗಿದ್ದ 14 ವರ್ಷದ ಆಕಾಶ್ ಪಾಟ್ನಿ ಕೂಡ, ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾನೆ.

ದುರಂತದ ಜಾಗದಲ್ಲಿ ಬ್ಲ್ಯಾಕ್ ಬಾಕ್ಸ್ ಪತ್ತೆ

'ಡ್ರೀಮ್‌ಲೈನರ್' ಹಾರಾಟ ತಾತ್ಕಾಲಿಕ ಸ್ಥಗಿತ?

ನವದೆಹಲಿ (ರಾಯಿಟರ್ಸ್): 'ಅಹಮದಾಬಾದ್ ವಿಮಾನ ದುರಂತದ ಬೆನ್ನಲ್ಲೇ, ಸುರಕ್ಷತಾ ತಪಾಸಣೆಯ ದೃಷ್ಟಿಯಿಂದ ಬೋಯಿಂಗ್ ಕಂಪನಿಯ ಡ್ರೀಮ್‌ಲೈನರ್ ಸರಣಿಯ ವಿಮಾನಗಳ ಹಾರಾಟವನ್ನು ಏರ್ ಇಂಡಿಯಾ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಿದೆ' ಎಂದು ಎನ್‌ಡಿಟಿವಿ ಶುಕ್ರವಾರ ವರದಿ ಮಾಡಿದೆ.

ಆದರೆ, ಈ ಬಗ್ಗೆ ನಾಗರಿಕ ವಿಮಾನಯಾನ ಸಚಿವಾಲಯವಾಗಲಿ, ಬೋಯಿಂಗ್ ಕಂಪನಿ ಅಥವಾ ಏರ್ ಇಂಡಿಯಾ ಆಗಲಿ ತಕ್ಷಣದ ಪ್ರತಿಕ್ರಿಯೆ ನೀಡಿಲ್ಲ. 'ತಾತ್ಕಾಲಿಕವಾಗಿ ಬೋಯಿಂಗ್ ಹಾರಾಟ ನಿಲ್ಲಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವುದೇ ಸಂವಹನ ನಡೆದಿಲ್ಲ, ಇದುವರೆಗೆ ಯಾವುದೇ ಸೂಚನೆಯೂ ಬಂದಿಲ್ಲ' ಎಂದು ಏರ್ ಇಂಡಿಯಾ ಮೂಲ ತಿಳಿಸಿದೆ.

'ವಿಮಾನ ಟೇಕಾಫ್ ಆಗುವ ವೇಳೆ ಆಗಸಕ್ಕೆ ಚಿಮ್ಮಲು ಬೇಕಿರುವ ನೂಕುಬಲವನ್ನು ಬೋಯಿಂಗ್ ಡ್ರೀಮ್‌ಲೈನರ್ 787–8 ಕಳೆದುಕೊಂಡಿತ್ತೇ ಅಥವಾ ಎಂಜಿನ್ ಕಾರ್ಯಕ್ಷಮತೆ ಕಡಿಮೆಯಾಗಿತ್ತೇ' ಎನ್ನುವುದನ್ನು ಕೇಂದ್ರೀಕರಿಸಿ ತನಿಖೆ ನಡೆಯುತ್ತಿದೆ' ಎಂದು ವಾಲ್‌ಸ್ಟ್ರೀಟ್‌ಜರ್ನಲ್‌ವರದಿಮಾಡಿದೆ.

ಬ್ಲ್ಯಾಕ್ ಬಾಕ್ಸ್ ಪತ್ತೆ: ದುರಂತಕ್ಕೆ ಕಾರಣ ಏನು ಎಂಬುದನ್ನು ತಿಳಿಯುವಲ್ಲಿ ಪ್ರಮುಖ ಪಾತ್ರ ವಹಿಸುವ ವಿಮಾನದ ಬ್ಲ್ಯಾಕ್ ಬಾಕ್ಸ್ ದುರಂತ ನಡೆದ ಸ್ಥಳದಲ್ಲಿ ಶುಕ್ರವಾರ ಪತ್ತೆಯಾಗಿದೆ. ವಿಮಾನದಲ್ಲಿ ಎರಡು ಬ್ಲ್ಯಾಕ್‌ಬಾಕ್ಸ್‌ಗಳಿದ್ದವು. ಅದರಲ್ಲಿ ಒಂದು ಪತ್ತೆಯಾಗಿದೆ. ಆದರೆ, ಪತ್ತೆಯಾಗಿರುವ ಬ್ಲ್ಯಾಕ್‌ಬಾಕ್ಸ್ ವಿಮಾನದ ಫ್ಲೈಟ್ ಡೇಟಾ ರೆಕಾರ್ಡರ್ ಅಥವಾ ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್‌ನಲ್ಲಿ ಯಾವುದು ಎಂಬುದು ಗೊತ್ತಾಗಿಲ್ಲ ಎಂದು ವಿಮಾನ ಪತನಗೊಂಡ ಸ್ಥಳದಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಪೊಲೀಸ್ ಮೂಲಗಳು ಹೇಳಿವೆ.

'ಪ್ರಯಾಣಿಕರನ್ನೂ ಸೇರಿಸಿ ವಿಮಾನವು ಅಧಿಕ ಭಾರವನ್ನು ಹೊಂದಿತ್ತು ಮತ್ತು ಅದರಲ್ಲಿ ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚಿನ ಇಂಧನ ಇತ್ತು ಎನ್ನುವ ಸಾಧ್ಯತೆ ತೀರಾ ಕಡಿಮೆ. ಈ ವಿಮಾನವು ಒಂದೇ ಎಂಜಿನ್ ಬಲದಲ್ಲಿ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದೆ. ಎರಡೂ ಎಂಜಿನ್‌ಗಳ ವೈಫಲ್ಯದಿಂದ ದುರಂತ ಸಂಭವಿಸಿರಬಹುದು' ಎಂದು ಪೋರ್ಟ್‌ಮೌತ್ ವಿಶ್ವವಿದ್ಯಾಲಯದ ಇಂಧನ ತಂತ್ರಜ್ಞ ಜಾಸನ್ ನೈಟ್ ಅಭಿಪ್ರಾಯಪಟ್ಟಿದ್ದಾರೆ.



ವಿಮಾನ ಪತನಗೊಂಡ ಅಧಿಕಾರಿಗಳ ತಂಡ ತಪಾಸಣೆ ನಡೆಸಿತು–ಪಿಟಿಐ ಚಿತ್ರ

14 ವರ್ಷಗಳಲ್ಲಿ ಮೊದಲ ದುರಂತ

ಬೋಯಿಂಗ್ ಕಂಪನಿಯ 787–8 ಮತ್ತು 787–9 ಮಾದರಿ ಸೇರಿ 'ಡ್ರೀಮ್‌ಲೈನರ್' ಸರಣಿಯ 30 ವಿಮಾನಗಳನ್ನು ಏರ್ ಇಂಡಿಯಾ ಹೊಂದಿದೆ. 2011ರಿಂದ ಡ್ರೀಮ್‌ಲೈನರ್ ಸರಣಿಯ ವಿಮಾನಗಳು ಕಾರ್ಯಾಚರಣೆ ಆರಂಭಿಸಿದ್ದು, ನಂತರದ 14 ವರ್ಷಗಳ ಅವಧಿಯಲ್ಲಿ ನಡೆದಿರುವ ಮೊದಲ ದುರಂತ ಇದಾಗಿದೆ.

ದುರಂತಕ್ಕೆ ಒಳಗಾದ ಬೋಯಿಂಗ್ 787–8 ವಿಮಾನವು 11.5 ವರ್ಷಗಳಷ್ಟು ಹಳೆಯದು. ಇದು 2014ರ ಜನವರಿ 28ರಂದು ಮೊದಲ ಹಾರಾಟ ನಡೆಸಿತ್ತು. ಇದುವರೆಗೆ 41 ಸಾವಿರ ಗಂಟೆಗಳ ಹಾರಾಟ ನಡೆಸಿದ್ದು, 8 ಸಾವಿರಕ್ಕಿಂತ ಹೆಚ್ಚಿನ ಟೇಕಾಫ್ ಮತ್ತು ಭೂಸ್ಪರ್ಶ ಮಾಡಿದೆ. ಈ ವಿಮಾನವು ಬಿಸಿನೆಸ್ ಕ್ಲಾಸ್‌ನ 18 ಸೀಟ್‌ಗಳು ಹಾಗೂ 238 ಎಕಾನಮಿ ಕ್ಲಾಸ್ ಸೀಟ್ ಹೊಂದಿದೆ.

ಬೋಯಿಂಗ್ 787 ಮಾದರಿಯ, ಸರಾಸರಿ 7.7 ವರ್ಷಗಳಷ್ಟು ಹಳೆಯದಾಗಿರುವ 1,148 ವಿಮಾನಗಳು ಸದ್ಯ ಪ್ರಪಂಚದಾದ್ಯಂತ ಕಾರ್ಯಾಚರಣೆ ನಡೆಸುತ್ತಿವೆ ಎಂದು ವಿಮಾನಯಾನ ವಿಶ್ಲೇಷಣಾ ಸಂಸ್ಥೆ 'ಸಿರಮ್' ಹೇಳಿದೆ. ಬೋಯಿಂಗ್ ವೆಬ್‌ಸೈಟ್‌ನಲ್ಲಿರುವ ಅಂಕಿ ಅಂಶದಂತೆ ಡ್ರಿಮ್‌ಲೈನರ್ ಸರಣಿಯ ವಿಮಾನಗಳು ಮೂರು ಮಾದರಿಗಳಲ್ಲಿವೆ. 787–8, 787–9 ಮತ್ತು 787–10. ಈ ವಿಮಾನದ ಉದ್ದ 57 ಮೀಟರ್, ಎತ್ತರ 17 ಮೀಟರ್ ಹಾಗೂ ರೆಕ್ಕೆಗಳು 60 ಮೀಟರ್ ಉದ್ದವನ್ನು ಹೊಂದಿವೆ.

ಭಾರತದಲ್ಲಿ ಇಂಡಿಯನ್ ಏರ್‌ಲೈನ್ಸ್ ಮಾತ್ರವಲ್ಲದೆ ಇಂಡಿಗೊ ಕಂಪನಿ ಕೂಡ ಬೋಯಿಂಗ್ ಸರಣಿಯ ವಿಮಾನಗಳ ಕಾರ್ಯಾಚರಣೆ ನಡೆಸುತ್ತಿದೆ. ವಿಸ್ತಾರ ಏರ್‌ಲೈನ್ಸ್ ವಿಲೀನದ ನಂತರ ಕಳೆದ ಜುಲೈನಲ್ಲಿ ಏರ್ ಇಂಡಿಯಾ ಬೋಯಿಂಗ್ 787–9 ಸರಣಿಯ 7 ವಿಮಾನ ಸೇರಿಸಿಕೊಂಡಿತ್ತು.

ಬ್ಯಾಟರಿ ದೋಷ: 2013ರಲ್ಲಿ ಡ್ರೀಮ್‌ಲೈನರ್ ಸರಣಿಯ ವಿಮಾನವೊಂದರಲ್ಲಿ ಬ್ಯಾಟರಿ ದೋಷ ಕಾಣಿಸಿಕೊಂಡಿದ್ದಾಗ ಏರ್ ಇಂಡಿಯಾ ಈ ಬಗ್ಗೆ ಬೋಯಿಂಗ್ ಕಂಪನಿಗೆ ವರದಿ ಮಾಡಿತ್ತು. ಆ ನಂತರ ಇನ್ನಿತರ ಯಾವುದೇ ತಾಂತ್ರಿಕ ಲೋಪದ ಕುರಿತು ವರದಿ ಮಾಡಿಲ್ಲ.

ಶನಿವಾರ, ಜೂನ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 164 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವೋದ್ಯಮ: ಬೆಂಗಳೂರಿಗೆ 14ನೇ ರ‍್ಯಾಂಕ್

7 ಸ್ಥಾನ ಮೇಲೇರಿದ ಬೆಂಗಳೂರು

1 ಸಿಲಿಕಾನ್ ವ್ಯಾಲಿ | 2 ನ್ಯೂಯಾರ್ಕ್ | 3 ಲಂಡನ್

ಸ್ವಿಗ್ಗಿ: ಅತಿ ಹೆಚ್ಚು ಮಾರುಕಟ್ಟೆ ಮೌಲ್ಯ (₹1.03 ಲಕ್ಷ ಕೋಟಿ) ಹೊಂದಿರುವ ಬೆಂಗಳೂರಿನ ನವೋದ್ಯಮ

ಆಧಾರ: ಜಾಗತಿಕ ನವೋದ್ಯಮ ವ್ಯವಸ್ಥೆ ವರದಿ 2025

ಚರ್ಚೆ: ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ 11 ವರ್ಷ; ಎರಡು ಅಭಿಪ್ರಾಯಗಳು

ಸೋನಮ್ 'ಕೊಲೆ' ಬಿಂಬಿಸಲು ಸಂಚು 9

ಕಚ್ಚಾ ತೈಲ ದರ ಶೇ 8ರಷ್ಟು ಏರಿಕೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,118	24,718	₹1.4 ಲಕ್ಷ (ಬೆಂಗಳೂರು)	₹1.12 ಲಕ್ಷ (ಬೆಂಗಳೂರು)	86.11

ಕಮಲ್ ಇನ್ನೂ ಕ್ಷಮೆ ಕೇಳಿಲ್ಲವೇ?: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಚನೆಯು ಶೌರ್ಯದ ಅತ್ಯುತ್ತಮ ಭಾಗ ಎಂಬುದನ್ನು ಮತ್ತೊಮ್ಮೆ ನೆನಪಿಸಲಾಗುತ್ತಿದೆ ಎಂದು ಮಾರ್ನುಡಿದಿರುವ ಹೈಕೋರ್ಟ್, ಕನ್ನಡ ತಮಿಳಿನಿಂದ ಹುಟ್ಟಿದೆ ಎಂಬ ಹೇಳಿಕೆ ನೀಡಿದ್ದ ಖ್ಯಾತ ನಟ ಕಮಲ್ ಹಾಸನ್ ಇನ್ನೂ ಕ್ಷಮೆ ಕೇಳಿಲ್ಲವೇ ಎಂದು ಮೌಖಿಕವಾಗಿ ಪ್ರಶ್ನಿಸಿದೆ.



ಕಮಲ್ ಹಾಸನ್

ಕರ್ನಾಟಕದಲ್ಲಿ 'ಥಗ್ ಲೈಫ್' ಸಿನಿಮಾ ಬಿಡುಗಡೆಗೆ ಅಗತ್ಯ ಬಂದೋಬಸ್ತ್ ಒದಗಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ 'ರಾಜ್‌ಕಮಲ್ ಫಿಲ್ಮ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ' ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ವಿ.ನಾರಾಯಣನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

9ನೇ ಪುಟ ನೋಡಿ

265 ಜನರ ಮರಣೋತ್ತರ ಪರೀಕ್ಷೆ • ಮೃತರ ಗುರುತು ಪತ್ತೆಯೇ ಸವಾಲು

ವೇದನೆ, ವಿಷಾದ, ಸೂತಕದ ಛಾಯೆ


ಅಹಮದಾಬಾದ್ (ಪಿಟಿಐ): ದುರಂತಕ್ಕೆ ಸಾಕ್ಷ್ಯವಾಗಿ ಉಳಿದ ಅವಶೇಷಗಳು, ಸುಟ್ಟ ಸ್ಥಿತಿಯಲ್ಲಿರುವ ಕಟ್ಟಡ, ಮಾತುಗಳಿಗೂ ದಕ್ಕದ ವಿಷಾದ, ಆಪ್ತರನ್ನು ಕಳೆದುಕೊಂಡವರಲ್ಲಿ ಮಡುಗಟ್ಟಿದ ನೋವು...

ಭೀಕರ ವಿಮಾನ ಅಪಘಾತ ಸಂಭವಿಸಿದ ಇಲ್ಲಿನ ಬಿ.ಜೆ.ವೈದ್ಯ ಕಾಲೇಜು ಹಾಸ್ಟೆಲ್ ಸಂಕೀರ್ಣದ ಬಳಿ ಶುಕ್ರವಾರ ಕಂಡುಬಂದ ಸ್ಥಿತಿ ಇದು. ಸೂತಕದ ಛಾಯೆ ಇಡೀ ವಾತಾವರಣವನ್ನು ಆವರಿಸಿದಂತಿತ್ತು.

ವಿಮಾನವು ಕಟ್ಟಡಕ್ಕೆ ಅಪ್ಪಳಿಸಿದಾಗ ಮೃತಪಟ್ಟ ವಿಮಾನದಲ್ಲಿದ್ದ 241 ಮಂದಿ ಮತ್ತು ಕಟ್ಟಡದಲ್ಲಿದ್ದ 24 ಮಂದಿಯನ್ನು ಗುರುತಿಸುವ ಕಾರ್ಯ ಶುಕ್ರವಾರ ಚುರುಕುಗೊಂಡಿತು.

'ಆರು ಶವಗಳ ಗುರುತು ಪತ್ತೆಯಾಗಿದ್ದು, ಶವಗಳನ್ನು ಅವರ ಸಂಬಂಧಿಕರಿಗೆ ಒಪ್ಪಿಸಲಾಯಿತು. ಉಳಿದಂತೆ ಪೂರ್ಣ ಅಥವಾ ಗುರುತಿಸಲಾಗದಷ್ಟು ಕರಕಲಾಗಿರುವ ಶವಗಳ ಗುರುತು ಪತ್ತೆ, ಡಿಎನ್‌ಎ ಪರೀಕ್ಷೆ ಪ್ರಕ್ರಿಯೆಗೆ ಕನಿಷ್ಠ 72 ಗಂಟೆ ಬೇಕಾಗಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ. 'ಅಹಮದಾಬಾದ್‌ನ ಸಾರ್ವಜನಿಕ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಒಟ್ಟು 265 ಶವಗಳನ್ನು ತರಲಾಗಿದೆ' ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಚಿರಾಗ್ ಗೋಸಾಯಿ ತಿಳಿಸಿದರು.

10ನೇ ಪುಟ ನೋಡಿ



ವಿಮಾನ ದುರಂತದಲ್ಲಿ ಮೃತಪಟ್ಟ 14 ವರ್ಷದ ಆಕಾಶ್ ಪಾಟ್ನಿ ಅವರ ಸಂಬಂಧಿಕರು ಅಹಮದಾಬಾದ್‌ನ ಆಸ್ಪತ್ರೆಯ ಶವಾಗಾರದ ಬಳಿ ಶುಕ್ರವಾರ ರೋದಿಸಿದರು — ಪಿಟಿಐ ಚಿತ್ರ

ಉನ್ನತ ಮಟ್ಟದ ಸಭೆ

ವಿಮಾನ ಅಪಘಾತ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಬಳಿಕ ಹಿರಿಯ ಅಧಿಕಾರಿಗಳ ಜೊತೆಗೆ ಪರಿಶೀಲನಾ ಸಭೆ ನಡೆಸಿ, ಮಾಹಿತಿ ಪಡೆದರು. ವಿಮಾನ ನಿಲ್ದಾಣದ ಸಮೀಪವಿರುವ ಗುಜ್‌ಸೈಲ್ ಕಟ್ಟಡ ದಲ್ಲಿ ನಡೆದ ಉನ್ನತಾಧಿಕಾರಿಗಳ ಸಭೆಯಲ್ಲಿ ಗುಜರಾತ್ ಸಿ.ಎಂ ಭೂಪೇಂದ್ರ ಪಟೇಲ್, ಗುಜರಾತ್ ಬಿಜೆಪಿ ಘಟಕದ ಅಧ್ಯಕ್ಷ ಸಿ.ಆರ್.ಪಾಟೀಲ್, ನಾಗರಿಕ ವಿಮಾನ ಯಾನ ಸಚಿವ ರಾಮಮೋಹನ್ ನಾಯ್ಡು, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಬೋಯಿಂಗ್ ಸುರಕ್ಷತಾ ತಪಾಸಣೆಗೆ ಸೂಚಿಸಿದ ಡಿಜಿಸಿಎ

ನವದೆಹಲಿ (ಪಿಟಿಐ): ಬೋಯಿಂಗ್ 787 ಡ್ರೀಮ್‌ಲೈನರ್ ಸರಣಿಯ ವಿಮಾನಗಳನ್ನು ತಕ್ಷಣವೇ ವಿಸ್ತೃತ ಸುರಕ್ಷತಾ ತಪಾಸಣೆಗೆ ಒಳಪಡಿಸುವಂತೆ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಏರ್ ಇಂಡಿಯಾಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಬೋಯಿಂಗ್ 787-8, ಮತ್ತು 787-9 ಮಾದರಿಯ ವಿಮಾನಗಳಲ್ಲಿ ಹೆಚ್ಚುವರಿ ಸುರಕ್ಷತಾ ತಪಾಸಣೆ ನಡೆಸಿ, ಹಾರಾಟಕ್ಕೆ ತಾಂತ್ರಿಕವಾಗಿ ಸಂಪೂರ್ಣ ಸಜ್ಜುಗೊಳಿಸಬೇಕು. ಈ ವಿಮಾನಗಳಲ್ಲಿ ಬಳಸುವ 'ಜೆನೆಕ್ಸ್' ಎಂಜಿನ್‌ನ ಕಾರ್ಯಕ್ಷಮತೆಯನ್ನೂ ಪರಿಶೀಲಿಸಬೇಕು' ಎಂದು 'ಡಿಜಿಸಿಎ' ನಿರ್ದೇಶಿಸಿದೆ.

ದಿನದ ಬೆಳವಣಿಗೆ

- ದುರಂತಕ್ಕೆ ಕಾರಣ ಏನು ಎಂಬುದನ್ನು ತಿಳಿಯುವಲ್ಲಿ ಪ್ರಮುಖ ಪಾತ್ರ ವಹಿಸುವ ವಿಮಾನದ ಬ್ಲ್ಯಾಕ್ ಬಾಕ್ಸ್ ಶುಕ್ರವಾರ ದುರಂತ ನಡೆದ ಸ್ಥಳದಲ್ಲಿ ಪತ್ತೆಯಾಗಿದೆ
- ಏರ್ ಇಂಡಿಯಾ ಮಾಲೀಕತ್ವವನ್ನು ಟಾಟಾ ಸಮೂಹ ಹೊಂದಿದೆ. ಪ್ರಸ್ತುತ ಏರ್ ಇಂಡಿಯಾದಲ್ಲಿ 26 ಬೋಯಿಂಗ್ 787-8ಎಸ್, 7 ಬೋಯಿಂಗ್ 787-9ಎಸ್ ವಿಮಾನಗಳಿವೆ
- ಅಪಘಾತದ ತನಿಖೆಗಾಗಿ ಬ್ರಿಟನ್ ಮತ್ತು ಅಮೆರಿಕದಿಂದ ತಜ್ಞರ ತಂಡವು ಆಗಮಿಸಿದೆ ಎಂದು ಏರ್ ಇಂಡಿಯಾ ಅಧ್ಯಕ್ಷ ಎನ್.ಚಂದ್ರಶೇಖರನ್ ತಿಳಿಸಿದ್ದಾರೆ
- ಅಪಘಾತದ ಕಾರಣಗಳ 'ಸತ್ಯ ಬಯಲಿಗೆಳೆಯಲು' ಪಾರದರ್ಶಕವಾಗಿ ತನಿಖೆ ನಡೆಸಬೇಕು ಎಂದು ತೃಣಮೂಲ ಕಾಂಗ್ರೆಸ್ ಪಕ್ಷ ಆಗ್ರಹಪಡಿಸಿದೆ. ವಕ್ತಾರ ಕುನಾಲ್ ಘೋಷ್ ಈ ಬಗ್ಗೆ ಟ್ವೀಟ್ ಮಾಡಿದ್ದಾರೆ

ಸತ್ತೆ ಎನಿಸಿತ್ತು... ಹೇಗೋ ಬದುಕಿ ಬಂದೆ: ವಿಶ್ವಾಸ್



ವಿಶ್ವಾಸ್ ಅವರನ್ನು ಪ್ರಧಾನಿ ಮೋದಿ ಭೇಟಿ ಮಾಡಿದ ಕ್ಷಣ —ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): 'ನಾನು ಬದುಕಿದ್ದೇನೆ ಎಂದು ನಂಬುವುದಕ್ಕೆ ಆಗುತ್ತಿಲ್ಲ. ಒಂದರೆಕ್ಷಣ ನಾನು ಸಾಯುತ್ತೇನೆ ಎನಿಸಿತ್ತು. ಹೇಗೋ ಬದುಕಿದೆ. ಎಲ್ಲವೂ ಕ್ಷಣಾರ್ಧದಲ್ಲಿ ಆಯಿತು...'

ವಿಮಾನ ಅಪಘಾತದಲ್ಲಿ ಬದುಕುಳಿದ ಏಕೈಕ ಪ್ರಯಾಣಿಕ ವಿಶ್ವಾಸ್ ಕುಮಾರ್ ರಮೇಶ್ ಅವರ ಪ್ರತಿಕ್ರಿಯೆ ಇದು. ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರೀಗ ಸುದ್ದಿಯ ಕೇಂದ್ರಬಿಂದು.

ಶುಕ್ರವಾರ ಆಸ್ಪತ್ರೆಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ, ಇವರೊಂದಿಗೆ ಚರ್ಚಿಸಿ ಮಾಹಿತಿ ಪಡೆದರು. ಆಶ್ಚರ್ಯಕರ ರೀತಿಯಲ್ಲಿ ಬದುಕುಳಿದ ಅವರು ಮಾಧ್ಯಮಗಳ ಜೊತೆಗೆ ತಮ್ಮ ಅನುಭವ ಹಂಚಿಕೊಂಡರು. 'ದೊಡ್ಡ ಶಬ್ದ ಕೇಳಿದ್ದಷ್ಟೆ. ಕಣ್ಣು ಬಿಟ್ಟಾಗ ಸುತ್ತಲೂ ಶವಗಳೇ ಇದ್ದವು. ನಾನು ಸತ್ತೆ ಎಂದುಕೊಂಡೆ. ನನ್ನ ಆಸನದ ಸಮೀಪವೇ ವಿಮಾನದಲ್ಲಿ ದೊಡ್ಡ ಬಿರುಕು ಮೂಡಿತ್ತು. ಏನೊಂದನ್ನೂ ಯೋಚಿಸದೆ ಸೀಟ್ ಬೆಲ್ಟ್ ತೆಗೆದವನೇ ಹೊರಗೆ ಜಿಗಿದೆ. ಓಡತೊಡಗಿದೆ. ಯಾರೋ ಆಂಬುಲೆನ್ಸ್ ಹತ್ತಿಸಿದರು...' ಎಂದರು. 'ಎಲ್ಲ ಕಣ್ಣೆದುರು ನಡೆಯಿತು. ವಿಮಾನದಲ್ಲಿ ಹಸಿರು, ಬಿಳಿ ದೀಪಗಳು ಮಿನುಗುತ್ತಿದ್ದವು. ಅವು ವಿಮಾನದ ವೇಗದ ಜೊತೆ ಸ್ಪರ್ಧೆಗೆ ಬಿದ್ದಂತಿದ್ದವು. ವಿಮಾನ ಕಟ್ಟಡಕ್ಕೆ ಅಪ್ಪಳಿಸಿತ್ತು. ಆಕ್ರಂದನ, ಜೊತೆಗೆ ಬೆಂಕಿ. ಗಗನಸಖಿಯರು, ಸಹ ಪ್ರಯಾಣಿಕರ ದೇಹಗಳನ್ನು ಬೆಂಕಿ ಆವರಿಸುತ್ತಿತ್ತು' ಎಂದು ನೆನಪು ಮಾಡಿಕೊಂಡರು.

10ನೇ ಪುಟ ನೋಡಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2: ಶೇ 30.39 ಫಲಿತಾಂಶ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಫಲಿತಾಂಶ ಪ್ರಕಟವಾಗಿದ್ದು, ಪರೀಕ್ಷೆ ಬರೆದಿದ್ದ 2.78 ಲಕ್ಷ ವಿದ್ಯಾರ್ಥಿಗಳಲ್ಲಿ 84,597 ಮಂದಿ (ಶೇ 30.39) ತೇರ್ಗಡೆಯಾಗಿದ್ದಾರೆ.

ಪರೀಕ್ಷೆ–1 ಬರೆಯದ ವಿದ್ಯಾರ್ಥಿಗಳು ಖಾಸಗಿಯಾಗಿ ಪರೀಕ್ಷೆ–2ಕ್ಕೆ ಹಾಜರಾಗಿದ್ದರು. ಅವರ ಫಲಿತಾಂಶವೂ ಸೇರಿ 87,330 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

9ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಇರಾನ್ ಮೇಲೆ ಇಸ್ರೇಲ್ ದಾಳಿ

ಟೆಹರಾನ್ (ಎಎಫ್‌ಪಿ/ ಎಪಿ): ಇರಾನ್‌ನ ಪರಮಾಣು ಘಟಕಗಳು ಮತ್ತು ಸೇನಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ಶುಕ್ರವಾರ ಬೆಳಗಿನ ಜಾವ ಭಾರಿ ವೈಮಾನಿಕ ದಾಳಿ ನಡೆಸಿದ್ದು, ಪಶ್ಚಿಮ ಏಷ್ಯಾದಲ್ಲಿ ಯುದ್ಧದ ಕಾರ್ಮೋಡ ಕವಿದಿದೆ.

1980ರ ಇರಾಕ್ ಜತೆಗಿನ ಯುದ್ಧದ ನಂತರ ಇರಾನ್ ಎದುರಿಸಿದ ಅತಿದೊಡ್ಡ ದಾಳಿ ಇದಾಗಿದೆ.

'ಆಪರೇಷನ್ ರೈಸಿಂಗ್ ಲಯನ್' ಹೆಸರಿನಡಿ ನಡೆದ ಕಾರ್ಯಾಚರಣೆಯಲ್ಲಿ ಇರಾನ್ ಸೇನೆಯ ಅತ್ಯುನ್ನತ ಶ್ರೇಣಿಯ ಅಧಿಕಾರಿ, ಸಶಸ್ತ್ರ ಪಡೆಗಳ ಮುಖ್ಯಸ್ಥ ಮೊಹಮ್ಮದ್ ಬಘೇರಿ ಮತ್ತು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಮುಖ್ಯಸ್ಥ ಹುಸೇನ್ ಸಲಾಮಿ ಮೃತಪಟ್ಟಿದ್ದಾರೆ.

ಐಆರ್‌ಜಿಸಿಯ ಗುರಿ ನಿರ್ದೇಶಿತ ಕ್ಷಿಪಣಿ ಯೋಜನೆಯ ಮುಖ್ಯಸ್ಥ ಅಮೀರ್ ಅಲಿ ಹಾಜಿಝಾದಾ ಅವರೂ ಬಲಿಯಾಗಿದ್ದಾರೆ. ಈ ಮೂವರ ಸಾವನ್ನು ಇರಾನ್ ದೃಢಪಡಿಸಿದೆ. ಇರಾನ್ ಪರಮಾಣು ಯೋಜನೆಯಲ್ಲಿ ಭಾಗಿಯಾಗಿರುವ ಹಲವು ವಿಜ್ಞಾನಿಗಳೂ ದಾಳಿಯಲ್ಲಿ ಮೃತಪಟ್ಟಿದ್ದಾರೆ.

ಈ ದಾಳಿಗೆ ಪ್ರತ್ಯುತ್ತರವಾಗಿ ಇಸ್ರೇಲ್ ಅನ್ನು 'ಕಠಿಣ ಶಿಕ್ಷೆ'ಗೆ ಗುರಿಪಡಿಸಲಾಗುವುದು ಎಂದು ಇರಾನ್‌ನ ಪರಮೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಎಚ್ಚರಿಸಿದ್ದಾರೆ. ಇದರ ಬೆನ್ನಲ್ಲೇ ಇರಾನ್ ಸೇನೆ ಇಸ್ರೇಲ್‌ನತ್ತ ಹಲವು ಡ್ರೋನ್‌ಗಳನ್ನು ಹಾರಿಸಿದೆ.

ದಾಳಿಯ ಬಗ್ಗೆ ತಮಗೆ ಮುಂಚಿತವಾಗಿಯೇ ಮಾಹಿತಿ ಇತ್ತು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. 'ಇರಾನ್ ಅಣ್ವಸ್ತ್ರ ಹೊಂದಲು ಬಿಡುವುದಿಲ್ಲ' ಎಂಬುದನ್ನು ಅವರು ಒತ್ತಿ ಹೇಳಿದ್ದಾರೆ.

> **ಇರಾನ್‌ನ ಪರಮಾಣು ಯೋಜನೆಗಳ ಕೇಂದ್ರ ಸ್ಥಾನವನ್ನು ಹೊಡೆದಿದ್ದೇವೆ. ಈ ದಾಳಿ ಎಷ್ಟು ದಿನ ಬೇಕಾದರೂ ಮುಂದುವರಿಯಬಹುದು**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

> **ಈ ದಾಳಿಯು ಯುದ್ಧ ಘೋಷಣೆಗೆ ಸಮ. ಶತ್ರು ದೇಶವು (ಇಸ್ರೇಲ್) ತನ್ನ ಮೂರ್ಖತನದ ಕೃತ್ಯಕ್ಕೆ ವಿಷಾದಿಸುವಂತೆ ಮಾಡುತ್ತೇವೆ**
> **ಮಸೂದ್ ಪೆಜೆಶ್ಕಿಯಾನ್,** ಇರಾನ್ ಅಧ್ಯಕ್ಷ

ಪರಮಾಣು ವಿಜ್ಞಾನಿಗಳು ಬಲಿ

- ಶುಕ್ರವಾರ ಬೆಳಗಿನ ಜಾವ ನಡೆದ ಕಾರ್ಯಾಚರಣೆ
- ಇರಾನ್ ಸಶಸ್ತ್ರ ಪಡೆಗಳ ಮುಖ್ಯಸ್ಥ ಬಲಿ
- ದಾಳಿಯಲ್ಲಿ ಆರು ಪರಮಾಣು ವಿಜ್ಞಾನಿಗಳು ಸಾವು: ವರದಿ
- ಡ್ರೋನ್ ದಾಳಿ ಮೂಲಕ ಇರಾನ್ ಪ್ರತ್ಯುತ್ತರ
- ಪಶ್ಚಿಮ ಏಷ್ಯಾದಲ್ಲಿ ಯುದ್ಧದ ಕಾರ್ಮೋಡ

ಮೃತಪಟ್ಟ ಪ್ರಮುಖರು

ಮೊಹಮ್ಮದ್ ಬಘೇರಿ (ಸಶಸ್ತ್ರ ಪಡೆಗಳ ಮುಖ್ಯಸ್ಥ)

ಹುಸೇನ್ ಸಲಾಮಿ (ಐಆರ್‌ಜಿಸಿ ಮುಖ್ಯಸ್ಥ)

ಅಮೀರ್ ಅಲಿ ಹಾಜಿಝಾದಾ (ಐಆರ್‌ಜಿಸಿಯ ಗುರಿನಿರ್ದೇಶಿತ ಕ್ಷಿಪಣಿ ಯೋಜನೆ ಮುಖ್ಯಸ್ಥ)

ಕಲ್ಯಾಣ ಕರ್ನಾಟಕ, ಮಲೆನಾಡಿಗೆ ವಿಶೇಷ ಅನುದಾನಕ್ಕೆ ಕೋರಿಕೆ

'ಬೆಂಗಳೂರಿಗೆ ₹1.15 ಲಕ್ಷ ಕೋಟಿ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಬೆಂಗಳೂರು ನಗರದ ಮೂಲಸೌಕರ್ಯವನ್ನು ಬಲಪಡಿಸಲು ₹1.15 ಲಕ್ಷ ಕೋಟಿ ಒದಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವದೆಹಲಿಯಲ್ಲಿ ಶುಕ್ರವಾರ ನಡೆದ 16ನೇ ಹಣಕಾಸು ಆಯೋಗದ ಸಭೆಯಲ್ಲಿ ಒತ್ತಾಯಿಸಿದ್ದಾರೆ.



ಸಿದ್ದರಾಮಯ್ಯ

ಅಲ್ಲದೇ, ಕಡಿಮೆ ಆದಾಯ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಸಮಸ್ಯೆಯನ್ನು ಎದುರಿಸುತ್ತಿರುವ ಕಲ್ಯಾಣ ಕರ್ನಾಟಕ ಮತ್ತು ಮಲೆನಾಡಿನಲ್ಲಿ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಬೇಕಾಗಿದೆ ಎಂದು ಪ್ರತಿಪಾದಿಸಿರುವುದಾಗಿ ಅವರು ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕಲ್ಯಾಣ ಕರ್ನಾಟಕ ಏಳು ಜಿಲ್ಲೆಗಳನ್ನು ಒಳಗೊಂಡಿದ್ದು, ಈ ಪೈಕಿ ಐದು ಜಿಲ್ಲೆಗಳ ವಾರ್ಷಿಕ ವರಮಾನವು ರಾಜಸ್ಥಾನ, ಬಿಹಾರ, ಉತ್ತರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳಕ್ಕೆ ಸಮಾನವಿದೆ. ಮಲೆನಾಡು ಪ್ರದೇಶಗಳಲ್ಲಿ ಪ್ರವಾಹ, ಭೂಕುಸಿತದಂತಹ ಸಮಸ್ಯೆಗಳು ತಲೆದೋರುತ್ತಿವೆ. ಆದ್ದರಿಂದ ವಿಶೇಷ ಅನುದಾನವನ್ನು ಒದಗಿಸಬೇಕೆಂದು ಒತ್ತಿ ಹೇಳಿದ್ದೇವೆ' ಎಂದು ಅವರು ಹೇಳಿದರು.

ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸಿದೆ. ದೇಶದ ಒಟ್ಟು ಜಿಡಿಪಿಗೆ ಸುಮಾರು ಶೇ 8.7ರಷ್ಟು ಕೊಡುಗೆ ನೀಡುತ್ತಿದೆ. ಜಿಎಸ್‌ಟಿ ಸಂಗ್ರಹಣೆಯಲ್ಲಿ 2ನೇ ಸ್ಥಾನದಲ್ಲಿದೆ. ರಾಜ್ಯದಿಂದ ಕೇಂದ್ರಕ್ಕೆ ₹4.5 ಲಕ್ಷ ಕೋಟಿ ತೆರಿಗೆ ಸಂದಾಯವಾಗುತ್ತಿದೆ. ರಾಜ್ಯವು ಗಣನೀಯ ಪ್ರಮಾಣದಲ್ಲಿ ಕೊಡುಗೆ ನೀಡುತ್ತಿದ್ದರೂ ಸಂಪನ್ಮೂಲ ಹಂಚಿಕೆಯಲ್ಲಿ ತೀವ್ರ ಅಸಮತೋಲನ ಉಂಟಾಗಿದೆ ಎಂದು ವಿವರಿಸಿದರು.

8ನೇ ಪುಟ ನೋಡಿ

ಮುಖ್ಯಾಂಶಗಳು

- ಕೇಂದ್ರದ ವಿವೇಚನಾ ಅನುದಾನ ಶೇ 0.3ಕ್ಕಿಂತ ಹೆಚ್ಚಾಗಬಾರದು
- ಸೆಸ್ ಮತ್ತು ಸರ್‌ಚಾರ್ಜ್ ಶೇ 5ರಷ್ಟನ್ನು ಮೀರಬಾರದು
- ಸಂವಿಧಾನದ ಪರಿಚ್ಛೇದ 180 ಪ್ರಕಾರ ತೆರಿಗೆ ಹಂಚಿಕೆಯಾಗಬೇಕು

> **ಒಕ್ಕೂಟದ ವ್ಯವಸ್ಥೆಯನ್ನು ಬಲಪಡಿಸಿ ಎಲ್ಲಾ ರಾಜ್ಯಗಳಿಗೂ ನ್ಯಾಯ ಒದಗಿಸಬೇಕು. ಯಾರಿಗೂ ಅನ್ಯಾಯವಾಗಬಾರದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ರಾಜಸ್ವ ಕೊರತೆ ಅನುದಾನ ನಮಗೇಕಿಲ್ಲ?'

'ಕೇರಳ ಮತ್ತು ತಮಿಳುನಾಡಿಗೂ ನಮ್ಮಷ್ಟೇ ನಷ್ಟವಾಗಿದೆ. ಅವರಿಗೆ ರಾಜಸ್ವ ಕೊರತೆ ಅನುದಾನ ನೀಡಲಾಗಿದೆ. ಆದರೆ ನಮಗೆ ಅನುದಾನ ನೀಡಿಲ್ಲ. ನಮಗೇಕೆ ಕೊಟ್ಟಿಲ್ಲ ಎಂದು ಸಭೆಯಲ್ಲಿ ಪ್ರಶ್ನಿಸಿದ್ದೇವೆ' ಎಂದು ಸಿದ್ದರಾಮಯ್ಯ ಹೇಳಿದರು.

'ಜನಸಂಖ್ಯೆ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡಬಾರದು ಎಂದು ನಾವು ಹೇಳುವುದಿಲ್ಲ. ಆದರೆ ತೆರಿಗೆ ಹಂಚಿಕೆ ವೈಜ್ಞಾನಿಕವಾಗಿ ಮಾಡಬೇಕು ಎಂದು ಕೋರಲಾಗಿದೆ. ಈ ಬಗ್ಗೆ ಇತರೆ ರಾಜ್ಯಗಳು ಧ್ವನಿ ಎತ್ತಿವೆ' ಎಂದರು.

'ಸಂಪನ್ಮೂಲ ಹಂಚಿಕೆಯಲ್ಲಿ ಸಮಾನತೆ ಮುಖ್ಯ. ಸ್ಥಿರವಾದ ಆರ್ಥಿಕ ಕಾರ್ಯಕ್ಷಮತೆ ಮತ್ತು ಆರ್ಥಿಕ ಶಿಸ್ತನ್ನು ಪಾಲಿಸುವ ರಾಜ್ಯಗಳಿಗೆ ದಂಡ ವಿಧಿಸುವಂತಾಗಬಾರದು. ಸಂಪನ್ಮೂಲ ಹಂಚಿಕೆಯಲ್ಲಿ ಸಮಾನತೆಯನ್ನು ಫಲಿತಾಂಶ ಆಧಾರಿತ ರೀತಿಯಲ್ಲಿ ಕಾರ್ಯಗತಗೊಳಿಸಬೇಕು. ಇದಕ್ಕಾಗಿ ಆದಾಯ–ದೂರ ಮಾನದಂಡದ ಪಾಲನ್ನು ಶೇ 20 ಕಡಿಮೆ ಮಾಡಿ ದೇಶದ ಜಿಡಿಪಿಯಲ್ಲಿ ರಾಜ್ಯಗಳ ಕೊಡುಗೆಯನ್ನು ಅಳತೆಗೋಲಾಗಿ ಪರಿಗಣಿಸಿ, ಇದಕ್ಕೆ ಶೇ 20 ಅಂಕವನ್ನು ನೀಡಬೇಕೆಂದು ಸಲಹೆ ನೀಡಿದ್ದೇವೆ' ಎಂದರು.

ಕುಡಿತ, ಜೂಜು, ಅಕ್ರಮ ಸಂಬಂಧ • ದೈಹಿಕ, ಮಾನಸಿಕ ಕಿರುಕುಳ ಆರೋಪ

ಪತ್ನಿಪೀಡಕನ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭರತನಾಟ್ಯ ಕಲಾವಿದೆಯಾದ ಪತ್ನಿಗೆ ಅಸ್ವಾಭಾವಿಕ ಲೈಂಗಿಕ ಕ್ರಿಯೆಗಾಗಿ ಒತ್ತಾಯಿಸಿ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದ್ದಾರೆ' ಎಂಬ ಆರೋಪದಡಿ ಪತಿಯೊಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧ ನನ್ನ ಪತ್ನಿ ದಾಖಲಿಸಿರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಪತಿ (28) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಅರ್ಜಿಯನ್ನು ಭಾಗಶಃ ಪುರಸ್ಕರಿಸಿದ್ದು, ಪತಿಯ ವಿರುದ್ಧದ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದೆ.

'ದಂಪತಿ ಮಧ್ಯದ ವಾಟ್ಸ್ ಆ್ಯಪ್ ಸಂಭಾಷಣೆ ಅತ್ಯಂತ ಭಯಾನಕ, ಅಶ್ಲೀಲವಾಗಿದ್ದು, ಅದನ್ನು ವಿವರಿಸುವುದಕ್ಕೂ ಸಾಧ್ಯವಿಲ್ಲ' ಎಂದು ಆಘಾತ ವ್ಯಕ್ತಪಡಿಸಿರುವ ನ್ಯಾಯಪೀಠ, 'ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಒತ್ತಾಯಿಸಿ ಪತಿ, ಪತ್ನಿಗೆ ಚಿತ್ರಹಿಂಸೆ ನೀಡಿರುವುದು ಮನದಟ್ಟಾಗುವಂತಿದೆ' ಎಂದು ಹೇಳಿದೆ.



ಮುಖ್ಯಾಂಶಗಳು

- 2022ರಲ್ಲಿ ಪರಿಚಯ, 2023ರಲ್ಲಿ ಮದುವೆ
- ಬಾಲಿಯಲ್ಲಿ ಮಧುಚಂದ್ರ– 2024ಕ್ಕೆ ಹಳಸಿದ ದಾಂಪತ್ಯ

'ಮದುವೆಯಾದ ಒಂದೇ ವರ್ಷದಲ್ಲಿ ಏನೆಲ್ಲಾ ನಡೆದಿದೆ ಎಂಬ ಅಂಶಗಳಲ್ಲಿ, ಪತಿ ತನ್ನ ಪತ್ನಿಯ ಕೈ ತಿರುಗಿಸಿ, ಕೈಗೆ ಗಾಯ ಮಾಡಿ ಆಸ್ಪತ್ರೆಗೆ ಸೇರುವಂತೆ ಮಾಡಿರುವ ಹಿಂಸಾತ್ಮಕ ಸನ್ನಿವೇಶ ಗಮನಿಸಿದರೆ ಅರ್ಜಿದಾರರು ತಮ್ಮ ಪತ್ನಿಗೆ ಏನೆಲ್ಲಾ ಮಾನಸಿಕ, ದೈಹಿಕ ಹಿಂಸೆ ನೀಡಿದ್ದಾರೆ ಎಂಬುದು ವೇದ್ಯವಾಗುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಪೂರ್ಣ ಪ್ರಮಾಣದ ವಿಚಾರಣೆ ಅಗತ್ಯವಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಜಾಗೊಳಿಸಿದೆ.

'ವರದಕ್ಷಿಣೆ ಕಿರುಕುಳ ನೀಡಿರುವುದಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ' ಎಂದು ಪ್ರತಿಪಾದಿಸಿದ್ದ ಪತಿಯ ಪರ ವಕೀಲರು, 'ಅರ್ಜಿದಾರರ ತಂದೆ ಮತ್ತು ತಾಯಿಯನ್ನು ಪ್ರಕರಣದಲ್ಲಿ ವಿನಾಕಾರಣ ಎಳೆದು ತರಲಾಗಿದೆ. ಹೀಗಾಗಿ, ಪ್ರಕರಣ ರದ್ದುಗೊಳಿಸಬೇಕು' ಎಂದು ಮನವಿ ಮಾಡಿದ್ದರು.

ಈ ಮನವಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಪೀಠ, ಭರತನಾಟ್ಯ ಮುಂದುವರಿಸದಂತೆ ತಾಕೀತು ಮಾಡಿದ ಆರೋಪ ಎದುರಿಸುತ್ತಿದ್ದ ಪತ್ನಿಯ ಅತ್ತೆ ಮತ್ತು ಮಾವನ ವಿರುದ್ಧದ ಪ್ರಕರಣವನ್ನು ರದ್ದುಪಡಿಸಿದೆ.

ಕೋರಿಕೆ ಏನಿತ್ತು?: 'ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 115 (2), 351(3), 352 ಹಾಗೂ 85 ಹಾಗೂ ವರದಕ್ಷಿಣೆ ತಡೆ ಕಾಯ್ದೆ–1961ರ ಕಲಂ 3 ಮತ್ತು 4ರ ಅನ್ವಯ ನನ್ನ ವಿರುದ್ಧ 2024ರ ಡಿಸೆಂಬರ್ 2ರಂದು ದಾಖಲಿಸಲಾಗಿರುವ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯದಲ್ಲಿರುವ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಪತಿ ಈ ರಿಟ್ ಅರ್ಜಿ ಸಲ್ಲಿಸಿದ್ದರು.

ನಾನು ಬೆಕ್ಕಿಗಿಂತಲೂ ಕಡೆಯಾಗಿದ್ದೆ...

'ನನ್ನ ಪತಿ ಮದುವೆಯಾದ ನಂತರ ಹಲವು ಮಹಿಳೆಯರ ಜೊತೆ ಅಕ್ರಮ ಸಂಬಂಧ ಹೊಂದಿದ್ದರು. ಕುಡಿತ ಮತ್ತು ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ನಿರತರಾಗಿರುತ್ತಿದ್ದರು. ಭರತನಾಟ್ಯ ಕಲಾವಿದೆಯಾದ ನನಗೆ ನನ್ನ ಅತ್ತೆ–ಮಾವ ಭರತನಾಟ್ಯ ನೃತ್ಯಾಭ್ಯಾಸ ನಿಲ್ಲಿಸುವಂತೆ ಒತ್ತಾಯಿಸುತ್ತಿದ್ದರು. ನಿಲ್ಲಿಸುವುದಿಲ್ಲ ಎಂದಾಗ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಹಿಂಸಿಸುವುದು ಸಾಮಾನ್ಯವಾಗಿತ್ತು. ನನ್ನ ಪತಿ ಮನೆಯಲ್ಲಿ ನನಗಿಂತಲೂ ಚೆನ್ನಾಗಿ ಬೆಕ್ಕನ್ನು ನೋಡಿಕೊಳ್ಳುತ್ತಾರೆ' ಎಂದು ಪತ್ನಿ ದೂರಿದ್ದರು.

ಬೈಕ್ ಟ್ಯಾಕ್ಸಿ ಸೇವೆ: ಮಧ್ಯಂತರ ಪರಿಹಾರಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೋಟಾರು ವಾಹನ ಕಾಯ್ದೆ–1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರ್‍ಯಾಪಿಡೊಗಳು ತಮ್ಮ ಬೈಕ್ ಟ್ಯಾಕ್ಸಿ ಸೇವೆಯನ್ನು ಸ್ಥಗಿತಗೊಳಿಸಬೇಕು' ಎಂಬ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನಿರಾಕರಿಸಿದೆ.

ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯದಲ್ಲಿ ಮುಂದುವರಿಸಲು ನಿರ್ದೇಶಿಸಬೇಕು' ಎಂದು ಕೋರಿ ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್', 'ರೋಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರ್‍ಯಾಪಿಡೊ)' ಮತ್ತು 'ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ)' ಕಂಪನಿಗಳು ಸಲ್ಲಿಸಿದ್ದ ರಿಟ್ ಮೇಲ್ಮನವಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ದೇಶದ ಹಲವು ರಾಜ್ಯಗಳಲ್ಲಿ ಓಲಾ, ಉಬರ್ ಅಡಿಯಲ್ಲಿ ಬೈಕ್ ಟ್ಯಾಕ್ಸಿ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ಅಲ್ಲಿ ಯಾವುದೇ ರೀತಿಯ ನಿಯಮಗಳನ್ನು ರೂಪಿಸಿಲ್ಲ. ದ್ವಿಚಕ್ರ ವಾಹನಗಳು ದೊಡ್ಡ ವಾಹನಗಳಿಗಿಂತಲೂ ಹೆಚ್ಚು ಪರಿಸರ ಸ್ನೇಹಿಯಾಗಿವೆ. ಇದರಿಂದ ಪರಿಸರಕ್ಕೆ ಆಗುವ ಹಾನಿಯ ಪ್ರಮಾಣ ಅತ್ಯಂತ ಕಡಿಮೆ ಇರಲಿದೆ. ಆದ್ದರಿಂದ, ದ್ವಿಚಕ್ರ ವಾಹನಗಳನ್ನು ಬಾಡಿಗೆಗೆ ಬಳಕೆ ಮಾಡಲು ಅನುಮತಿ ನೀಡಬೇಕು' ಎಂದು ಮನವಿ ಮಾಡಿದರು.

'ದ್ವಿಚಕ್ರ ವಾಹನಗಳನ್ನು ಬಾಡಿಗೆ ವಾಹನಗಳಾಗಿ ಬಳಕೆ ಮಾಡಲು ಸಾಧ್ಯವಿಲ್ಲ. ದ್ವಿಚಕ್ರ ಹಾಗೂ ದೊಡ್ಡ ವಾಹನಗಳನ್ನು ಸಂಚಾರ ದಟ್ಟಣೆಯಲ್ಲಿ ಚಲಾಯಿಸುವುದು ವಿಭಿನ್ನವಾಗಿರುತ್ತದೆ. ದೇಶದಲ್ಲಿ 8 ರಾಜ್ಯಗಳಲ್ಲಿ ಮಾತ್ರವೇ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಲಾಗಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಸರ್ಕಾರ ಬೈಕ್ ಟ್ಯಾಕ್ಸಿ ಸೇವೆ ಮುಂದುವರಿಸಲು ನಿಯಮಗಳನ್ನು ರೂಪಿಸುವಂತಿದ್ದರೆ, ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂಬ ಆದೇಶ ಹೊರಡಿಸಬಹುದಿತ್ತು. ಆದರೆ, ಸರ್ಕಾರ ನಿಯಮಗಳನ್ನು ರೂಪಿಸುತ್ತಿಲ್ಲ ಎಂದು ತಿಳಿಸಿದೆ. ಹೀಗಾಗಿ, ಮಧ್ಯಂತರ ಪರಿಹಾರ ನೀಡಲಾಗದು' ಎಂದು ತಿಳಿಸಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿದೆ.

ದಾಖಲೆ ಪರಿಶೀಲನೆ ಅವಧಿ ವಿಸ್ತರಣೆ

ಬೆಂಗಳೂರು: ಎರಡನೇ ವರ್ಷದ ಎಂಜನಿಯರಿಂಗ್ (ಡಿಸಿಇಟಿ) ಪ್ರವೇಶಕ್ಕೆ ನಡೆಸಿದ ಡಿಸಿಇಟಿ ವಿದ್ಯಾರ್ಥಿಗಳ ದಾಖಲೆ ಪರಿಶೀಲನೆ ಅವಧಿಯನ್ನು 2 ದಿನ ವಿಸ್ತರಿಸಲಾಗಿದೆ.

ಸರ್ಕಾರಿ ಹಾಗೂ ಅನುದಾನಿತ 37 ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಜೂನ್ 14 ಮತ್ತು 16ರಂದು ದಾಖಲೆ ಪರಿಶೀಲನೆಗೆ ಅವಕಾಶ ನೀಡಲಾಗಿದೆ. ದಾಖಲೆ ಪರಿಶೀಲನಾ ಕಾರ್ಯ ಜೂನ್ 13ರಂದು ಮುಕ್ತಾಯವಾಗಬೇಕಿತ್ತು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲ ಶೈಕ್ಷಣಿಕ ಮೂಲ ದಾಖಲೆ, ವಿಶೇಷ ಪ್ರವರ್ಗದ (ಎನ್‌ಸಿಸಿ, ಕ್ರೀಡೆ, ಸೈನಿಕರು, ಮಾಜಿ ಸೈನಿಕರು, ಮಾಜಿ- ಸಿಎಪಿಎಫ್, ಸಿಎಪಿಎಫ್, ಕ್ಲೇಮ್ ಮಾಡಿದ ದಾಖಲೆಗಳು) ಪ್ರಮಾಣ ಪತ್ರ ಪರಿಶೀಲನಾ ಕಾರ್ಯ ಜೂನ್ 10ರಿಂದ ನಡೆಯುತ್ತಿದೆ.

ಜಂಟಿ ಪೊಲೀಸ್ ಕಮಿಷನರ್ ವಂಶಿ ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಮಕಾತಿ ವಿಭಾಗದ ಡಿಐಜಿ ಸಿ.ವಂಶಿ ಕೃಷ್ಣ ಅವರನ್ನು ನಗರದ ಪಶ್ಚಿಮ ವಲಯದ ಜಂಟಿ ಪೊಲೀಸ್ ಕಮಿಷನರ್ ಆಗಿ ವರ್ಗಾವಣೆ ಮಾಡಲಾಗಿದೆ. ಈ ಹಿಂದೆ ಹೆಚ್ಚುವರಿ ಪೊಲೀಸ್ ಕಮಿಷನರ್ ಆಗಿದ್ದ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ ಸರ್ಕಾರ ಅಮಾನತು ಮಾಡಿದೆ. ಜಂಟಿ ಪೊಲೀಸ್ ಕಮಿಷನರ್ ಹಾಗೂ ಹೆಚ್ಚುವರಿ ಪೊಲೀಸ್ ಕಮಿಷನರ್ ಹುದ್ದೆಗಳು ಸಮಾನ ಎಂದು ಆದೇಶದಲ್ಲಿ ತಿಳಿಸಿದೆ.

ಲೋಕಾಯುಕ್ತ ಬೆಂಗಳೂರು ಘಟಕದ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ–1) ಶ್ರೀನಾಥ ಮಹದೇವ ಜೋಶಿ ಅವರನ್ನು ಮಂಗಳವಾರ ಸೇವೆಯಿಂದ ಬಿಡುಗಡೆಗೊಳಿಸಿ ಲೋಕಾಯುಕ್ತರು ಆದೇಶಿಸಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಈ ಬೆಳವಣಿಗೆ ಹಲವು ಆಯಾಮಗಳನ್ನು ಪಡೆದುಕೊಂಡಿದೆ.

ಕೆ.ಶಿವರಾಮ ಕಾರಂತ ಬಡಾವಣೆ: ಜಮೀನು ನೀಡಲು ರೈತರ ವಿರೋಧ

18 ಗ್ರಾಮಗಳಲ್ಲಿ 'ಎಚ್ಚರಿಕೆ' ಫಲಕ

• ಕೆ.ಎಸ್.ಸುನಿಲ್

ಬೆಂಗಳೂರು: ನಗರದ ಉತ್ತರ ಭಾಗದಲ್ಲಿ ನಿರ್ಮಾಣವಾಗುತ್ತಿರುವ ಕೆ.ಶಿವರಾಮ ಕಾರಂತ (ಎಸ್.ಕೆ) ಬಡಾವಣೆಯ 2ನೇ ಹಂತದ ಯೋಜನೆಗೆ ಜಮೀನು ನೀಡಲು ವಿರೋಧ ವ್ಯಕ್ತಪಡಿಸಿರುವ ರೈತರು, 18 ಗ್ರಾಮಗಳಲ್ಲಿ 'ಎಚ್ಚರಿಕೆ ಪ್ರಕಟಣೆ' ಎಂಬ ಸೂಚನಾ ಫಲಕ ಹಾಕಿದ್ದಾರೆ.

ಮೊದಲ ಹಂತದಲ್ಲಿ ಸುಮಾರು 3,546 ಎಕರೆ ಪ್ರದೇಶದಲ್ಲಿ 30 ಸಾವಿರ ನಿವೇಶನ ನಿರ್ಮಾಣ ಕಾರ್ಯ ಸಾಗಿದ್ದು, ಇನ್ನೂ ಕಾಮಗಾರಿ ಪೂರ್ಣಗೊಂಡಿಲ್ಲ. ಈ ನಡುವೆ ಕಾರಂತ ಬಡಾವಣೆ ವಿಸ್ತರಣೆಗೆ ಯಲಹಂಕ ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಟ್ಟು 18 ಗ್ರಾಮಗಳನ್ನು ಗುರುತಿಸಲಾಗಿದ್ದು, ಅಂದಾಜು ಮೂರು ಸಾವಿರ ಎಕರೆ ಜಮೀನು ಅಗತ್ಯವಿದೆ.

ಕೊಂಡಶೆಟ್ಟಿಹಳ್ಳಿ, ಲಿಂಗರಾಜ ಸಾಗರ, ಚಿಕ್ಕಬಾಣಾವರ, ಕೆಂಪಾಪುರ, ಕಸಘಟ್ಟಪುರ, ಕುಂಬಾರಹಳ್ಳಿ, ಆವಲ ಹಳ್ಳಿ, ಮಾವಳ್ಳಿಪುರ, ಜೆ.ಬಿ.ಕಾವಲ್, ಲಿಂಗರಾಜಪುರ, ಮೈಲಪ್ಪನಹಳ್ಳಿ, ಬ್ಯಾಲಕೆರೆ, ಮಧುಗಿರಿ ಹಳ್ಳಿ, ಶಿವಕೋಟೆ, ಮುತ್ತುಗದಹಳ್ಳಿ, ಕೃಷ್ಣರಾಜಪುರ, ಕೃಷ್ಣರಾಜಸಾಗರ ಗ್ರಾಮಗಳಲ್ಲಿ ಜಮೀನು ಗುರುತಿಸಿ, ಖಾತೆದಾರರು ಹಾಗೂ ವಿಸ್ತೀರ್ಣದ ವಿವರ, ಜಮೀನಿನ ನಕ್ಷೆ, ಚಕ್ಕುಬಂದಿ ಮತ್ತು ಇತರೆ ವಿವರಗಳನ್ನು ಸಂಗ್ರಹಿಸಲಾಗಿದೆ. ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಪ್ರಾಧಿಕಾರವು ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ವರದಿ ಸಲ್ಲಿಸಿದ ಬೆನ್ನಲ್ಲೇ, ಬಡಾವಣೆಗೆ ಭೂಮಿ ನೀಡುವುದಿಲ್ಲ ಎಂದು ಗ್ರಾಮಗಳಲ್ಲಿ 'ಎಚ್ಚರಿಕೆ ಪ್ರಕಟಣೆ' ಎಂಬ ಸೂಚನಾ ಫಲಕಗಳನ್ನು ಹಾಕುವ ಮೂಲಕ ಸರ್ಕಾರ ಮತ್ತು ಬಿಡಿಎ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಪ್ರಾಧಿಕಾರವು ಎಸ್.ಕೆ. ಬಡಾವಣೆಗಾಗಿ 19 ವರ್ಷಗಳ ಹಿಂದೆ ರೈತರಿಂದ ಬಲವಂತವಾಗಿ ಜಮೀನು ಪಡೆದುಕೊಂಡು ಇನ್ನೂ ಪರಿಹಾರ ನೀಡಿಲ್ಲ. ರೈತ ಹೋರಾಟಗಾರರು, ರೈತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದೆ. ಜಮೀನು ನೀಡಿದ ರೈತರು ಪರಿಹಾರ ಪಡೆಯಲು ಕಚೇರಿಗೆ ಅಲೆದಾಡುತ್ತಿದ್ದಾರೆ' ಎಂದು ರೈತ ಮುಖಂಡ ಮಾವಳ್ಳಿಪುರ ಶ್ರೀನಿವಾಸ್ ಹೇಳಿದರು.

'ಬಡಾವಣೆ ವಿಸ್ತರಣೆಗೆ ಗುರುತಿಸಿರುವ ಗ್ರಾಮಗಳಲ್ಲಿನ ಜಮೀನುಗಳಲ್ಲಿ ಶೇ 60ರಷ್ಟು ಅಭಿವೃದ್ಧಿ ಆಗಿವೆ. ಈ ಭಾಗದ ಜನರು ಕೃಷಿ, ಹೈನುಗಾರಿಕೆ ಚಟುವಟಿಕೆ ಅವಲಂಬಿಸಿದ್ದು, ಜಮೀನು ಕಳೆದುಕೊಂಡರೆ ಸಂಕಷ್ಟಕ್ಕೆ ಒಳಗಾಗುತ್ತಾರೆ' ಎಂದರು.

'2013ರ ಭೂಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕು. ಆದರೆ, ಬ್ರಿಟಿಷ್ ಕಾಲದ ಭೂ ಸ್ವಾಧೀನ ಕಾಯ್ದೆ 1894ರ ಅನ್ವಯ ಸಂಧಾನ ಸೂತ್ರದಡಿ ಪರಿಹಾರ ನಿಗದಿಗೆ ಬಿಡಿಎ ಆದೇಶ ಮಾಡಿದೆ. ಕರ್ನಾಟಕ ಗೃಹ ಮಂಡಳಿ, ಕೆಐಎಡಿಬಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು 2013ರ ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ಮಾಡಿಕೊಂಡಿರುವಾಗ ಬಿಡಿಎಗೆ ಏಕೆ ಸಾಧ್ಯವಾಗಿಲ್ಲ' ಎಂದು ಕುರುಬರಹಳ್ಳಿ ರೈತ ಸತೀಶ್ ಪ್ರಶ್ನಿಸಿದರು.



ಎಸ್.ಕೆ.ಬಡಾವಣೆ ವಿಸ್ತರಣೆಗೆ ಜಮೀನು ನೀಡುವುದಿಲ್ಲ ಎಂದು ಗ್ರಾಮಗಳಲ್ಲಿ ಅಳವಡಿಸಿರುವ ಎಚ್ಚರಿಕೆ ಸೂಚನಾ ಫಲಕ

ಬಡಾವಣೆ, ವಾಣಿಜ್ಯ ಸಂಕೀರ್ಣಕ್ಕೆ ನಿರ್ಬಂಧ

'18 ಗ್ರಾಮಗಳು ತಿಪ್ಪಗೊಂಡನಹಳ್ಳಿ ಜಲಾಶಯ ವ್ಯಾಪ್ತಿಗೆ ಒಳಪಟ್ಟಿದ್ದು, ಜಲಾಶಯವು ಮಲಿನವಾಗಬಹುದು. ಜಲಾನಯನ ಪ್ರದೇಶದ ಎರಡು ಕಿ.ಮೀ. ವ್ಯಾಪ್ತಿಯಲ್ಲಿ ಬಡಾವಣೆ, ವಾಣಿಜ್ಯ ಸಂಕೀರ್ಣ, ಕಾರ್ಖಾನೆ ನಿರ್ಮಾಣ, ಗಣಿಗಾರಿಕೆಗೆ ಅವಕಾಶವಿಲ್ಲ ಎಂದು ಅಧಿಸೂಚನೆ ಹೊರಡಿಸಲಾಗಿದೆ. ಆದರೂ ಈ ಪ್ರದೇಶದಲ್ಲಿ ಬಡಾವಣೆ ನಿರ್ಮಿಸಲು ಪ್ರಾಧಿಕಾರ ಮುಂದಾಗಿದೆ' ಎಂದು ರೈತರಾದ ನಟರಾಜ್, ಗಜೇಂದ್ರ ಆರೋಪಿಸಿದರು.

> **ಎಸ್.ಕೆ.ಬಡಾವಣೆ ವಿಸ್ತರಣೆ ಸಂಬಂಧ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಸರ್ಕಾರ ಅನುಮೋದನೆ ನೀಡಿದ ಬಳಿಕ ಭೂಸ್ವಾಧೀನ ನಡೆಯಲಿದೆ.**
> ಬಿಡಿಎ ಅಧಿಕಾರಿಯೊಬ್ಬರು

ಕೆಎಸ್‌ಆರ್‌ಟಿಸಿ: ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಲಕ ಕಂ ನಿರ್ವಾಹಕರ 2000 ಹುದ್ದೆಗಳ ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿ, ಅಂಕಗಳ ವಿವರಗಳನ್ನು ಕೆಎಸ್‌ಆರ್‌ಟಿಸಿ ಪ್ರಕಟಿಸಿದೆ.

ಸಂಭವನೀಯ ಆಯ್ಕೆಪಟ್ಟಿಗೆ ಸ್ವೀಕರಿಸಿರುವ ಆಕ್ಷೇಪಗಳನ್ನು ಪರಿಶೀಲಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಶಾಂತಿನಗರದಲ್ಲಿರುವ ನಿಗಮದ ಕೇಂದ್ರ ಕಚೇರಿಯಲ್ಲಿ ಮತ್ತು ನಿಗಮದ ವೆಬ್‌ಸೈಟ್ ksrtcjobs.karnataka.gov.in ನಲ್ಲಿ ಪ್ರಕಟಿಸಲಾಗಿದೆ. ಆಯಾ ಪ್ರವರ್ಗದಲ್ಲಿ ಸ್ಥಾನ ಪಡೆದ ಕೊನೆಯ ಅಭ್ಯರ್ಥಿ ಪಡೆದ ಅಂಕ, ಹುಟ್ಟಿದ ದಿನಾಂಕವನ್ನು ನೀಡಲಾಗಿದೆ.

ಜೂನ್ 16ರಿಂದ 19ರವರೆಗೆ ಶಾಂತಿನಗರದ ಕೇಂದ್ರ ಕಚೇರಿಯಲ್ಲಿ ಗಣಕೀಕೃತ ಕೌನ್ಸೆಲಿಂಗ್ ನಡೆಯಲಿದೆ. ಅಭ್ಯರ್ಥಿಗಳನ್ನು ಜೇಷ್ಠತೆ ಅನುಸಾರ ವಿಭಾಗ, ಘಟಕಗಳಿಗೆ ನೇರವಾಗಿ ನಿಯೋಜನೆ ಮಾಡಲಾಗುವುದು. ಕೌನ್ಸೆಲಿಂಗ್ ದಿನಾಂಕ, ಸಮಯವನ್ನು ಅಭ್ಯರ್ಥಿಗಳಿಗೆ ಎಸ್‌ಎಂಎಸ್ ಮೂಲಕ ತಿಳಿಸಲಾಗುವುದು ಎಂದು ಆಯ್ಕೆ ಸಮಿತಿ ಅಧ್ಯಕ್ಷರೂ ಆಗಿರುವ ನಿಗಮದ ನಿರ್ದೇಶಕರು ತಿಳಿಸಿದ್ದಾರೆ.

ಯುಗಾದಿ ನಾಟಕ ರಚನಾ ಸ್ಪರ್ಧೆ ಪ್ರಶಸ್ತಿ ಪ್ರದಾನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ'ಯು ವೀರಲೋಕ ಪ್ರಕಾಶನದ ಸಹಯೋಗದಲ್ಲಿ ಆಯೋಜಿಸಿದ್ದ ಚೊಚ್ಚಲ 'ಯುಗಾದಿ ನಾಟಕ ರಚನಾ ಸ್ಪರ್ಧೆ 2025'ರ ಬಹುಮಾನ ವಿತರಣಾ ಸಮಾರಂಭ ಜೂನ್ 14ರಂದು ನಡೆಯಲಿದೆ.

ಅರಮನೆ ರಸ್ತೆಯಲ್ಲಿರುವ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಸಂಜೆ 6.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು, ಕಲಾವಿದೆಯರಾದ ಜಯಮಾಲ, ಲಕ್ಷ್ಮಿ ಚಂದ್ರಶೇಖರ, ರಂಗ ನಿರ್ದೇಶಕ ಬಿ.ಸುರೇಶ್ ಅತಿಥಿಗಳಾಗಿ ಇರಲಿದ್ದಾರೆ.ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್ ಪಾಲ್ಗೊಳ್ಳುವರು. ರಾತ್ರಿ 7 ಗಂಟೆಗೆ ಮೈಸೂರಿನ ನಟನ ರಂಗಶಾಲೆ ತಂಡದಿಂದ 'ಸ್ಥಾವರವೂ ಜಂಗಮ' ನಾಟಕ ಪ್ರದರ್ಶನ ನಡೆಯಲಿದೆ.

ಚಿತ್ರಾವಳಿ


ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ರಾಮಾನುಜಾಚಾರ್ಯ ಮಹಾ ಸಂಸ್ಥಾನದ ಯತಿರಾಜ ಜೀಯರ್ ಸ್ವಾಮೀಜಿ ಅವರು ತಿರುಪತಿ ತಿರುಮಲ ದೇವಸ್ಥಾನದ(ಟಿಟಿಡಿ) ಅಧ್ಯಕ್ಷ ಬಿ.ಆರ್.ನಾಯ್ಡು ಅವರಿಗೆ ತೆಲುಗು ವಿಜ್ಞಾನ ಸಮಿತಿಯ 'ಶ್ರೀಕೃಷ್ಣದೇವರಾಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದರು. ತೆಲುಗು ವಿಜ್ಞಾನ ಸಮಿತಿಯ ಅಧ್ಯಕ್ಷ ಡಾ. ಎ.ರಾಧಾಕೃಷ್ಣ ರಾಜು, ಟಿಟಿಡಿ ಸದಸ್ಯ ನರೇಶ್ ಕುಮಾರ್, ಉಪಾಧ್ಯಕ್ಷರಾದ ಆದಿಕೇಶವುಲು ನಾಯ್ಡು, ಗಂಗರಾಜು ಹಾಜರಿದ್ದರು


ದಕ್ಷಿಣ ಭಾರತ ಶೆಫ್ ಅಸೋಸಿಯೇಷನ್ ಮತ್ತು ವರ್ಲ್ಡ್ ಆಫ್ ಹಾಸ್ಪಿಟಾಲಿಟಿ ಸಹಯೋಗದಲ್ಲಿ ನಗರದ ಅರಮನೆ ಮೈದಾನದಲ್ಲಿ ಏರ್ಪಡಿಸಿದ್ದ ಉತ್ತಮ ಬಾಣಸಿಗರ ಸ್ಪರ್ಧೆಯಲ್ಲಿ ತಯಾರಿಸಿದ ಬಗೆಬಗೆಯ ಖಾದ್ಯಗಳನ್ನು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ವೀಕ್ಷಿಸಿದರು


ಕಲಾವಿದರು ವೆಂಕಟಪ್ಪ ಚಿತ್ರಶಾಲೆಯ ಆವರಣದಲ್ಲಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ

ಚಿತ್ರಶಾಲೆ: ಕಲಾವಿದರಿಂದ ಗ್ಯಾಲರಿ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಂಕಟಪ್ಪ ಚಿತ್ರಶಾಲೆಯ (ಆರ್ಟ್ ಗ್ಯಾಲರಿ) ನವೀಕೃತ ಕಟ್ಟಡದ ಉದ್ಘಾಟನಾ ಕಾರ್ಯಕ್ರಮಕ್ಕೆ ಕಲಾವಿದರನ್ನು ಕಡೆಗಣಿಸಿರುವ ಸರ್ಕಾರದ ನಡೆಯನ್ನು ಖಂಡಿಸಿ ಕಾರ್ಯಕ್ರಮ ಬಹಿಷ್ಕರಿಸಿದ್ದ ಕಲಾವಿದರ ಸಮೂಹ, ಶುಕ್ರವಾರದಂದು ಚಿತ್ರಶಾಲೆ ಪ್ರವೇಶಿಸಿ ಸಂಭ್ರಮಿಸಿತು.

ಈ ಚಿತ್ರಶಾಲೆಯ ಉದ್ಘಾಟನಾ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯಲ್ಲಿ ಕಲಾವಿದರನ್ನು ಕಡೆಗಣಿಸಿ, ರಾಜಕಾರಣಿಗಳಿಗೆ ಮಾತ್ರ ಆದ್ಯತೆ ನೀಡಿದ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಡೆಗೆ ಸಾಮಾಜಿಕ ಜಾಲತಾಣದಲ್ಲಿ ಕಲಾವಿದರ ವಲಯದಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಉದ್ಘಾಟನಾ ಕಾರ್ಯಕ್ರಮ ಬಹಿಷ್ಕರಿಸುವಂತೆ ಕರೆ ನೀಡಿದ್ದ ವೆಂಕಟಪ್ಪ ಆರ್ಟ್ ಗ್ಯಾಲರಿ ಫೋರಂ, ಶುಕ್ರವಾರದಂದು ಗ್ಯಾಲರಿ ಪ್ರವೇಶ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಫೋರಂನ ಸದಸ್ಯರೂ ಆಗಿರುವ ಕಲಾ ವಿಮರ್ಶಕ ಚಿ.ಸು. ಕೃಷ್ಣಸೆಟ್ಟಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್, ಕಲಾವಿದೆಯರಾದ ಶೀಲಾ ಗೌಡ, ಪುಷ್ಪಮಾಲಾ, ಅಲಕಾ ರಾವ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

'ದಿ ಐಲ್ ಬೈ ವಂಡರ್ ಲಾ' ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಜ್ಜಾಲದ ಜಡೇನಹಳ್ಳಿ ಬಳಿ ಇರುವ ವಂಡರ್ ಲಾದಲ್ಲಿ 'ದಿ ಐಲ್ ಬೈ ವಂಡರ್ ಲಾ' ಹೊಸ ರಿಟ್ರೀಟ್ ಮತ್ತು ಸ್ಟೇ ಗಳನ್ನು ಶುಕ್ರವಾರ ಆರಂಭಿಸಲಾಗಿದೆ.

4.5 ಎಕರೆ ಪ್ರದೇಶದಲ್ಲಿ ರೆಸಾರ್ಟ್, ಪ್ರತ್ಯೇಕ ಈಜುಕೊಳಗಳಿರುವ ಕಾಟೇಜ್, ಕ್ಯಾಂಪಿಂಗ್ ಟೆಂಟ್, ಹ್ಯಾಮಕ್ ಸ್ವೀಟ್ಸ್ ಮತ್ತು ಟ್ರೀಹೌಸ್, ಲಗೂನ್ ವ್ಯೂ ಡೆಕ್ ಸೇರಿ 39 ಇವೆ. ಜೊತೆಗೆ ಐಶಾರಾಮಿ ಸ್ಪಾ, ಸಾಕುಪ್ರಾಣಿಗಳನ್ನು ಕರೆದುಕೊಂಡು ಬರುವುದಕ್ಕೂ ಅನುಕೂಲ ಮಾಡಿಕೊಡುವುದಕ್ಕಾಗಿ ಪ್ರತ್ಯೇಕ ಪ್ರದೇಶವನ್ನು ಮೀಸಲಿಡಲಾಗಿದೆ ಎಂದು ವಂಡರ್ ಲಾ ಹಾಲಿಡೇಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ. ಚಿತ್ತಿಲಪ್ಪಿಳ್ಳಿ ವಿವರಿಸಿದರು.

62 ಆಸನಗಳನ್ನು ಹೊಂದಿರುವ ಆಕರ್ಷಕ ರೆಸ್ಟೋರೆಂಟ್ ಹೊಂದಿದ್ದು, ಏಷ್ಯಾ ಖಂಡದಲ್ಲಿ ಇರುವ ವಿವಿಧ ವಿಶಿಷ್ಟ ಖಾದ್ಯಗಳು ಗ್ರಾಹಕರಿಗೆ ಇಲ್ಲಿ ಲಭ್ಯವಾಗಲಿವೆ ಎಂದು ಹೇಳಿದರು.

ವಂಡರ್ ಲಾ ಆರಂಭವಾಗಿ 25 ವರ್ಷಗಳಾಗಿವೆ. ಇಲ್ಲಿನ ಪಾರ್ಕ್‌ಗಳು ಮನರಂಜನೆಗೆ ಹೆಸರುವಾಸಿಯಾಗಿದ್ದರೂ, ಹೆಚ್ಚು ವೈಯಕ್ತಿಕವಾಗಿರುವ ಪ್ರಾಕೃತಿಕ ಅನುಭವಗಳಿಗಾಗಿ ಬೇಡಿಕೆ ಹೆಚ್ಚಾಗಿದೆ. ಅದಕ್ಕಾಗಿಯೇ 'ದಿ ಐಲ್' ಆರಂಭಿಸಲಾಗಿದೆ ಎಂದರು.

ವಂಡರ್ ಲಾ ಹಾಲಿಡೇಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಧೀರನ್ ಚೌಧರಿ ಮಾತನಾಡಿ, 'ಅತಿಥಿಗಳ ನಿರೀಕ್ಷೆಗಳಿಗೆ ತಕ್ಕಂತೆ ಬೆಂಗಳೂರಿಗೆ ಹತ್ತಿರದಲ್ಲಿಯೇ ಪ್ರಾಕೃತಿಕ ಸ್ಟೇ ಸೃಷ್ಟಿ ಮಾಡಿದ್ದೇವೆ. ಖಾಸಗಿ ಪ್ಲಂಜ್ ಪೂಲ್ ಬಳಿ ಅಡ್ಡಾಡಲು, ಸ್ಕೈಲೈಟ್ಸ್ ಕೊಠಡಿ ಮೂಲಕ ನಕ್ಷತ್ರಗಳನ್ನು ವೀಕ್ಷಣೆ ಮಾಡಲು, ಟ್ರೀ ಹೌಸ್‌ನಲ್ಲಿ ಸೂರ್ಯಾಸ್ತವನ್ನು ನೋಡಲು ಅವಕಾಶ ಮಾಡಿಕೊಡಲಾಗಿದೆ. ಅಗತ್ಯಕ್ಕೆ ತಕ್ಕಂತೆ ಶಿಬಿರಾಗ್ನಿ (ಕ್ಯಾಂಪ್ ಫೈರ್) ಮಾಡಬಹುದು' ಎಂದು ಮಾಹಿತಿ ನೀಡಿದರು.

ಕೊಠಡಿಗಳಿಗೆ ದಿನಕ್ಕೆ ₹10 ಸಾವಿರದಿಂದ ₹ 15 ಸಾವಿರವರೆಗೆ ದರ ನಿಗದಿಪಡಿಸಲಾಗಿದೆ. https://www.wonderla.com/theisle ಅಥವಾ 7026500011, 8035073992 ಮೂಲಕ ಮುಂಚಿತವಾಗಿ ಕಾಯ್ದಿರಿಸಬಹುದು ಎಂದು ತಿಳಿಸಿದರು.


ವಂಡರ್ ಲಾದಲ್ಲಿ ಶುಕ್ರವಾರ ಆರಂಭವಾದ 'ದಿ ಐಲ್ ಬೈ ವಂಡರ್ ಲಾ'ದಲ್ಲಿನ 'ಸ್ಟೇ'ಗಳು

ಕಿಲೋ ಮೀಟರ್‌ಗೆ ₹10 ಕೋಟಿ ವೆಚ್ಚ ಮಾಡಿದರೂ ಅವ್ಯವಸ್ಥೆಯದ್ದೇ ಆಗರ

ವೈಟ್ ಟಾಪಿಂಗ್‌ನಲ್ಲೂ ಗುಂಡಿಗೆ ಮುಕ್ತಿ ಇಲ್ಲ



ವಿದ್ಯಾರಣ್ಯಪುರದ ಎಚ್‌ಎಂಟಿ ಲೇಔಟ್‌ನಿಂದ ಅನ್ನಪೂರ್ಣೇಶ್ವರಿ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಕೆಸರು ಗದ್ದೆಯಾಗಿದೆ
ನಾಗರಾಜ್, ವಿದ್ಯಾರಣ್ಯಪುರ



ನಾಗಸಂದ್ರ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿರುವುದು
ಡಿ ಗಂಗಾಧರಪ್ಪ, ಬಾಗಲಗುಂಟೆ



ಕುರುಬರಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿರುವುದು
ಎಂ.ಎ.ಸುರೇಶ್, ಕುರುಬರಹಳ್ಳಿ

● ಆರ್. ಮಂಜುನಾಥ್

ಬೆಂಗಳೂರು: ರಸ್ತೆಗೆ ಡಾಂಬರೀಕರಣದ (ಬ್ಲ್ಯಾಕ್ ಟಾಪಿಂಗ್) ಬದಲು ಕಾಂಕ್ರೀಟೀಕರಣ (ವೈಟ್ ಟಾಪಿಂಗ್) ಮಾಡಿದರೆ ರಸ್ತೆಗಳು 25 ವರ್ಷ ಬಾಳಿಕೆ ಬರುತ್ತವೆ ಎಂದು ಒಂದು ಕಿ.ಮೀಗೆ ₹10 ಕೋಟಿ ವೆಚ್ಚ ಮಾಡಿರುವ ರಸ್ತೆಗಳಲ್ಲೂ ಗುಂಡಿಗೆ ಮುಕ್ತಿ ಸಿಕ್ಕಿಲ್ಲ.

ನಗರದ ಎಲ್ಲ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳನ್ನು ವೈಟ್ ಟಾಪಿಂಗ್ ಮಾಡಲು ಬಿಬಿಎಂಪಿ ಹಲವು ವರ್ಷಗಳಿಂದ ಯೋಜನೆ ರೂಪಿಸಿದೆ. ಹಲವು ರಸ್ತೆಗಳು ವೈಟ್ ಟಾಪಿಂಗ್ ಆಗಿವೆ. ₹1800 ಕೋಟಿ ವೆಚ್ಚದಲ್ಲಿ ಹಲವು ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭ ಆಗಿದೆ. ಆದರೆ, ನಾಲ್ಕಾರು ವರ್ಷಗಳ ಹಿಂದೆ ಕಾಮಗಾರಿ ಪೂರ್ಣಗೊಂಡಿರುವ ವೈಟ್ ಟಾಪಿಂಗ್ ರಸ್ತೆಯಲ್ಲಿ ಗುಂಡಿಗಳು ಕಾಣಿಸಿಕೊಳ್ಳುತ್ತಿವೆ. ಇವುಗಳ ದುರಸ್ತಿಯೂ ಆಗುತ್ತಿಲ್ಲ.

ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡು ಒಂದು ವರ್ಷವೂ ಆಗಿಲ್ಲ, ಅಲ್ಲಿ ಆಗಲೇ ಗುಂಡಿಗಳು ಪ್ರತ್ಯಕ್ಷವಾಗಿವೆ. ಸುಮಾರು 25 ವರ್ಷ ಯಾವುದೇ ಸಮಸ್ಯೆ ಇಲ್ಲ ಎಂದು ಬಿಬಿಎಂಪಿ ನೀಡಿದ್ದ ಭರವಸೆ ಸುಳ್ಳಾಗಿದೆ. ವೈಟ್ ಟಾಪಿಂಗ್ ರಸ್ತೆ ಕೂಡ ಗುಂಡಿಯಿಂದ ಹೊರತಲ್ಲ ಎಂಬುದಕ್ಕೆ ಒಂದು ಉದಾಹರಣೆ ಅಷ್ಟೇ.

ಮೈಸೂರು ರಸ್ತೆ, ಸುಮನಹಳ್ಳಿ ವರ್ತುಲ ರಸ್ತೆ, ಇಂದಿರಾನಗರ ರಸ್ತೆ, ನೃಪತುಂಗ ರಸ್ತೆ ಸೇರಿದಂತೆ ವೈಟ್‌ಟಾಪಿಂಗ್ ಮಾಡಿರುವ ಹಲವು ರಸ್ತೆಗಳಲ್ಲಿ ಗುಂಡಿಗಳನ್ನು ಕಾಣಬಹುದು. ಇವುಗಳ ದುರಸ್ತಿಯನ್ನು ಬಿಬಿಎಂಪಿ ಮಾಡುತ್ತಿಲ್ಲ. ಸ್ಥಳೀಯರೇ ರಸ್ತೆ ಬದಿ ಸಿಗುವ ಕಲ್ಲು, ಇಟ್ಟಿಗೆಯನ್ನು ಸುರಿಯುತ್ತಾರೆ. ಇಲ್ಲದಿದ್ದರೆ, ಸಂಚಾರ ಪೊಲೀಸರು ಕಾಂಕ್ರೀಟ್ ಸಾಗಿಸುವ ಟ್ರಕ್‌ನ ಚಾಲಕನಿಗೆ ಹೇಳಿ ಕಾಂಕ್ರೀಟ್ ಹಾಕಿಸುತ್ತಾರೆ.

‘ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಮಾಡುವಾಗ ಹಲವು ವರ್ಷ ಸಾಕಷ್ಟು ಸಮಸ್ಯೆಯಾಯಿತು. ಕಾಮಗಾರಿ ಮುಗಿದ ಮೇಲೆ ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ದೂರು ನೀಡಿದರೆ ಯಾರೂ ಬರುವುದಿಲ್ಲ. ಮಣ್ಣು–ಕಲ್ಲು ಹಾಕಿ ನಾವೇ ಸರಿಪಡಿಸಿಕೊಳ್ಳಬೇಕಿದೆ’ ಎಂದು ವ್ಯಾಪಾರಿ ಮನೋಹರ್ ಹೇಳಿದರು.



ಬಿವಿಕೆ ಅಯ್ಯಂಗಾರ್ ರಸ್ತೆಯ ವೈಟ್ ಟಾಪಿಂಗ್ ನಡುವೆ ಗುಂಡಿ   ಪ್ರಜಾವಾಣಿ ಚಿತ್ರ: ಎಂ.ಎಸ್‌ ಮಂಜುನಾಥ್

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು ‘ಪ್ರಜಾವಾಣಿ’ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.
ವಾಟ್ಸ್ ಆ್ಯಪ್: **9606038256**

ವಾರ್ಡ್ ರಸ್ತೆಗಳ ನಿರ್ಲಕ್ಷ್ಯ

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಮುಖ್ಯ ಆಯುಕ್ತರೆಲ್ಲರೂ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ತಪಾಸಣೆ ಮಾಡುತ್ತಾರೆ. ಆದರೆ, ನಾಗರಿಕರು ವಾಸಿಸುವ ವಾರ್ಡ್ ರಸ್ತೆಗಳತ್ತ ವಲಯ ಆಯುಕ್ತರು, ಮುಖ್ಯ ಎಂಜಿನಿಯರ್, ವಾರ್ಡ್ ಎಂಜಿನಿಯರ್ ತಲೆ ಹಾಕುವುದಿಲ್ಲ.

ವಾರ್ಡ್‌ಗಳ ರಸ್ತೆಗಳ ಅಭಿವೃದ್ಧಿ ಹಾಗೂ ಗುಂಡಿಗಳ ದುರಸ್ತಿಗೆ ಪ್ರತ್ಯೇಕ ಅನುದಾನವಿದ್ದರೂ ಈ ಬಗ್ಗೆ ವಲಯ ಆಯುಕ್ತರ ನಿರಾಸಕ್ತಿಯಿಂದ ರಸ್ತೆಗಳು ಗುಂಡಿಗಳಿಂದ ಕೂಡಿವೆ. ಮಳೆಗಾಲ ಆರಂಭವಾದ ಮೇಲಂತೂ ದುರಸ್ತಿ ಕಾರ್ಯ ನಡೆಯುವುದಿಲ್ಲ. ಈ ಅನುದಾನದಲ್ಲಿ ಉಳಿದ ಹಣವನ್ನು ಬೇರೆ ಕಾಮಗಾರಿಗೆ ವಿನಿಯೋಗಿಸುತ್ತಾರೆ. ಗುಂಡಿಗಳು ಹಾಗೆಯೇ ಉಳಿಯುತ್ತವೆ. ಇದು ಎಂಟೂ ವಲಯಗಳಲ್ಲಿರುವ ವಾರ್ಡ್‌ಗಳ ಸಮಸ್ಯೆಯಾಗಿದೆ.

‘ರಾಜರಾಜೇಶ್ವರಿನಗರ ವಾರ್ಡ್‌ನ ಹಲವು ರಸ್ತೆಗಳಲ್ಲಿ ಗುಂಡಿಗಳೇ ಇವೆ. ದೂರು ನೀಡಿದಾಗ, ಒಂದೆರಡು ಕಡೆ ವೆಟ್ ಮಿಕ್ಸ್ ಹಾಕುತ್ತಾರೆ. ವಾರದ ನಂತರ ಕಲ್ಲೆಲ್ಲ ಹೋಗಿ, ಮತ್ತೆ ಗುಂಡಿಯಾಗುತ್ತದೆ. ಕೆಲವೆಡೆ ಡಾಂಬರು ಹಾಕಿದ್ದರೂ, ಸಂಪೂರ್ಣವಾಗಿ ಗುಂಡಿ ಮುಚ್ಚಲ್ಲ’ ಎಂದು ಟಿ.ಇ. ಶ್ರೀನಿವಾಸ್ ದೂರಿದರು.



ಸುಮನಹಳ್ಳಿ– ವಿಶ್ವನೀಡಂ ಅಂಚೆ 1ನೇ ಅಡ್ಡರಸ್ತೆಯ ದುಃಸ್ಥಿತಿ   ಪ್ರಜಾವಾಣಿ ಚಿತ್ರ: ಎಂ. ಎಸ್‌ ಮಂಜುನಾಥ್

ನಾಗರಿಕರಿಗೆ ದುಃಸ್ವಪ್ನ

ರಸ್ತೆಯೊಂದರಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಯಿತೆಂದರೆ, ಸುತ್ತಮುತ್ತಲಿನ ನಿವಾಸಿಗಳು ಕನಿಷ್ಠ ಒಂದು ವರ್ಷ ಸಂಚಾರಕ್ಕೆ ಪರದಾಡುತ್ತಾರೆ. ಆಮೆಗಿಂತ ಕಡಿಮೆ ವೇಗದಲ್ಲಿ ಕಾಮಗಾರಿ ನಡೆಯುತ್ತದೆ. ಮನೆಯಿಂದ ವಾಹನವನ್ನು ತಿಂಗಳುಗಟ್ಟಲೆ ಹೊರತರಲು ಸಾಧ್ಯವಾಗುವುದಿಲ್ಲ. ಚರಂಡಿಯ ಕೆಲಸ ಮುಗಿಯುವುದಕ್ಕೆ ಹಲವು ತಿಂಗಳುಗಳೇ ಬೇಕು. ಹೀಗಾಗಿ, ನಾಗರಿಕರಿಗೆ ವೈಟ್ ಟಾಪಿಂಗ್ ಕಾಮಗಾರಿ ದುಃಸ್ವಪ್ನವಾಗಿ ಕಾಡುತ್ತಿದೆ.

‘ಗೋವಿಂದರಾಜನಗರ 1ನೇ ಮುಖ್ಯರಸ್ತೆಯ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಿ ಆರು ತಿಂಗಳು ಕಳೆದಿದೆ. ಸುಮಾರು ಒಂದು ಕಿ.ಮೀಗೂ ಕಡಿಮೆ ಇರುವ ಈ ರಸ್ತೆಯಲ್ಲಿ ಒಂದು ಬದಿಯ ಚರಂಡಿ ಕಾಮಗಾರಿ ಮಾತ್ರ ಮುಗಿದಿದೆ. ನಿತ್ಯವೂ ಒಂದಲ್ಲ ಒಂದು ಕಡೆ ತಡೆ ಹಾಕುತ್ತಾರೆ. ಸಂಚಾರ ಕಷ್ಟಸಾಧ್ಯವಾಗಿದೆ’ ಎಂದು ಚಂದ್ರಪ್ಪ ದೂರಿದರು.

ಸುದ್ದಿ 2 ನಿಮಿಷ

2ನೇ ವಿಮಾನ ನಿಲ್ದಾಣ 15 ದಿನಗಳಲ್ಲಿ ಸ್ಪಷ್ಟ ಚಿತ್ರಣ

ಬೆಂಗಳೂರು: ನಗರದ ಸಮೀಪ ನಿರ್ಮಿಸಲು ಉದ್ದೇಶಿಸಿರುವ ಎರಡನೇ ವಿಮಾನ ನಿಲ್ದಾಣಕ್ಕಾಗಿ ಮೂರು ಸ್ಥಳಗಳನ್ನು ಪರಿಶೀಲಿಸಿರುವ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ) 15 ದಿನಗಳಲ್ಲಿ ಅಭಿಪ್ರಾಯ ತಿಳಿಸಲಿದ್ದು, ಸ್ಥಳವನ್ನು ಅಂತಿಮಗೊಳಿಸಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಎಎಐ ತಂಡ ಅಭಿಪ್ರಾಯ ನೀಡಿದ ತಕ್ಷಣ ವಿಸ್ತೃತ ಅಧ್ಯಯನಕ್ಕೆ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವಂಥ ಪರಿಣತ ಕಂಪನಿಗಳ ಜತೆ ಚರ್ಚಿಸಲಾಗುವುದು. ಪ್ರಯಾಣಿಕರ ಅನುಕೂಲ, ಕಾರ್ಗೋ ದಟ್ಟಣೆ ಮತ್ತು ಕೈಗಾರಿಕೆಗಳ ಅಗತ್ಯ ಮತ್ತಿತರ ಅಂಶಗಳನ್ನು ಪರಿಗಣಿಸಿ ವಿಮಾನ ನಿಲ್ದಾಣಕ್ಕೆ ಸ್ಥಳವನ್ನು ಅಂತಿಮಗೊಳಿಸಲಾಗುವುದು. ಬೆಂಗಳೂರಿಂದ 50 ಕಿ.ಮೀಗೂ ಹೆಚ್ಚು ದೂರ ಇರಬಾರದು ಎಂಬುದು ಸರ್ಕಾರದ ನಿಲುವು’ ಎಂದು ತಿಳಿಸಿದರು.

ಆರಂಭದಲ್ಲಿ ಏಳು ಸ್ಥಳಗಳಲ್ಲಿ ಪ್ರಾಥಮಿಕ ಪರಿಶೀಲನಾ ಕಾರ್ಯ ನಡೆಸಿತ್ತು. ಮೂಲಗಳ ಪ್ರಕಾರ ನೆಲಮಂಗಲದ ಬಳಿ ಒಂದು, ಕನಕಪುರ ರಸ್ತೆಯ ಬಳಿ ಎರಡು ಸ್ಥಳ ಗುರುತಿಸಲಾಗಿದ್ದು, ಒಂದು ಸ್ಥಳ ಅಂತಿಮವಾಗಲಿದೆ.



ಕೆಂಗೇರಿ ಸರ್ಕಾರಿ ಕಾಲೇಜಿನ ನಿವೇಶನಕ್ಕೆ ರಿಯಾಯಿತಿ

ಬೆಂಗಳೂರು: ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನಾಗರಿಕ ಸೌಲಭ್ಯ (ಸಿಎ) ನಿವೇಶನವನ್ನು ಗುತ್ತಿಗೆ ಮೊತ್ತದ ಶೇ 5ರಷ್ಟು ಪಾವತಿಸಿಕೊಂಡು ಕರಾರು ಪತ್ರ ನೋಂದಾಯಿಸಿಕೊಡಲು ನಗರಾಭಿವೃದ್ಧಿ ಇಲಾಖೆ ಬಿಡಿಎಗೆ ಆದೇಶಿಸಿದೆ.

ಸರ್ ಎಂ. ವಿಶ್ವೇಶ್ವರಯ್ಯ (ಎಸ್‌ಎಂವಿ) ಬಡಾವಣೆಯ ಒಂದನೇ ಬ್ಲಾಕ್‌ನಲ್ಲಿ ಸರ್ಕಾರಿ ಕಾಲೇಜಿಗೆ ಮೀಸಲಾಗಿದ್ದ ಸಂಖ್ಯೆ 3ರ ನಾಗರಿಕ ಸೌಲಭ್ಯ (ಸಿಎ) ನಿವೇಶನಕ್ಕೆ (19,109.91 ಚದರ ಮೀಟರ್) ₹3.35 ಕೋಟಿ ಜಿಎಸ್‌ಟಿ ಸೇರಿದಂತೆ ಒಂದೇ ಕಂತಿನಲ್ಲಿ ₹21.98 ಕೋಟಿ ಪಾವತಿಸಲು ಬಿಡಿಎ ಹಂಚಿಕೆ ಪತ್ರ ನೀಡಿತ್ತು.

ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ವಿಶೇಷ ಪ್ರಕರಣವೆಂದು ಭಾವಿಸಿ, ಗುತ್ತಿಗೆ ಮೌಲ್ಯದಲ್ಲಿ ವಿನಾಯಿತಿ ನೀಡುವಂತೆ ಕಾಲೇಜು ಶಿಕ್ಷಣ ಇಲಾಖೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಇದನ್ನು ಪರಿಗಣಿಸಿ, ಗುತ್ತಿಗೆ ಮೌಲ್ಯದ ಶೇ 5ರಷ್ಟು ಮೊತ್ತ (₹1.09 ಕೋಟಿ + ₹57,330 ಜಿಎಸ್‌ಟಿ) ಪಾವತಿಸಿಕೊಂಡು ಕರಾರು ಮಾಡಿಕೊಡಲು ಸಚಿವ ಸಂಪುಟದಲ್ಲಿ ಜೂನ್ 5ರಂದು ನಿರ್ಣಯಿಸಲಾಗಿದೆ. ಅದರಂತೆ ನಗರಾಭಿವೃದ್ಧಿ ಇಲಾಖೆ ಜೂನ್ 12ರಂದು ಆದೇಶ ಹೊರಡಿಸಿದೆ.

ಎರಡು ದಶಕದ ಹಿಂದೆ ಬಿಡಿಎ ನಿರ್ಮಿಸಿರುವ ಎಸ್‌ಎಂವಿ ಬಡಾವಣೆಯ ಸರ್ಕಾರಿ ಕಾಲೇಜಿಗಾಗಿ ಮೀಸಲಿಡಲಾಗಿರುವ ಸಿಎ ನಿವೇಶನವನ್ನು ಶಿಕ್ಷಣ ಇಲಾಖೆಗೆ ಬಿಡಿಎ ಹಂಚಿಕೆ ಮಾಡಿಲ್ಲ ಎಂದು ‘ಪ್ರಜಾವಾಣಿ’ಯ 2024ರ ಅಕ್ಟೋಬರ್ 3ರ ಸಂಚಿಕೆಯಲ್ಲಿ ‘ಕಾಲೇಜಿಗೆ ನಿವೇಶನ ನೀಡಲು ನಿರ್ಲಕ್ಷ್ಯ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು. ಇದಾದ ನಂತರ, ಬಿಡಿಎ ಅಕ್ಟೋಬರ್ 8ರಂದು ಹಂಚಿಕೆ ಪತ್ರ ನೀಡಿ, ಪ್ರತಿ ಚದರ ಮೀಟರ್‌ಗೆ ₹9,750 ದರ ವಿಧಿಸಿ, ಒಂದೇ ಕಂತಿನಲ್ಲಿ ₹21.98 ಕೋಟಿ ಪಾವತಿಸಲು ಸೂಚಿಸಿತ್ತು.

ಬ್ಯೂಟಿ ಎಕ್ಸ್‌ಪೀರಿಯೆನ್ಸ್‌ಗೆ ನೇಹಾ ಶರ್ಮಾ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ನಗರದ ಸೌಂದರ್ಯ ಪ್ರಿಯರಿಗಾಗಿ ಬ್ಯಾಟರಾಯನಪುರದಲ್ಲಿರುವ ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ಆಯೋಜಿಸಿರುವ ಮೂರು ದಿನಗಳ ‘ಬ್ಯೂಟಿ ಎಕ್ಸ್‌ಪೀರಿಯೆನ್ಸ್-2025’ ಉತ್ಸವಕ್ಕೆ ಬಾಲಿವುಡ್ ನಟಿ ನೇಹಾ ಶರ್ಮಾ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸೌಂದರ್ಯ ಎಂಬುದು ವೈಯಕ್ತಿಕ ವಿಚಾರವಾಗಿದ್ದು, ಇದಕ್ಕೆ ಬ್ಯೂಟಿ ಎಕ್ಸ್‌ಪೀರಿಯೆನ್ಸ್ ಉತ್ಸವ ಆಯೋಜಿಸುವ ಮೂಲಕ ಉತ್ತಮ ವೇದಿಕೆಯನ್ನು ಕಲ್ಪಿಸಿದೆ. ಸೌಂದರ್ಯದ ಬೆರಗು ಗಣ್ಣುಗಳ ಮೂಲಕ ಸೃಜನಶೀಲತೆ, ಆತ್ಮವಿಶ್ವಾಸ ಮತ್ತು ವ್ಯಕ್ತಿತ್ವವನ್ನು ಜೀವಂತಗೊಳಿಸುವ ತಾಣವಾಗಿದೆ. ಜಾಗತಿಕ ಮಟ್ಟದ ಶ್ರೇಷ್ಠತೆಯನ್ನು ವೈಯಕ್ತಿಕ ಅಭಿವ್ಯಕ್ತಿಯೊಂದಿಗೆ ಒಟ್ಟಿಗೆ ತರುವ ಆಚರಣೆಯ ಭಾಗವಾಗಿರುವುದಕ್ಕೆ ನನಗೆ ಹೆಮ್ಮೆ ಎನಿಸುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು.



ನೇಹಾ ಶರ್ಮಾ

ರೂಪದರ್ಶಿಯರು ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿರುವ ಬ್ಯೂಟಿ ಬ್ರ್ಯಾಂಡ್ ಮಳಿಗೆಗಳಿಗೆ ಭೇಟಿ ನೀಡಿ ವಿವಿಧ ಉತ್ಪನ್ನಗಳನ್ನು ವೀಕ್ಷಿಸಿದರು. ಇದೇ ವೇಳೆ ಕ್ಯುರೇಟ್ ಮಾಡಲಾದ ಆಯ್ದ ಐಕಾನಿಕ್ ಬ್ರ್ಯಾಂಡ್‌ಗಳ ಕೆಲವು ಉತ್ಪನ್ನಗಳನ್ನು ಬಿಡುಗಡೆಗೊಳಿಸಲಾಯಿತು.

ಈ ಪ್ರದರ್ಶನವು ಬ್ಯೂಟಿ ಉತ್ಸಾಹಿಗಳು, ವೃತ್ತಿಪರರು, ಟ್ರೆಂಡ್ ಸೆಟರ್‌ಗಳನ್ನು ಆಕರ್ಷಿಸುತ್ತಿದ್ದು, ಶನಿವಾರ ಮೇಕಪ್ ಪರಿಣತರಾದ ಸಂಧ್ಯಾಶೇಖರ್ ಮತ್ತು ಭಾನುವಾರ ಬ್ಯೂಟಿ ತಜ್ಞೆ ಭೂಮಿಕಾ ಬಾಹ್ಲ್ ಅವರು ಸೌಂದರ್ಯದ ಬಗ್ಗೆ ಪ್ರಾತ್ಯಕ್ಷಿಕೆಗಳ ಮೂಲಕ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ನಗರದಲ್ಲಿ ಇಂದು

ಉತ್ತರೋತ್ತಮ ಉತ್ಸವ–2025: ಹಿಂದೂಸ್ಥಾನಿ ಗಾಯನ: ಐಶ್ವರ್ಯ ದೇಸಾಯಿ, ಸಂಗೀತ ವೈವಿಧ್ಯ: ಸಂಗೀತ ಕಟ್ಟಿ ಕುಲಕರ್ಣಿ, ‘ಅಮರ ಮಧುರ ಪ್ರೇಮ’ ನಾಟಕ ಪ್ರದರ್ಶನ: ನಿರ್ದೇಶನ: ಯಶವಂತ ಸರದೇಶಪಾಂಡೆ, ಕಥಕ್ ನೃತ್ಯ: ಸ್ಫೂರ್ತಿ ಜೋಶಿ, ‘ರಾಶಿಚಕ್ರ: ಏಕವ್ಯಕ್ತಿ ಹಾಸ್ಯ ರಂಗಪ್ರಯೋಗ, ಅತಿಥಿಗಳು: ಪ್ರಲ್ಹಾದ ಜೋಶಿ, ಉಮಾಶ್ರೀ, ರವಿಚಂದ್ರನ್, ದೊಡ್ಡಣ್ಣ, ಗುರುರಾಜ ಕರಜಗಿ, ವಿವೇಕ ಜವಳಿ, ವಿಶ್ವೇಶ್ವರ ಭಟ್, ಅಶೋಕ ಖೇಣಿ, ಗೋವಿಂದ ಜೋಶಿ, ಆಯೋಜನೆ: ಹೋಟೆಲ್ ನಳಪಾಕ, ವಂದೇ ಕರ್ನಾಟಕ, ಹುಬ್ಬಳ್ಳಿಯ ಗುರು ಇನ್‌ಸ್ಟಿಟ್ಯೂಟ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಬೆಳಿಗ್ಗೆ 10ರಿಂದ

‘ಟುಗೇದರ್ ಫಾರ್ ಟುಮಾರೋ’ ವಿಚಾರಸಂಕಿರಣ: ಡಾ. ಶೋಭಾ ರಮೇಶ್, ಜಯಶ್ರೀ ರಮೇಶ್, ಎಂ. ರಾಜಶೇಖರ್, ವಿಜಯ್ ಉಪೇಂದ್ರ, ಆಯೋಜನೆ: ಪಿಎಪಿಸಿಪಿ, ಸ್ಥಳ: ಮಿನಿ ಬಾಲಭವನ, ಜೀವನಬಿಮಾ ನಗರ, ಬೆಳಿಗ್ಗೆ 10ರಿಂದ

‘ಗುಂಡಾ ಜೋಯಿಸ್, ಎ.ಕೆ. ಶಾಸ್ತ್ರಿ, ಎಚ್.ಎಸ್. ಗೋಪಾಲ್‌ರಾವ್ ಬದುಕು, ಬರಹ, ಸಾಧನೆ’ ಉಪನ್ಯಾಸ: ಲಕ್ಷ್ಮೀಶ್ ಹೆಗಡೆ, ಆಯೋಜನೆ ಮತ್ತು ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

‘ಖಾದ್ರಿ ಶಾಮಣ್ಣ ಪತ್ರಿಕೋದ್ಯಮ’ ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, ಪ್ರಶಸ್ತಿ ಸ್ವೀಕರಿಸುವವರು: ಕೂಡ್ಲಿ ಗುರುರಾಜ, ಅಧ್ಯಕ್ಷತೆ: ಕೆ.ವಿ. ನಾಗರಾಜ್, ಅತಿಥಿಗಳು: ವೂಡೇ ಪಿ. ಕೃಷ್ಣ, ಮೀರಾಸಾಬಿಹಳ್ಳಿ ಶಿವಣ್ಣ, ಆಯೋಜನೆ: ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್, ಮೇಲುಕೋಟೆ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30

‘ಬುದ್ಧಜಂಗಮ, ಬೇಡಜಂಗಮ ಮತ್ತು ಬೇಡುವ ಜಂಗಮ’ ದುಂಡು ಮೇಜಿನ ಸಭೆ: ಉದ್ಘಾಟನೆ: ವಿ. ಗೋಪಾಲಗೌಡ, ವಿಷಯ ಮಂಡನೆ: ಎಸ್.ಎಂ. ಜಾಮದಾರ್, ಶಿವಶರಣಪ್ಪ, ಅಧ್ಯಕ್ಷತೆ: ಸಿ.ಎಸ್. ದ್ವಾರಕಾನಾಥ್, ಆಯೋಜನೆ: ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ, ಸ್ಥಳ: ಶಾಸಕರ ಭವನ ಸಭಾಂಗಣ, ಹಳೇ ಕಟ್ಟಡ, ಮೂರನೇ ಮಹಡಿ, ಬೆಳಿಗ್ಗೆ 10.30



ಡಿ. ಸುಮನ್ ಕಿತ್ತೂರು

‘ಅವಳ ಹೆಜ್ಜೆ ಕಿರುಚಿತ್ರೋತ್ಸವ–2025’: ಭಾಗವಹಿಸುವವರು: ಪೂಜಾ ಸುಧೀರ್, ಅಖಿಲಾ ವಿದ್ಯಾಸಂದ್ರ, ಗೌರಿ ನೀಲಾವರ್, ಮಧು ದೈತೋಟ, ಪೂರ್ಣಿಮಾ ಮಾಳಗಿಮನಿ, ಶ್ವೇತ್ ಪ್ರಿಯಾ ನಾಯಕ್, ‘ಕನ್ನಡ ಸಿನಿಮಾದಲ್ಲಿ ಮಹಿಳಾ ಧ್ವನಿ’ ಸಂವಾದ: ರೂಪಾ ರಾವ್, ಶೋಭಾ ಸಿ.ಎಸ್., ಡಿ. ಸುಮನ್ ಕಿತ್ತೂರು, ಸುನಯನ ಸುರೇಶ, ಉಪಸ್ಥಿತಿ: ಮಾಳವಿಕಾ ಗುಬ್ಬಿವಾಣಿ, ಶಾಂತಲಾ ದಾಮ್ಲೆ, ಆಯೋಜನೆ: ಗುಬ್ಬಿವಾಣಿ ಟ್ರಸ್ಟ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10.30ರಿಂದ

ದೇಸಿ ಬೀಜೋತ್ಸವ, ದೇಸಿ ಬೀಜಗಳ ಪ್ರದರ್ಶನ, ಸಾವಯವ ಉತ್ಪನ್ನಗಳು, ಮೌಲ್ಯವರ್ಧಿತ ಉತ್ಪನ್ನಗಳ ವಹಿವಾಟು ಮತ್ತು ತಾಂತ್ರಿಕ ಅಧಿವೇಶನದ ಉದ್ಘಾಟನೆ: ತ್ರಿಲೋಚನ್ ಮಹಾಪಾತ್ರ, ಅತಿಥಿಗಳು: ಎಸ್.ವಿ.ಸುರೇಶ್, ಡಿ.ಎಸ್. ರಮೇಶ್, ಜಿ.ಟಿ.ಪುತ್ರ, ದಿನೇಶ್ ಕುಮಾರ್ ಅಗರವಾಲ್, ಕೆ.ಜಿ. ಅನೂಪ್, ಪಾಪಮ್ಮ, ನಮ್ರತಾ ಶರ್ಮ, ಅಧ್ಯಕ್ಷತೆ: ಎ.ಬಿ. ಪಾಟೀಲ. ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

ಮಾಸಿಕ ಮಂಟಪ ‘ಎಚ್.ಎಸ್. ವೆಂಕಟೇಶಮೂರ್ತಿ ಅವರ ಆತ್ಮಕಥನ ನೆನಪಿನ ಒರತೆ’ ಉಪನ್ಯಾಸ: ಅತಿಥಿ: ಜಯಶ್ರೀ ಅರವಿಂದ್, ಅಧ್ಯಕ್ಷತೆ: ಆರ್. ಎಸ್. ಶಾಂತಾರಾಮ್, ಆಯೋಜನೆ ಮತ್ತು ಸ್ಥಳ: ದೀಪಾ ಅಂಧ ಮಕ್ಕಳ ವಸತಿ ಪ್ರೌಢಶಾಲೆ, ಮಾಗಡಿ ಮುಖ್ಯರಸ್ತೆ, ಅಂಜನಾನಗರ, ಬೆಳಿಗ್ಗೆ 10.30

ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ತಡೆ ಜಾಗೃತಿ ದಿನ: ಅತಿಥಿಗಳು: ರಿಜ್ವಾನ್ ಅರ್ಷದ್, ಕ್ಷಮಾ ಮಿಶ್ರಾ, ರಾಘವೇಂದ್ರ ಟಿ., ಆಯೋಜನೆ: ನೈಟಿಂಗಲ್ಸ್ ಮೆಡಿಕಲ್ ಟ್ರಸ್ಟ್, ಸ್ಥಳ: ಶಿವಾಜಿನಗರ ಬಸ್ ನಿಲ್ದಾಣ, ಬೆಳಿಗ್ಗೆ 10.30

‘ದಣಿವರಿಯದ ಗಾನಕೋಗಿಲೆ ಬಾನಂದೂರು ಕೆಂಪಯ್ಯ ಅವರಿಗೆ 75ರ ಸಂಭ್ರಮ’: ಉದ್ಘಾಟನೆ: ಜಿ. ಪರಮೇಶ್ವರ, ಆಯೋಜನೆ: ಕರ್ನಾಟಕ ರಾಜ್ಯ ಸಂವಿಧಾನ ಬಳಗ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

ವಿಶ್ವ ಪರಿಸರ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ರಾಮದಾಸ್ ಅಠವಳೆ, ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಸತೀಶ್‌ರೆಡ್ಡಿ, ಎಸ್.ಆರ್. ವಿಶ್ವನಾಥ್, ಈಶ್ವರ ಖಂಡ್ರೆ, ಗೋಪಿನಾಥ್ ರೆಡ್ಡಿ, ಪಿ.ಎಂ. ನರೇಂದ್ರಸ್ವಾಮಿ, ಅ.ನ. ಯಲ್ಲಪ್ಪ ರೆಡ್ಡಿ, ಆರತಿ ಕೃಷ್ಣ, ಆಯೋಜನೆ: ನ್ಯಾಷನಲ್ ಸಿವಿಲ್ ಆ್ಯಂಡ್ ಎನ್ವಿರಾನ್‌ಮೆಂಟ್ ಪ್ರೊಟೆಕ್ಷನ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 12.30

‘ಪಠ್ಯಕ್ರಮದಲ್ಲಿ ಶೈಕ್ಷಣಿಕ ಮೌಲ್ಯ ಅನಿವಾರ್ಯತೆ’ ಉಪನ್ಯಾಸ: ಎಚ್. ಎಸ್. ಗಣೇಶ್ ಭಟ್ಟ, ಉದ್ಘಾಟನೆ: ಎ. ಮಧುಸೂದನ್ ಬಾಬು, ಅತಿಥಿಗಳು: ನಾ. ಶ್ರೀಧರ್, ಎಂ. ಶಿವಕುಮಾರ್, ವಿ. ಲಕ್ಷ್ಮೀಪತಿ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಗಾಂಧಿನಗರ ವಿಧಾನಸಭಾ ಕ್ಷೇತ್ರ, ಸ್ಥಳ: ಪೆರುಮಾಳ್ ವಿದ್ಯಾನಿಕೇತನ ಲಿಟಲ್ ಫ್ಲವರ್ ಪ್ರೌಢಶಾಲೆ, ಸಾಯಿಬಾಬಾನಗರ, ಶ್ರೀರಾಮಪುರ, ಮಧ್ಯಾಹ್ನ 1

ಕಾಂಗ್ರೆಸ್ ಸರ್ಕಾರದ ದುರಾಡಳಿತ, ಸಮಾನ ಮನಸ್ಕ ಸಂಘಟನೆಗಳ ಐಕ್ಯ ಹೋರಾಟದ ನಡೆ, ನಿರ್ಣಯಗಳ ಮಂಡನಾ ಸಮಾವೇಶ: ಉದ್ಘಾಟನೆ: ರಾಮದಾಸ್ ಅಠವಳೆ, ಅತಿಥಿ: ಛಲವಾದಿ ನಾರಾಯಣಸ್ವಾಮಿ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 2.30

ಬಾಲಕಲಾ ಕಾರಂಜಿ–2025: ಅತಿಥಿಗಳು: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಎನ್. ದೇವರಾಜ, ಈ. ರಾಜಪ್ಪ, ಜಗದೀಶ್ ಅಂಗಡಿ, ಎಂ. ರಾಮು, ನಂದಿ ಸುಬ್ರಮಣಿ, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಷನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2.30ರಿಂದ

‘ಅರ್ಪಣೆ ನಿನಗೆ ಅರ್ಪಣೆ’ ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಡಿರುವ ಚಲನಚಿತ್ರ ಗೀತೆಗಳ ಗಾಯನ: ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3.30ರಿಂದ

‘ಬಹುವಚನ ಸಾಹಿತ್ಯ ವಿಮರ್ಶೆ’ ವಿಶೇಷ ಸಂಚಿಕೆಯ ಬಿಡುಗಡೆ: ಕೆ.ವಿ. ನಾರಾಯಣ, ಆಶಯ ಭಾಷಣ: ಶಿವಸುಂದರ್, ಅತಿಥಿಗಳು: ಮಮತಾ ಸಾಗರ, ಶ್ರೀದೇವಿ ಕಳಸದ, ಕರ್ಕಿ ಕೃಷ್ಣಮೂರ್ತಿ, ದಾದಾಪೀರ್ ಜೈಮನ್, ಆಯೋಜನೆ: ಬಹುವಚನ, ಸ್ಥಳ: ನಾಣಿ ಅಂಗಳ, ಸುಚಿತ್ರ ಫಿಲಂ ಸೊಸೈಟಿ, ಎರಡನೇ ಹಂತ, ಬನಶಂಕರಿ, ಸಂಜೆ 5

ಎಸ್.ಎಲ್. ಭೈರಪ್ಪ ಪ್ರತಿಷ್ಠಾನದ ಉದ್ಘಾಟನೆ: ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, ‘ಭೈರಪ್ಪನವರ ಕೃತಿಗಳಲ್ಲಿ ಮೌಲ್ಯಮೀಮಾಂಸೆ’: ಶತಾವಧಾನಿ ಆರ್. ಗಣೇಶ್, ಭಾಗವಹಿಸುವವರು: ವಿಶ್ವೇಶ್ವರ ಭಟ್, ತೇಜಸ್ವಿನಿ ಅನಂತಕುಮಾರ್, ಉಪಸ್ಥಿತಿ: ಎಸ್.ಎಲ್. ಭೈರಪ್ಪ, ಕೃಷ್ಣಪ್ರಸಾದ್, ಅರುಣ, ಆಯೋಜನೆ: ಎಸ್.ಎಲ್. ಭೈರಪ್ಪ ಪ್ರತಿಷ್ಠಾನ, ಸ್ಥಳ: ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಸಂಜೆ 5

ವೀರಲೋಕ ಮೂರನೇ ವರ್ಷದ ವಾರ್ಷಿಕೋತ್ಸವ, ಎಂಟು ಪುಸ್ತಕಗಳ ಬಿಡುಗಡೆ: ಅತಿಥಿಗಳು: ಹಂಪ ನಾಗರಾಜಯ್ಯ, ಜಿ.ಎನ್. ಮೋಹನ್, ಉಪಸ್ಥಿತಿ: ವೀರಕಪುತ್ರ ಶ್ರೀನಿವಾಸ್, ಆಯೋಜನೆ: ವೀರಲೋಕ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಸಂಜೆ 5



ಹಂಪ ನಾಗರಾಜಯ್ಯ

ಗುರುಗುಹ ಗಾನಮೃತಂ: ಗಾಯನ: ಶ್ರುತಿ ಎಸ್. ಭಟ್, ವೀಣೆ: ವಿನಾಯಕ್ ವೈದ್ಯನಾಥನ್, ಮೃದಂಗ: ಸಂಜಯ್ ತಾರಾನಾಥನ್, ರಜನಿ ಶಂಕರ್, ಅತಿಥಿಗಳು: ಆರ್.ಎನ್. ತಾರಾನಾಥನ್, ಚಕ್ರವರ್ತಿ ಮೋಹನ್, ನವೀನ್ ನಾಗಪ್ಪ, ಆಯೋಜನೆ: ಆರಾಧಾನ ಕಲ್ಚರಲ್ ಅಕಾಡೆಮಿ, ಸ್ಥಳ: ರೋಟರಿ ಬೆಂಗಳೂರು ಪಶ್ಚಿಮ ಸಭಾಂಗಣ, ಮಲ್ಲೇಶ್ವರ, ಸಂಜೆ 5.30

‘ರಕ್ತ ವಿವಾಹ’ ನಾಟಕ ಪ್ರದರ್ಶನ: ನಿರ್ದೇಶನ: ಅಪೂರ್ವ ಅನಗಳ್ಳಿ, ಆಯೋಜನೆ: ಅನೇಕ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಚೂಡಿದಾರ್‌ನಲ್ಲಿ ಬಚ್ಚಿಟ್ಟುಕೊಂಡು ಎಂಡಿಎಂಎ ಕ್ರಿಸ್ಟಲ್ ಸಾಗಣೆ ● ನೈಜೀರಿಯಾ ಯುವತಿ ಬಂಧನ

₹10 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ



ಪ್ರಿನ್ಸೆಸ್

ಬೆಂಗಳೂರು: ಡ್ರಗ್ಸ್ ಪೆಡ್ಲರ್‌ಗಳು, ಖರೀದಿದಾರರ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ನಗರ ಪೊಲೀಸರು, ನೈಜೀರಿಯಾ ದೇಶದ ಯುವತಿಯನ್ನು ಬಂಧಿಸಿ ₹10 ಕೋಟಿ ಮೌಲ್ಯದ ಎಂಡಿಎಂಎ ಕ್ರಿಸ್ಟಲ್ ಅನ್ನು ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ ಹಾಗೂ ಚಿಕ್ಕಜಾಲ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ನೈಜೀರಿಯಾದ ಅಕಿನ್‌ವುನ್ಮಿ ಪ್ರಿನ್ಸೆಸ್ ಇಫೆಲ್ವಾ ಅಲಿಯಾಸ್ ಪ್ರಿನ್ಸೆಸ್ (25) ಎಂಬುವವರನ್ನು ಬಂಧಿಸಲಾಗಿದೆ.

2021ರಲ್ಲಿ ಬ್ಯುಸಿನೆಸ್ ವೀಸಾದಡಿ ನವದೆಹಲಿಗೆ ಬಂದಿದ್ದ ಆರೋಪಿ, ದೆಹಲಿಯ ಉತ್ತಮ್ ನಗರದಲ್ಲಿ ನೆಲಸಿದ್ದರು. ಅಲ್ಲಿ ಪೆಡಿಕ್ಯೂರ್ ಕೆಲಸ ಮಾಡುತ್ತಿದ್ದರು. ಹೆಚ್ಚಿನ ಹಣ ಸಂಪಾದನೆಯ ಆಸೆಯಿಂದ ಡ್ರಗ್ಸ್ ಮಾರಾಟ ದಂಧೆಗೆ ಇಳಿದಿದ್ದರು ಎಂದು ಪೊಲೀಸರು ಹೇಳಿದರು.

ದೆಹಲಿಯಿಂದ ಡ್ರಗ್ಸ್ ತಂದು, ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ರಾಜಾನುಕುಂಟೆ ಮುಖ್ಯ ರಸ್ತೆಯಲ್ಲಿ ಸಿಂಥೆಟಿಕ್ ಡ್ರಗ್ಸ್ ಅನ್ನು ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿ ಪ್ರಿನ್ಸೆಸ್ ಅವರನ್ನು ಬಂಧಿಸಲಾಗಿದೆ. ಆರೋಪಿಯ ಸ್ನೇಹಿತೆ ಆಸಾ ತಲೆಮರೆಸಿಕೊಂಡಿದ್ದು, ಪತ್ತೆಗೆ ಶೋಧ ನಡೆಸಲಾಗುತ್ತಿದೆ.

ಆರೋಪಿಯಿಂದ 5 ಕೆ.ಜಿ 325 ಗ್ರಾಂ ಎಂಡಿಎಂಎ ಕ್ರಿಸ್ಟಲ್, ಮೊಬೈಲ್ ಫೋನ್, 11 ಜೊತೆ ಚೂಡಿದಾರ್ ಅನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

'ಬ್ಯುಸಿನೆಸ್ ವೀಸಾ ಪಡೆದು ನಗರಕ್ಕೆ ಬಂದಿದ್ದ ಆರೋಪಿ, ನಂತರ ನೈಜೀರಿಯಾಕ್ಕೆ ತೆರಳಿದ್ದರು. ಕೆಲವು ತಿಂಗಳು ಕಳೆದ ನಂತರ ತೆಲಂಗಾಣದ ಡೀಮ್ಡ್ ವಿಶ್ವವಿದ್ಯಾಲಯವೊಂದರಲ್ಲಿ ಉನ್ನತ ವ್ಯಾಸಂಗ ಮಾಡುವುದಾಗಿ ವಿದ್ಯಾರ್ಥಿ ವೀಸಾ ಪಡೆದು ಮತ್ತೆ ಭಾರತಕ್ಕೆ ಬಂದಿದ್ದರು. ಆದರೆ, ಕಾಲೇಜಿಗೆ ದಾಖಲಾಗದೇ ತನ್ನ ಸ್ನೇಹಿತೆಯೊಂದಿಗೆ ಸೇರಿಕೊಂಡು ಡ್ರಗ್ಸ್ ಮಾರಾಟ ನಡೆಸುತ್ತಿದ್ದರು' ಎಂದರು.

ಸಾಗಣೆಗೆ ಕಾರ್ಯತಂತ್ರ: 'ಡ್ರಗ್ಸ್ ಸಾಗಣೆಗಾಗಿಯೇ ಖರೀದಿಸಿದ್ದ ಚೂಡಿದಾರ್‌ಗಳ ಮಧ್ಯೆ ಎಂಡಿಎಂಎ ಕ್ರಿಸ್ಟಲ್ ಅನ್ನು ಬಚ್ಚಿಟ್ಟುಕೊಂಡು ಬಸ್ ಹಾಗೂ ರೈಲುಗಳ ಮೂಲಕ ನಗರಕ್ಕೆ ಬರುತ್ತಿದ್ದರು. ಬೆಂಗಳೂರಿನಲ್ಲಿ ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳಿಗೆ ಮಾರಾಟ ಮಾಡುತ್ತಿದ್ದರು. ಐ.ಟಿ ಉದ್ಯೋಗಿಗಳು, ವಿದ್ಯಾರ್ಥಿಗಳಿಗೆ ಸ್ಥಳೀಯ ಪೆಡ್ಲರ್‌ಗಳು ಡ್ರಗ್ಸ್ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.



ಆರೋಪಿಯಿಂದ ವಶಕ್ಕೆ ಪಡೆದ ಡ್ರಗ್ಸ್ ಅನ್ನು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪರಿಶೀಲಿಸಿದರು

ಅಪರಾಧ ಸುದ್ದಿ





ಎಂಡಿಎಂಎ ಕ್ರಿಸ್ಟಲ್ (ಎಡಚಿತ್ರ). ಆರೋಪಿಯಿಂದ ವಶಕ್ಕೆ ಪಡೆದುಕೊಂಡ ಚೂಡಿದಾರ್

ಆರೋಪಿಯ ಮೋಜು –ಮಸ್ತಿ

'ಸುಲಭವಾಗಿ ಹಣ ಗಳಿಸಲು ಡ್ರಗ್ಸ್ ಮಾರಾಟ ಮಾಡುತ್ತಿದ್ದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾರೆ. ಬಂದ ಹಣದಿಂದ ಆರೋಪಿ ವಿಲಾಸಿ ಜೀವನ ನಡೆಸುತ್ತಿದ್ದರು. ಹೆಚ್ಚಿನ ತನಿಖೆ ನಡೆಸಲು ಅಕಿನ್‌ವುನ್ಮಿ ಪ್ರಿನ್ಸೆಸ್ ಇಫೆಲ್ವಾ ಅವರನ್ನು ಸಿಸಿಬಿ ಕಸ್ಟಡಿಗೆ ಪಡೆದುಕೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

ವ್ಹೀಲಿ ನಡೆಸುತ್ತಿದ್ದ ಯುವಕ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಿಭಾಗದ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ವ್ಹೀಲಿ ನಡೆಸುತ್ತಿದ್ದ ಯುವಕ ಪಿ. ಅಕ್ಷಯ್ ಎಂಬಾತನನ್ನು ಮಾಗಡಿ ರಸ್ತೆ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಠಾಣಾ ಸಿಬ್ಬಂದಿ ಗಸ್ತು ನಡೆಸುತ್ತಿದ್ದ ವೇಳೆ ಯುವಕ ಅಪಾಯಕಾರಿಯಾಗಿ ವ್ಹೀಲಿ ನಡೆಸುತ್ತಿರುವುದು ಕಂಡುಬಂದಿತು. ಆಗ ಬೈಕ್ ಸಹಿತ ಆರೋಪಿಯನ್ನು ವಶಕ್ಕೆ ಪಡೆಯಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

'ಬಾಪೂಜಿ ನಗರದ ನಿವಾಸಿ ಅಕ್ಷಯ್, ವೆಸ್ಟ್ ಆಫ್ ಕಾರ್ಡ್ ರಸ್ತೆಗೆ ಬಂದು ವ್ಹೀಲಿ ನಡೆಸುತ್ತಿದ್ದ' ಎಂದು ಸಂಚಾರ ಪೊಲೀಸರು ಹೇಳಿದರು.



ಮಾಗಡಿ ರಸ್ತೆ ಸಂಚಾರ ಠಾಣೆಯ ಪೊಲೀಸರು, ವ್ಹೀಲಿ ನಡೆಸುತ್ತಿದ್ದ ಯುವಕನನ್ನು ವಶಕ್ಕೆ ಪಡೆದುಕೊಂಡಿದ್ದಾರೆ

ಬಿಎನ್‌ಎಸ್ ಕಾಯ್ದೆ ಸೆಕ್ಷನ್ 129, 189 ಹಾಗೂ ಮೋಟಾರು ವಾಹನಗಳ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದೆ.

ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಾಗಡಿ ಮುಖ್ಯರಸ್ತೆಯಲ್ಲಿ ಯುವಕರು ಬೈಕ್‌ನಲ್ಲಿ ವ್ಹೀಲಿ ನಡೆಸುತ್ತಿರುವ ಕುರಿತು ದೂರುಗಳು ಬಂದಿವೆ. ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಪಶ್ಚಿಮ ವಿಭಾಗದ (ಸಂಚಾರ) ಡಿಸಿಪಿ ಅನಿತಾ ಹದ್ದಣ್ಣನವರ್ ತಿಳಿಸಿದ್ದಾರೆ.

ಅಪಘಾತ: ಐವರ ಸಾವು

ಪ್ರಜಾವಾಣಿ ವಾರ್ತೆ

ಹೊಸಕೋಟೆ: ಬೆಂಗಳೂರು– ಚೆನ್ನೈ ರಾಷ್ಟ್ರೀಯ ಹೆದ್ದಾರಿ ಗೊಟ್ಟಿಪುರ ಗೇಟ್ ಬಳಿ ಆಂಧ್ರಪ್ರದೇಶದ ಸರ್ಕಾರಿ ಸಾರಿಗೆ ಬಸ್ ಮತ್ತು ಲಾರಿ ನಡುವೆ ಶುಕ್ರವಾರ ಬೆಳಗಿನ ಜಾವ ಸಂಭವಿಸಿದ ಅಪಘಾತದಲ್ಲಿ ಒಂದೂವರೆ ತಿಂಗಳ ಮಗು ಸೇರಿ ಐವರು ಮೃತಪಟ್ಟರು.

ಬಸ್‌ನಲ್ಲಿದ್ದ ಕೇಶವರೆಡ್ಡಿ (44), ತುಳಸಿ (21), ಪ್ರಣತಿ (4), ಮೂರು ತಿಂಗಳ ಮಗು ಸ್ಥಳದಲ್ಲೇ ಅಸುನೀಗಿದರೆ, ಶಾರದಾ(45) ಆಸ್ಪತ್ರೆಯಲ್ಲಿ ಮೃತಪಟ್ಟರು. ಇವರೆಲ್ಲರೂ ಆಂಧ್ರ ಪ್ರದೇಶದವರು.

ಕೇಶವರೆಡ್ಡಿ ಎಂಬುವವರು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. 16 ಪ್ರಯಾಣಿಕರು ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳಿಗೆ ಹೊಸಕೋಟೆ ಸಿಲಿಕಾನ್ ಸಿಟಿ, ಎಂವಿಜೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ತಿರುಪತಿಯಿಂದ ಬೆಂಗಳೂರಿಗೆ ಬರುತ್ತಿದ್ದ ಬಸ್, ಲಾರಿಯನ್ನು ಹಿಂದಿಕ್ಕುವಾಗ ಅಪಘಾತ ಸಂಭವಿಸಿದೆ ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ.

ನಾಲ್ವರು ಆರೋಪಿಗಳನ್ನು ಬಂಧಿಸಿದ ಕಾಡುಗೋಡಿ ಠಾಣೆಯ ಪೊಲೀಸರು

ಕೊಲೆ ಮಾಡಲು ಬಂದು ಹತ್ಯೆಯಾದ ರೌಡಿ

ಪ್ರಜಾವಾಣಿ ವಾರ್ತೆ



ಪುನೀತ್

ಬೆಂಗಳೂರು: ವಿಜಯಲಕ್ಷ್ಮಿ ಲೇಔಟ್‌ನಲ್ಲಿ ನಡೆದಿದ್ದ ರೌಡಿ ಶೀಟರ್ ಕೊಲೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಹೇಶ್, ಶ್ರೀಕಾಂತ್, ರಾಜೇಶ್ ಮತ್ತು ಸುಮಂತ್ ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಜೂನ್ 10ರಂದು ರಾತ್ರಿ ಕಾಡುಗೋಡಿಯ ವಿಜಯಲಕ್ಷ್ಮಿ ಬಡಾವಣೆಯಲ್ಲಿ ಪುನೀತ್ ಎಂಬಾತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

'ಆರೋಪಿ ಮಹೇಶ್ ಬಳಿಯಿದ್ದ ಬೈಕ್ ಅನ್ನು ₹40 ಸಾವಿರಕ್ಕೆ ಪುನೀತ್ ಖರೀದಿಸಿದ್ದ. ಆದರೆ, ಹಣ ನೀಡದೇ ಸತಾಯಿಸುತ್ತಿದ್ದ. ನಂತರ, ಹಣ ಕೊಡುವುದಿಲ್ಲ ಎಂದು ಪುನೀತ್ ಬೆದರಿಕೆ ಹಾಕಿದ್ದ. ಇಷ್ಟಕ್ಕೆ ಸುಮ್ಮನಾಗದೇ ನಾನು ಕೇಳಿದಾಗ ನೀನೇ ಹಣ ಕೊಡಬೇಕು. ಇಲ್ಲದಿದ್ದರೆ ನಿನ್ನ ಪುತ್ರಿಯನ್ನು ಅಪಹರಣ ಮಾಡುವುದಾಗಿಯೂ ಮಹೇಶ್‌ಗೆ ಎಚ್ಚರಿಸಿದ್ದ. ಇದರಿಂದ ಆತಂಕಕ್ಕೆ ಒಳಗಾದ ಮಹೇಶ್, ತನ್ನ ಸ್ನೇಹಿತರಿಗೆ ಮಾಹಿತಿ ನೀಡಿದ್ದ. ಶ್ರೀಕಾಂತ್, ರಾಜೇಶ್ ಮತ್ತು ಸುಮಂತ್ ಅವರು ಇಬ್ಬರ ಮಧ್ಯೆ ಸಂಧಾನಕ್ಕೆ ಪ್ರಯತ್ನಿಸಿದ್ದರು. ಅದಕ್ಕೆ ಪುನೀತ್ ಒಪ್ಪಿರಲಿಲ್ಲ. ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ' ಎಂದು ಪೊಲೀಸರು ಹೇಳಿದರು.



ಮಹೇಶ್, ಶ್ರೀಕಾಂತ್, ರಾಜೇಶ್ ಮತ್ತು ಸುಮಂತ್ ಬಂಧಿತ ಆರೋಪಿಗಳು

ಜೂನ್ 10ರಂದು ರಾತ್ರಿ 9.30ರ ಸುಮಾರಿಗೆ ತನ್ನ ಸ್ನೇಹಿತ ಅರ್ಬಾಜ್ ಜೊತೆ ಮಹೇಶ್ ಮನೆ ಬಳಿಗೆ ಬಂದಿದ್ದ ಪುನೀತ್, ಮಾರಕಾಸ್ತ್ರಗಳಿಂದ ಹಲ್ಲೆ ಮಾಡಲು ಯತ್ನಿಸಿದ್ದ. ಆಗ ಮಹೇಶ್ ಮಾರಕಾಸ್ತ್ರ ಕಸಿದುಕೊಂಡಿದ್ದ. ಗಲಾಟೆ ವೇಳೆ ಅರ್ಬಾಜ್ ಪರಾರಿ ಆಗಿದ್ದ. ಬಳಿಕ ಮಹೇಶ್ ಮತ್ತು ಸಹಚರರು, ಪುನೀತ್ ಮೇಲೆಯೇ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲೆ ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಕೆಎಸ್‌ಸಿಎ, ಡಿಎನ್‌ಎ ಸಿಬ್ಬಂದಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ), ಡಿಎನ್‌ಎ (ಇ-ವೆಂಟ್ ಮ್ಯಾನೇಜ್‌ಮೆಂಟ್) ಸಿಬ್ಬಂದಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರ ಎದುರು ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆ ದಾಖಲಿಸಿದರು.

ಕೆಎಸ್‌ಸಿಎ, ಆರ್‌ಸಿಬಿ, ಡಿಎನ್‌ಎ ಸಿಬ್ಬಂದಿ ಮತ್ತು ಅಮಾನತುಗೊಂಡಿರುವ ಬಿ.ದಯಾನಂದ ಸೇರಿ ಐವರು ಪೊಲೀಸ್ ಅಧಿಕಾರಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿತ್ತು. ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಆರ್‌ಸಿಬಿ ತಂಡದ ಉಪಾಧ್ಯಕ್ಷ ರಾಜೇಶ್ ಮೆನನ್ ಮತ್ತು ಡಿಎನ್‌ಎ ಸಿಬ್ಬಂದಿ ಮಾತ್ರ ವಿಚಾರಣೆಗೆ ಹಾಜರಾಗಿದ್ದರು. ಪ್ರತ್ಯೇಕವಾಗಿ ವಿಚಾರಣೆ ನಡೆಸಿ, ಅವರ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ ವಿಚಾರಣೆಗೆ ಗೈರಾಗಿದ್ದರು. ಸಿಐಡಿ ವಿಚಾರಣೆ ಇರುವ ಕಾರಣಕ್ಕೆ ವಿಚಾರಣೆಗೆ ಕಾಲಾವಕಾಶ ನೀಡುವಂತೆ ತಮ್ಮ ವಕೀಲರ ಮೂಲಕ ದಯಾನಂದ ಅವರು ಜಿಲ್ಲಾಧಿಕಾರಿ ಬಳಿ ಮನವಿ ಮಾಡಿದ್ದರು ಎಂದು ಗೊತ್ತಾಗಿದೆ.

ಇದೇ ಘಟನೆಗೆ ಸಂಬಂಧಿಸಿದಂತೆ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಪ್ರಕರಣಗಳ ತನಿಖೆಯನ್ನು ಸಿಐಡಿ ನಡೆಸುತ್ತಿದೆ. ಸಿಐಡಿ ಎಸ್‌ಪಿ ಶುಭನ್ವಿತಾ ಎದುರು ಶುಕ್ರವಾರ ಹಾಜರಾಗಿ ಹೇಳಿಕೆ ದಾಖಲಿಸಿದರು ಎಂದು ಮೂಲಗಳು ತಿಳಿಸಿವೆ.

ರೇರಾ: ವಿಚಾರಣೆ 7ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಗೆ (ಎನ್‌ಕೆಪಿಎಲ್) ಮೂಲ ಸೌಲಭ್ಯಗಳನ್ನು ಒದಗಿಸಿರುವ ಕುರಿತು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ-ರೇರಾ) ಅಧ್ಯಕ್ಷ ರಾಕೇಶ್ ಸಿಂಗ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆಯ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ವು ರೇರಾ ವ್ಯಾಪ್ತಿಗೆ ಬರುವುದಿಲ್ಲ ಎಂದು ಪ್ರಾಧಿಕಾರ ಪರ ವಕೀಲರು ವಾದಿಸಿದರು. ಈ ವಿಷಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ಹೆಚ್ಚಿನ ಸಮಯ ನೀಡಬೇಕು ಎಂದು ಮನವಿ ಸಲ್ಲಿಸಿದರು.

ಮನವಿ ಪುರಸ್ಕರಿಸಿ, ಮುಂದಿನ ವಿಚಾರಣೆಯನ್ನು ಜುಲೈ 7ಕ್ಕೆ ಮುಂದೂಡಲಾಯಿತು.

1,500ಕ್ಕೂ ಹೆಚ್ಚಿನ ದೇಸಿ ತಳಿ ಬೀಜಗಳ ಪ್ರದರ್ಶನ

'ದೇಸಿ ಬೀಜೋತ್ಸವ' ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ತಂತ್ರಜ್ಞರ ಸಂಸ್ಥೆ, 'ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ, ಕ್ರಾಪ್ಸ್4ಎಚ್‌ಡಿ ಹಾಗೂ ಕೀ ಸ್ಟೋನ್ ಸಂಸ್ಥೆಗಳ ಸಹಯೋಗದಲ್ಲಿ ಜೂನ್ 14 ಮತ್ತು 15ರಂದು ನಗರದ ಕ್ವೀನ್ಸ್ ರಸ್ತೆಯಲ್ಲಿರುವ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ 'ದೇಸಿ ಬೀಜೋತ್ಸವ'ವನ್ನು ಆಯೋಜಿಸಲಾಗಿದೆ.

'ಹವಾಮಾನ ವೈಪರೀತ್ಯ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ದೇಸಿ ತಳಿಗಳಲ್ಲಿ ಇದೆ. ಕೃಷಿ ಕ್ಷೇತ್ರವನ್ನು ಕಾಡುತ್ತಿರುವ ಸಮಸ್ಯೆಗಳಿಗೆ ಇವುಗಳನ್ನೇ ಪರಿಹಾರವಾಗಿ ಕಂಡುಕೊಳ್ಳಲು ಚಿಂತನೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ದೇಸಿ ಬೀಜಗಳ ಮಹತ್ವವನ್ನು ಹೆಚ್ಚು ರೈತರಿಗೆ ತಲುಪಿಸುವ ಉದ್ದೇಶದಿಂದ ಬೀಜೋತ್ಸವ ಹಮ್ಮಿಕೊಳ್ಳಲಾಗಿದೆ' ಎಂದು ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ಸಂಚಾಲಕ ಜಿ. ಕೃಷ್ಣಪ್ರಸಾದ್ ತಿಳಿಸಿದರು.

ಎರಡು ದಿನಗಳ ಈ ಬೀಜೋತ್ಸವದಲ್ಲಿ ಕರ್ನಾಟಕದ ಜತೆಗೆ ವಿವಿಧ ರಾಜ್ಯಗಳ ಸುಮಾರು ಮುನ್ನೂರು ಬೀಜ ಸಂರಕ್ಷಕರು ಭಾಗವಹಿಸಲಿದ್ದಾರೆ. ಸಾವಿರಕ್ಕೂ ಹೆಚ್ಚು ತಳಿಗಳ ಭತ್ತ, ಸಿರಿಧಾನ್ಯ, ಬೇಳೆ ಕಾಳು, ಗಡ್ಡೆ ಗೆಣಸು, ಸೊಪ್ಪು, ತರಕಾರಿಗಳನ್ನು 50 ಮಳಿಗೆಗಳಲ್ಲಿ ಪ್ರದರ್ಶಿಸಲಾಗುತ್ತದೆ. ಹತ್ತಾರು ಪೀಳಿಗೆಯಿಂದ ಸಂರಕ್ಷಿಸುತ್ತಿರುವ ಕಾಡಿನ ಸಸ್ಯ ಸಂಪತ್ತನ್ನು ಆದಿವಾಸಿ ರೈತರ ಗುಂಪುಗಳು ಉತ್ಸವಕ್ಕೆ ತರಲಿವೆ. ಒಟ್ಟಾರೆ 1,500ಕ್ಕೂ ಹೆಚ್ಚಿನ ದೇಸಿ ತಳಿ ಬೀಜಗಳು ಪ್ರದರ್ಶನದಲ್ಲಿ ಇರಲಿವೆ ಎಂದು ಅವರು ಮಾಹಿತಿ ನೀಡಿದರು.

ಜೂನ್ 14ರಂದು ಬೆಳಿಗ್ಗೆ 10.30ಕ್ಕೆ ಭಾರತೀಯ ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕು ಪ್ರಾಧಿಕಾರದ ಅಧ್ಯಕ್ಷ ತ್ರಿಲೋಚನ ಮಹಾಪಾತ್ರ ಬೀಜೋತ್ಸವ ಉದ್ಘಾಟಿಸಲಿದ್ದಾರೆ. ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಎ.ಬಿ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ.

ಬೀಜೋತ್ಸವದ ಅಂಗವಾಗಿ ಚರ್ಚೆ, ಅನುಭವ ಹಂಚಿಕೆ, ಸಂವಾದ ಸೇರಿದಂತೆ ಹಲವು ಬಗೆಯ ಕಾರ್ಯಕ್ರಮಗಳಿವೆ. ಸಾಧಕ ಬೀಜ ಸಂರಕ್ಷಕರನ್ನು ಸನ್ಮಾನಿಸುವ ಜತೆಗೆ, ತಳಿ ಸಂರಕ್ಷರ ವಿವರಗಳ ಕೈಪಿಡಿ ಬಿಡುಗಡೆ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗೆ ಈಶ್ವರ್– 99721 59714 ಸಂಪರ್ಕಿಸಬಹುದು.

ಮುಖ್ಯಾಂಶಗಳು

- ದೇಶದ ವಿವಿಧ ಭಾಗಗಳ ಬೀಜ ಸಂರಕ್ಷಕರು ಭಾಗಿ
- ಸಾವಿರಾರು ದೇಸಿ ತಳಿಗಳ ಪ್ರದರ್ಶನ
- ಸಂವಾದ, ತಾಂತ್ರಿಕ ಅಧಿವೇಶನಗಳು



ದೇಶಿ ತಳಿಗಳು (ಸಾಂದರ್ಭಿಕ ಚಿತ್ರ)

ರೌಡಿಗಳಿಗೆ ಪೊಲೀಸರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂಟು ವಿಭಾಗಗಳ ವ್ಯಾಪ್ತಿಯಲ್ಲಿ ಪರೇಡ್ ನಡೆಸಿ ರೌಡಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರ ಸೂಚನೆ ಮೇರೆಗೆ ಎಲ್ಲ ವಿಭಾಗಗಳ ವ್ಯಾಪ್ತಿಯಲ್ಲಿ ರೌಡಿಗಳ ಪರೇಡ್ ನಡೆಸಲಾಗಿದೆ.

ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ಆಗ್ನೇಯ, ನೈಋತ್ಯ, ವೈಟ್‌ಫೀಲ್ಡ್ ವಿಭಾಗಗಳಲ್ಲಿ ಡಿಸಿಪಿ, ಎಸಿಪಿ ಮತ್ತು ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ರೌಡಿಗಳ ಪರೇಡ್ ನಡೆಸಲಾಗಿದೆ.

ಆರೋಪಿಗಳು, ಪ್ರಸ್ತುತ ಮಾಡುತ್ತಿರುವ ಕೆಲಸದ ಬಗ್ಗೆ ಮಾಹಿತಿ ಪಡೆದು ದಾಖಲಾತಿ ಪರಿಶೀಲನೆ ನಡೆಸಲಾಯಿತು. ಇನ್ನುಂದೆ ರೌಡಿ ಚಟುವಟಿಕೆಯಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ.

ನಕಲಿ ನೋಟು ಮುದ್ರಣ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್‌ನಲ್ಲಿ ಕೊಠಡಿ ಪಡೆದು ನಕಲಿ ನೋಟುಗಳನ್ನು ಮುದ್ರಣ ಮಾಡಿದ್ದ ಕ್ರಿಷ್ ಮಾಲಿ (23) ಎಂಬಾತನನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕ್ರಿಷ್ ಮಾಲಿ ಅವರ ತಂದೆ ಉದ್ಯಮಿ. ಮನೆಯಲ್ಲಿ ಗಲಾಟೆ ಮಾಡಿ ಕೊಂಡು ಹೊರಬಂದಿದ್ದ ಆರೋಪಿ, ಆನ್‌ಲೈನ್ ಮೂಲಕ ಟಸ್ಕರ್ ಟೌನ್‌ನಲ್ಲಿರುವ ಹೋಟೆಲ್‌ವೊಂದರಲ್ಲಿ ಕೊಠಡಿ ಬುಕ್ ಮಾಡಿದ್ದ. ಜೂನ್ 1ರಂದು ಹೋಟೆಲ್‌ಗೆ ಬಂದಿದ್ದ ಆರೋಪಿ, ಒಂದು ವಾರ ವಾಸ್ತವ್ಯ ಮಾಡಿದ್ದ. ತನ್ನ ಬಳಿಯಿರುವ ಹಣ ಖರ್ಚಾಗುತ್ತಿದ್ದಂತೆಯೇ ನಕಲಿ ನೋಟು ಮುದ್ರಣ ಮಾಡಲು ಸಂಚು ರೂಪಿಸಿದ್ದ. ಮುದ್ರಣಕ್ಕೆ ಪ್ರಿಂಟರ್, ಸ್ಕ್ಯಾನರ್‌ಗಳನ್ನು ಖರೀದಿಸಿ ಕೊಠಡಿಗೆ ತಂದಿದ್ದ. ಹೋಟೆಲ್ ರೂಂನಲ್ಲಿ ಇದ್ದುಕೊಂಡೇ ₹500 ಮುಖಬೆಲೆಯ ನಕಲಿ ನೋಟುಗಳನ್ನು ಕಲರ್ ಜೆರಾಕ್ಸ್ ಮಾಡಿದ್ದ. ಜೂನ್ 7ರಂದು ಮಧ್ಯಾಹ್ನ ಆರೋಪಿ ಕೊಠಡಿ ಖಾಲಿ ಮಾಡಿದ್ದ. ಹೋಟೆಲ್‌ಗೂ ನಕಲಿ ನೋಟು ನೀಡಿದ್ದ. ಇದು ಅಸಲಿ ನೋಟುಗಳಿರಬಹುದು ಎಂಬುದಾಗಿ ಹೋಟೆಲ್ ಸಿಬ್ಬಂದಿ ನಂಬಿದ್ದರು.

ಕೊಠಡಿಯನ್ನು ಆರೋಪಿ ಖಾಲಿ ಮಾಡಿದ ಬಳಿಕ ಅಲ್ಲಿದ್ದ ತ್ಯಾಜ್ಯವನ್ನು ಸಿಬ್ಬಂದಿ ಬಿಬಿಎಂಪಿಯ ಕಸ ಸಂಗ್ರಹಿಸುವ ವಾಹನಕ್ಕೆ ಎಸೆದಿದ್ದರು. ಕಸದಲ್ಲಿ ನಕಲಿ ನೋಟುಗಳಿರುವುದನ್ನು ಪೌರ ಕಾರ್ಮಿಕರು ಪತ್ತೆ ಮಾಡಿ ಹೋಟೆಲ್ ವ್ಯವಸ್ಥಾಪಕರಿಗೆ ತಿಳಿಸಿದ್ದರು. ಆರೋಪಿ ಹೋಟೆಲ್ ಬಿಲ್ ಪಾವತಿ ವೇಳೆ ನೀಡಿದ್ದ ನೋಟುಗಳನ್ನು ಪರಿಶೀಲಿಸಿದಾಗ ಅದು ನಕಲಿ ಎಂಬುದು ಗೊತ್ತಾಗಿತ್ತು. ನಂತರ, ಕಮರ್ಷಿಯಲ್ ಸ್ಟ್ರೀಟ್ ಠಾಣೆಗೆ ದೂರು ನೀಡಲಾಗಿತ್ತು.

ಹೋಟೆಲ್‌ನಲ್ಲಿ ಕೊಠಡಿಯನ್ನು ಬಾಡಿಗೆಗೆ ಪಡೆದುಕೊಳ್ಳುವಾಗ ಆರೋಪಿ ಕೊಟ್ಟಿದ್ದ ಆಧಾರ್ ಕಾರ್ಡ್ ವಿಳಾಸ ಆಧರಿಸಿ ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ.

ವಿಶ್ವ ಸಂಗೀತ ದಿನ 21, 22ರಂದು

ಬೆಂಗಳೂರು: ಎಂ.ಜಿ. ರಸ್ತೆಯಲ್ಲಿರುವ ರಂಗೋಲಿ ಮೆಟ್ರೊ ಕಲಾ ಕೇಂದ್ರದಲ್ಲಿ (ಆರ್. ಮ್ಯಾಕ್) ಜೂನ್ 21, 22ರಂದು ಬೆಳಿಗ್ಗೆ 11.30ರಿಂದ ಸಂಜೆ 7ರವರೆಗೆ ವಿಶ್ವ ಸಂಗೀತ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಕಲಾ ಕೇಂದ್ರದ ಸಭಾಂಗಣ, ಆವರಣದೊಳಗಿನ ತೆರೆದ ಪ್ರದೇಶದಲ್ಲಿ ಪ್ರದರ್ಶನ ನಿಗದಿ ಪಡಿಸಲಾಗಿದೆ. ಸ್ವತಂತ್ರ ಸಂಗೀತಗಾರರು ಗಾಯಕರು ಪ್ರದರ್ಶನ ನೀಡಬಹುದು. ಆಸಕ್ತರು ಹೆಸರು, ಪ್ರದರ್ಶನದ ಪ್ರಕಾರ (ವಾದ್ಯ/ಗಾಯನ), ಅವಧಿ, ಸಲಕರಣೆಗಳ ವಿವರಗಳೊಂದಿಗೆ ಜೂನ್ 19ರ ಮಧ್ಯಾಹ್ನ 1ರ ಒಳಗೆ rangoli@bmrc.co.inಗೆ ಇಮೇಲ್ ಮಾಡಬಹುದು. ಉಚಿತವಾಗಿ ಭಾಗವಹಿಸಲು ಅವಕಾಶ ನೀಡಲಾಗಿದ್ದು, ಮೊದಲು ನೋಂದಣಿ ಮಾಡಿಕೊಂಡವರಿಗೆ ಆದ್ಯತೆ ನೀಡಲಾಗುತ್ತದೆ.

ನ್ಯಾ.ಶ್ರೀನಿವಾಸ ಹರೀಶ್ ಕುಮಾರ್ ಅವರಿಗೆ ಬೀಳ್ಕೊಡುಗೆ

'ನ್ಯಾಯಾಂಗ ಭರವಸೆಯ ಪ್ರತೀಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀಸಾಮಾನ್ಯನ ಭರವಸೆಯ ಪ್ರತೀಕವಾಗಿ ಉಳಿದಿರುವ ನ್ಯಾಯಾಂಗ ವ್ಯವಸ್ಥೆ ಶಾಶ್ವತವಾಗಿರುತ್ತದೆ. ಇಂತಹ ಶ್ರೇಷ್ಠವಾದ ಸಂಸ್ಥೆಯನ್ನು ಯುವ ಜನಾಂಗ ತನ್ನ ಪರಿಶ್ರಮದ ಮೂಲಕ ಸಬಲಗೊಳಿಸುವ ಭರವಸೆ ಇದೆ' ಎಂದು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಆಶಾವಾದ ವ್ಯಕ್ತಪಡಿಸಿದರು.

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಯಿಂದ ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ವಕೀಲರ ಪರಿಷತ್‌ನಿಂದ ಹೈಕೋರ್ಟ್‌ನ ಕೋರ್ಟ್ ಹಾಲ್ 1ರಲ್ಲಿ ಶುಕ್ರವಾರ ನೀಡಲಾದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಜಿಲ್ಲಾ ನ್ಯಾಯಾಧೀಶನಾಗಿ, ಹೈಕೋರ್ಟ್ ನ್ಯಾಯಮೂರ್ತಿಯಾಗಿ, ಒಟ್ಟಾರೆ 23 ವರ್ಷ ಕೆಲಸ ಮಾಡಿದ್ದೇನೆ. ಹೈಕೋರ್ಟ್ ನ್ಯಾಯಮೂರ್ತಿಯಾಗಿ 8 ವರ್ಷ 7 ತಿಂಗಳು ಮತ್ತು ಎರಡು ವರ್ಷಗಳ ಕಾಲ ಕರ್ನಾಟಕ ನ್ಯಾಯಾಂಗ ಅಕಾಡೆಮಿ ಅಧ್ಯಕ್ಷನಾಗಿ ದುಡಿದಿದ್ದೇನೆ' ಎಂದು ಅವರು ತಮ್ಮ ಸೇವಾವಧಿಯನ್ನು ಸ್ಮರಿಸಿಕೊಂಡರು.



ಇದೇ 15ರಂದು ನಿವೃತ್ತಿಯಾಗುತ್ತಿರುವ ಹೈಕೋರ್ಟ್ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿಗೆ 'ಬೆಂಗಳೂರು ವಕೀಲರ ಸಂಘ'ದಿಂದ ಶುಕ್ರವಾರ ಬೀಳ್ಕೊಡುಗೆ ನೀಡಲಾಯಿತು. ಸಂಘದ ಹೈಕೋರ್ಟ್ ಘಟಕದ ಪದಾಧಿಕಾರಿಗಳಾದ ಎಸ್‌.ರಾಜು, ಪ್ರಧಾನ ಕಾರ್ಯದರ್ಶಿ ಎಚ್‌.ಜಿ.ಪ್ರವೀಣ್ ಗೌಡ, ಅಧ್ಯಕ್ಷ ವಿವೇಕ ರೆಡ್ಡಿ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್, ಪದಾಧಿಕಾರಿ ಸಂಧ್ಯಾ ಯು. ಪ್ರಭು ಮತ್ತು ಪಿ.ಅರವಿಂದ ಕಾಮತ್ ಉಪಸ್ಥಿತರಿದ್ದರು

ಡಿ.ವಿ.ಗುಂಡಪ್ಪನವರ, 'ಒಂದು ಕಡೆ ಚಿಗುರುತಲಿ; ಒಂದು ಕಡೆ ಬಾಡುತಲಿ, ಕಂದುತಿರೆ ಕೊಂಬೆ; ಮುಂಡದಲಿ ಹಬ್ಬುತಲಿ... ಎಂಬ ಮಂಕುತಿಮ್ಮನ ಕಗ್ಗವನ್ನು ಉಲ್ಲೇಖಿಸಿದ ಅವರು, 'ನ್ಯಾಯಮೂರ್ತಿಗಳು ಬರುತ್ತಾರೆ, ಹೋಗುತ್ತಾರೆ. ಆದರೆ, ನ್ಯಾಯಾಂಗ ವ್ಯವಸ್ಥೆ ದೃಢವಾಗಿರುತ್ತದೆ' ಎಂದು ಹೇಳಿದರು.

ನ್ಯಾ. ಶ್ರೀನಿವಾಸ್ ಹರೀಶ್ ಕುಮಾರ್ ಅವರ ನಿವೃತ್ತಿಯಿಂದ ಹೈಕೋರ್ಟ್ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ ಈಗ 45ಕ್ಕೆ ಇಳಿದಿದೆ. ಕರ್ನಾಟಕ ಹೈಕೋರ್ಟ್‌ನಲ್ಲಿ ಮಂಜೂರಾದ ನ್ಯಾಯಮೂರ್ತಿಗಳ ಹುದ್ದೆಗಳ ಸಂಖ್ಯೆ 63.

ಬೆಂಗಳೂರು ವಕೀಲರ ಸಂಘದ ವತಿಯಿಂದ ವಕೀಲರ ಸಭಾಂಗಣದಲ್ಲಿಯೂ ನ್ಯಾ.ಶ್ರೀನಿವಾಸ ಹರೀಶ್ ಕುಮಾರ್ ಅವರಿಗೆ ಶುಕ್ರವಾರ ಬೀಳ್ಕೊಡುಗೆ ನೀಡಲಾಯಿತು. ಸಂಘದ ಪದಾಧಿಕಾರಿಗಳು ಹಿರಿ–ಕಿರಿಯ ವಕೀಲರು ಇದ್ದರು.

ಶ್ರೀನಿವಾಸ ಹರೀಶ್ ಕುಮಾರ್ ಅವರು ಕೋಲಾರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಮಂಡಿಕಲ್ ಗ್ರಾಮದಲ್ಲಿ ಜನಿಸಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸ್ಥಳೀಯ ಸರ್ಕಾರಿ ಶಾಲೆಯಲ್ಲಿ ಪೂರೈಸಿದರು. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ನಂತರ ಬಿಎಂಎಸ್ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದು, ಹಿರಿಯ ವಕೀಲ ಎಂ.ಎಸ್. ಪುರುಷೋತ್ತಮ ರಾವ್ ಅವರ ಗರಡಿಯಲ್ಲಿ ಪಳಗಿದ ಅವರು ಚಿಕ್ಕಬಳ್ಳಾಪುರ ಹಾಗೂ ಗುಡಿಬಂಡೆಯಲ್ಲೂ ಕೆಲಕಾಲ ವಕೀಲಿಕೆ ನಡೆಸಿದ್ದಾರೆ.

ಪ್ರಜಾವಾಣಿ ಶನಿವಾರ, 14 ಜೂನ್ 2025

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಅಪ್ಪ ಭರವಸೆಯ ಬೆಳಕು

ಅಪ್ಪ ಒಂದು ದೊಡ್ಡ ಮರವಿದ್ದಂತೆ. ಆ ಮರದ ನೆರಳಿನಾಸರೆಯಲ್ಲಿ ಬೆಳೆಯುವ ಮಗಳಿಗೆ ಅಪ್ಪ ಕಲಿಸುವ ಜೀವನಪಾಠ ಅಗಾಧವಾದ ಶಕ್ತಿ ನೀಡುತ್ತದೆ, ಬದುಕಿನುದ್ದಕ್ಕೂ ಕೈಹಿಡಿದು ಮುನ್ನಡೆಸುತ್ತದೆ. ಅಂತಹ ಪ್ರೀತಿಪಾತ್ರನಿಗೊಂದು ಖುಷಿಯ ಅಪ್ಪುಗೆ ನೀಡಲು 'ಫಾದರ್ಸ್ ಡೇ' (ಜೂನ್ 15) ಸುಸಂದರ್ಭವಾಗಿ ಒದಗಿಬಂದಿದೆ. ವಿವಿಧ ಕ್ಷೇತ್ರಗಳಲ್ಲಿ ಛಾಪು ಮೂಡಿಸಿರುವ ಮಹಿಳೆಯರು ತಮ್ಮ ಪಾಲಿನ 'ಎವರ್‌ಗ್ರೀನ್ ಹೀರೊ' ಅಪ್ಪನೊಂದಿಗಿನ ಒಡನಾಟವನ್ನು ಇಲ್ಲಿ ಹಂಚಿಕೊಂಡಿದ್ದಾರೆ

ಸಂಸ್ಕಾರವೂ ಆನುವಂಶಿಕ!



ರೇವತಿ ಕಾಮತ್, ಉದ್ಯಮಿ, ಪರಿಸರವಾದಿ

ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು, ಬದುಕಿನಲ್ಲಿ ಬರುವ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಲು ಅದು ಅವರಿಗೆ ಅಪಾರವಾದ ಬಲ ತಂದುಕೊಡುತ್ತದೆ ಎಂದು ನಂಬಿದ್ದವರು ನನ್ನಪ್ಪ. ಅದೇ ಕಾರಣಕ್ಕೆ, ಮಧ್ಯಮವರ್ಗದ, 8 ಮಕ್ಕಳ ತುಂಬು ಕುಟುಂಬದಲ್ಲೂ ತನ್ನ ಆರೂ ಹೆಣ್ಣುಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸಿದರು. ಅದ್ಯಾಕೋ ಹೆಣ್ಣುಮಕ್ಕಳು ಹೊರಗೆ ಕೆಲಸಕ್ಕೆ ಹೋಗುವುದು ಮಾತ್ರ ಅಪ್ಪನಿಗೆ ಸುತರಾಂ ಇಷ್ಟವಿರಲಿಲ್ಲ. ಮನೆಕೆಲಸ, ಹೊರಗಿನ ಕೆಲಸ ಎರಡೆರಡು ಒತ್ತಡ ಅವರ ಮೇಲೆ ಬೀಳುತ್ತದೆ ಎನ್ನುವ ಕಳಕಳಿ ಇದ್ದಿರಬಹುದು. ಆದರೆ ಅಷ್ಟೊಂದು ಅಕ್ಕರಾಸ್ಥೆಯಿಂದ ಅಪ್ಪ ಬಿತ್ತಿದ್ದ ವಿದ್ಯೆಯ ಬೀಜ ಹೆಮ್ಮರವಾಗಿ ಫಲ ಕೊಡದೇ ಬಿಟ್ಟೀತೆ? ನಾವೆಲ್ಲ ಹೆಣ್ಣುಮಕ್ಕಳೂ ಒಬ್ಬರಿಗಿಂತ ಒಬ್ಬರು ಉತ್ತಮವಾದ ಕೆಲಸಗಳಲ್ಲೇ ತೊಡಗಿಕೊಂಡೆವು.

ಅತ್ಯಂತ ಜಾಲಿ ಸ್ವಭಾವದವರಾಗಿದ್ದ ಅಪ್ಪ ಜೋಕ್‌ಗಳನ್ನು ಹೇಳಿಕೊಂಡು ಮಕ್ಕಳನ್ನು ನಗಿಸುತ್ತಾ ಇರುತ್ತಿದ್ದರು. ಹಾಗಾಗಿ, ನನ್ನ ಬಾಲ್ಯದ ನೆನಪುಗಳು ಯಾವಾಗಲೂ ನನ್ನಲ್ಲಿ ಮಂದಹಾಸವನ್ನೇ ಮೂಡಿಸುತ್ತವೆ. ನನ್ನ ಬದುಕನ್ನು ಇನ್ನಿಲ್ಲದಂತೆ ಆವರಿಸಿಕೊಂಡಿರುವ ವೀಣಾಭ್ಯಾಸ, ಅಪ್ಪನಿಂದ ನನಗೆ ದೊರೆತ ವರದಾನ. ಈಗಲೂ ದಿನಾ ರಾತ್ರಿ ಕನಿಷ್ಠ ಒಂದು ತಾಸಾದರೂ ವೀಣೆ ನುಡಿಸದೇ ಮಲಗುವುದಿಲ್ಲ. ಅಪ್ಪ- ಅಮ್ಮನ ನೆನಪಿನಲ್ಲಿ 'ಶ್ಯಾಮಲಾ ಕೃಷ್ಣ ಸಂಗೀತ ಸಭಾ' ಎಂಬ ಸಂಸ್ಥೆ ಸ್ಥಾಪಿಸಿ ಸಂಗೀತ ಕಾರ್ಯಕ್ರಮಕ್ಕೆ ಒತ್ತು ನೀಡುತ್ತಿದ್ದೇನೆ. ಶೃಂಗೇರಿ ಶಾರದೆಯ ಸನ್ನಿಧಿಯಲ್ಲಿ ಪ್ರತಿ ಶುಕ್ರವಾರ ಸಂಗೀತ ಸೇವೆ ನೀಡಲು ವೀಣೆ ಹಿಡಿದು ಹೊರಡುತ್ತಿದ್ದ ಅಪ್ಪ, ದೇಗುಲದ ಎದುರಿನ ಕಲ್ಲಿನ ಕಟ್ಟೆಯಲ್ಲಿ ವಿಭೂತಿ ಹಚ್ಚಿಕೊಂಡು ವೀಣೆ ನುಡಿಸುತ್ತಾ ಕುಳಿತಿರುತ್ತಿದ್ದ ಭಂಗಿ, ಅಲ್ಲಿ ಕೇಳಿಬರುತ್ತಿದ್ದ ನಗಾರಿಯ ಸದ್ದು ಎಲ್ಲವೂ ಮೂರ್ನಾಲ್ಕು ದಶಕಗಳಾದರೂ ನನ್ನ ಮನದಲ್ಲಿ ಅಚ್ಚೊತ್ತಿದಂತಿವೆ.

ಯಾವುದೇ ಮನೆಯಲ್ಲಿ ಅಪ್ಪನ ವ್ಯಕ್ತಿತ್ವ ಗಟ್ಟಿಯಾಗಿದ್ದರೆ ಆ ಮನೆಯ ಮಕ್ಕಳ ಆತ್ಮಬಲ ತಾನೇತಾನಾಗಿ ವರ್ಧಿಸುತ್ತದೆ. ಮನೆಯಲ್ಲಿ ಮಗು ಸಂತೋಷದಿಂದ, ನೆಮ್ಮದಿಯಿಂದ ಇರುವಂತಾದರೆ ಅದರ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿದಂತೆಯೇ ಸರಿ. ಅಂತಹದ್ದೊಂದು ವಾತಾವರಣವನ್ನು ಅಪ್ಪ ನಮಗೆ ಕಲ್ಪಿಸಿದರು. ಅನಿಸಿದ್ದನ್ನು ಮುಕ್ತವಾಗಿ ಹೇಳುವ ಸ್ವಭಾವ ಅಪ್ಪನಿಂದ ನನಗೆ ಬಳುವಳಿಯಾಗಿ ಬಂದಿದೆ. ಆಸ್ತಿ ಅಂತಸ್ತಿನ ಗೀಳು ಹತ್ತಿಸಿಕೊಳ್ಳಬಾರದು ಎನ್ನುತ್ತಿದ್ದ ಅವರ ಮಾತು, ಅತ್ಯಂತ ಸರಳವಾದ ಬದುಕಿಗೆ ಯಾವಾಗ ಬೇಕಾದರೂ ಒಗ್ಗಿಕೊಂಡುಬಿಡಬಹುದಾದಷ್ಟು ಆಳವಾಗಿ ನನ್ನೊಳಗೆ ಬೇರುಬಿಟ್ಟಿದೆ. ಎಷ್ಟು ದುಡ್ಡಿದೆಯೋ ಅಷ್ಟರಲ್ಲೇ ಬದುಕಬೇಕು, ಎಂದಿಗೂ ಸಾಲಕ್ಕಾಗಿ ಕೈಚಾಚಬಾರದು ಎಂಬ ಅವರ ಬದುಕಿನ ಮೂಲಮಂತ್ರ ನನ್ನಿಂದ ನನ್ನ ಮಕ್ಕಳವರೆಗೂ ಸಾಗಿ ಬಂದಿದೆ. ಝರೋದಾದಂತಹ ಸಂಸ್ಥೆಯನ್ನು ಪೈಸೆ ಸಾಲವೂ ಇಲ್ಲದೆ ಕಟ್ಟುವುದಕ್ಕೆ ಅವರಿಗೆ ಸಾಧ್ಯವಾಗಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರಕ್ಕಿಂತ ಹೆಚ್ಚಿನದಾಗಿ ಕೊಡಬಹುದಾದ ಆಸ್ತಿ ಬೇರೇನು ತಾನೇ ಇರಲು ಸಾಧ್ಯ? ❖



ವೀಣಾವಾದಕ ದಿ. ಕೃಷ್ಣಮೂರ್ತಿ ಅವರೊಂದಿಗೆ ಬಾಲಕಿ ರೇವತಿ

ನನ್ನ ದಾರಿ ನಾನು ಕಂಡುಕೊಳ್ಳಲು ಬಿಟ್ಟರು



ಪ್ರಜ್ಞಾ ಚೌಟ, ವನ್ಯಜೀವಿ ಸಂರಕ್ಷಕಿ


'ಯಯಾತಿ' ನಾಟಕದಲ್ಲಿ ಬರುವ ಯಯಾತಿ ರಾಜನು ಶಾಪದಿಂದಾಗಿ ವೃದ್ಧನಾಗುತ್ತಾನೆ. ಪುತ್ರ ಪುರು ತನ್ನ ಯೌವನವನ್ನು ತಂದೆಗೆ ಧಾರೆ ಎರೆದು ಶಾಪ ವಿಮೋಚನೆ ಮಾಡಿ ತಾನು ವೃದ್ಧಾಪ್ಯ ಸ್ವೀಕರಿಸುತ್ತಾನೆ. ಅಂಥ ಅವಕಾಶ ನನಗೆ ಸಿಕ್ಕಿದ್ದರೆ ಅಪ್ಪನಿಗೆ ನನ್ನ ಯೌವನವನ್ನು ಧಾರೆ ಎರೆಯುತ್ತಿದ್ದೆ. ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಮಲಗಿದ್ದ ಅಪ್ಪನಿಗೆ ಪದೇಪದೇ ಈ ಮಾತು ಹೇಳುತ್ತಿದ್ದೆ.

ನನ್ನಪ್ಪ ನಡೆದಾಡುವ ಎನ್‌ಸೈಕ್ಲೋಪೀಡಿಯಾದಂತಿದ್ದರು. ನನಗೆ ಯಾವುದೇ ರೀತಿಯ ಅನುಮಾನ ಬಂದರೆ, ಪ್ರಶ್ನೆ ಮೂಡಿದರೆ ಅದಕ್ಕೆ ಪರಿಹಾರ ನೀಡುತ್ತಿದ್ದವರು ನನ್ನಪ್ಪ. ಆದರೆ, ಲೆಕ್ಚರ್ ಕೊಡುತ್ತಿರಲಿಲ್ಲ. ಅವರು ಅಂದು ಕಲಿಸಿದ ಪುಸ್ತಕಪ್ರೀತಿಯಿಂದ ಇಂದು ಪುಸ್ತಕ ಓದದೆ ದಿನದೂಡುವುದೇ ಕಷ್ಟ ಎಂಬಂತಾಗಿದೆ. ಜೀವನಪಾಠ, ಬದುಕಿನ ವಾಸ್ತವ ಕಲಿಸಿದರು. ಜೊತೆಗೆ ದೇಶ-ವಿದೇಶ ಸುತ್ತಿಸಿದರು. 'ನನಗೆ ಅಪ್ಪ ಕೊಟ್ಟಿದ್ದು ಚೌಟ ಎಂಬ ಹೆಸರು ಮಾತ್ರ, ಉಳಿದ ಎಲ್ಲವನ್ನೂ ನಾನೇ ದುಡಿದು ಗಳಿಸಿದೆ. ನೀವೂ ಹಾಗೆಯೇ ಮಾಡಬೇಕು' ಎಂದು ನಮಗೆ ಹೇಳುತ್ತಿದ್ದರು.

ನಾನು ಹಾಗೂ ಸಹೋದರ ಸಂದೀಪ್ ಚೌಟ (ಸಂಗೀತ ನಿರ್ದೇಶಕ) ಇಬ್ಬರೂ ನಮ್ಮ ದಾರಿ ಕಂಡುಕೊಳ್ಳಲು ಬಿಟ್ಟರು. ನಾವಿಬ್ಬರೂ ಜನಿಸಿದ್ದು ಆಫ್ರಿಕಾದ ಘಾನಾದಲ್ಲಿ. ಆಗ ಅಪ್ಪ ಅಲ್ಲಿ ಬ್ರಿಟಿಷ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ಮುಂಬೈನಲ್ಲಿ ನೆಲಸಿದ್ದಾಗ ಆಗಾಗ್ಗೆ ಅಂಬಾಸಿಡರ್ ಕಾರಿನಲ್ಲಿ ಮಂಗಳೂರಿಗೆ ಕರೆತರುತ್ತಿದ್ದರು. ಅದೊಂದು ದೊಡ್ಡ ಅನುಭವ. ಪಶ್ಚಿಮ ಘಟ್ಟದ ಆ ಸೊಬಗು ಸವಿಯುವುದೇ ಪರಮಾನಂದ. ಊರಿನಲ್ಲಿ ಯಕ್ಷಗಾನ, ಭೂತಕೋಲ ತೋರಿಸುತ್ತಿದ್ದರು. ರಾತ್ರಿ ಯಕ್ಷಗಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಪರಂಪರೆ, ಸಂಪ್ರದಾಯ ಕಲಿಸಿಕೊಟ್ಟರು. ಆಮೇಲೆ ನಮ್ಮನ್ನು ಬೆಂಗಳೂರಿನಲ್ಲಿ ಬೋರ್ಡಿಂಗ್ ಸ್ಕೂಲ್‌ಗೆ ಸೇರಿಸಿದರು. ರಜಾ ಅವಧಿಯಲ್ಲಿ ನೈಜೀರಿಯಾಕ್ಕೆ ಹೋಗುತ್ತಿದ್ದೆವು. ಅಲ್ಲಿ ಅಪ್ಪ ಬ್ಯುಸಿನೆಸ್ ನಡೆಸುತ್ತಿದ್ದರು.

ನಾನು ಆನೆಗಳನ್ನು ನೋಡಿಕೊಳ್ಳಲು ಕಾಡಿಗೆ ಹೊರಟಿದ್ದು ಅಪ್ಪನಿಗೆ ಆರಂಭದಲ್ಲಿ ಇಷ್ಟವಿರಲಿಲ್ಲ. ಮಗಳು ಯಾವುದಾದರೂ ಸುಲಭದ ಕೆಲಸದಲ್ಲಿ ತೊಡಗಿಕೊಳ್ಳಬೇಕು, ತೊಂದರೆ ಏಕೆ ತೆಗೆದುಕೊಳ್ಳಬೇಕು ಎಂಬ ವಾದ ಅವರದಾಗಿತ್ತು. ಆದರೆ, ಸುಲಭದ ಕೆಲಸದಲ್ಲಿ ಸವಾಲು ಇರದು, ಆಸಕ್ತಿ ಇದ್ದರೆ ಯಾವುದೇ ಕೆಲಸ ಸುಲಭವಾಗುತ್ತದೆ ಎಂಬುದು ನನ್ನ ವಾದವಾಗಿತ್ತು. 'ಇಲ್ಲಿಯೇ ಇದ್ದು ಬಿಳಿಯಾನೆ ನೋಡಿಕೊಳ್ಳುವುದು ಬಿಟ್ಟು, ಆ ಕಪ್ಪು ಆನೆ ಸಾಕಲು ಹೋಗುತ್ತೀಯಾ' ಎಂದು ಜೋಕ್ ಮಾಡುತ್ತಿದ್ದರು. ನಂತರ ನನ್ನ ಕೆಲಸ ಒಪ್ಪಿಕೊಂಡು, ನನ್ನನ್ನು ನೋಡಲು ಕಾಡಿಗೆ ಬರುತ್ತಿದ್ದರು.

ನಾನು ಉನ್ನತ ಶಿಕ್ಷಣಕ್ಕಾಗಿ ಲಂಡನ್‌ಗೆ ತೆರಳಿದೆ. ನನ್ನ ಪತಿ ಫ್ರಾನ್ಸ್ ದೇಶದವರು. ಅವರನ್ನು ಮದುವೆಯಾಗುವುದು ಮೊದಲು ಅಪ್ಪನಿಗೆ ಇಷ್ಟವಿರಲಿಲ್ಲ. ನಂತರ ಪೋಷಕರ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ ವಿವಾಹ ನಡೆಯಿತು. ಮದುವೆಯಾಗಿ 33 ವರ್ಷಗಳೇ ಕಳೆದಿವೆ. ಪತಿ ಹಾಗೂ ಮಗಳೊಂದಿಗೆ ಅಪ್ಪನ ನೆನಪಿನಲ್ಲಿ ಬದುಕು ಸಾಗಿದೆ. ❖



ದಿ. ರಂಗಕರ್ಮಿ ಡಿ.ಕೆ.ಚೌಟ ಬೆನ್ನಿಗೆ ನಿಂತಿರುವ ಪ್ರಜ್ಞಾ

ಶ್ರವಣಸಂಸ್ಕಾರ ಕಲಿಸಿದ ಗುರು



ಸಂಗೀತಾ ಕಟ್ಟಿ, ಗಾಯಕಿ

'ಅವಕಾಶ ಎನ್ನೋದು ತಾನಾಗಿಯೇ ಸಿಗೋದಿಲ್ಲ, ನಾವಾಗಿಯೇ ಸಾಧನೆ ಮಾಡಬೇಕು, ಹುಡುಕಿಕೊಳ್ತಾ ಹೋಗಬೇಕು, ಸಾಧನೆಯ ಹಾದಿಯಲ್ಲಿ ಪರಿಶ್ರಮ ಪಡಬೇಕು. ಸಿದ್ಧಿಸಿಕೊಂಡ ವಿದ್ಯೆಗೆ ಆಗ ತಕ್ಕ ಪ್ರತಿಫಲ ಸಿಗುತ್ತದೆ'- ಇದು ನನ್ನ ತಂದೆ ನನಗೆ ಹೇಳಿಕೊಟ್ಟ ಜೀವನಪಾಠ. ನಾನು ಈಗ ಸಂಗೀತಗಾರ್ತಿ ಆಗಿದ್ದೇನೆ ಅಂದರೆ ಅದರ ಕ್ರೆಡಿಟ್ ನಮ್ಮ ತಂದೆಗೇ ಹೋಗಬೇಕು. ಈಗಿನ ಜನರೇಶನ್ ತುಂಬಾ ಮುಂದುವರಿದಿದೆ. ಮನೆಯಲ್ಲೋ ಶಾಲೆಯಲ್ಲೋ ಮಕ್ಕಳನ್ನು 'ನೀನು ಮುಂದೆ ಏನಾಗುತ್ತೀ?' ಎಂದು ಕೇಳಿದ ತಕ್ಷಣ ಅವರು ಆ್ಯಕ್ಟರ್, ಸಿಂಗರ್, ಎಂಜಿನಿಯರ್, ಡಾಕ್ಟರ್... ಎಂದೆಲ್ಲ ಪಟಪಟನೆ ಹೇಳಿಬಿಡುತ್ತಾರೆ. ನಮ್ಮ ಕಾಲದಲ್ಲಿ ಆಗ ನಮಗೆ ಇವೆಲ್ಲ ಗೊತ್ತೇ ಇರಲಿಲ್ಲ. ಹೇಳಿಕೊಡುವವರೂ ಇರಲಿಲ್ಲ.

ಸಂಗೀತದಲ್ಲಿ ನಾನು ಇಷ್ಟೆಲ್ಲ ಹೆಸರು ಮಾಡಿದ್ದೇನೆ ಅಂದರೆ ಅದಕ್ಕೆ ಕಾರಣ, ಅತಿ ಚಿಕ್ಕ ವಯಸ್ಸಿನಲ್ಲೇ ಅಪ್ಪ ಮನೆಯಲ್ಲಿ ಹುಟ್ಟುಹಾಕಿದ ಸಂಗೀತ ಕೇಳುವ ಅಭ್ಯಾಸ. ಮಕ್ಕಳಿಗೆ ಶ್ರವಣ ಸಂಸ್ಕಾರ ಮುಖ್ಯ ಎನ್ನುತ್ತಿದ್ದ ಅವರು, ಎಳವೆಯಲ್ಲೇ ನನಗೆ ಅದನ್ನು ರೂಢಿಸಿದ್ದರು.

ನಮ್ಮ ತಂದೆ ಪ್ರೊ. ಹನುಮಂತಾಚಾರ್ ಕಟ್ಟಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದವರು. ಮನೆಯಲ್ಲಿ ಸಂಗೀತಗಾರರೇನೂ ಇರಲಿಲ್ಲ. ಸರಸ್ವತಿ ಹಬ್ಬದ ದಿನ ನಾನು ಹುಟ್ಟಿದ್ದರಿಂದ ನನಗೆ 'ಸಂಗೀತಾ' ಎಂದು ಹೆಸರಿಟ್ಟರು. ಆದರೆ ಚಿಕ್ಕವಯಸ್ಸಿನಲ್ಲೇ ಸಂಗೀತದ ಬಗ್ಗೆ ನನಗಿದ್ದ ಆಸಕ್ತಿಯನ್ನು ಗಮನಿಸಿದ ಅಪ್ಪ ಸಂಗೀತ ಅಭ್ಯಾಸಕ್ಕೆ ಸೇರಿಸಿದರು. ಬಾಲಿವುಡ್ ಸಂಗೀತ ನಿರ್ದೇಶಕ ನೌಷಾದ್ ಅಲಿ ಅವರನ್ನು ಮನೆಗೆ ಕರೆಸಿದ್ದರು. ಅವರಿಂದ ಸಂಗೀತದ ಆರಂಭಿಕ ಪಾಠ ಕಲಿಯುವ ಸೌಭಾಗ್ಯ ನನ್ನದಾಯಿತು. ಬಳಿಕ ಶೇಷಗಿರಿ ದಂಡಾಪುರ ಅವರ ಗುರುಕುಲಕ್ಕೆ ಸಂಗೀತಾಭ್ಯಾಸಕ್ಕಾಗಿ ಹೋಗುವಾಗ ನನ್ನಪ್ಪ ನನ್ನನ್ನು ದಿನಾ ಸೈಕಲ್‌ನಲ್ಲಿ ಕೂರಿಸಿಕೊಂಡು ಕರೆದೊಯ್ಯುತ್ತಿದ್ದರು. ಸಂಗೀತ ಪಾಠದ ನೋಟ್ಸ್ ಸೇರಿದಂತೆ ಬಂದೀಶ್, ಖಯಾಲ್ ಎಲ್ಲವನ್ನೂ ಅಪ್ಪನೇ ಬರೆದುಕೊಡುತ್ತಿದ್ದರು.

ಸಂಗೀತವು ಕೇಳ್ಮೆಯಿಂದಲೂ ಬರುತ್ತದೆ ಎಂಬ ಮಾತಿನ ಮೇಲೆ ಅಪ್ಪ ಬಹಳ ವಿಶ್ವಾಸವಿಟ್ಟಿದ್ದರು. ಧಾರವಾಡದ ಸುತ್ತಮುತ್ತ ಎಲ್ಲಿಯೇ ಸಂಗೀತ ಕಛೇರಿ ನಡೆದರೂ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಪಂ. ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು ಅವರಂತಹ ದಿಗ್ಗಜರ ಸಂಗೀತವನ್ನು ತಪ್ಪದೇ ಕೇಳುವ ಅವಕಾಶ ನನಗೆ ಸಿಕ್ಕಿತು, ಶಾಸ್ತ್ರೀಯ ಸಂಗೀತ ಕಲಿಯಲು ಪ್ರೇರಣೆಯೂ ಆಯಿತು. ಹೀಗೆ ನನ್ನ ಸಂಗೀತ ಪಯಣದುದ್ದಕ್ಕೂ ಅಪ್ಪನ ಪ್ರೋತ್ಸಾಹ ಇರುತ್ತಲೇ ಇತ್ತು. ಹೀಗಾಗಿ, 'ಮೈ ಫಾದರ್ ಈಸ್ ದ ಮೇಕರ್ ಆಫ್ ಸಂಗೀತಾ ಕಟ್ಟಿ' ಎಂದು ನಾನು ಹೆಮ್ಮೆಯಿಂದ ಹೇಳಬಲ್ಲೆ. ❖



ಪ್ರೊ. ಹನುಮಂತಾಚಾರ್ ಕಟ್ಟಿ ಅವರೊಂದಿಗೆ ಸಂಗೀತಾ ಕಟ್ಟಿ


ಅಪ್ಪ ಕೊಟ್ಟ ಪೆನ್ನು ಜೊತೆಗಿದೆ



ಎಚ್.ಎಸ್.ಮುಕ್ತಾಯಕ್ಕ, ಕವಯಿತ್ರಿ

ನನ್ನ ಅಪ್ಪ ದಿ. ಶಾಂತರಸರೆಂಬ ಆಕಾಶದ ಅಡಿಯಲ್ಲಿ, ತಾರೆಯಂತೆ ಹೊಳೆಯುವ ಆತನ ಮಾಸದ ನಗೆಯ, ಭರವಸೆಯ ಬೆಳಕಿನಲ್ಲಿ ನಾನು ಬೆಳೆದೆ. ಆತ ನನ್ನ ಕಾವ್ಯ ಗುರುವಷ್ಟೇ ಅಲ್ಲ ನನ್ನ ಮಾರ್ಗದರ್ಶಕನೂ ಸ್ನೇಹಿತನೂ ಆಪ್ತ ಸಲಹೆಗಾರನೂ ಆಗಿದ್ದ. ನಾನು ಚಿಕ್ಕವಳಿದ್ದಾಗ ಕತೆ ಪುಸ್ತಕಗಳನ್ನು ತಂದುಕೊಟ್ಟು, ಓದುವ ಅಭಿರುಚಿಯನ್ನು ಬೆಳೆಸಿದ. ಮುಂದೆ ಆ ಪುಸ್ತಕಗಳೇ ನನ್ನ ಅನುದಿನದ ಸ್ನೇಹಿತರಾಗುವಂತೆ ಮಾಡಿದ ಅಪ್ಪನಿಗೆ ನಾನೆಷ್ಟು ಋಣಿಯಾಗಿದ್ದರೂ ಸಾಲದು.

ನಾನು ಬರೆಯುತ್ತಾ ಹೋದಂತೆ ಎಂದೂ ಆತ ನನ್ನ ಕವಿತೆಗಳನ್ನು ತಿದ್ದಲಿಲ್ಲ. ಚೆನ್ನಾಗಿದೆಯೊ, ಇಲ್ಲವೊ ಎಂದು ಮಾತ್ರ ಹೇಳುತ್ತಿದ್ದ. ಕನ್ನಡಕ್ಕೆ ಮೊತ್ತಮೊದಲು ಗಜಲ್ ಕಾವ್ಯ ಪ್ರಕಾರವನ್ನು ತಂದ ಅಪ್ಪ, ಆ ಸಮಯದಲ್ಲಿ ಗಜಲ್ ಮತ್ತು ಉರ್ದು ಸಾಹಿತ್ಯದ ಬಗೆಗೆ ಸವಿಸ್ತಾರವಾಗಿ ತಿಳಿಸಿ ಹೇಳಿದ. ಹಾಗಾಗಿ, ನಾನು ಆನಂತರ ಕನ್ನಡ ಸಾಹಿತ್ಯ ಲೋಕಕ್ಕೆ ಮೊದಲ 'ಶುದ್ಧ ಗಜಲ್' ಸಂಕಲನ ಕೊಡಲು ಸಾಧ್ಯವಾಯಿತು. ನನ್ನ ಕಾವ್ಯ ಯಾನಕ್ಕೆ ಆತನೇ ಪ್ರೇರಣೆಯಾಗಿದ್ದಾನೆ. ನನ್ನ ಸಾಹಿತ್ಯಿಕ ಬೆಳವಣಿಗೆಯಲ್ಲಿ ಆತನ ಪಾತ್ರ ಬಹುದೊಡ್ಡದು. ನಾನು ಮತ್ತು ಅಪ್ಪ ಎಷ್ಟೋ ಪುಸ್ತಕಗಳನ್ನು ಓದಿ, ಚರ್ಚಿಸಿ, ಆನಂದಿಸಿದ ರಸಗಳಿಗೆಗಳು ಒಂದೆರಡಲ್ಲ. ಆತನ ನೆರಳಿನಲ್ಲಿ ನಾನು ಬೆಳೆಯಬಾರದೆಂಬುದೇ ಅವನ ಆಶಯವಾಗಿತ್ತು. ತನ್ನ ಹೆಸರನ್ನು ನಾನು ಎಲ್ಲಿಯೂ ಉಪಯೋಗಿಸಬಾರದು ಎಂಬ ಕಟ್ಟಪ್ಪಣೆಯೂ ಇತ್ತು. ಹೀಗಾಗಿ, ನಾನು ಸ್ವತಂತ್ರವಾಗಿಯೇ ಬೆಳೆದೆ. ಸಾಹಿತ್ಯಿಕವಾಗಿ ಅಷ್ಟೇ ಅಲ್ಲ ಆತನ ವ್ಯಕ್ತಿತ್ವದ ಪ್ರಭಾವವೂ ನನ್ನ ಮೇಲಿದೆ. ಆತನ ಸರಳ ಸಜ್ಜನಿಕೆ, ಮಾತೃ ಹೃದಯ, ಅಧಿಕಾರ, ಹಣಕ್ಕಾಗಿ ಆಸೆ ಪಡದೇ ಇದ್ದುದು, ಜಾತೀಯತೆಯನ್ನು ಧಿಕ್ಕರಿಸಿದ್ದು, ಅನ್ಯಾಯದ ವಿರುದ್ಧದ ಹೋರಾಟ, ಶಿಸ್ತುಬದ್ಧ ಅಧ್ಯಯನ, ಬದುಕಿನ ಬಗೆಗೆ ಅದಮ್ಯ ಉತ್ಸಾಹ... ಇಂತಹ ಹಲವಾರು ಕಾರಣಗಳಿಂದ ಅಪ್ಪ ನನ್ನ ಬದುಕಿನ ಚೇತನವಾಗಿದ್ದ. ಭರವಸೆಯ ಕನಸಿನ ಹಣ್ಣಿನಬುಟ್ಟಿಯನ್ನು ನನಗಾಗಿ ಹೊತ್ತು ತಂದ. ನನ್ನ ನೋವುಗಳನ್ನು ಮನೋಬಲವಾಗಿ ಬದಲಾಯಿಸಿ ಬದುಕಲು ಕಲಿಸಿದ ನನ್ನ ಅಪ್ಪ ಭೌತಿಕವಾಗಿ ನನ್ನ ಜೊತೆಗೆ ಇಂದು ಇರದಿದ್ದರೂ ಆತ ಕೊಟ್ಟ 'ಮನೋಬಲ' ಮತ್ತು 'ಪೆನ್ನು' ಸದಾ ನನ್ನ ಜೊತೆಗಿವೆ. ❖



ಸಂಭಾಷಣೆನಿರತ ಅಪ್ಪ- ಮಗಳು ಕವಿ ದಿ. ಶಾಂತರಸ ಮತ್ತು ಮುಕ್ತಾಯಕ್ಕ

ಕರ್ತವ್ಯಕ್ಕೆ ಅಡ್ಡಿಯಾಗದ ಪಿತೃ ಕಾಳಜಿ



ಸೌಮ್ಯಾ ರೆಡ್ಡಿ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ

ಎಂಥ ಸಂದರ್ಭದಲ್ಲಿಯೂ ಜನರ ಒಳಿತಿನ ಬಗ್ಗೆಯೇ ಯೋಚಿಸುವ ಅಪ್ಪ, ನಾವು ಬದುಕಿರುವ ನಾಲ್ಕು ದಿನಗಳಲ್ಲಿ ಸಾಧ್ಯವಾದಷ್ಟು ಜನರಿಗೆ ಸಹಾಯ ಮಾಡಬೇಕು ಎನ್ನುವವರು. ಅವರ ಈ ಧೋರಣೆ ನನಗೆ ಸದಾ ಸ್ಫೂರ್ತಿ ನೀಡುತ್ತದೆ. ಇಲ್ಲಿಯವರೆಗೆ ಏನೇ ಕಲಿತಿದ್ದರೂ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದ್ದರೂ ಅದಕ್ಕೆ ಅವರ ಗುಣಗಳಿಂದ ಪ್ರಭಾವಿತಳಾಗಿರುವುದೇ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ.

ಸಾಮಾನ್ಯವಾಗಿ ಮನೆಯಲ್ಲಿ ಮಕ್ಕಳಿಗೆ ಓದಿನ ವಿಷಯದಲ್ಲಿ ಹೆಚ್ಚು ಒತ್ತಡ ಇದ್ದೇ ಇರುತ್ತದೆ. ಈ ವಿಚಾರದಲ್ಲಿ ನನ್ನ ಅಪ್ಪ ತದ್ವಿರುದ್ಧ. ಇಂಥದ್ದನ್ನೇ ಓದು ಎಂದು ಎಂದಿಗೂ ಹೇಳಲಿಲ್ಲ. ಯಾವ ವಿಚಾರದಲ್ಲಿಯೂ ಹೇರಿಕೆ ಇರಲಿಲ್ಲ. ಏನು ಬೇಕಾದರೂ ಮಾಡು, ಆದರೆ ಅದು ಪ್ರಾಮಾಣಿಕವಾಗಿರಬೇಕು ಎಂಬುದಷ್ಟೇ ಅವರ ತತ್ವವಾಗಿತ್ತು. ಎಂಜಿನಿಯರಿಂಗ್ ಓದುವಾಗ ಒಂದು ವಿಷಯದಲ್ಲಿ ಫೇಲಾಗಿದ್ದೆ. ಫೋನ್ ಮಾಡಿ ಫೇಲಾಗಿರುವ ವಿಷಯ ತಿಳಿಸಿ ಜೋರಾಗಿ ಅಳಲು ಶುರು ಮಾಡಿದೆ. ಆಗ ಅಪ್ಪ 'ಇದು ಬರೀ ಪರೀಕ್ಷೆಯಷ್ಟೆ. ಮತ್ತೆ ಬರೆಯಲು ಅವಕಾಶವಿದೆ. ನಾನು ನನ್ನ ಕಾಲೇಜು ದಿನಗಳಲ್ಲಿ ಟಾಪರ್ ಏನೂ ಆಗಿರಲಿಲ್ಲ' ಎಂದು ಸಮಾಧಾನ ಮಾಡಿದ್ದರು.

ಮೊದಲಿನಿಂದಲೂ ಅಪ್ಪನಂತೆ ಜನರೊಂದಿಗೆ ನನ್ನ ಒಡನಾಟ ಹೆಚ್ಚಾಗಿಯೇ ಇತ್ತು. ಶಾಲಾ ಕಾಲೇಜು ದಿನಗಳಲ್ಲೇ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದೆ. ಸಂಘ ಸಂಸ್ಥೆಗಳ ಜೊತೆ ಒಡನಾಟ ಇಟ್ಟುಕೊಂಡಿದ್ದೆ. ಒಮ್ಮೆಯಂತೂ ಒಳಗೆ ಅಪ್ಪ ಕಾರ್ಯಕ್ರಮ ಉದ್ಘಾಟನೆ ಮಾಡುತ್ತಿದ್ದರು, ಹೊರಗೆ ನಾನು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದೆ. ಪ್ರಾಣಿಗಳ ಹಕ್ಕುಗಳಿಗಾಗಿ ಹೋರಾಡುವಾಗ, ಜನರೊಂದಿಗೆ ಬೆರೆತು ಕೆಲಸ ಮಾಡುವಾಗ 'ಬೇಡ' ಎಂದು ಹೇಳಿದವರಲ್ಲ. ಮಗಳ ಬಗೆಗಿನ ಕಾಳಜಿ ಮತ್ತು ತಂದೆಯ ಕರ್ತವ್ಯದ ನಡುವೆ ಅಪ್ಪನಿಗೆ ಸ್ಪಷ್ಟತೆ ಇತ್ತು. ಹಾಗಾಗಿ, ಅವರು ನನ್ನ ಕೆಲಸಗಳಿಗೆ ಸದಾ ಪ್ರೋತ್ಸಾಹ ನೀಡಿದರು.

ಅಪ್ಪನ ತಾಳ್ಮೆಯದ್ದೇ ಒಂದು ತೂಕ. ಕಲಿಯಲೇಬೇಕು ಎಂದು ಪಣ ತೊಟ್ಟರೂ ಆ ಮಟ್ಟಿಗಿನ ತಾಳ್ಮೆಯನ್ನು ನನಗಿನ್ನೂ ರೂಢಿಸಿಕೊಳ್ಳಲು ಆಗಿಲ್ಲ. ಅವರು ನೀಡಿದ ಸ್ವಾತಂತ್ರ್ಯ ಮತ್ತು ಪ್ರೋತ್ಸಾಹ ನನ್ನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸಿವೆ. ❖



ಸಚಿವರಾಗಿರುವ ಅಪ್ಪ ರಾಮಲಿಂಗಾ ರೆಡ್ಡಿ ಅವರೊಂದಿಗೆ ಪುಟ್ಟ ಪೋರಿ ಸೌಮ್ಯಾ

ಮೌನದ ಹಿಂದೆ ನೂರಾರು ಭಾವ



ಧನ್ಯಾ ರಾಮ್‌ಕುಮಾರ್, ಚಿತ್ರನಟಿ


ನನ್ನಪ್ಪ ಸರಳ ಜೀವಿ. ತುಂಬಾ ಶಾಂತ ಸ್ವಭಾವದವರಾದರೂ ಅಷ್ಟೇ ಶಿಸ್ತಿನ ವ್ಯಕ್ತಿ. ಹಾಗೆಂದು ನಮ್ಮೊಂದಿಗೆ ಬೆರೆತು ಸಂಭ್ರಮಿಸುವ ಅವಕಾಶವನ್ನು ಅವರು ಕಳೆದುಕೊಳ್ಳುವುದಿಲ್ಲ. ಹೀಗೇ ಇರು, ಇದನ್ನೇ ಮಾಡು ಎಂದೆಲ್ಲ ಆಜ್ಞೆ ಮಾಡುವವರಲ್ಲ. ಶಾಲಾ ಕಾಲೇಜು ದಿನಗಳಲ್ಲಿ ನಮ್ಮನ್ನು ಶಿಸ್ತಿನಿಂದ ಬೆಳೆಸಿದರು. ಸ್ನೇಹಿತರ ಜೊತೆ ಪ್ರವಾಸ ಹೋಗುವಂತಹ ವಿಷಯಕ್ಕೆಲ್ಲ ಹಟ ಮಾಡಿದರೂ ಅವರಿಂದ ಗ್ರೀನ್ ಸಿಗ್ನಲ್ಲೇನೂ ಸಿಗುತ್ತಿರಲಿಲ್ಲ. ಆಗೆಲ್ಲ ಅವರನ್ನು ತುಂಬಾ ಬೈದುಕೊಳ್ಳುತ್ತಿದ್ದೆ. ಆದರೆ ಈಗ ಅದರ ಹಿಂದಿನ ಕಾಳಜಿಯ ಅರಿವಾಗಿದೆ.

ನನಗೇ ತಿಳಿಯದಂತೆ ಅಪ್ಪನ ಕೆಲವು ಗುಣಗಳನ್ನು ಅಳವಡಿಸಿಕೊಂಡಿದ್ದೇನೆ. ಚಿತ್ರರಂಗಕ್ಕೆ ಬರುವ ನನ್ನ ಅಪೇಕ್ಷೆಯನ್ನು ಅಪ್ಪ ಅಷ್ಟೇನೂ ಉತ್ಸಾಹದಿಂದ ಸ್ವೀಕರಿಸಲಿಲ್ಲ. 'ಕಲಾವಿದರ ಜೀವನ ತೆರೆದ ಪುಸ್ತಕವಿದ್ದಂತೆ. ಅವರ ಜೀವನದ ಪ್ರತಿ ಆಗುಹೋಗೂ ಜನರೆದುರು ಅನಾವರಣ ಆಗುತ್ತಲೇ ಇರುತ್ತದೆ. ನಮ್ಮನ್ನು ಸದಾಕಾಲ ಎಲ್ಲರೂ ಗಮನಿಸುತ್ತಿರುತ್ತಾರೆ. ಯಶಸ್ಸು ಮಾತ್ರವಲ್ಲದೆ ನಮ್ಮ ಎಲ್ಲ ಹಿನ್ನಡೆ, ಸಂಕಷ್ಟಗಳೂ ಜನರೆದುರು ಬಯಲಾಗುತ್ತಿರುತ್ತವೆ. ಇಲ್ಲಿ ಖಾಸಗಿತನ ಅನ್ನುವುದು ಕಡಿಮೆ. ಅದಕ್ಕೆಲ್ಲ ಸಿದ್ಧಳಾಗಿದ್ದರೆ ಮಾತ್ರ ಹೋಗು' ಅಂದಿದ್ದರು. ಅವರ ಆ ಮಾತಿನ ಅರ್ಥ ಕೂಡ ಆ ಕ್ಷಣಕ್ಕಿಂತ ಈಗ ಚೆನ್ನಾಗಿ ಆಗುತ್ತಿದೆ.

ಮೊದಲಿನಿಂದಲೂ ತಂದೆಯೊಂದಿಗೆ ಮುಕ್ತವಾಗಿ ಮಾತನಾಡುವ ಸ್ವಾತಂತ್ರ್ಯ ಇದೆ. ಹಾಗಾಗಿ, ನಮ್ಮ ನಡುವೆ ಯಾವುದೇ ಮುಚ್ಚುಮರೆ ಇಲ್ಲ. ಅವರು ಯಾವಾಗಲೂ ನನಗೆ ಬೆಂಬಲವಾಗಿ ನಿಲ್ಲುತ್ತಾರೆ.

ಅಪ್ಪಂದಿರ ದಿನವನ್ನು ಬಹಳ ವಿಶೇಷವಾಗಿಯೇನೂ ಆಚರಿಸುವುದಿಲ್ಲ. ತಂದೆಗೆ ಇಷ್ಟವಾದ ಹೋಟೆಲ್‌ನಲ್ಲಿ ಮನೆಯವರೆಲ್ಲ ಒಟ್ಟಾಗಿ ಊಟ ಮಾಡುತ್ತೇವೆ. ಜೊತೆಯಾಗಿ ಕಾಲ ಕಳೆಯುವುದೇ ನಮಗೆ ಖುಷಿ, ಒಟ್ಟಾಗಿರುವುದೇ ನಮಗೆ ಉಡುಗೊರೆ, ಸಂಭ್ರಮ ಎಲ್ಲವೂ.

ಮಕ್ಕಳ ವಿಷಯದಲ್ಲಿ ತಂದೆ-ತಾಯಿ ಕೆಲವೊಮ್ಮೆ ಮೌನ ಕಾಯ್ದುಕೊಳ್ಳಬಹುದು. ಆದರೆ ಆ ಮೌನದ ಹಿಂದೆ ನೂರಾರು ಭಾವನೆಗಳು ಮತ್ತು ಹೇಳಿಕೊಳ್ಳಲಾಗದಂತಹ ವಿಷಯಗಳಿರುತ್ತವೆ. ಆ ಮೌನ ಸಾವಿರ ಮಾತುಗಳನ್ನು ಹೇಳುತ್ತದೆ. ಮಕ್ಕಳಾದ ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕು. ಜನ ನನ್ನನ್ನು ರಾಜ್‌ಕುಮಾರ್ ಅವರ ಮೊಮ್ಮಗಳು ಎಂದು ನೋಡುವಷ್ಟೇ ಗೌರವದಿಂದ ನಟ ರಾಮ್‌ಕುಮಾರ್ ಮಗಳು ಎಂದೂ ಗೌರವಿಸುತ್ತಾರೆ. ಒಬ್ಬಳು ಮಗಳಾಗಿ ನನಗೆ ಇದಕ್ಕಿಂತ ಖುಷಿ ನೀಡುವ ಸಂಗತಿ ಇನ್ನೇನಿರಲು ಸಾಧ್ಯ? ❖



ಚಿತ್ರನಟ ರಾಮ್‌ಕುಮಾರ್ ಜತೆ ಪುಟಾಣಿ ಧನ್ಯಾ

ನಿರೂಪಣೆ: ಕೆ.ಓಂಕಾರಮೂರ್ತಿ, ರೂಪಾ ಕೆ.ಎಂ., ಉಮಾ ಅನಂತ್, ವಿದ್ಯಾ ಹಂಚಿನಮನಿ

ಆಹಾ... ಪರಿಮಳ!

ರಸಾಸ್ವಾದ



'ಅಡುಗೆ ಮನೆಯೇ ನನ್ನ ಪ್ರಪಂಚ. ಹೊಸ ಬಗೆಯ ಅಡುಗೆಗಳನ್ನು ಕಲಿತು ಪ್ರಯೋಗಿಸುವುದೆಂದರೆ ಮೊದಲಿನಿಂದಲೂ ನನಗೆ ಎಲ್ಲಿಲ್ಲದ ಆಸ್ಥೆ. ಹವ್ಯಾಸವಾಗಿದ್ದ ಆ ತುಡಿತ ಇದೀಗ ಆದಾಯದ ಮೂಲವೇ ಆಗಿದೆ. ಪ್ರೀತಿ, ಶ್ರಮ, ಶ್ರದ್ಧೆ, ಸಂಯಮದಿಂದ ಮಾಡಿದ ಯಾವುದೇ ಕೆಲಸ ಫಲ ಕೊಟ್ಟೇ ಕೊಡುತ್ತದೆ. ಅದರ ಪ್ರತಿಫಲವೇ ಇದು...'

'ಪರಿಮಳಾ ಕಿಚನ್' ಯೂಟ್ಯೂಬ್ ಚಾನೆಲ್‌ನ ಒಡತಿ ಪರಿಮಳಾ ಅವರ ಹೆಮ್ಮೆಯ ಮಾತಿದು. ಮಗ ಸುಧೀಂದ್ರ ಅವರ ಒತ್ತಾಸೆಯಿಂದ ನಾಲ್ಕು ವರ್ಷಗಳ ಹಿಂದೆ ಶುರು ಮಾಡಿದ ಅಡುಗೆ ಚಾನೆಲ್‌ನಲ್ಲಿ ಈವರೆಗೆ ಅವರು 955 ಪಾಕಗಳನ್ನು ವೀಕ್ಷಕರಿಗೆ ಉಣಬಡಿಸಿದ್ದಾರೆ. 5.36 ಲಕ್ಷ ಚಂದಾದಾರರನ್ನು ಹೊಂದಿರುವ ಚಾನೆಲ್ ಈವರೆಗೆ 15 ಕೋಟಿ ವ್ಯೂಸ್ ಪಡೆದಿದೆ.

ನಿತ್ಯ ಅಡುಗೆಗೆ ಬಳಸುವ ಪದಾರ್ಥಗಳಲ್ಲೇ ಆರೋಗ್ಯಕರವಾದ, ರುಚಿಕರವಾದ, ಸುಲಭದಲ್ಲಿ ತಯಾರಿಸುವ ರೆಸಿಪಿಗಳು ಅವರಲ್ಲಿ ಆದ್ಯತೆ ಪಡೆದಿವೆ. ಉದ್ಯೋಗಸ್ಥ ಮಹಿಳೆಯರು, ಹೊಸದಾಗಿ ಅಡುಗೆ ಕಲಿಯುವವರು, ಮದುವೆ ಆಗದಂತಹವರಿಗಾಗಿ ದಿಢೀರ್ ತಿಂಡಿ, ದಿಢೀರ್ ಸಾಂಬಾರ್ ತಯಾರಿಕೆಯಂತಹ ವಿಧಾನಗಳು ಇಲ್ಲಿ ಲಭ್ಯವಿವೆ.

'ಬೆಣ್ಣೆದೋಸೆ ನಗರಿ' ದಾವಣಗೆರೆಯವರಾದ ಪರಿಮಳಾ ಅವರಿಗೆ ವೈವಿಧ್ಯಮಯ ದೋಸೆಗಳನ್ನು ಪ್ರಯೋಗಿಸುವುದೆಂದರೆ ಹೆಚ್ಚು ಖುಷಿ. ಈವರೆಗೆ 75ಕ್ಕೂ ಹೆಚ್ಚು ಬಗೆಯ ದೋಸೆ ರೆಸಿಪಿಗಳ ಪಾಠವನ್ನು ಅವರು ಮಾಡಿದ್ದಾರೆ. ಮಲೆನಾಡು, ಬಯಲುಸೀಮೆ, ರಾಯಲಸೀಮೆ... ಹೀಗೆ ವಿವಿಧ ಭಾಗಗಳ ಅಡುಗೆಗಳ ಜೊತೆಗೆ ಸಿಹಿ ಖಾದ್ಯ, ತರಹೇವಾರಿ ಸಾಂಬಾರ್, ಬಾಂಡ್ಲಿ ರೊಟ್ಟಿ, ತಾಲಿಪಟ್ಟು, ಸಾಂಪ್ರದಾಯಿಕ ಹಬ್ಬದ ಅಡುಗೆಗಳು ಅವರ ಚಾನೆಲ್ ಅನ್ನು ಶ್ರೀಮಂತಗೊಳಿಸಿವೆ. ವರ್ಷದೊಳಗಿನ ಮಕ್ಕಳಿಗಾಗಿ ತಯಾರಿಸುವ ಪೌಷ್ಟಿಕಾಂಶಯುಕ್ತ ಆಹಾರದಿಂದ ಹಿಡಿದು ವಯಸ್ಸಾದವರಿಗೆ ಕೊಡುವ ಮೃದು ಆಹಾರದವರೆಗೆ ನಾನಾ ಬಗೆಯ ಖಾದ್ಯಗಳು ಸ್ಥಾನ ಪಡೆದಿವೆ.

ಶೇಂಗಾ ಚಿಕ್ಕಿ, ಚಕ್ಕುಲಿಯಂತಹ ಕುರುಕಲು ತಿನಿಸುಗಳ ತಯಾರಿಕೆಯಲ್ಲಿ ಪರಿಮಳಾ ಅವರಿಗೆ ಎಲ್ಲಿಲ್ಲದ ಆಸಕ್ತಿ. ಚಾನೆಲ್ ಪಯಣ ಆರಂಭಕ್ಕೂ ಮುನ್ನ ಸಂಬಂಧಿಕರು, ಸ್ನೇಹಿತರಿಗೆ ಅವುಗಳನ್ನು ಮಾಡಿಕೊಟ್ಟು ಖುಷಿಪಡುತ್ತಿದ್ದರು. ಅದರ ಮುಂದುವರಿದ ಭಾಗವಾಗಿ, ತಮ್ಮ ಚಾನೆಲ್‌ನ ಪಯಣವನ್ನು ಅವರು ಆರಂಭಿಸಿದ್ದು ಶೇಂಗಾ ಚಿಕ್ಕಿ ಮಾಡುವ ವಿಡಿಯೊದಿಂದಲೇ.

'ಸೀಸನ್‌ಗೆ ತಕ್ಕಂತೆ ವೀಕ್ಷಕರು ರೆಸಿಪಿಗಳನ್ನು ಬಯಸುತ್ತಾರೆ. ಬೇಸಿಗೆಯಲ್ಲಿ ಸಂಡಿಗೆ, ಹಪ್ಪಳ, ಮಾವಿನಕಾಯಿ ಉಪ್ಪಿನಕಾಯಿ ರೆಸಿಪಿಗಳು ಹೆಚ್ಚು ವೀಕ್ಷಣೆ ಪಡೆಯುತ್ತವೆ. ಮಳೆಗಾಲದಲ್ಲಿ ಚಕ್ಕುಲಿ, ಕೋಡುಬಳೆ, ನಿಪ್ಪಟ್ಟಿನಂತಹ ತಿನಿಸುಗಳಿಗೆ ಬೇಡಿಕೆ ಇರುತ್ತದೆ. ಬಹುತೇಕ ವೀಕ್ಷಕರ ಬೇಡಿಕೆಯಂತೆಯೇ ರೆಸಿಪಿಗಳನ್ನು ತಯಾರಿಸುತ್ತೇನೆ. 'ನಿಮ್ಮಿಂದ ಅಡುಗೆ ಕಲಿತೆವು. ಹಪ್ಪಳ, ಸಂಡಿಗೆ ರೀತಿಯ ಸಾಂಪ್ರದಾಯಿಕ ರೆಸಿಪಿಗಳು ಇಷ್ಟವಾಗುತ್ತವೆ' ಎಂದು ವೀಕ್ಷಕರು ಪ್ರತಿಕ್ರಿಯಿಸಿದಾಗ ಸಾರ್ಥಕತೆಯ ಭಾವ ಮೂಡುತ್ತದೆ ಎನ್ನುತ್ತಾರೆ ಪರಿಮಳಾ. ಗಂಡು- ಹೆಣ್ಣೆಂಬ ಭೇದವಿಲ್ಲದೆ ಎಲ್ಲರೂ ಅಡುಗೆ ಕಲಿಯಲೇಬೇಕು ಎಂಬುದು ಅವರ ಸಲಹೆ.

ನಿರೂಪಣೆ: ಸುಮಾ ಬಿ.

ಏಕಾದಶಿ 'ಹತ್ತಿ' ದೋಸೆ!

ಪರಿಮಳಾ ಅವರ ಚಾನೆಲ್‌ನಲ್ಲಿ ಸಿಗುವ ಬಗೆಬಗೆಯ ದೋಸೆಗಳಲ್ಲಿ ವಿಶೇಷವಾದದ್ದು 'ಹತ್ತಿ ದೋಸೆ'. ಮೂರು ವರ್ಷಗಳ ಹಿಂದೆ ಅವರು ತಯಾರಿಸಿದ್ದ ಈ ದೋಸೆಯ ವಿಡಿಯೊ 54 ಲಕ್ಷ ವೀಕ್ಷಣೆ ಪಡೆದಿದೆ. ಏಕಾದಶಿಯಂತಹ ವ್ರತ ಪಾಲನೆಯ ಸಮಯದಲ್ಲಿ 'ಒಪ್ಪತ್ತು' ಇರಬೇಕಾದವರು ಅಕ್ಕಿಯಿಂದ ತಯಾರಿಸಿದ ಪದಾರ್ಥ ಸೇವಿಸುವುದಿಲ್ಲ. ಅಂತಹ ಸಂದರ್ಭಕ್ಕೆ ಹೇಳಿ ಮಾಡಿಸಿದಂತಿರುವ ಈ ದೋಸೆ ತಯಾರಿಸಲು ಅಕ್ಕಿ, ಉದ್ದಿನಬೇಳೆ ಯಾವುದೂ ಬೇಡ. ಬಾಯಿಗಿಟ್ಟರೆ ಸಾಕು ಕರಗಿಹೋಗುವ, ಹತ್ತಿಯಂತೆ ಮೃದುವಾಗಿರುವ ಈ ದೋಸೆಗೆ ಅವರು 'ಹತ್ತಿ ದೋಸೆ' ಎಂದೇ ನಾಮಕರಣ ಮಾಡಿದ್ದಾರೆ. ಈ ದೋಸೆ ತಯಾರಿಸುವ ವಿಧಾನ ಇಲ್ಲಿದೆ:



ಬೇಕಾಗುವ ಸಾಮಗ್ರಿ: ಎರಡು ಬಟ್ಟಲು ಚಿರೋಟಿ ರವೆ, ಒಂದು ಬಟ್ಟಲು ತೆಂಗಿನಕಾಯಿ ತುರಿ, ರುಚಿಗೆ ತಕ್ಕಷ್ಟು ಉಪ್ಪು, ನೀರು.

ಮಾಡುವ ವಿಧಾನ: ಒಂದು ಪಾತ್ರೆಗೆ ಚಿರೋಟಿ ರವೆ, ಒಂದು ಬಟ್ಟಲು ನೀರು ಹಾಕಿ ಮಿಕ್ಸ್ ಮಾಡಿ ಹತ್ತು ನಿಮಿಷ ತಟ್ಟೆ ಮುಚ್ಚಿ ಇಡಿ. ರವೆ ನೆನೆದ ಬಳಿಕ ತೆಂಗಿನಕಾಯಿ ತುರಿ, ಅರ್ಧ ಬಟ್ಟಲು ನೀರು, ಉಪ್ಪು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಈ ಮಿಶ್ರಣಕ್ಕೆ ಕಾಲು ಕಪ್ ನೀರು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ ಇಡೀ ರಾತ್ರಿ ಹಿಟ್ಟು ಹುದುಗಲು ಬಿಡಿ. ಬೆಳಿಗ್ಗೆ ಚೆನ್ನಾಗಿ ಕಲಸಿ ದೋಸೆ ಹೊಯ್ದರಾಯಿತು. ಇದನ್ನು ದಿಢೀರ್ ಆಗಿಯೂ ತಯಾರಿಸಬಹುದು. ಆಗ ಸ್ವಲ್ಪ ಸೋಡಾ ಸೇರಿಸುವುದು ಸೂಕ್ತ. ಹಿಟ್ಟು ರುಬ್ಬಿ ಅರ್ಧ ಗಂಟೆಯ ಬಳಿಕ ದೋಸೆ ಮಾಡಿ ಸವಿಯಬಹುದು.

ಅಗತ್ಯವಾದಲ್ಲಿ ರಾಜ್ಯಕ್ಕೆ ವಿಸ್ತರಣೆ

ದೇಶದಲ್ಲೇ ಮೊದಲ ಬಾರಿಗೆ ಎಸ್‌ಎಎಫ್ ರಚನೆ: ಗೃಹ ಸಚಿವ ಜಿ.ಪರಮೇಶ್ವರ

ಪ್ರಜಾವಾಣಿ ವಾರ್ತೆ


ಮಂಗಳೂರಿನಲ್ಲಿ ಉದ್ಘಾಟನೆಗೊಂಡ ಪೊಲೀಸ್ ವಿಶೇಷ ಕಾರ್ಯಪಡೆಯ ಸಿಬ್ಬಂದಿಯೊಂದಿಗೆ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ, ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಜನಪ್ರತಿನಿಧಿಗಳು ಪ್ರಜಾವಾಣಿ ಚಿತ್ರ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಕೋಮು ಹಿಂಸೆ ನಿಗ್ರಹಕ್ಕಾಗಿ ರಚನೆಯಾಗಿರುವ ವಿಶೇಷ ಕಾರ್ಯ ಪಡೆ (ಎಸ್‌ಎಎಫ್) ಯನ್ನು ಅಗತ್ಯ ಬಿದ್ದರೆ ರಾಜ್ಯಕ್ಕೆ ವಿಸ್ತರಣೆ ಮಾಡಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಶುಕ್ರವಾರ ಇಲ್ಲಿ ಎಸ್‌ಎಎಫ್ ಕಚೇರಿ ಹಾಗೂ ಪೊಲೀಸ್ ವಸತಿಗೃಹಗಳ ಸಮುಚ್ಚಯ ಉದ್ಘಾಟಿಸಿ ಅವರು ಮಾತನಾಡಿದರು.

'ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಸರ್ಕಾರ ಇಂತಹ ಒಂದು ಕಾರ್ಯಪಡೆ ರಚನೆ ಮಾಡಿದೆ. ದ್ವೇಷ ಭಾಷಣ, ಕೋಮು ಸಂಘರ್ಷ ಸೃಷ್ಟಿಸುವವರನ್ನು ಹತ್ತಿಕ್ಕುವ ದಿಸೆಯಲ್ಲಿ ಈ ಕಾರ್ಯಪಡೆ ಕಾರ್ಯ ನಿರ್ವಹಿಸಲಿದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರೋಗ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ನೆಲೆಸಬೇಕಾಗಿದೆ. ಈ ನೆಲ ಮತ್ತೆ ಕೋಮು ಸೌಹಾರ್ದಕ್ಕೆ ಸಾಕ್ಷಿಯಾಗಬೇಕಾಗಿದೆ ' ಎಂದರು.

ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿ ಈ ಕಾರ್ಯಪಡೆಯಲ್ಲಿ ಕಾರ್ಯ ನಿರ್ವಹಿಸಲಿದ್ದು, ಅಗತ್ಯ ಬಂದಲ್ಲಿ ಸಿಬ್ಬಂದಿ ಸಂಖ್ಯೆ ಹೆಚ್ಚಿಸಲಾಗುವುದು. ಆದರೆ ಇಲ್ಲಿನ ಜನರ ಸಹಕಾರ ಅಗತ್ಯ. ಈ ಕಾರ್ಯಪಡೆಗೆ ಹೆಚ್ಚು ಕೆಲಸ ಕೊಡದಂತೆ ನಡೆದು-ಕೊಳ್ಳಬೇಕು. ಬೇರೆ ಜಿಲ್ಲೆಗೆ ಇಂತಹ ಕಾರ್ಯಪಡೆಯ ಅಗತ್ಯ ಬರಲಾರದು ಎಂದು ಭಾವಿಸಿದ್ದೇವೆ. ಒಟ್ಟಿನಲ್ಲಿ ರಾಜ್ಯವು ಸರ್ವ ಜನಾಂಗದ ಶಾಂತಿಯ ತೋಟ ಆಗಬೇಕು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಈ ಕಾರ್ಯಪಡೆ ರಚನೆಯನ್ನು ಶೇ 90ರಷ್ಟು ಜನರು ಸ್ವಾಗತಿಸಿದ್ದಾರೆ. ಶೇ 5 ರಷ್ಟು ಜನರಿಗೆ ಇದರಿಂದ ತೊಂದರೆ ಆಗಬಹುದು. ಕಾನೂನು ಬಾಹಿರ ಚಟುವಟಿಕೆ ನಿಯಂತ್ರಿಸಿ ಜನರು ಶಾಂತಿಯಿಂದ ನೆಲಸಬೇಕು ಎಂಬುದು ನಮ್ಮ ಉದ್ದೇಶ' ಎಂದರು.

> **ಯಾವುದೇ ಧರ್ಮವನ್ನು ನಾವು ಗುರಿಯಾಗಿಸುತ್ತಿಲ್ಲ ಶೀಘ್ರದಲ್ಲೇ ಈ ಕುರಿತು ಚರ್ಚಿಸಲು ಶಾಂತಿ ಸಭೆಯನ್ನು ನಡೆಸಲಾಗುವುದು.**
> **ದಿನೇಶ್ ಗುಂಡೂರಾವ್,** ಜಿಲ್ಲಾ ಉಸ್ತುವಾರಿ ಸಚಿವ

> **ಸೈಬರ್ ಅಪರಾಧ ಹೆಚ್ಚುತ್ತಿದ್ದು, ತನಿಖೆಗೆ ಕಾನ್‌ಸ್ಟೆಬಲ್‌ಗಳನ್ನು ಸಜ್ಜುಗೊಳಿಸಲು ಎಲ್ಲ ಜಿಲ್ಲೆಗಳ ಎಸ್‌ಪಿ ಕಚೇರಿಯಲ್ಲಿ ತರಬೇತಿ ವಿಭಾಗ ಪ್ರಾರಂಭಿಸಲಾಗಿದೆ**
> **ಜಿ.ಪರಮೇಶ್ವರ,** ಗೃಹ ಸಚಿವ

ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ ಭಂಡಾರಿ, ಐವನ್ ಡಿಸೋಜ, ಶಾಸಕ ಅಶೋಕ ಕುಮಾರ್ ರೈ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ, ಎಡಿಜಿಪಿ ಎಸ್.ಮುರುಗನ್, ಐಜಿಪಿ ಅಮಿತ್ ಸಿಂಗ್, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ಕಾರ್ಯಪಡೆ ಮುಖ್ಯಸ್ಥರಾಗಿರುವ ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಪಾಲ್ಗೊಂಡಿದ್ದರು.

'ಬ್ರ್ಯಾಂಡ್ ಉಡುಪಿ ಘನತೆಗೆ ಧಕ್ಕೆ ತರುವ ಯತ್ನ'

ಉಡುಪಿ: ಕೋಮು ಸಂಘರ್ಷ ನಿಗ್ರಹಿಸುವ ನಿಟ್ಟಿನಲ್ಲಿ ಹೊಸದಾಗಿ ರಚಿಸಿರುವ ವಿಶೇಷ ಕಾರ್ಯ ಪಡೆಯ ವ್ಯಾಪ್ತಿಗೆ ಉಡುಪಿ ಜಿಲ್ಲೆಯನ್ನು ಸೇರ್ಪಡೆಗೊಳಿ-ಸುವ ಮೂಲಕ ರಾಜ್ಯದ ಕಾಂಗ್ರೆಸ್ ಸರ್ಕಾರವು ಉಡುಪಿ ಜಿಲ್ಲೆಯ ಘನತೆಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿದೆ. ಉಡುಪಿ ಜಿಲ್ಲೆಯನ್ನು ಕೋಮು ಸೂಕ್ಷ್ಮ ಪ್ರದೇಶ ಎಂದು ಬಿಂಬಿಸಲು ಅವಕಾಶ ನೀಡುವ ಪ್ರಶ್ನೆಯೇ ಇಲ್ಲ ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದ್ದಾರೆ.

ಹಲವು ದಶಕಗಳಿಂದ ಯಾವುದೇ ಕೋಮು ಸಂಘರ್ಷದ ಘಟನೆಗಳು ಉಡುಪಿ ಜಿಲ್ಲೆಯಲ್ಲಿ ವರದಿಯಾಗಿಲ್ಲ. ರಾಜ್ಯ ಸರ್ಕಾರ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಅಭಿಪ್ರಾಯ, ಸಲಹೆ ಪಡೆಯದೆ, ಕಾನೂನು ಸುವ್ಯವಸ್ಥೆ ನಿಟ್ಟಿನಲ್ಲಿ ಚರ್ಚೆ ನಡೆಸದೆ ಏಕಪಕ್ಷೀಯವಾಗಿ ಈ ಕಾರ್ಯಪಡೆಯನ್ನು ಉಡುಪಿ ಜಿಲ್ಲೆಯ ಜನತೆಯ ಮೇಲೆ ಹೇರಿದೆ ಎಂದು ಅವರು ತಿಳಿಸಿದ್ದಾರೆ.

ಡಿಜಿಟಲ್ ಸುರಕ್ಷತಾ ಶಿಕ್ಷಣ ಕಡ್ಡಾಯ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಗಳಲ್ಲಿ ಆನ್‌ಲೈನ್ ಸುರಕ್ಷತೆಯ ಮಾಹಿತಿ ಒಳಗೊಂಡ ಪಾಠಗಳನ್ನು ಅಳವಡಿಸಿ, ಡಿಜಿಟಲ್ ಸುರಕ್ಷತಾ ಶಿಕ್ಷಣ ಕಡ್ಡಾಯಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಚೈಲ್ಡ್ ಫಂಡ್ ಇಂಡಿಯಾ ನಡೆಸಿದ ಅಧ್ಯಯನ ವರದಿ ಶಿಫಾರಸು ಮಾಡಿದೆ.

ಕರ್ನಾಟಕದಲ್ಲಿ ಆನ್‌ಲೈನ್ ಲೈಂಗಿಕ ಶೋಷಣೆ, ನಿಂದನೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಹೆಚ್ಚುತ್ತಿವೆ. ಇಂತಹ ಬೆದರಿಕೆಗಳನ್ನು ಪರಿಹರಿಸುವ ತುರ್ತು ಅಗತ್ಯವಿದೆ. ಮಕ್ಕಳ ಇಂಟರ್‌ನೆಟ್ ಬಳಕೆಯ ಮೇಲೆ ಪೋಷಕರು ನಿಗಾವಹಿಸಬೇಕು ಎಂದು ಹೇಳಿದೆ.

ಚಾಮರಾಜನಗರ, ರಾಯಚೂರು, ಚಿಕ್ಕಮಗಳೂರು, ಬೆಳಗಾವಿ, ಬೆಂಗಳೂರು ನಗರಗಳ ಶಾಲೆಗಳಲ್ಲಿನ 8-11, 12-14 ಮತ್ತು 15-18 ವರ್ಷದೊಳಗಿನ 903ಕ್ಕೂ ಹೆಚ್ಚು ಶಾಲಾ ಮಕ್ಕಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

ವರದಿಯ ಪ್ರಕಾರ 15–18 ವರ್ಷ ವಯಸ್ಸಿನ ಶೇ 5ರಷ್ಟು ಮಕ್ಕಳು ಆನ್‌ಲೈನ್‌ನಲ್ಲಿ ಅಸುರಕ್ಷಿತ ಅಥವಾ ಮುಜುಗರಕ್ಕೊಳಗಾಗಿದ್ದಾರೆ. ಈ ಪ್ರಕರಣಗಳಲ್ಲಿ ಇನ್‌ಸ್ಟಾಗ್ರಾಂ, ಗೇಮಿಂಗ್ ಪ್ಲಾಟ್‌ಫಾರ್ಮ್‌ಗಳ ಪಾಲು ಶೇ 77ರಷ್ಟು ಇದೆ. ಇಂತಹ ಅಪರಾಧ ಎಸಗುವವರು ಅಪರಿಚಿತರು ಎಂದು ಶೇ 53ರಷ್ಟು ಮಕ್ಕಳು, ಪರಿಚಿತರೇ ಅಪರಾಧ ಎಸಗು-ತ್ತಿದ್ದಾರೆ ಎಂದು ಶೇ 35ರಷ್ಟು ಮಕ್ಕಳು ಅಭಿಪ್ರಾಯ ನೀಡಿದ್ದಾರೆ. ಶೇ 12ರಷ್ಟು ಮಕ್ಕಳು ಎರಡೂ ಪ್ರಕಾರದ ವ್ಯಕ್ತಿಗಳಿಂದ ಕಹಿ ಅನುಭವ, ಶೇ 15ರಷ್ಟು ಮಕ್ಕಳು ಹಾನಿಯನ್ನು ಅನುಭವಿಸಿದ್ದಾರೆ. ಶೇ 34ರಷ್ಟು ಮಕ್ಕಳು ಈ ಕುರಿತು ಪೋಷಕರಿಗೆ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಶೇ 50ರಷ್ಟು ಮಕ್ಕಳು ತಮ್ಮ ಚಾಟ್‌ಗಳನ್ನು ಅಳಿಸಿಹಾಕಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

15 ವರ್ಷಕ್ಕಿಂತ ಕಡಿಮೆ ಇರುವ ಶೇ 90ರಷ್ಟು ಮಕ್ಕಳು, 15-18 ವರ್ಷದ ಒಳಗಿನ ಶೇ 99ರಷ್ಟು ಮಕ್ಕಳು ಮೊಬೈಲ್ ಫೋನ್ ಹಾಗೂ ಲ್ಯಾಪ್‌ಟಾಪ್ ಬಳಸು-ತ್ತಿದ್ದಾರೆ. ಕೋವಿಡ್ ನಂತರ ಶೇ 72ರಷ್ಟು ಮಕ್ಕಳು ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ ಎನ್ನುವ ಅಂಶಗಳನ್ನು ಅಧ್ಯಯನದ ವೇಳೆ ಪತ್ತೆ ಮಾಡಲಾಗಿದೆ.

ಪ್ರಮುಖ ಶಿಫಾರಸುಗಳು

- ಆನ್‌ಲೈನ್ ಲೈಂಗಿಕ ಶೋಷಣೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕಾರ್ಯಪಡೆ
- ಮಕ್ಕಳ ವಯಸ್ಸಿಗೆ ಅನುಗುಣವಾಗಿ ಡಿಜಿಟಲ್ ಸುರಕ್ಷತಾ ಪರಿಕರ ಅಭಿವೃದ್ಧಿ
- ಸುರಕ್ಷಿತ ಆನ್‌ಲೈನ್ ನಡವಳಿಕೆ, ಅಪಾಯಗಳ ಬಗ್ಗೆ ಪೋಷಕರು-ಮಕ್ಕಳ ನಡುವೆ ಮುಕ್ತ ಸಂವಹನ
- ಹಿರಿಯ ವಿದ್ಯಾರ್ಥಿಗಳಿಂದ ಕಿರಿಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ
- ಸಹಪಾಠಿಗಳ ಕಹಿ ಅನುಭವ ಹಂಚಿಕೆಗೆ ಸೂಕ್ತ ವೇದಿಕೆ ನಿರ್ಮಾಣ
- ಶಿಕ್ಷಕರು ಮತ್ತು ಸಲಹೆಗಾರರಿಗೆ ತರಬೇತಿ. ಶಾಲಾ ಹಂತದಲ್ಲೇ ವರದಿ ನೀಡುವ ಪದ್ಧತಿ ಅಳವಡಿಕೆ
- ಜಿಲ್ಲಾ ಮಟ್ಟದ ಸಹಾಯವಾಣಿಗಳು ಮತ್ತು ಬೆಂಬಲ ಕೇಂದ್ರಗಳ ಸ್ಥಾಪನೆ

ಅಧ್ಯಯನದ ಪ್ರಮುಖ ಅಂಶಗಳು

- ಸಾಮಾಜಿಕ ಜಾಲತಾಣಗಳ ಬಳಕೆ ಬಾಲಕರಲ್ಲೇ ಹೆಚ್ಚು
- ರಹಸ್ಯಗಳನ್ನು ಹಂಚಿಕೊಂಡವರ ಪ್ರಮಾಣ ಶೇ 30.5
- ಸ್ನೇಹಿತರೊಂದಿಗೆ ಅನುಭವ ವಿನಿಮಯ ಮಾಡಿಕೊಂಡವರು ಶೇ 24.2
- ಅಧ್ಯಯನದ ಸರಾಸರಿ ಸಮಯ ಶೇ 7ರಷ್ಟು ಕಡಿಮೆಯಾಗಿದೆ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald-Prajavani Relief Trust'**ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು **dept.finc@printersmysore.co.in**ಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಪುಸ್ತಕ ಖರೀದಿ: ಕಾನೂನು ತೊಡಕು ನಿವಾರಣೆಗೆ ಮನವಿ

ಬೆಂಗಳೂರು: 'ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಪುಸ್ತಕ ಖರೀದಿಗೆ ಎದುರಾಗಿರುವ ಕಾನೂನು ತೊಡಕುಗಳನ್ನು ನಿವಾರಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಮನವಿ ಮಾಡಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರ ಇತ್ತೀಚೆಗೆ ಹಮ್ಮಿಕೊಂಡಿದ್ದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, 'ಏಕಗವಾಕ್ಷಿ ಯೋಜನೆ ಮುಂದುವರಿಸಲು ಎದುರಾಗಿರುವ ಕಾನೂನು ತೊಡಕನ್ನು ಸರ್ಕಾರವು ತುರ್ತಾಗಿ ನಿವಾರಿಸಬೇಕು' ಎಂದು ಪ್ರಾಧಿಕಾರದ ಅಧ್ಯಕ್ಷ ಮಾನಸ ಮನವಿ ಮಾಡಿದ್ದರು. ಸಕಾರಾತ್ಮಕ-ವಾಗಿ ಸ್ಪಂದಿಸಿದ್ದ ಶಿವರಾಜ ತಂಗಡಗಿ, ಮುಖ್ಯಮಂತ್ರಿ ಗಮನಕ್ಕೆ ತರುವುದಾಗಿ ಹೇಳಿದ್ದರು. ಅದರಂತೆ ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ.

'ಈ ಯೋಜನೆಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಇರದ ಪರಿಣಾಮ ಗ್ರಂಥಾಲಯ ಕರವನ್ನು ಪುಸ್ತಕ ಖರೀದಿಗೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ತೊಡಕು ಸರಿಪಡಿಸಬೇಕು ಎಂದಿದ್ದಾರೆ.



ಸುಭಾಷಿತ

ಒಂದು ರಾಷ್ಟ್ರವನ್ನು ಚಿರಕಾಲ ಜನರು ಪ್ರೀತಿಸುವಂತೆ ಮಾಡುವುದು ಭಾಷಾ ಬಂಧನ ಮಾತ್ರ.
-ಪ್ರೇಮ್‌ಚಂದ್

ಏರ್ ಇಂಡಿಯಾ ವಿಮಾನ ದುರಂತ ಕಾರಣ ಪತ್ತೆ ಈ ಹೊತ್ತಿನ ಆದ್ಯತೆ

ಲಂಡನ್‌ಗೆ ತೆರಳಬೇಕಿದ್ದ ಏರ್ ಇಂಡಿಯಾ ವಿಮಾನವು ಗುಜರಾತ್‌ನ ಅಹಮದಾಬಾದ್ ವಿಮಾನ ನಿಲ್ದಾಣದಿಂದ ಆಗಸದತ್ತ ಜಿಗಿದ ಕೆಲವೇ ಕ್ಷಣಗಳಲ್ಲಿ ದುರಂತ ಅಂತ್ಯ ಕಂಡಿದೆ. ಈ ದುರ್ಘಟನೆಯಲ್ಲಿ 265ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದಾರೆ. ಇವರಲ್ಲಿ ಪ್ರಯಾಣಿಕರು, ವಿಮಾನದ ಸಿಬ್ಬಂದಿ, ವೈದ್ಯಕೀಯ ವಿದ್ಯಾರ್ಥಿಗಳು ಸೇರಿದ್ದಾರೆ. ಇದು ದೇಶ ಕಂಡ ಅತಿಹೆಚ್ಚು ವಿಮಾನ ದುರಂತಗಳ ಪೈಕಿ ಒಂದು. ದುರಂತಕ್ಕೆ ಈಡಾದ ವಿಮಾನವು ಬಿ.ಜೆ. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ನಿಲಯದ ಕ್ಯಾಂಟೀನ್‌ಗೆ ಅಪ್ಪಳಿಸಿದೆ. ಇದರಿಂದಾಗಿ ಅಲ್ಲಿನ ಕೆಲವು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದಾರೆ. ಗಾಯಗೊಂಡ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ದುರಂತದಲ್ಲಿ ಪ್ರಾಣ ಕಳೆದುಕೊಂಡವರ ನಿರ್ದಿಷ್ಟ ಸಂಖ್ಯೆ ಇನ್ನಷ್ಟೇ ಸ್ಪಷ್ಟವಾಗಬೇಕಿದೆ. ವಿಮಾನದಲ್ಲಿ ಇದ್ದ ಒಬ್ಬ ಪ್ರಯಾಣಿಕ ಪವಾಡಸದೃಶ ರೀತಿಯಲ್ಲಿ ಪ್ರಾಣ ಉಳಿಸಿಕೊಂಡಿದ್ದಾರೆ. ಏರ್ ಇಂಡಿಯಾ ವಿಮಾನಯಾನ ಕಂಪನಿಗೆ ಸೇರಿದ ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನವು ಟೇಕ್ ಆಫ್ ಆದ ನಂತರದಲ್ಲಿ ಜನವಸತಿ ಪ್ರದೇಶದಲ್ಲಿ ಬೀಳುವ ಮುನ್ನ ಕೆಲವು ಕ್ಷಣ ಮಾತ್ರ ಆಗಸದಲ್ಲಿ ಇತ್ತು. ವಿಮಾನವು ಕೆಳಕ್ಕೆ ಜಾರಿದ ಹಾಗೂ ನೆಲಕ್ಕೆ ಅಪ್ಪಳಿಸಿ ಬೆಂಕಿಯುಂಡೆಯಾಗಿ ಆದ ದೃಶ್ಯಗಳು ದೇಶವನ್ನು ಆಘಾತಕ್ಕೆ ನೂಕಿವೆ. ವಿದ್ಯಾರ್ಥಿ ನಿಲಯದಲ್ಲಿ ಉಂಟಾದ ಹಾನಿಯ ಚಿತ್ರಗಳು ದುರಂತದ ತೀವ್ರತೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸಿವೆ.



ಈ ದುರಂತಕ್ಕೆ ನಿಖರ ಕಾರಣ ಏನು ಎಂಬುದನ್ನು ಗೊತ್ತು ಮಾಡಿಕೊಳ್ಳಬೇಕಿರುವುದು ಭಾರತದ ವಿಮಾನಯಾನ ವಲಯಕ್ಕೆ ಮಾತ್ರವೇ ಅಲ್ಲದ, ಇಡೀ ಜಗತ್ತಿಗೆ ಮುಖ್ಯವಾಗುತ್ತದೆ

ವಿಮಾನ ದುರಂತಕ್ಕೆ ಕಾರಣ ಏನು ಎಂಬ ಬಗ್ಗೆ ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ತನಿಖೆ ನಡೆಸುತ್ತಿದೆ. ವಿಮಾನದ ಕಪ್ಪುಪೆಟ್ಟಿಗೆ ಶುಕ್ರವಾರ ಸಿಕ್ಕಿದ್ದು, ಅಪಘಾತಕ್ಕೆ ಕಾರಣ ಪತ್ತೆ ಮಾಡುವಲ್ಲಿ ಅಧಿಕಾರಿಗಳಿಗೆ ಇದು ನೆರವಾಗಲಿದೆ. ವಿಮಾನದಲ್ಲಿ ಮಿತಿಗಿಂತ ಹೆಚ್ಚು ಭಾರ ಹೊರಿಸಲಾಗಿತ್ತೇ, ವಿಮಾನದ ಎರಡೂ ಎಂಜಿನ್‌ಗಳು ವಿಫಲಗೊಂಡವೇ, ವಿಮಾನಕ್ಕೆ ಹಕ್ಕಿ ಬಡಿಯಿತೇ ಎಂಬ ಅನುಮಾನಗಳನ್ನು ತಜ್ಞರು ವ್ಯಕ್ತಪಡಿಸಿದ್ದಾರೆ. ವಿಮಾನದಲ್ಲಿ ಇದ್ದ ಇಂಧನದ ಪ್ರಮಾಣ, ವಾತಾವರಣದಲ್ಲಿನ ತಾಪಮಾನ, ವಿಮಾನವು ಪತನಕ್ಕೂ ಮೊದಲು ತಲುಪಿದ್ದ ಎತ್ತರ ಅಥವಾ ಆ ಕ್ಷಣ ಒದಗಿದ್ದಿರಬಹುದಾದ ತಾಂತ್ರಿಕ ದೋಷದ ಬಗ್ಗೆಯೂ ಅನುಮಾನಗಳು ವ್ಯಕ್ತವಾಗಿವೆ. ಈ ಅಪಘಾತವು ಡ್ರೀಮ್‌ಲೈನರ್ ಮಾದರಿಯ ವಿಮಾನಗಳು ಸೇರಿದಂತೆ ಬೋಯಿಂಗ್ ಕಂಪನಿಯ ವಿಮಾನಗಳ ಸುರಕ್ಷತೆ ಬಗ್ಗೆ ಮತ್ತೆ ಚರ್ಚೆಗಳು ನಡೆಯುವಂತೆ ಮಾಡಿದೆ. ಡ್ರೀಮ್‌ಲೈನರ್ ಮಾದರಿಯ ವಿಮಾನವು ಹೀಗೆ ಪತನಗೊಂಡಿರುವುದು ಇದೇ ಮೊದಲಾಗಿದ್ದರೂ ಇದು ಎಷ್ಟು ಸುರಕ್ಷಿತ ಎಂಬ ಪ್ರಶ್ನೆಗಳು ಮೊದಲಿನಿಂದಲೂ ಇವೆ. ಬೋಯಿಂಗ್ ಕಂಪನಿಯಲ್ಲಿ ಹಿಂದೆ ಕೆಲಸ ಮಾಡಿದ್ದ ಒಬ್ಬ ಎಂಜಿನಿಯರ್ ಕೂಡ ಈ ಪ್ರಶ್ನೆ ಎತ್ತಿದ್ದರು. ಇಂಡೊನೇಷ್ಯಾ ಮತ್ತು ಇಥಿಯೋಪಿಯಾದಲ್ಲಿ ಕ್ರಮವಾಗಿ 2018 ಹಾಗೂ 2019ರಲ್ಲಿ ನಡೆದ 737 ಮ್ಯಾಕ್ಸ್ ಜೆಟ್‌ಲೈನರ್ ವಿಮಾನ ದುರಂತಗಳಿಗೆ ವಿಮಾನದಲ್ಲಿ ಇದ್ದ ಲೋಪ ಕಾರಣ ಎನ್ನಲಾಗಿದೆ. ಅಮೆರಿಕದ ನ್ಯಾಯ ಇಲಾಖೆಯ ಜೊತೆ ಈಚೆಗೆ ಒಪ್ಪಂದ ಮಾಡಿಕೊಂಡಿರುವ ಕಂಪನಿಯು ಅಪಘಾತಗಳಿಗೆ ಸಂಬಂಧಿಸಿದಂತೆ ಕಾನೂನಿನ ಕ್ರಮದಿಂದ ತಪ್ಪಿಸಿಕೊಳ್ಳಲು ಯತ್ನ ನಡೆಸಿದೆ.

ಅಮೆರಿಕದ ವೈಮಾನಿಕ ಆಡಳಿತ ವಿಭಾಗವು (ಎಫ್‌ಎಎ) ವಿಮಾನ ತಯಾರಿಕೆ ಹಾಗೂ ವಿನ್ಯಾಸ ಜೋಡಣೆ ಪ್ರಕ್ರಿಯೆ ಬಗ್ಗೆ ತನಿಖೆ ಆರಂಭಿಸಿದೆ. ಬೋಯಿಂಗ್‌ನ ಘಟಕಗಳಲ್ಲಿ ಸುರಕ್ಷತೆಗೆ ಸಂಬಂಧಿಸಿದ ಕೆಲವು ಸಮಸ್ಯೆಗಳು ಇರುವುದನ್ನು ಎಫ್‌ಎಎ ನಡೆಸಿದ ತಪಾಸಣೆಯಲ್ಲಿ ಕಂಡುಕೊಂಡ ನಂತರ ಈ ತನಿಖೆ ಶುರುವಾಗಿದೆ. ದೆಹಲಿಯಲ್ಲಿ ಈಚೆಗೆ ತೆರೆದಿರುವ ಅತ್ಯಾಧುನಿಕ ಡಿಜಿಟಲ್ ವೈಮಾನಿಕ ದತ್ತಾಂಶ ಸಂಗ್ರಹಣಾ ವ್ಯವಸ್ಥೆ ಹಾಗೂ ಕಾಕ್‌ಪಿಟ್ ಧ್ವನಿ ದಾಖಲು ಪ್ರಯೋಗಾಲಯದ ಮೂಲಕ ತನಿಖೆ ನಡೆಸಲು ಕೇಂದ್ರ ಸರ್ಕಾರದ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ ಮುಂದಾಗಿದೆ. ವಿಮಾನ ದುರಂತದ ಬಗ್ಗೆ ಏರ್ ಇಂಡಿಯಾ ಹಾಗೂ ಬೋಯಿಂಗ್ ಕಂಪನಿಯಿಂದ ಪ್ರತಿಕ್ರಿಯೆ ಬಂದಿಲ್ಲ. ಬೋಯಿಂಗ್ ಕಂಪನಿಯ ಡ್ರೀಮ್‌ಲೈನರ್ ಮಾದರಿಯು ಅತ್ಯಂತ ಹೆಚ್ಚು ಮಾರಾಟವಾಗುವ ಅಗಲ ದೇಹದ ಪ್ರಯಾಣಿಕ ವಿಮಾನ. ಈ ವಿಮಾನದಲ್ಲಿ ಇದ್ದ ಪೈಲಟ್‌ಗಳಿಗೆ ಬಹಳ ಅನುಭವ ಇತ್ತು. ಈ ದುರಂತಕ್ಕೆ ನಿಖರ ಕಾರಣ ಏನು ಎಂಬುದನ್ನು ಗೊತ್ತು ಮಾಡಿಕೊಳ್ಳಬೇಕಿರುವುದು ಭಾರತದ ವಿಮಾನಯಾನ ವಲಯಕ್ಕೆ ಮಾತ್ರವೇ ಅಲ್ಲದೆ, ಇಡೀ ಜಗತ್ತಿಗೆ ಮುಖ್ಯವಾಗುತ್ತದೆ. ವಿಮಾನಯಾನ ವಲಯವು ವಿಸ್ತರಣೆ ಕಾಣುತ್ತಿರುವ ಈ ಹೊತ್ತಿನಲ್ಲಿ ವಿಮಾನ ಪ್ರಯಾಣ ಸುರಕ್ಷಿತ ಎಂಬ ವಿಶ್ವಾಸ ಮೂಡಿಸಬೇಕು.

ಚಿಂತನೆಯಲ್ಲಿನ ಮಡಿವಂತಿಕೆಯ ಅತಿರೇಕವು ಭಾರತೀಯ ಸಮಾಜದ ಮುಖ್ಯ ಸಮಸ್ಯೆ

ಕ್ರೌರ್ಯ: ಶಿಕ್ಷಣದಲ್ಲಿ ಬದಲಾವಣೆ ಅಗತ್ಯ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಗಂಡನನ್ನು ಹೆಂಡತಿ ಕೊಲ್ಲಿಸುವ ಅಥವಾ ಪ್ರೇಮಿಯನ್ನು ಪ್ರಿಯಕರ ಕೊಲ್ಲಿಸುವ ತೆರನಾದ ಅಪರಾಧ ಪ್ರಕರಣಗಳು ಇತ್ತೀಚೆಗೆ ಹೆಚ್ಚು ವರದಿಯಾಗುತ್ತಿವೆ. ಇಂಥ ಪ್ರಕರಣಗಳಲ್ಲಿ ಲೈಂಗಿಕ ಶಿಸ್ತಿನ ಅಭಾವದ ನಾನಾ ರೂಪಗಳು ಕೆಲಸ ಮಾಡಿರುವುದು ಬಹುತೇಕ ಪ್ರಕರಣಗಳಲ್ಲಿ ಹತ್ಯೆಗೆ ಪ್ರಚೋದನೆ ಎನ್ನುವುದು ತನಿಖಾಧಿಕಾರಿಗಳ ವಿವರಣೆ ಆಗಿರುತ್ತದೆ. ಇಂಥ ಪ್ರಕರಣಗಳು ಇತರೆ ಹತ್ಯೆಗಳಿಗಿಂತ ಹೆಚ್ಚು ಕ್ರೂರವಾದದ್ದಾಗಿವೆ. ಇಷ್ಟಪಟ್ಟ ದೇಹವನ್ನು– ಪಾರಂಪರಿಕವಾಗಿ, ಸಾಮಾಜಿಕವಾಗಿ, ಶಾಸನಾತ್ಮಕವಾಗಿ ತಾನು ಉತ್ತರದಾಯಿಯಾಗಿರುವ ದೇಹವನ್ನು– ನಾಶಪಡಿಸುವುದಕ್ಕೆ ಬೇಕಾದ ಮನಃಸ್ಥಿತಿಯನ್ನು ತಂದುಕೊಳ್ಳುವುದು ಸುಲಭವಲ್ಲ.

ಸ್ವಹತ್ಯೆ ಅಥವಾ ಇನ್ನೊಬ್ಬರ ಹತ್ಯೆಯ ಹಿಂದಿರುವುದು ಸಮಸ್ಯೆಯ ಪರಿಹಾರಕ್ಕೆ 'ಹತ್ಯೆ'ಯ ಹೊರತಾದ ಬೇರೆ ಯಾವ ಮಾರ್ಗವೂ ಇಲ್ಲ ಎಂಬ ಮನಃಸ್ಥಿತಿಯ ಪ್ರಚೋದನೆಯಾಗಿರುತ್ತದೆ. ಇಂಥ ಮನಃಸ್ಥಿತಿಯ ನಿರ್ಮಾಣದ ಹಿಂದೆ ಇರುವ ಒಂದು ಪ್ರಮುಖ ಕಾರಣ ಫ್ರೆಡ್ ಡಬ್ಲ್ಯು. ರಿಗ್ಸ್ ಹೇಳುವ, 'ಪ್ರಿಸ್ಮ್ಯಾಟಿಕ್ ಸೊಸೈಟಿ'ಯ ಲಕ್ಷಣವಾಗಿದೆ. ಪ್ರಿಸ್ಮ್ಯಾಟಿಕ್ ಸೊಸೈಟಿಯಲ್ಲಿ ಬಹಿರಂಗದ ಕಾಣಿಸಿಕೊಳ್ಳುವಿಕೆಗಳು ಆಧುನಿಕವಾಗಿರುತ್ತವೆ; ಚಿಂತನೆಗಳು ಸಾಂಪ್ರದಾಯಿಕವಾಗಿರುತ್ತವೆ. ಮದುವೆಯಂತಹ ವಿಷಯಗಳಲ್ಲಿ ಹೆತ್ತವರು ಮಕ್ಕಳ ಅಭಿಪ್ರಾಯವನ್ನು ಸ್ವೀಕರಿಸಲು ತಯಾರಿಲ್ಲದ ಸಮಾಜವಿದು. ತಾನು ಯಾರನ್ನು ಮದುವೆ ಆಗಬಯಸಿದ್ದೇನೆ ಎಂದು ಹೇಳಲಿಕ್ಕೇ ಅವಕಾಶ ಇಲ್ಲದ ಸ್ಥಿತಿಯು ಸಂಗಾತಿಯನ್ನು ಇಲ್ಲವಾಗಿಸುವುದಕ್ಕೆ ಪರೋಕ್ಷ ಪ್ರಚೋದನೆಯೂ ಆಗುತ್ತದೆ. ಲೈಂಗಿಕ ಪ್ರಚೋದನೆಗೆ ಪೂರಕವಾಗಿ ಕಾಣಿಸಿಕೊಳ್ಳುವುದರ ಬಗ್ಗೆಯಾಗಲಿ, ಲೈಂಗಿಕ ಸಂಕೇತಗಳನ್ನು ಪ್ರದರ್ಶಿಸುವುದಕ್ಕಾಗಲಿ ಸಮಾಜಕ್ಕೆ ಆಕ್ಷೇಪವಿಲ್ಲ. ಆದರೆ, ವೈಯಕ್ತಿಕ ಜೀವನದಲ್ಲಿ ಲೈಂಗಿಕ ಮಡಿವಂತಿಕೆಯನ್ನು ಬಯಸುತ್ತದೆ. ಈ ಪದ್ಧತಿ ಬದಲಾಗಬೇಕು.

ಭಾರತೀಯ ಕುಟುಂಬ ಜೀವನದ ಪರಿಕಲ್ಪನೆಗಳು ಶಿಸ್ತುಬದ್ಧವೂ ವ್ಯವಸ್ಥಿತವೂ ಆಗಿವೆ. ಚಿಂತನೆಯಲ್ಲಿನ ಮಡಿವಂತಿಕೆಯ ಅತಿರೇಕವೇ ಭಾರತೀಯ ಸಮಾಜದ ಸಮಸ್ಯೆಯಾಗಿದೆ. ಕಾಣಿಸಿಕೊಳ್ಳುವಲ್ಲಿ ಸಾಂಪ್ರದಾಯಿಕರಾಗಿಯೂ ಚಿಂತನೆಯಲ್ಲಿ ಆಧುನಿಕರಾಗಿಯೂ ಇರಬೇಕಾದುದು ಭಾರತದ ಅವಶ್ಯಕತೆಯಾಗಿದೆ. ಚಿಂತನೆಯಲ್ಲಿ ಆಧುನಿಕರಾಗಿದ್ದಾಗ ಆಧುನಿಕತೆ ಮತ್ತು ಆಧುನಿಕತೆಯ ವಿಕೃತಿಗಳ ನಡುವಿನ ವ್ಯತ್ಯಾಸದ ಸ್ಪಷ್ಟತೆ ಇರುತ್ತದೆ. ಪರಸ್ಪರ ವಿರುದ್ಧವಾಗಿ ಕಾಣಿಸುವ ಈ ಎರಡೂ ಸಂಗತಿಗಳು ಸಾಧ್ಯವಾಗುವುದು ಹೇಗೆ ಎಂಬ ಪ್ರಶ್ನೆ ಸಹಜ. ಆದರೆ, ಕುಟುಂಬ ಜೀವನದ ಶಿಸ್ತು ಅನುಕರಣೆಯಿಂದ ಬಾರದೆ ಅರಿವಿನಿಂದ ಬಂದಾಗ ಇವೆರಡೂ ಸಾಧ್ಯ ಆಗುತ್ತವೆ. ಅರಿವು ನೇರವಾಗಿ ಶೈಕ್ಷಣಿಕ ವ್ಯವಸ್ಥೆಯನ್ನು ಮುಖ್ಯವಾಗಿ ಅವಲಂಬಿಸಿದೆ. 'ಶಿಕ್ಷಣ' ಎನ್ನುವಲ್ಲಿ 'ಔಪಚಾರಿಕ' ಮತ್ತು 'ಅನೌಪಚಾರಿಕ' ಶಿಕ್ಷಣಗಳೆರಡೂ ಸೇರಿಕೊಳ್ಳುತ್ತವೆ.

ಇತಿಹಾಸದುದ್ದಕ್ಕೂ ಲೈಂಗಿಕ ಸಂಬಂಧಗಳು ಸಾಮಾನ್ಯವಾಗಿ ಮೂರು ರೂಪದಲ್ಲಿವೆ. ಮೊದಲನೆಯದು, ಲೈಂಗಿಕತೆಯ ಕ್ರೌರ್ಯದ ರೂಪ. ಯುದ್ಧಗಳು ನಡೆದಾಗ ಆಕ್ರಮಣಕ್ಕೊಳಗಾದ ರಾಜ್ಯದಲ್ಲಿ ನಡೆಸಲಾಗುತ್ತಿದ್ದ ಲೈಂಗಿಕ ದೌರ್ಜನ್ಯಗಳು ಈ ರೂಪದವು. ಎರಡನೆಯದು, ಕೀಳು ಅಭಿರುಚಿಯ ರೂಪದಲ್ಲಿ ಲೈಂಗಿಕತೆ ಪ್ರಕಟವಾಗುತ್ತದೆ. ಇದನ್ನು ಕೆಲವರ ದೈನಂದಿನ ಮಾತುಗಾರಿಕೆಯಲ್ಲೂ ಗುರುತಿಸಬಹುದು. ಮೂರನೆಯದು, ಶೃಂಗಾರದ ರೂಪದಲ್ಲಿ ಪ್ರಕಟಗೊಳ್ಳುವ ಲೈಂಗಿಕತೆ. ಕ್ರೌರ್ಯ ರೂಪದ ಲೈಂಗಿಕತೆಯು ದೌರ್ಜನ್ಯಗಳನ್ನು ಹೆಚ್ಚಿಸಿದರೆ, ಕೀಳು ಅಭಿರುಚಿ ರೂಪದ ಲೈಂಗಿಕತೆಯು ಮನುಷ್ಯರ ಅಭಿರುಚಿಯನ್ನೂ ಚಿಂತನೆಯನ್ನೂ ಕೆಡಿಸುತ್ತದೆ. ಹಾಗಾಗಿ, ನಾಗರಿಕ ವ್ಯವಸ್ಥೆ ಮೊದಲೆರಡನ್ನೂ ತಿರಸ್ಕರಿಸಿ, ಶೃಂಗಾರದ ರೂಪವನ್ನು ಸ್ವೀಕರಿಸಿದೆ. ಲೈಂಗಿಕತೆಯು ಶೃಂಗಾರದ ರೂಪದಲ್ಲಿ ಪ್ರಕಟವಾದಾಗ ಆಪ್ತವಾಗಿರುತ್ತದೆ ಮತ್ತು ಮನುಷ್ಯ ಸಂಬಂಧಗಳನ್ನು ಬಲಗೊಳಿಸುತ್ತದೆ. ಈ ಎಚ್ಚರ ಸಾಮಾಜಿಕ ನಡವಳಿಕೆಯಲ್ಲೂ ಶೈಕ್ಷಣಿಕ ನಿರೂಪಣೆಯಲ್ಲೂ ಕಂಡುಬರಬೇಕು.

ಮೂರು ದಶಕಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಬದಲಾಗಿರುವ ಆರ್ಥಿಕ– ಸಾಮಾಜಿಕ ಬದುಕು ಹೆಚ್ಚು ಸುಲಲಿತವಾಗಿದೆ. ಮಕ್ಕಳಲ್ಲಿ, ಯುವಜನರಲ್ಲಿ ಜೀವನದಿಂದಲೇ ಉಂಟಾಗುವ ಕಲಿಕಾ ಅನುಭವ ಕಡಿಮೆಯಾಗುತ್ತಾ ಹೋಗಿದೆ. ಮಗುವೊಂದರ ಶಾಲಾ ಸಿದ್ಧತೆ ಎಂದರೆ ತಂದೆ ಹಣ ಹೊಂದಿಸುವುದು, ಟಿಫನ್ ಬಾಕ್ಸ್ ಅನ್ನೂ ತಾಯಿಯೇ ತುಂಬಿ ವಸ್ತ್ರ ತೊಡಿಸಿ ಶಾಲೆಗೆ ತಲುಪಿಸುವುದಾಗಿರುತ್ತದೆ. ನಡೆದಾಡುವ ಅನುಭವವಿಲ್ಲ. ಪರಿಸರದ ಅನುಭವವಿಲ್ಲ. ಪ್ರಾಣಿಗಳ ಒಡನಾಟವೂ ಇಲ್ಲ. ಒಂದೇ ರೀತಿಯ ಕೌಟುಂಬಿಕ ನೆಲೆಯ ಕೆಲವೇ ಗೆಳೆಯರೊಂದಿಗೂ ಜಾಸ್ತಿ ಒಡನಾಟವಿಲ್ಲ. ಅಂದರೆ, ಅಂಕಗಳ ಒತ್ತಡ ಹೆಚ್ಚಾಗಿ, ಮಕ್ಕಳಿಗೆ ಪರಿಸರದಿಂದಲೇ ಅನುಭವ ಉಂಟಾಗಲು ಇರುವ ಅವಕಾಶಗಳು ಕಡಿಮೆಯಾಗಿವೆ.

ಬದುಕಿನಿಂದ ಗಳಿಕೆಯಾಗುವ ಅನುಭವಗಳು ಕಡಿಮೆಯಾದಾಗ ಕಲಿಕೆಯ ಮೂಲಕ ದೊರೆಯುವ ಅನುಭವಗಳು ಹೆಚ್ಚಾಗಬೇಕು. ಆಗ ಚಿಂತನೆಗಳು ಬೆಳೆಯುತ್ತವೆ. ಚಿಂತನೆಗಳು ಬೆಳೆದಾಗ ಒಂದು ಸನ್ನಿವೇಶವನ್ನು ಗ್ರಹಿಸುವ ಸಾಮರ್ಥ್ಯ ವೃದ್ಧಿಯಾಗುತ್ತದೆ. ಸನ್ನಿವೇಶವನ್ನು ಸಮಗ್ರವಾಗಿ ಗ್ರಹಿಸಬಲ್ಲವರಿಗೆ ಸಮಸ್ಯೆಯ ಪರಿಹಾರದ ಸಾಧ್ಯತೆಗಳೂ ಹೆಚ್ಚುತ್ತವೆ. ತಾನು ಆಯ್ಕೆ ಮಾಡಿಕೊಳ್ಳುವ ಸಮಸ್ಯೆ ಪರಿಹಾರದ ವಿಧಾನವು ಉಂಟು ಮಾಡಬಹುದಾದ ಅಪಾಯದ ಅರಿವು ಹೊಳೆಯುತ್ತದೆ. ಉದಾಹರಣೆಗೆ ಹೇಳುವುದಾದರೆ, ವೈಯಕ್ತಿಕ ಸಮಸ್ಯೆಗೆ ಸ್ವಹತ್ಯೆ ಪರಿಹಾರ ಎಂದು ಭಾವಿಸುವ ಕ್ರಮವೇ ತಪ್ಪು. 'ಪರಿಹಾರ' ಎಂಬ ಪರಿಕಲ್ಪನೆ ಬದುಕಿರುವಾಗ ಮಾತ್ರ ಅನ್ವಯಿಸುವುದು. ವ್ಯಕ್ತಿಯೇ ಇಲ್ಲದ ಮೇಲೆ ಪರಿಹಾರದ ಪರಿಕಲ್ಪನೆಯೇ ಇರುವುದಿಲ್ಲ ಎಂಬ ಅರಿವು ಸ್ವಹತ್ಯೆಯ ಮನಃಸ್ಥಿತಿಯನ್ನು ಬದಲಿಸಬಲ್ಲದು.

ಲೈಂಗಿಕ ಹಿನ್ನೆಲೆಯ ಹತ್ಯೆಯಂಥ ಯೋಜನೆಗಳಲ್ಲಿ ಲೈಂಗಿಕ ಕಾಮನೆಗಳ ತೀವ್ರ ಒತ್ತಡದ ಪ್ರಚೋದನೆಗಳ ಪಾತ್ರ ಹೆಚ್ಚಾಗಿರುತ್ತದೆ. ಆದರೆ, ವ್ಯಕ್ತಿಯ ಜೀವನದುದ್ದಕ್ಕೂ ಲೈಂಗಿಕ ಕಾಮನೆಗಳ ಒತ್ತಡ ಅದೇ ರೀತಿ ಇರುವುದಿಲ್ಲ. ಲೈಂಗಿಕ ಕಾಮನೆಗಳ ಒತ್ತಡ ಕಡಿಮೆಯಾದಂತೆಲ್ಲಾ ಕಾಡತೊಡಗುವ ಅಪರಾಧಿ ಪ್ರಜ್ಞೆ ತನ್ನನ್ನು ತಾನೇ ಕ್ಷಮಿಸಿಕೊಳ್ಳಲಾಗದ ಅಸಹನೀಯ ಬದುಕಾಗಿ ಮಾರ್ಪಡುವುದು ಒಂದು ಕಡೆಯದಾದರೆ, ಕಾನೂನು ವ್ಯವಸ್ಥೆ ದುರ್ಬಲವಲ್ಲ ಎಂಬ ಅರಿವು ಮತ್ತೊಂದೆಡೆ ಇರಬೇಕಾಗುತ್ತದೆ. ಎಲ್ಲವನ್ನೂ ಲಘುವಾಗಿ ತೆಗೆದುಕೊಳ್ಳುವ ಜೀವನಶೈಲಿಯು ತಾನು ಯೋಚಿಸಿದ ವಾಮಮಾರ್ಗಗಳನ್ನು ಪತ್ತೆ ಮಾಡುವ ಶಕ್ತಿ ಪೊಲೀಸ್ ವ್ಯವಸ್ಥೆಗಿದೆ ಎಂಬ ಅರಿವಿಲ್ಲದಂತೆ ಮಾಡುತ್ತದೆ. ಯಾರಲ್ಲಿ ಚಿಂತನೆಯ ಶಕ್ತಿ ಗಟ್ಟಿಯಾಗಿರುತ್ತದೆಯೋ ಅವರಿಗೆ ಈ ಎಲ್ಲ ಆಯಾಮಗಳೂ ಹೊಳೆಯುತ್ತವೆ.

'ಹಿಮಾಲಯ ಪರ್ವತದ ಉಪಯೋಗವೇನು?' ಎಂದು ಕೇಳುವುದಕ್ಕೂ 'ಹಿಮಾಲಯ ಪರ್ವತಗಳು ಇಲ್ಲದಿದ್ದರೆ ದೇಶದ ಸ್ಥಿತಿ ಹೇಗಿರುತ್ತಿತ್ತು?' ಎಂದು ಕೇಳುವುದಕ್ಕೂ ವ್ಯತ್ಯಾಸವಿದೆ. 'ಹಿಮಾಲಯ ಪರ್ವತದ ಉಪಯೋಗವೇನು?' ಎಂದು ಕೇಳಿದಾಗ ವಿದ್ಯಾರ್ಥಿ ಪುಸ್ತಕ ನೋಡಿ ಉತ್ತರಿಸುತ್ತಾನೆ. 'ಹಿಮಾಲಯ ಇಲ್ಲದೇ ಇದ್ದರೆ ದೇಶದ ಸ್ಥಿತಿ ಹೇಗಿರುತ್ತಿತ್ತು?' ಎಂದು ಕೇಳಿದಾಗ ಹಿಮಾಲಯ ಇಲ್ಲದೇ ಇರುವ ಸನ್ನಿವೇಶ ಕಲ್ಪಿಸಿಕೊಂಡು ಉತ್ತರ ಕೊಡಬೇಕಾಗುತ್ತದೆ. ಆಗ ಸಿಗುವ ಉತ್ತರವೂ ಹಿಮಾಲಯ ಪರ್ವತದ ಉಪಯೋಗವನ್ನೇ ಹೇಳುತ್ತದೆ. ಆದರೆ, ಪ್ರಶ್ನೆಯನ್ನು ಭಿನ್ನವಾಗಿ ಕೇಳಿದಾಗ ಸನ್ನಿವೇಶದ ಗ್ರಹಿಕೆ– ಚಿಂತನೆಯ ಸಾಮರ್ಥ್ಯ ಹೆಚ್ಚಾಗುತ್ತದೆ. ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸುವುದರಲ್ಲಿ ಬಹುಮುಖಿ ಉತ್ತರಗಳನ್ನು ಬಯಸುವ ಶೈಕ್ಷಣಿಕ ಪ್ರಶ್ನೆಗಳಿಗೆ ಪ್ರಾಮುಖ್ಯ ಇದೆ.

ಚಿಂತನಾ ಸಾಮರ್ಥ್ಯದ ಹೆಚ್ಚಳಕ್ಕೂ ನೈತಿಕ ಶಿಕ್ಷಣಕ್ಕೂ ಸಂಬಂಧವಿದೆ. ಸಮಾಜ ಚೆನ್ನಾಗಿರಬೇಕಾದರೆ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ನೀಡಬೇಕು ಎನ್ನಲಾಗುತ್ತದೆ. ಆದರೆ, ನೈತಿಕತೆಯು ವಾಸ್ತವದಲ್ಲಿ ಸ್ಥಿರೀಕರಿಸಲಾದ ಸಿದ್ಧಾಂತವಾಗಿ ಅನ್ವಯವಾಗುವುದಿಲ್ಲ. ಬೇರೆ ಬೇರೆ ಸನ್ನಿವೇಶದಲ್ಲಿ ಅನುಸರಿಸಬೇಕಾದ ನೈತಿಕ ಮೌಲ್ಯಗಳು ಬೇರೆ ಬೇರೆಯಾಗಿಯೂ ಇರುತ್ತವೆ. ಯಾವ ಸನ್ನಿವೇಶದಲ್ಲಿ ಯಾವುದು ನೈತಿಕತೆಯಾಗಿರುತ್ತದೆ ಎಂದು ಅರ್ಥೈಸುವ ಸಾಮರ್ಥ್ಯ ಇರಬೇಕು. ಈ ರೀತಿ ಅರ್ಥೈಸುವ ಸಾಮರ್ಥ್ಯವು ಚಿಂತನೆಗಳು ಸಶಕ್ತವಾಗಿದ್ದಾಗಷ್ಟೇ ಸಾಧ್ಯವಾಗುತ್ತದೆ. ಇದೆಲ್ಲ ಆಗಬೇಕಾದರೆ, ಅಂಕ ಗಳಿಕೆಯೇ ಶಿಕ್ಷಣ ಎಂಬ ಕಲ್ಪನೆಯಿಂದ ಸಮಾಜ ಹೊರಬರಬೇಕು. ಪಠ್ಯಪುಸ್ತಕಗಳು, ಅಧ್ಯಾಪಕರ ಬೋಧನಾ ಪದ್ಧತಿಗಳು ಬದಲಾಗಬೇಕು. ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡುವ ಪದ್ಧತಿಗಳೂ ಬದಲಾಗಬೇಕು. ಈ ಬಗ್ಗೆ ಗಂಭೀರವಾಗಿ ಕೆಲಸ ಮಾಡದೇ ಇದ್ದರೆ ಮುಂಬರುವ ಸಮಾಜ ಇನ್ನಷ್ಟು ಕ್ರೂರ ಜನರಿಂದ ತುಂಬಿಹೋಗುವ ಸಾಧ್ಯತೆ ಹೆಚ್ಚಾಗಿದೆ.



ಚುರುಮುರಿ



ಸೋಬಾನ ಸೋಬಾನ

• ಡಿ.ಎಸ್.ಲಿಂಗರಾಜು

'ಶಾಸಕರ ಮನೆ ಮದುವೆಗೋಗಿದ್ದಲ್ಲ ಬೊಡ್ಡಿಹೈದ್ನೆ? ಚೆನ್ನಾಗಿ ಮೇದು ಬಂದಾ' ಯಂಟಪ್ಪಣ್ಣ ನನ್ನನ್ನು ವಿಚಾರಿಸಿತು.

'ಏನು ಮೇಯದೋ ಏನೋ. ನನ್ನ ಕರ್ಮ. ಗಂಡು- ಯೆಣ್ಣಿಗೆ ಮುಯ್ಯಿ ಕೊಟ್ಟು ಬರುಮಾ ಅಂತ ಹೋದ್ರೆ ದೊಡ್ಡ ಸರತಿಸಾಲು. ಸೂಟು-ಬೂಟು ಇಕ್ಕಿದೋರು ಮಾನ- ಮರ್ವಾದೆ ಬುಟ್ಟು ಅಡ್ಡದಾರೀಲಿ ಕಡೆದು ಬಂದು ಹೋಗದಾ?'

'ಏನುವಿಲ್ಲ ಎಂತುವಿಲ್ಲ ಅದ್ಯಾಕೆ ಹಂಗೆ ನುಗ್ಗಿದ್ರೋ? ಆಮೇಲೆ?'

'ಮೊದಲು ಉಂಡ್ಕಂದು ಬರುಮೆ ಅಂತ ಉಣ್ಣಕ್ಕೋದೆ. ಅಲ್ಲಿ ಉಣ್ಣೋರ ಬೆನ್ನಿಂದೆ ಜನ ನಿಂತುಕಂದು 'ಎಷ್ಟೊತ್ತು ಉಣ್ಣುತೀರ ಎದ್ದೇಳ್ರಿ' ಅಂತ ಸ್ವಾಟೆ ತಿವೀತಿದ್ರು ಕನಣ್ಣೆ. ಈ ಊಟವೇ ಬ್ಯಾಡ ಕರೆನೆರೆಗೆ ಹೋಗಮು ಅಂತ ಬೇಜಾರಾಗಿ ಮನೆಗೆ ಬಂದು ಉಂಡು ಮಕ್ಕಂದೆ'

'ಆಮೇಲೆ ಕರೆನೆರೆ ಹೆಂಗಾತು?' ಯಂಟಪ್ಪಣ್ಣ ಸೋಜುಗಪಟ್ಟಿತು.

'ಛತ್ರ ಸಣ್ಣದು. ಕರೆನೆರೆ ಊಟದೇಲಿ ಈಲಿ, ಗುಂಡಿಗೆ, ಬೋಟಿ, ಒಳಭಂಡಾರ ನೆನೆಸಿಕ್ಯಂದು ನುಗ್ಗಿದ್ದ ಜನದ ನಡಂತರದೇಲಿ ಯಂಗೋ ಜಾಗ ಮಾಡಿಕ್ಯಂದು ಮುಂದ್ಕೋದೆ'.

'ಚನ್ನಾಗಿ ಕಪ್ಪಡಿಸಿ ಬಂದೆ ಹಂಗಾರೆ' ಯಂಟಪ್ಪಣ್ಣ ಜೊಲ್ಲು ಸುರಿಸಿತು.

'ಅಲ್ಲೂ ಜನ ಮಗ್ಗುಲ ಗೇಟಂದ ನುಗ್ಗಿದ್ರು. ಮುಂದಿದ್ದೋನು ಗೇಟಲ್ಲಿದ್ದೋನಿಗೆ 'ಅವನ್ನ ಮಾತ್ರ ಅಕ್ಕಡಿಂದ ಒಳಾಕ್ಕೆ ಬುಟ್ಟಲ್ಲ, ಅವನೇನು ನಿನ್ನ ಅಣ್ತಮ್ಮನಾ, ಕಳ್ಳು- ಬಳ್ಳಿಯಾ? ನನ್ನೂ ಬುಡು' ಅಂತ ಜಗಳ ಕತ್ತಿಕ್ಯತ್ತಲ್ಲ, ಜನ ವತ್ತಲಿಸ್ಕಂದು ದೂಕಾಡಿ ತುಳಕಂದು ಚೌಲ್ಟ್ರಿ ಗೇಟು ಮುರಿದಾಕಿ ಒಳಾಕೊಂಟೋದ್ರು. ಅಂಗಿ ಹರಿದೋಗಿ, ಚಪ್ಪಲಿ ಕಿತ್ತೋಗಿ ನನ್ನ ಕತೆ ಗೋವಿಂದಾಗಿತ್ತು' ಅಂತಂದು ನಿಟ್ಟುಸಿರುಬುಟ್ಟೆ.

'ಆಯೋಜನೆ ಮಾಡಿದೋರು 'ಎಲ್ಲಾರೂ ಬಲ್ರಿ' ಅಂತ ಕರೆದುಬುಟ್ಟು ಈಗ 'ನಮ್ಮದೇನು ತಪ್ಪಿಲ್ಲ' ಅನ್ನಕ್ಯಾದದೇನೋ. ಈಟೊಂಥರ ಜನ ಬಂದ್ರೆ ಕಾಲ್ತುಳಿತಾತದೆ ಅಂತ ವಸಿ ಗ್ಯಾನ ಇರಾಬೇಕಾಗಿತ್ತಲುವೆ? ಛತ್ರದೋನ್ನ, ಮಾಂಸ ಕೊಟ್ಟೋನ್ನ, ಅಡುಗೆಯೋನ್ನ ಅರೆಸ್ಟ್ ಮಾಡಿದ್ರೆ ಆತದಾ? ಪರಿಹಾರ ಕೊಟ್ರೆ ಮುರಿದೋದ ಕಾಲು, ಹೊಂಟೋದ ಪ್ರಾಣ ವಾಪಾಸ್ ಬಂದದೇ?' ತುರೇಮಣೆ ರೂಲಿಂಗ್ ಕೊಟ್ಟರು.

ದಿನದ ಟ್ವೀಟ್

ಹೊಣೆ ಹೊರುವವರು ಯಾರು?

ಏರ್ ಇಂಡಿಯಾ ವಿಮಾನ ದುರಂತದ ಹೊಣೆಯನ್ನು ಯಾರು ಹೊರುತ್ತಾರೆ. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ, ಏರ್ ಇಂಡಿಯಾ, ಟಾಟಾ ಸಮೂಹ, ಬೋಯಿಂಗ್ ಕಂಪನಿ ಈ ಹೊಣೆ ಹೊತ್ತಿಕೊಳ್ಳಲಿವೆಯೇ? ಅಥವಾ ಒಬ್ಬರು ಮತ್ತೊಬ್ಬರನ್ನು ದೂಷಿಸುತ್ತಾ ಕೂರುತ್ತಾರೆಯೇ...



ಮೀರಾ ಚೋಪ್ರಾ, ಬಾಲಿವುಡ್ ನಟಿ

ಕಿಡಿನುಡಿ

ದೇಶದಲ್ಲಿ ಈ ಹನ್ನೊಂದು ವರ್ಷಗಳಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ನಾಲ್ಕು ಸಾವಿರಕ್ಕೂ ಹೆಚ್ಚು ದಾಳಿಗಳು ನಡೆದಿವೆ. ಅವುಗಳಲ್ಲಿ ಶೇ 99ರಷ್ಟು ದಾಳಿಗಳು ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳಲ್ಲಿ ಮತ್ತು ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನಾಯಕರ ಮನೆ, ಕಚೇರಿಗಳ ಮೇಲೆ ನಡೆದಿವೆ. ಕೇಂದ್ರದ ತನಿಖಾ ಸಂಸ್ಥೆಗಳನ್ನು ಬಿಜೆಪಿ ಮುಖಂಡರು ವಿರೋಧ ಪಕ್ಷಗಳನ್ನು ಬೆದರಿಸಲು ಬಳಸುತ್ತಾರೆ.



ಸಂತೋಷ್ ಲಾಡ್, ಕಾರ್ಮಿಕ ಸಚಿವ

25 ವರ್ಷಗಳ ಹಿಂದೆ

ಬುಧವಾರ, 14-6-2000

• **ಕಂಬಾಲಪಲ್ಲಿ ಹತ್ಯೆ: 32 ಮಂದಿ ವಿರುದ್ಧ ದೋಷಾರೋಪ ಪಟ್ಟಿ**

ಬೆಂಗಳೂರು, ಜೂನ್ 13– ಚಿಂತಾಮಣಿ ತಾಲ್ಲೂಕು ಕಂಬಾಲಪಲ್ಲಿಯಲ್ಲಿ ಮಾರ್ಚ್ 11ರಂದು ನಡೆದ ದಲಿತರ ಸಜೀವ ದಹನ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) 32 ಜನರ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಚಿಂತಾಮಣಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಈ ಪಟ್ಟಿ ಸಲ್ಲಿಸಿದ್ದು ರಾಜ್ಯ ಸರ್ಕಾರದ ಆದೇಶದಂತೆ ವಿಚಾರಣೆ ಕೈಗೆತ್ತಿಕೊಂಡ ಡಿಸಿಆರ್‌ಇ ವಿಚಾರಣೆಯನ್ನು ಪೂರ್ಣಗೊಳಿಸಿ ಒಟ್ಟು ನೂರು ಮಂದಿಯ ಸಾಕ್ಷ್ಯ ಸಂಗ್ರಹಿಸಿದೆ.

• **ಚಿತ್ರನಟ ಸುಧೀರ್ ನಿಧನ**

ಬೆಂಗಳೂರು, ಜೂನ್ 13– ಅಸ್ತಮಾದಿಂದ ಬಳಲುತ್ತಿದ್ದ ಚಿತ್ರನಟ ಸುಧೀರ್ (53) ಇಂದು ಇಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ. ರಂಗ ಕಲಾವಿದರೂ ಆಗಿದ್ದ ಅವರು ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರದವರು. ಬಹುತೇಕ ಖಳ ನಾಯಕನ ಪಾತ್ರಗಳಲ್ಲೇ ಕಾಣಿಸಿಕೊಂಡಿದ್ದ ಸುಧೀರ್ 150 ಚಿತ್ರಗಳಲ್ಲಿ ಅಭಿನಯಿಸಿದ್ದರು.

ಬಿಜೆಪಿ ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯರೂ ಆಗಿದ್ದ ಅವರು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು.

50 ವರ್ಷಗಳ ಹಿಂದೆ

ಶನಿವಾರ, 14-6-1975

• **ಗುಜರಾತ್: ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತವಿಲ್ಲ**

ಅಹಮದಾಬಾದ್, ಜೂನ್ 13– ಗುಜರಾತ್ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಜನತಾ ರಂಗಕ್ಕಾಗಲಿ, ಕಾಂಗ್ರೆಸ್ಸಿಗಾಗಲಿ ಸ್ಪಷ್ಟ ಬಹುಮತ ದೊರಕದಿರುವುದರಿಂದ ಅವುಗಳಲ್ಲಿ ಯಾವುದೊಂದೂ ಸ್ವತಃ ಸರ್ಕಾರ ರಚಿಸಬಲ್ಲ ಸ್ಥಿತಿಯಲ್ಲಿಲ್ಲ.

182 ಸದಸ್ಯಬಲದ ಹೊಸ ವಿಧಾನಸಭೆಗಾಗಿ 181 ಕ್ಷೇತ್ರಗಳಲ್ಲಿ ಮತದಾನ ನಡೆದು ಇನ್ನೂ ಒಂದು ಫಲಿತಾಂಶ ಮಾತ್ರ ಬರಬೇಕಾಗಿದ್ದು ಐದು ಪಕ್ಷಗಳನ್ನು ಒಳಗೊಂಡ ಜನತಾ ರಂಗಕ್ಕೆ 87 ಸ್ಥಾನಗಳು ಲಭಿಸಿವೆ. ಕಾಂಗ್ರೆಸ್ಸಿಗೆ 25 ಸ್ಥಾನ ದೊರಕಿದ್ದು ಅದು ಏಕೈಕ ದೊಡ್ಡ ಪಕ್ಷವಾಗಿ ನಿಂತಿದೆ. ಮಾಜಿ ಮುಖ್ಯಮಂತ್ರಿ ಚಿಮನ್‌ಭಾಯಿ ಪಟೇಲರ ಕಿಸಾನ್ ಮಜ್ದೂರ್ ಲೋಕ ಪಕ್ಷಕ್ಕೆ ಕೇವಲ 12 ಸ್ಥಾನ ಸಿಕ್ಕಿದ್ದು ಅದು ಮೂರನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಅದು 125 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. 6 ಮಂದಿ ಪಕ್ಷೇತರರು ಆಯ್ಕೆಯಾಗಿದ್ದಾರೆ.

• **ಸರ್ಕಾರದ ಆಜ್ಞೆ: ಶಿಕ್ಷಕರ ನಿವೃತ್ತ ವಯಸ್ಸು 58**

ಬೆಂಗಳೂರು, ಜೂನ್ 13– ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಕ ಮತ್ತು ಇತರ ಸಿಬ್ಬಂದಿ ನಿವೃತ್ತ ವಯಸ್ಸು 58 ವರ್ಷವೇ ಉಳಿದಿದೆ.

ಅವರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸಿದ್ದ ಆಜ್ಞೆಯನ್ನು ಸರ್ಕಾರ ಅಮಾನತಿನಲ್ಲಿಟ್ಟಿದೆ. ಕಳೆದ ಮೇನಲ್ಲಿ ಸರ್ಕಾರ ಐದು ವಿವಿಧ ಸರ್ಕಾರಿ ಆಜ್ಞೆಗಳ ಮೂಲಕ ಶಿಕ್ಷಕ ಮತ್ತು ಇತರ ಸಿಬ್ಬಂದಿ ನಿವೃತ್ತಿ ವಯಸ್ಸನ್ನು ಇದೇ ಜೂನ್ 1ರಿಂದ ಅನ್ವಯವಾಗುವಂತೆ 55ಕ್ಕೆ ಇಳಿಸಿತ್ತು.

ಶಿಕ್ಷಕರು ಅದನ್ನು ತೀವ್ರವಾಗಿ ವಿರೋಧಿಸಿದರು. ಸರ್ಕಾರ ಇಂದು ಇನ್ನೊಂದು ಆಜ್ಞೆ ಹೊರಡಿಸಿ ಆ ಆಜ್ಞೆಗಳನ್ನು ಪುನಃ ಆಜ್ಞೆ ಹೊರಡಿಸುವವರೆಗೆ ಈ ಕ್ಷಣದಿಂದಲೇ ಅಮಾನತಿನಲ್ಲಿಡಲಾಗಿದೆಯೆಂದು ಸಾರಿತು.

ಸಂಗತ

ಘನತೆಯ ವೃದ್ಧಾಪ್ಯ ಮರೀಚಿಕೆಯೆ?

ಹಿರಿಯ ನಾಗರಿಕರಿಗೆ ನೆಮ್ಮದಿಯ ಜೀವನ ಕಲ್ಪಿಸಬೇಕಿದೆ

• ಆಶಾಲತಾ ಪಿ.

ವಿಶ್ವದಾದ್ಯಂತ ಹಿರಿಯ ನಾಗರಿಕರು ಪರಿತ್ಯಾಗ, ನಿರ್ಲಕ್ಷ್ಯ ಮತ್ತು ತಿರಸ್ಕಾರದಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ತ್ವರಿತ ಜನಸಂಖ್ಯಾ ಬೆಳವಣಿಗೆಯ ರಾಷ್ಟ್ರವಾಗಿರುವ ಭಾರತವೂ ಈ ಸಮಸ್ಯೆಯಿಂದ ಹೊರತಾಗಿಲ್ಲ. ಇಳಿವಯಸ್ಸಿನ ತಿಳಿ ಮನಸ್ಸುಗಳನ್ನು ಗಾಸಿಗೊಳಿಸಲಾಗುತ್ತಿದೆ ಹಾಗೂ ಅವರ ಮಾನವ ಹಕ್ಕುಗಳ ಮೇಲೆ ನಿರಂತರ ದಾಳಿಯಾಗುತ್ತಿದೆ.

ಸರ್ಕಾರ, ಸಮಾಜ ಮತ್ತು ಸಮುದಾಯಗಳನ್ನು ಒಳಗೊಂಡ ಬಹುವಲಯ ವಿಧಾನವು ಘನತೆಯ ವೃದ್ಧಾಪ್ಯವನ್ನು ಸಾಧಿಸಲು ಅಗತ್ಯ. ಹಿರಿಯರ ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಅವರ ಕೊಡುಗೆಗಳನ್ನು ಗುರುತಿಸಿ ಗೌರವಿಸುವುದು ಯಾವುದೇ ಆರೋಗ್ಯಕರ ಸಮಾಜದ ಲಕ್ಷಣ. ಈ ದಿಸೆಯಲ್ಲಿ, ಪ್ರತಿವರ್ಷದ ಜೂನ್ 15 ಅನ್ನು 'ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ತಡೆ ಜಾಗೃತಿ ದಿನ'ವಾಗಿ ಆಚರಿಸಲಾಗುತ್ತಿದೆ. 2006ರಲ್ಲಿ ಪ್ರಾರಂಭವಾದ ಜಾಗತಿಕ ಆಂದೋಲನವು ಹಿರಿಯರ ಮೇಲಿನ ದೌರ್ಜನ್ಯವನ್ನು ತೊಡೆದು ಹಾಕುವ ಅರಿವಿನ ಪಥವನ್ನು ಸೃಷ್ಟಿಸುವ ಗುರಿ ಹೊಂದಿದೆ.

ಹಿರಿಯ ನಾಗರಿಕರು ಸಮಾಜದ ಪ್ರಮುಖ ಭಾಗ; ಸಾಮಾಜಿಕ ಮೌಲ್ಯಗಳನ್ನು ರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಪ್ರಧಾನ ಪಾತ್ರ ನಿರ್ವಹಿಸುವ ಜನವರ್ಗ. ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಹಿರಿಯರಿಗೆ ಗೌರವದ ಸ್ಥಾನಮಾನವಿತ್ತು. ಕುಟುಂಬ ಗಳು ಒಡೆಯತೊಡಗಿದಂತೆಲ್ಲ ಹಿರಿಯ ಸದಸ್ಯರ ಪ್ರಾಮುಖ್ಯವೂ ಕಡಿಮೆ ಆಗುತ್ತಿದೆ. ತಾಂತ್ರಿಕತೆ ಆಧಾರಿತ ಬದುಕು ವೃದ್ಧಾಪ್ಯದ ಸಮಸ್ಯೆಗಳನ್ನು ಇನ್ನಷ್ಟು ಜಟಿಲಗೊಳಿಸಿದೆ. ನಗರೀಕರಣ, ಆಧುನಿಕ ಜೀವನಶೈಲಿ, ಒತ್ತಡಗಳ ಬದುಕಿನಿಂದಾಗಿ ಹಿರಿಯರು ಕೆಲವು ಕುಟುಂಬಗಳಿಗೆ ಹೊರೆಯೆನ್ನಿಸುತ್ತಿದ್ದಾರೆ. ಅದರ ಪರಿಣಾಮವಾಗಿಯೇ ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಮನೆಯ ಪರಿಸರದಲ್ಲಿ ಸಾಕುಪ್ರಾಣಿಗಳಿಗೆ ದೊರಕುವ ಪ್ರೀತಿ, ಕಾಳಜಿಯೂ ದೊರೆಯದೇ ಹೋದ ಸಂದರ್ಭದಲ್ಲಿ, ಹಿರಿಯ ನಾಗರಿಕರು ಭಾವನಾತ್ಮಕವಾಗಿ ಕುಗ್ಗುತ್ತಿರುವ ಸನ್ನಿವೇಶಗಳಂತೂ ಸಾಮಾನ್ಯವೆನ್ನಿಸಿವೆ. ತಮ್ಮ ಆಸ್ತಿ, ಆದಾಯ ಕಳೆದುಕೊಂಡು ಅನ್ನ– ಆಸರೆಗಾಗಿ ಪರಿತಪಿಸುವವರೂ ಇದ್ದಾರೆ.

ಹಿರಿಯ ನಾಗರಿಕರ ಹಿತಾಸಕ್ತಿ ರಕ್ಷಣೆಗೆ ಕಾನೂನು ಬೆಂಬಲವಿದೆ. ಭಾರತ ಸಂವಿಧಾನದ 21ನೇ ವಿಧಿ ಘನತೆಯ ವೃದ್ಧಾಪ್ಯವನ್ನು ಖಾತರಿಪಡಿಸುತ್ತದೆ. ಅಂತೆಯೇ, ಹಿರಿಯರಿಗೆ ಸಾಮಾಜಿಕ ಭದ್ರತೆ ಒದಗಿಸುವ ಹೊಣೆಗಾರಿಕೆಯು ಸರ್ಕಾರಗಳ ಸಾಂವಿಧಾನಿಕ ಜವಾಬ್ದಾರಿಯಾಗಿದೆ. ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ (ತಿದ್ದುಪಡಿ) ಕಾಯ್ದೆಯು ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ಮತ್ತು ನಿರ್ಲಕ್ಷ್ಯದ ವಿರುದ್ಧ ಕಾನೂನಾತ್ಮಕ ಹೋರಾಟಕ್ಕೆ ಪ್ರಮುಖ ಅಸ್ತ್ರವಾಗಿದೆ. ಈ ಕಾಯ್ದೆಯು ಯಾವುದೇ ರೀತಿಯ ದೌರ್ಜನ್ಯ ಅಥವಾ ಅಮಾನವೀಯ ಪ್ರಕರಣಗಳಿಂದ ಹಿರಿಯರನ್ನು ರಕ್ಷಿಸುವ ಹಾಗೂ ಅವರಿಗೆ ಸಹಾಯ–ಸುರಕ್ಷತೆಯನ್ನು ಖಾತರಿಗೊಳಿಸುವ ಉದ್ದೇಶ ಹೊಂದಿದೆ.

ವೃದ್ಧರ ಹಿತರಕ್ಷಣೆಗಾಗಿ ಕೇಂದ್ರ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಅಟಲ್ ವಯೋ ಅಭ್ಯುದಯ ಯೋಜನೆ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ, ಅಟಲ್ ಪಿಂಚಣಿ ಯೋಜನೆ, ಹಿರಿಯ ನಾಗರಿಕರ ಉಳಿತಾಯ ಯೋಜನೆಯು ವೃದ್ಧಾಪ್ಯದ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ದಿಸೆಯಲ್ಲಿ ರೂಪುಗೊಂಡಿವೆ.

ಹಿರಿಯ ನಾಗರಿಕರ ವಿರುದ್ಧ ಭಾರತದಲ್ಲಿ ಹೆಚ್ಚುತ್ತಿರುವ ಅಪರಾಧಗಳಿಗೆ ತಕ್ಷಣದ ಗುಣಾತ್ಮಕ ಹಸ್ತಕ್ಷೇಪದ ಅಗತ್ಯವಿದೆ. ಹಿರಿಯರನ್ನು ಗುರಿಯಾಗಿಸಿಕೊಂಡು ನಡೆಯುವ ಸೈಬರ್ ವಂಚನೆ ಹಾಗೂ ಇತರೆ ಆರ್ಥಿಕ ವಂಚನೆಗಳು ಮತ್ತು ದೈಹಿಕ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸುವುದು ಬಹುಮುಖ್ಯವಾಗಿದೆ. ಹಿರಿಯ ನಾಗರಿಕರ ಸುರಕ್ಷತೆಯು ಬರೀ ಕಾನೂನು ಜಾರಿಗೆ ಸಂಬಂಧಿಸಿದ್ದಲ್ಲ; ಅದು ಸಾಮಾಜಿಕ ಜವಾಬ್ದಾರಿಯ ನಿರ್ವಹಣೆಯೂ ಆಗಿದೆ. ಕೌಟುಂಬಿಕ ಬಂಧಗಳು, ಸಮುದಾಯ ಭಾಗವಹಿಸುವಿಕೆ ಮತ್ತು ಸರ್ಕಾರಿ ಉಪಕ್ರಮಗಳನ್ನು ಬಲಪಡಿಸುವ ಮೂಲಕ, ಹಿರಿಯರಿಗೆ ಸುರಕ್ಷಿತ ವಾತಾವರಣವನ್ನು ಸೃಷ್ಟಿಸಬಹುದು.



ಹಿರಿ ತಲೆಮಾರು ಮತ್ತು ಕಿರಿ ತಲೆಮಾರುಗಳ ನಡುವಿನ ಅಂತರ ಹೆಚ್ಚಾಗುತ್ತಿದೆ. ವೃದ್ಧರ ಅಗತ್ಯಗಳು ಮತ್ತು ಭಾವನೆಗಳಿಗೆ ಸೂಕ್ತ ಅವಕಾಶ ಮತ್ತು ಪ್ರಾಶಸ್ತ್ಯ ಸಿಗುವುದು ಕಡಿಮೆಯಾಗಿದೆ. ಇದರಿಂದಾಗಿ, ಹಿರಿಯರು ಭಾವನಾತ್ಮಕವಾಗಿ ಏಕಾಂಗಿಯಾಗಿ ಬದುಕಬೇಕಾದ ಪರಿಸ್ಥಿತಿ ಹೆಚ್ಚುತ್ತಿದೆ. ಕುಟುಂಬಗಳಲ್ಲಿ ಪರಸ್ಪರ ತಿಳಿವಳಿಕೆ ಮತ್ತು ಜವಾಬ್ದಾರಿಯ ಭಾವನೆ ಮೂಡಿಸುವುದು ಈ ಬಿಕ್ಕಟ್ಟು ನಿರ್ವಹಣೆಗಿರುವ ಮುಖ್ಯ ದಾರಿಯಾಗಿದೆ. ಬಹುಮುಖ್ಯವಾಗಿ, ಕಿರಿಯರು ಮತ್ತು ಹಿರಿಯರ ನಡುವಿನ ಮುಕ್ತ ಸಂಭಾಷಣೆ, ಕಿರಿಯರ ತಾಳ್ಮೆಯ ವರ್ತನೆ ಮತ್ತು ಮಾನವೀಯ ಸ್ಪಂದನ ಅಗತ್ಯ. ಸಾಮಾಜಿಕ ಬಂಡವಾಳ ನಿರ್ಮಾಣ ಪ್ರಕ್ರಿಯೆಯಲ್ಲಿ ಹಿರಿಯರ ಅನುಭವಗಳ ಜ್ಞಾನ ಬಹುಮುಖ್ಯವಾದುದು. ಆ ಅನುಭವವನ್ನು ಬಳಸಿಕೊಳ್ಳುವ ಪ್ರಾಂಜಲ ಮನೋಭಾವ ಕಿರಿಯರದಾಗಬೇಕು.

ಸಾಮಾಜಿಕ ಭದ್ರತೆಯೊಂದಿಗೆ ಗೌರವಯುತವಾಗಿ ಬದುಕುವ ವಾತಾವರಣವನ್ನು ಹಿರಿಯರಿಗೆ ಒದಗಿಸಿ ಕೊಡುವುದು ಸರ್ಕಾರಗಳ ಕರ್ತವ್ಯವಾಗಿರುವಂತೆಯೇ, ಸಮಾಜದ ಹೊಣೆಗಾರಿಕೆಯೂ ಆಗಿದೆ. ಸಾಂಪ್ರದಾಯಿಕ ಅವಿಭಕ್ತ ಕುಟುಂಬ ವ್ಯವಸ್ಥೆಗಳ ಕುಸಿತ, ಹೆಚ್ಚುತ್ತಿರುವ ಸಾಮಾಜಿಕ ಪ್ರತ್ಯೇಕತೆ, ಆರ್ಥಿಕ ಅಭದ್ರತೆ, ಆರೋಗ್ಯ ಸೇವೆಯ ಲಭ್ಯತೆಯಲ್ಲಿನ ಸಮಸ್ಯೆ ಮತ್ತು ಭದ್ರತಾ ವೈಫಲ್ಯದಂತಹ ಸವಾಲುಗಳು ವೃದ್ಧರ ಯೋಗಕ್ಷೇಮವನ್ನು ನಿರಂತರವಾಗಿ ಗಾಸಿಗೊಳಿಸುತ್ತಿವೆ. ಈ ದಿಸೆಯಲ್ಲಿ ಯೋಚಿಸಿ ಉತ್ತರ ಕಂಡುಕೊಳ್ಳುವುದು, ಹಿರಿಯರ ಘನತೆಯ ಬದುಕಿನ ಜೊತೆಗೆ ಕೌಟುಂಬಿಕ ಆರೋಗ್ಯಕ್ಕೂ ಅಗತ್ಯವಾದುದಾಗಿದೆ.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ರಾಜ್ಯಶಾಸ್ತ್ರ ವಿಭಾಗ
ಗೋವಿಂದ ದಾಸ ಕಾಲೇಜು, ಸುರತ್ಕಲ್

ವಾಚಕರ ವಾಣಿ

ಯಕ್ಷಗಾನ ಪಕ್ಷಗಾನ ಅಲ್ಲ

ಕರಾವಳಿಯ ಕೆಲವು ಯಕ್ಷಗಾನ ಪ್ರದರ್ಶನಗಳಲ್ಲಿ ಬರುವ ಮಾತುಗಾರಿಕೆಯಲ್ಲಿ ಕಾಣುವ ರಾಜಕೀಯ ವಿಚಾರ ಕುರಿತು ನಾರಾಯಣ ಎ. ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಜೂನ್ 11) ಪ್ರಸ್ತಾಪಿಸಿದ್ದಾರೆ. ಯಾವುದೇ ಕಲೆ, ಅಭಿವ್ಯಕ್ತಿ, ಪ್ರದರ್ಶನದಲ್ಲಿ ವ್ಯಕ್ತಿ ಅಥವಾ ನಾಯಕನ ಪರ, ವಿರುದ್ಧ ಟೀಕೆ, ಪ್ರಶಂಸೆ, ಕೀಳು ಮಾತು ಬಳಸುವುದು ಒಳ್ಳೆಯ ಕಲೆ ಅಲ್ಲ. ಒಳ್ಳೆಯ ರಾಜಕೀಯವೂ ಅಲ್ಲ. ಹಾಗೆಂದು ಸಮಕಾಲೀನತೆ ಇಲ್ಲದ್ದು ಸಾರ್ಥಕ ಅಭಿವ್ಯಕ್ತಿಯೂ ಅಲ್ಲ.

ಯಕ್ಷಗಾನ ಅರ್ಥಗಾರಿಕೆಯಲ್ಲಿ ಮೋದಿ... ಮೋಡಿ... ನರೇಂದ್ರ... ಕೋಮುವಾದ ಎಲ್ಲವನ್ನೂ ಉದ್ದೇಶಪೂರ್ವಕವಾಗಿ ತರುವುದು ಅನುಚಿತ ಎನ್ನುವುದು ಈ ಕ್ಷೇತ್ರದ ಪ್ರಬುದ್ಧ ಕಲಾವಿದರ ಅನಿಸಿಕೆ. ನಾವು ವೈಯಕ್ತಿಕವಾಗಿ ಒಂದು ಪಕ್ಷದ ಅಥವಾ ಪ್ರಧಾನಿ ಪರವಾಗಿ ಮಾತನಾಡಬಹುದೇ ಹೊರತು, ಅದನ್ನು ರಂಗಸ್ಥಳದಲ್ಲಿ ಹೇಳುವುದು ಉಚಿತವಲ್ಲ ಎನ್ನುವ ಅಭಿಪ್ರಾಯ ಬಹುತೇಕ ಪ್ರೌಢ ಕಲಾವಿದರದ್ದಾಗಿದೆ. ಆದಾಗ್ಯೂ ಕೆಲವೆಡೆ ಇಂತಹ ಆಭಾಸಗಳಾಗುತ್ತಿವೆ ಎನ್ನುವ ಮಾತ್ರಕ್ಕೆ ಇಡೀ ಯಕ್ಷಗಾನ ಕ್ಷೇತ್ರವನ್ನೇ ದೂಷಿಸುವುದು ಸರಿಯಲ್ಲ.

ಹೆಚ್ಚು ಶಿಕ್ಷಣ ಇಲ್ಲದವರೂ ಉತ್ತಮ ಶಿಕ್ಷಣ ಇರುವವರೂ ಮುಖಾಮುಖಿಯಾಗಬಹುದಾದ ಪ್ರಜಾಸತ್ತಾತ್ಮಕ ವೇದಿಕೆಯೇ ರಂಗಸ್ಥಳ. ಅಲ್ಲಿ ಆಶುಭಾಷಣದ ಮಾದರಿಯಲ್ಲಿ ಮಾತುಗಳು ಹೊಮ್ಮುತ್ತವೆ. ಅಂಥ ಸಂದರ್ಭಗಳಲ್ಲಿ ತಪ್ಪುಗಳು ನುಸುಳಬಹುದು. ಆದರೆ, ಕರಾವಳಿಯಲ್ಲಿ ಯಕ್ಷಗಾನ ಕಲೆಯು ಪಕ್ಷಗಾನ ಕಲೆಯಾಗಿಲ್ಲ. ಈ ಕ್ಷೇತ್ರದಲ್ಲಿ ಅನೇಕ ಕಲಾವಿದರು, ಆಸಕ್ತರು ರಾಜಕೀಯ ವಿಚಾರಗಳಿಗೆ ಕಿವಿಗೊಡದೆ ಕೆಲಸ ಮಾಡುತ್ತಿದ್ದಾರೆ. ಹಾಗೆಂದು ಯಕ್ಷಗಾನದಲ್ಲಿ ಸಮಸ್ಯೆಗಳು ಇಲ್ಲವೆಂದಲ್ಲ. ಅವುಗಳನ್ನು ಪರಿಶೀಲಿಸಿ, ಲೇಖನದಲ್ಲಿ ರಚನಾತ್ಮಕವಾಗಿ ವಿವರಿಸಿದ್ದರೆ ಚೆನ್ನಾಗಿತ್ತು.

ಎಂ. ಪ್ರಭಾಕರ ಜೋಶಿ, ಮಂಗಳೂರು

ಗಾದೆ ಸುಳ್ಳಾಗಲಿಲ್ಲ!

ಮೂಲೆಗೆ ಸೇರಿತು
ಕಾಂತರಾಜ ವರದಿ!
ಮತ್ತೆ ಸಮೀಕ್ಷೆಗೆ
ಮುಂದಾಯಿತು ಸರ್ಕಾರ!
ಇದಕ್ಕಿನ್ನೇನು
ಕಾದಿದೆಯೋ
ದೇವರೇ ಬಲ್ಲ!
'ಅಂತೂ ಇಂತೂ ಕುಂತಿ
ಮಕ್ಕಳಿಗೆ ರಾಜ್ಯವಿಲ್ಲ'
ಗಾದೆ ಸುಳ್ಳಾಗಲಿಲ್ಲ!

ಸಿ.ಪಿ. ಸಿದ್ಧಾಶ್ರಮ
ಮೈಸೂರು

ಮುಡಾ ಬೆಳವಣಿಗೆ ಅಯೋಮಯ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಡೆಯುತ್ತಿರುವ ಬೆಳವಣಿಗೆಗಳು ದಿನಕ್ಕೊಂದು ಹೊಸ ತಿರುವು ಪಡೆಯುತ್ತಿವೆ. ಜಾರಿ ನಿರ್ದೇಶನಾಲಯವು (ಇ.ಡಿ) ಇತ್ತೀಚೆಗೆ ₹100 ಕೋಟಿ ಮೌಲ್ಯದ 92 ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಇದಕ್ಕೂ ಮೊದಲು ₹300 ಕೋಟಿ ಮೌಲ್ಯದ 160 ನಿವೇಶನಗಳನ್ನು ವಶಕ್ಕೆ ಪಡೆದಿತ್ತು. ಈ ನಿವೇಶನಗಳನ್ನು ಮುಡಾದಿಂದ ಖರೀದಿಸಿದವರ ಪಾಡೇನು?

ಈ ಬೆಳವಣಿಗೆ ನಡುವೆಯೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿದ್ದ ಮುಡಾ ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರವಾಗಿದೆ. ಹಗರಣಗಳ ಬಗ್ಗೆ ಒಂದು ಕಡೆ ಲೋಕಾಯುಕ್ತ; ಮತ್ತೊಂದು ಕಡೆ ನಿವೃತ್ತ ನ್ಯಾಯಮೂರ್ತಿ ನೇತೃತ್ವದಡಿ ತನಿಖೆ ನಡೆಯುತ್ತಿದೆ. ಇದರ ಮಧ್ಯೆ, ಇ.ಡಿ. ಕೂಡ ತನಿಖೆ ನಡೆಸುತ್ತಿದೆ. ಮುಡಾದಲ್ಲಿ ಹಲವು ತಿಂಗಳಿನಿಂದ ಸಾರ್ವಜನಿಕ ಕೆಲಸಗಳು ಸ್ಥಗಿತಗೊಂಡಿವೆ. ಒಟ್ಟಿನಲ್ಲಿ ಇಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಅಯೋಮಯವಾಗಿವೆ.

ಕೆ.ವಿ. ವಾಸು, ಮೈಸೂರು

ಕೂಲಂಕಷ ತನಿಖೆ ನಡೆಯಲಿ

ಗುಜರಾತ್‌ನ ಅಹಮದಾಬಾದ್‌ನಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಪತನಗೊಂಡಿರುವುದು ದುರದೃಷ್ಟಕರ. ಈ ದುರಂತವು ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಮಾಧ್ಯಮಗಳಲ್ಲಿ ತಾಂತ್ರಿಕ ದೋಷದ ಬಗ್ಗೆ ಭಿನ್ನ ವರದಿಗಳು ಪ್ರಕಟವಾಗುತ್ತಿವೆ. ಪಕ್ಷಿ ಡಿಕ್ಕಿಯಿಂದ ಎರಡೂ ಎಂಜಿನ್‌ಗಳು ಏಕಕಾಲದಲ್ಲಿ ಸ್ಥಗಿತಗೊಳ್ಳಲು ಸಾಧ್ಯವಿಲ್ಲ. ಸಂಪೂರ್ಣ ತಪಾಸಣೆ ಇಲ್ಲದೆ ಇಂಥ ವಿಮಾನಗಳಿಗೆ ದೀರ್ಘ ಪ್ರಯಾಣಕ್ಕೆ ಅನುಮತಿ ನೀಡುವುದಿಲ್ಲ. ಪ್ರಕರಣದ ಬಗ್ಗೆ ತನಿಖಾಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ ದುರಂತದ ಹಿಂದಿರುವ ನೈಜ ಕಾರಣವನ್ನು ದೇಶದ ಮುಂದಿಡಬೇಕಿದೆ.

ಆಶಾ ಅಪ್ರಮೇಯ, ದಾವಣಗೆರೆ

ಶಿಕ್ಷಕಿಯ ಕಾರ್ಯ ಅನುಕರಣೀಯ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದ ಸರ್ಕಾರಿ ಉರ್ದು ಹಿರಿಯ ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಎಸ್.ಎಂ. ರಾಯಬಾಗಿ ಅವರು, ವಿದ್ಯಾರ್ಥಿಗಳಿಗೆ ಕುಡಿಯುವ ನೀರಿಗಾಗಿ ಸ್ವಂತ ಖರ್ಚಿನಲ್ಲಿ ಕೊಳವೆಬಾವಿ ಕೊರೆಯಿಸಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 13). ಈಗಿನ ಕಾಲದಲ್ಲಿ ಸಂಬಳಕ್ಕೆ ಜೋತು ಬೀಳುವವರೇ ಹೆಚ್ಚಿದ್ದಾರೆ. ಇಂತಹವರ ನಡುವೆ ಈ ಶಿಕ್ಷಕಿಯ ಕಾರ್ಯ ಎಲ್ಲರಿಗೂ ಮಾದರಿ.

ಬಿ. ಮೊಹಿದ್ದೀನ್ ಖಾನ್, ಚಿತ್ರದುರ್ಗ

ಎಸ್‌ಎಟಿಎಸ್ ತಂತ್ರಾಂಶ: ಒಟಿಪಿ ವ್ಯವಸ್ಥೆ ಬದಲಾಗಲಿ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಎಸ್‌ಎಟಿಎಸ್ (ವಿದ್ಯಾರ್ಥಿಗಳ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ) ತಂತ್ರಾಂಶದಲ್ಲಿ ಮುಖ್ಯ ಶಿಕ್ಷಕರ ಲಾಗಿನ್‌ಗೆ ಒಟಿಪಿ ವ್ಯವಸ್ಥೆಯನ್ನು ಅಳವಡಿಸಿದೆ. ಜೊತೆಗೆ, ವರ್ಗಾವಣೆ ಪ್ರಮಾಣ ಪತ್ರದ ಮುದ್ರಣಕ್ಕೂ ಮೊದಲು ಪ್ರತ್ಯೇಕ ಒಟಿಪಿ ನಮೂದಿಸಬೇಕಿದೆ.

ಮಕ್ಕಳ ಶೈಕ್ಷಣಿಕ ಮಾಹಿತಿಗಳ ಸುರಕ್ಷತೆ ದೃಷ್ಟಿಯಿಂದ ಸರ್ಕಾರದ ಹೊಸ ಕ್ರಮ ಸರಿಯಾಗಿದೆ. ಆದರೆ, ನೆಟ್‌ವರ್ಕ್ ಅಥವಾ ಇತರೆ ಕಾರಣದಿಂದ ಮುಖ್ಯ ಶಿಕ್ಷಕರ ಮೊಬೈಲ್‌ಗೆ ಒಟಿಪಿ ಬರುವುದು ವಿಳಂಬವಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಪ್ರವೇಶ, ವರ್ಗಾವಣೆ ಪ್ರಮಾಣ ಪತ್ರ ಸೇರಿ ಎಸ್‌ಎಟಿಎಸ್ ಚಟುವಟಿಕೆಗಳು ವಿಳಂಬವಾಗುತ್ತಿವೆ. ಇದಕ್ಕೂ ಮೊದಲು ಬಳಕೆದಾರರ ಹೆಸರು ಹಾಗೂ ಪಾಸ್‌ವರ್ಡ್ ಮೂಲಕ ಲಾಗಿನ್ ಆಗುವ ವ್ಯವಸ್ಥೆ ಇತ್ತು. ಇದನ್ನೇ ಮುಂದುವರಿಸುವುದು ಉತ್ತಮ.

ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ 11 ವರ್ಷ; ಎರಡು ಅಭಿಪ್ರಾಯಗಳು

ದೇಶದ ನಾಯಕತ್ವ ಈಗ ಹಿಂದೆಂದಿಗಿಂತಲೂ ಬಲಿಷ್ಠ



ಈ ಮೊದಲು ನೆಹರೂ ಹಾಗೂ ಇಂದಿರಾ ಅವರು ನಾಯಕರಾಗಿ ಪ್ರಖರವಾಗಿ ಕಾಣಿಸಿಕೊಂಡಿದ್ದರೂ ಅವರ ಕಾಲದ ಕಾಂಗ್ರೆಸ್‌ಗೆ ದೊಡ್ಡ ಪ್ರತಿಸ್ಪರ್ಧಿ ಇರಲಿಲ್ಲ. ಆದರೆ ಮೋದಿ ಅವರು ತಮ್ಮ ವರ್ಚಸ್ಸಿನಿಂದ ಮೂರು ಬಾರಿ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಗೆಲುವು ತಂದುಕೊಟ್ಟಿದ್ದಾರೆ. ಹಿಂದೆ ಗುಜರಾತ್ ಚುನಾವಣೆಯಲ್ಲಿಯೂ ಗೆಲುವು ತಂದುಕೊಟ್ಟಿದ್ದಾರೆ. ಇಂಥದ್ದು ಇಂದಿರಾ ಅವರಿಗೂ ಸಾಧ್ಯವಾಗಿರಲಿಲ್ಲ

● ವಿಶ್ವೇಶ್ವರ ಭಟ್ ಬಂಗಾರಡ್ಕ

ದೇಶದ ನಾಯಕತ್ವ ಬಹಳ ದೃಢವಾಗಿ ಇದ್ದರೆ, ಸಾಮಾನ್ಯವಾಗಿ ಆ ನಾಯಕತ್ವದ ಪರವಾದ ಹಾಗೂ ವಿರುದ್ಧವಾದ ಅಭಿಪ್ರಾಯಗಳು ಬಹಳ ತೀಕ್ಷ್ಣವಾಗಿಯೇ ಇರುತ್ತವೆ. ಇದಕ್ಕೆ ನರೇಂದ್ರ ಮೋದಿ ಅವರ ನಾಯಕತ್ವ ಸೂಕ್ತ ಉದಾಹರಣೆ. ಅವರ ಬೆಂಬಲಿಗರು ಹುಚ್ಚುಕಟ್ಟುವ ಪ್ರೇಮ ಪ್ರಕಟಿಸಿದರೆ, ವಿರೋಧಿಗಳು ಅಷ್ಟೇ ಕಟುವಾದ ಟೀಕೆಗಳನ್ನು ಮಾಡುವುದನ್ನು ನಾವು ಹನ್ನೊಂದು ವರ್ಷಗಳಲ್ಲಿ ನೋಡಿದ್ದೇವೆ.

ನರೇಂದ್ರ ಮೋದಿ ಅವರನ್ನು ಸ್ವತಂತ್ರ ಭಾರತದ ಅತ್ಯಂತ ಶಕ್ತಿಯುತ ಪ್ರಧಾನಿ ಎನ್ನಬಹುದು. ಅದಕ್ಕೆ ಕಾರಣವೂ ಇದೆ. ಈ ಮೊದಲು ಜವಾಹರಲಾಲ್ ನೆಹರೂ ಹಾಗೂ ಇಂದಿರಾ ಗಾಂಧಿಯವರು ನಾಯಕರಾಗಿ ಪ್ರಖರವಾಗಿ ಕಾಣಿಸಿಕೊಂಡಿದ್ದರೂ ಅವರ ಕಾಲದ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಪ್ರತಿಸ್ಪರ್ಧಿ ಇರಲಿಲ್ಲ. ಆದರೆ ಮೋದಿ ಅವರು ತಮ್ಮ ವರ್ಚಸ್ಸಿನ ಕಾರಣಕ್ಕಾಗಿಯೇ ಮೂರು ಬಾರಿ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಗೆಲುವು ತಂದುಕೊಟ್ಟಿದ್ದಾರೆ. ಹಿಂದೆ ಗುಜರಾತ್ ವಿಧಾನಸಭೆಯ ಚುನಾವಣೆಯಲ್ಲಿಯೂ ಗೆಲುವು ತಂದುಕೊಟ್ಟಿದ್ದಾರೆ. ಇಂಥದ್ದು ಇಂದಿರಾ ಅವರಿಗೂ ಸಾಧ್ಯವಾಗಿರಲಿಲ್ಲ.

ಯುಪಿಎ ಸರ್ಕಾರ ತನ್ನ ಎರಡನೇ ಅವಧಿಯಲ್ಲಿ ಬಹಳ ಭ್ರಷ್ಟಗೊಂಡಿದೆ ಎಂಬ ಭಾವನೆ ಮೂಡಿತ್ತು. ಆ ಸಂದರ್ಭದಲ್ಲಿ ನೀತಿ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೆ ಆಗುತ್ತಿರಲಿಲ್ಲ ಎಂಬ ಭಾವನೆಯೂ ಇತ್ತು. ಅಂದು ಬಿಜೆಪಿಯ ಹಿಂದುತ್ವ ಹಾಗೂ ಮೋದಿ ಅವರ ಬಲಿಷ್ಠ ನಾಯಕತ್ವ, ಅಭಿವೃದ್ಧಿಯ ಮಂತ್ರವು ಕಾಂಗ್ರೆಸ್ಸನ್ನು ಸೋಲಿಸಿದ್ದುದು ಸತ್ಯ. ಅಂದಿನಿಂದ ಇಂದಿನವರೆಗೂ ಮೋದಿ ನಾಯಕತ್ವದ ಬಗ್ಗೆ ವಿರೋಧಿಗಳಿಗೆ ಸಿಟ್ಟು ಇದ್ದಿರಬಹುದಾದರೂ ಅವರ ನಾಯಕತ್ವ ದುರ್ಬಲ ಎಂದು ಅನ್ನಿಸಿಲ್ಲ. ಇದು ಒಂದು ಸಾಧನೆ.

ಬಲಿಷ್ಠ ನಾಯಕತ್ವಕ್ಕೆ ಸಾಕ್ಷ್ಯ ಏನು ಎಂಬ ಪ್ರಶ್ನೆ ಬರಬಹುದು. ಸಣ್ಣ ಉದಾಹರಣೆ ಇಲ್ಲಿದೆ. ಸ್ವಾತಂತ್ರ್ಯಾನಂತರ ದೇಶದಲ್ಲಿ ಸ್ವಚ್ಛತೆಯನ್ನು ಆದ್ಯತೆಯಾಗಿ ಇರಿಸಿಕೊಂಡ ಹಲವು ಯೋಜನೆಗಳು ಶುರು ಆಗಿದ್ದರೂ ಅವು ಜನಮಾನಸದಲ್ಲಿ ಪ್ರಭಾವ ಬೀರಲಿಲ್ಲ. ಇಂದು ದೇಶದಲ್ಲಿ ಸ್ವಚ್ಛತೆಯ ಕೆಲಸ ಪೂರ್ತಿ ಆಗಿದೆ ಎನ್ನಲಾಗದು. ಆದರೆ ಮೋದಿ ಅವರ ವರ್ಚಸ್ಸಿನ ಕಾರಣದಿಂದಾಗಿ, ಸ್ವಚ್ಛತೆಯ ಬಗ್ಗೆ ರಾಷ್ಟ್ರವ್ಯಾಪಿ ಜಾಗೃತಿ ಮೂಡಿದೆ. ಅದರ ಪರಿಣಾಮವಾಗಿ ದೇಶದಲ್ಲಿ ಸುಮಾರು ಹತ್ತು ಕೋಟಿಗೂ ಹೆಚ್ಚು ಶೌಚಾಲಯಗಳ ನಿರ್ಮಾಣ ಆಗಿದೆ.

ಕಪ್ಪು ಹಣದ ನಿರ್ಮೂಲನೆಗೆ ನೋಟು ರದ್ದತಿಯ ಕ್ರಮವು ಅರ್ಥಶಾಸ್ತ್ರದ ಪಾಠಗಳಲ್ಲೇ ಉಲ್ಲೇಖವಾಗಿರುವ ಒಂದು ಪರಿಹಾರ. ಆದರೆ ಆ ಅಸ್ತ್ರವನ್ನು ಕೈಗೆತ್ತಿಕೊಳ್ಳುವ ಮನಸ್ಸು ಹಿಂದಿನ ಯಾವ ನಾಯಕರಿಗೂ ಇರಲಿಲ್ಲ. ಮೋದಿ ಅವರು ಆ ಅಸ್ತ್ರ ಪ್ರಯೋಗಿಸುವ ಧೈರ್ಯ ಮಾಡಿದರು. ಆದರೆ, ಅಧಿಕಾರಿಗಳ ಮಟ್ಟದಲ್ಲಿ ಆದ ಲೋಪದ ಕಾರಣದಿಂದಾಗಿ ಪರಿಣಾಮವು ನಿರೀಕ್ಷಿತ ಮಟ್ಟದಲ್ಲಿ ಆಗಲಿಲ್ಲ. ಹೀಗಿದ್ದರೂ, ಇಡೀ ದೇಶವು ಈ ವಿಚಾರದಲ್ಲಿ ಮೋದಿ ಅವರ ಸದುದ್ದೇಶದ ಬಗ್ಗೆ ಸಂಶಯಪಟ್ಟಿಲ್ಲ. ಯೋಜನೆಯ ಫಲ ಎಂಬಂತೆ ದೇಶದ ಹಣಕಾಸು ವ್ಯವಹಾರದಲ್ಲಿ ಡಿಜಿಟಲ್ ಕ್ರಾಂತಿ ಆಗಿದೆ.

ನಮ್ಮಲ್ಲಿ ಏಕರೂಪದ ತೆರಿಗೆ ವ್ಯವಸ್ಥೆ ಜಾರಿಗೆ ಬರಬೇಕು ಅನ್ನುವುದು 1996ರಲ್ಲೇ ಸರ್ಕಾರದ ಗಮನಕ್ಕೆ ಬಂದಿತ್ತು. ಅದನ್ನು ಜಾರಿಗೆ ತಂದರೆ ಆರಂಭದಲ್ಲಿ ಎದುರಾಗಬಹುದಾದ ಹಾನಿಗಳಿಂದಾಗಿ ರಾಜಕೀಯವಾಗಿ ನಷ್ಟ ಆಗಬಹುದು ಎಂಬ ಭೀತಿಯಿಂದ ಯಾರೂ ಆ ವ್ಯವಸ್ಥೆಯನ್ನು ಜಾರಿಗೆ ತರುವ ಕೆಲಸ ಕೈಗೆತ್ತಿಕೊಳ್ಳಲಿಲ್ಲ. ಮೋದಿ ಅವರು ಆ ಸವಾಲನ್ನು ಸ್ವೀಕಾರ ಮಾಡಿದರು. ಆರಂಭಿಕ ಎಡರು–ತೊಡರುಗಳನ್ನು ನಿಭಾಯಿಸಿ, ಇಂದು ಜಿಎಸ್‌ಟಿ ವ್ಯವಸ್ಥೆ ಬಹಳ ಸುಲಲಿತವಾಗಿ ನಡೆಯುವಂತೆ ಮಾಡಲಾಗಿದೆ. 2018ರಲ್ಲಿ ಮಾಸಿಕ ₹62,000 ಕೋಟಿ ಇದ್ದ ಜಿಎಸ್‌ಟಿ ವರಮಾನ ಸಂಗ್ರಹ ಇದೇ ಏಪ್ರಿಲ್‌ನಲ್ಲಿ ದಾಖಲೆಯ ₹2.37 ಲಕ್ಷ ಕೋಟಿ ಆಗಿದೆ.

2018ರ ನಂತರದಲ್ಲಿ ಭಾರತವೂ ಸೇರಿ ವಿಶ್ವದ ಹಲವು ಪ್ರಮುಖ ದೇಶಗಳ ಜಿಡಿಪಿ ಬೆಳವಣಿಗೆ ಪ್ರಮಾಣ ನಿಧಾನವಾಗಿದೆ. ಕೋವಿಡ್ ಸಾಂಕ್ರಾಮಿಕದ ಅವಧಿಯ ಹೊಡೆತವೂ ಇದರ ಮೇಲೆ ಪ್ರಭಾವ ಬೀರಿದೆ. ಇಂತಹ ಸಂಕೀರ್ಣ ಸ್ಥಿತಿಯಲ್ಲೂ ನಮ್ಮ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.5ರ ಆಸುಪಾಸಿನಲ್ಲಿ ಇದೆ, ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥ ವ್ಯವಸ್ಥೆ ಎಂಬ ಹಿರಿಮೆಯನ್ನು ಕಾಪಾಡಿಕೊಂಡಿದೆ.

ಮೂಲಸೌಕರ್ಯಕ್ಕೆ ಎಷ್ಟು ಒತ್ತು ಕೊಡುತ್ತೇವೆ ಎಂಬುದು ದೇಶದ ಅಭಿವೃದ್ಧಿಯಲ್ಲಿ ಗಮನಾರ್ಹವಾಗುತ್ತದೆ. 2025-26ರ ಕೇಂದ್ರ ಬಜೆಟ್‌ನ ತೆರಿಗೆ ವರಮಾನ ಸಂಗ್ರಹ ₹34.5 ಲಕ್ಷ ಕೋಟಿ ಇದೆ. ಈ ಅವಧಿಗೆ ಸರ್ಕಾರವು ಮೂಲಸೌಕರ್ಯಕ್ಕಾಗಿ ದಾಖಲೆಯ ₹11 ಲಕ್ಷ ಕೋಟಿ ಹಣ ಖರ್ಚು ಮಾಡಲಿದೆ.

ಶತ್ರುಗಳ ಎದುರು ಮೃದುಭಾವ ತೋರುವ, ಅನಿಶ್ಚಿತತೆ ತೋರುವ ಯಾವುದೇ ದೇಶ ಇತರ ದೇಶಗಳ ಗೌರವ ಪಡೆಯದು. ಚೀನಾದೊಂದಿಗೆ ಬಿಕ್ಕಟ್ಟಿನ ಸಂದರ್ಭವನ್ನು ಮೋದಿ ನೇತೃತ್ವದ ಸರ್ಕಾರ ಹತ್ತು ವರ್ಷಗಳ ಹಿಂದೆ ದೃಢವಾಗಿ ಎದುರಿಸಿದೆ. ನಿಮ್ಮ ಸೈನಿಕರು ಹಿಂದಕ್ಕೆ ಹೋಗದೆ ಯಾವುದೇ ಮಾತುಕತೆ ಇಲ್ಲ ಎಂದು ಪ್ರಧಾನಿ ಖಡಾಖಂಡಿತವಾಗಿ ಚೀನಾಕ್ಕೆ ಹೇಳಿದ್ದರು. ಇದೇ ದಿಟ್ಟ ನಿಲುವನ್ನು ಮುಂದೆ ಉರಿ, ಬಾಲಾಕೋಟ್ ಹಾಗೂ 'ಆಪರೇಷನ್ ಸಿಂಧೂರ' ಸಂದರ್ಭದಲ್ಲಿ ಸರ್ಕಾರ ಪ್ರದರ್ಶಿಸಿದೆ. 'ಆಪರೇಷನ್ ಸಿಂಧೂರ' ಸಂದರ್ಭದಲ್ಲಿ ಯಾವುದೇ ದೇಶದ ಸಹಾಯದ ನಿರೀಕ್ಷೆ ಮಾಡದೆ, ಯಾವುದೇ ದೇಶದ ಪ್ರತಿಕ್ರಿಯೆಗಳನ್ನು ಹೆಚ್ಚು ಗಣನೆಗೆ ತೆಗೆದುಕೊಳ್ಳದೇ ಸ್ವತಂತ್ರವಾಗಿ ಕಾರ್ಯಾಚರಣೆ ಮಾಡಿರುವುದು 'ಇದು ನವಭಾರತದ ಯುಗ' ಎಂಬುದರ ಸಂಕೇತವೇ ಆಗಿದೆ.


ಜನಧನ್ ಯೋಜನೆಯ ಮೂಲಕ 55 ಕೋಟಿ ಜನಸಾಮಾನ್ಯರಿಗೆ ಬ್ಯಾಂಕ್ ಖಾತೆ, 10 ಕೋಟಿ ಮನೆಗಳಿಗೆ ಉಜ್ವಲಾ ಯೋಜನೆಯ ಮೂಲಕ ಅನಿಲ ಸಂಪರ್ಕ, ಕಿಸಾನ್ ಸಮ್ಮಾನ್ ಯೋಜನೆಯ ಅಡಿ ರೈತರ ಖಾತೆಗೆ ನೇರ ಹಣ ವರ್ಗಾವಣೆ, ಆಯುಷ್ಮಾನ್ ಯೋಜನೆಯ ಅಡಿ ಬಡವರಿಗೆ ₹5 ಲಕ್ಷದವರೆಗಿನ ಚಿಕಿತ್ಸಾ ವೆಚ್ಚಕ್ಕೆ ನೆರವು... ಇವೆಲ್ಲ ನೇರವಾಗಿ ಜನಸಾಮಾನ್ಯರಿಗೆ ಆಗಿರುವ ಪ್ರಯೋಜನಗಳು.

ಬ್ಯಾಂಕುಗಳ ಅನುತ್ಪಾದಕ ಸಾಲದ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಉದ್ಯಮ ಕ್ಷೇತ್ರದಲ್ಲಿ ತಂದ ಬದಲಾವಣೆಗಳು, ಉದ್ದಿಮೆಗಳು ಆರ್ಥಿಕವಾಗಿ ಮುಳುಗಿದಾಗ ಬ್ಯಾಂಕಿಗೆ ನಷ್ಟ ಆಗದಂತೆ ದಿವಾಳಿ ಸಂಹಿತೆಯ ಮೂಲಕ ಕೊಟ್ಟಿರುವ ರಕ್ಷಣೆ, ಉತ್ಪಾದನೆ ಆಧಾರಿತ ಉತ್ತೇಜನ ಯೋಜನೆ ಮೂಲಕ ನಮ್ಮಲ್ಲೇ ಉತ್ಪಾದನೆ ಮಾಡಿ ವಿದೇಶಕ್ಕೆ ರಫ್ತು ಮಾಡುವ ಆಲೋಚನೆ, ಉದ್ಯೋಗ ಸೃಷ್ಟಿ ಹಾಗೂ ವಿದೇಶಿ ವಿನಿಮಯ ಗಳಿಕೆ ಈ ಸರ್ಕಾರದ ಅವಧಿಯಲ್ಲಿ ಆಗಿರುವ ಗುರುತಿಸಬಹುದುದಾದ ಪ್ರಗತಿ.

ಹೆದ್ದಾರಿ ನಿರ್ಮಾಣಕ್ಕೆ ವೇಗ, ಹೊಸದಾದ ಸುಮಾರು 25 ಎಕ್ಸ್‌ಪ್ರೆಸ್ ಹೆದ್ದಾರಿಗಳ ನಿರ್ಮಾಣ ಕಾರ್ಯ ಆರಂಭ, ಸಣ್ಣ ನಗರಗಳಲ್ಲೂ ವಿಮಾನಯಾನ ಸೌಲಭ್ಯ ಇರಬೇಕು ಎಂಬ ಉದ್ದೇಶದ 'ಉಡಾನ್' ಯೋಜನೆ ಅಡಿ ನಿರ್ಮಿಸಿದ ಹಲವು ವಿಮಾನ ನಿಲ್ದಾಣಗಳು, ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಕಾಣಸಿಗುವ ರೈಲುಗಳಿಗೆ ಸರಿಸಮಾನವಾದ 'ವಂದೇ ಭಾರತ್' ರೈಲುಗಳು ಕೂಡ ಈ 11 ವರ್ಷಗಳ ಅಭಿವೃದ್ಧಿಯ ಸೂಚಕಗಳು.

ಮುಸ್ಲಿಂ ಮಹಿಳೆಯರ ಜೀವನ ಭದ್ರತೆಯ ದೃಷ್ಟಿಯಿಂದ ತ್ರಿವಳಿ ತಲಾಖ್ ಪದ್ಧತಿಯನ್ನು ರದ್ದುಪಡಿಸುವ ಕಾನೂನು ಜಾರಿಗೆ ತಂದಿರುವುದು, ಪೌರತ್ವ ತಿದ್ದುಪಡಿ ಕಾಯ್ದೆ, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸುವ ಮೂಲಕ ಅದನ್ನು ದೇಶದೊಳಗೆ ಪೂರ್ತಿಯಾಗಿ ಸಮ್ಮಿಲನಗೊಳಿಸಿರುವುದು, ದೇಶದ ಅಸ್ಮಿತೆಯ ಸಂಕೇತವಾದ ರಾಮ ಮಂದಿರದ ನಿರ್ಮಾಣ ಈ ಸರ್ಕಾರದ ಚಾರಿತ್ರಿಕ ಸಾಧನೆಗಳು. ಆಧಾರ್ ಯೋಜನೆಯ ಅನುಷ್ಠಾನ, ಗ್ರಾಮೀಣ ವಿದ್ಯುದೀಕರಣ, ಮನೆಗಳಲ್ಲಿ ಸೌರ ವಿದ್ಯುತ್ ಉತ್ಪಾದನೆಗೆ ಉತ್ತೇಜನ ಕ್ರಮಗಳು ಸರ್ಕಾರಕ್ಕೆ ಜನಮಾನ್ಯತೆಯನ್ನು ಗಳಿಸಿಕೊಟ್ಟಿವೆ.

ಲೇಖಕ: ಬಿಜೆಪಿ ಮುಖಂಡ



ಪ್ರಜಾವಾಣಿ ಚರ್ಚೆ

ಸಾಸಿವೆ ಡಬ್ಬಿಯಲ್ಲಿ ಕಾಸು ಮೊಳೆತಿದ್ದರೆ ಪವಾಡವೇ ಸರಿ



ದೇಶದಲ್ಲಿ ಬಡತನಕ್ಕೆ ಸಂಬಂಧಿಸಿದ ಅಂಕಿ-ಅಂಶಗಳಲ್ಲಿನ ವೈರುಧ್ಯಗಳು ವಾಸ್ತವವನ್ನು ಬಿಚ್ಚಿಡುತ್ತಿರುವಾಗ ಮತ್ತು ದೈನಂದಿನ ಜೀವನದಲ್ಲಿ ಪ್ರತಿದಿನ ಆರ್ಥಿಕ ಸಂಕಟದ ಸುದ್ದಿಗಳನ್ನು ಎಲ್ಲೆಡೆ ಕಾಣುತ್ತಿರುವಾಗ ಏಕಾಏಕಿ 'ಬಡತನ ನಿವಾರಣೆ ಆಗಿಬಿಟ್ಟಿದೆ' ಎಂಬ ಪ್ರಕಟಣೆ ಸರ್ಕಾರದ ಕಡೆಯಿಂದಲೇ ಹೊರಟುಬಿಟ್ಟರೆ, ಆ ಪವಾಡ ಸಂಭವಿಸಿದ್ದಾದರೂ ಎಲ್ಲಿ ಎಂಬ ಪ್ರಶ್ನೆ ಮೂಡದಿರುತ್ತದೆಯೆ?

● ರಾಜಾರಾಂ ತಲ್ಲೂರು

ಉದಾರೀಕರಣಕ್ಕೆ ಭಾರತದಲ್ಲಿ ಭದ್ರ ತಳಪಾಯ ಹಾಕಿಕೊಟ್ಟದ್ದು ಡಾ. ಮನಮೋಹನ್ ಸಿಂಗ್. ಈ ತಳಪಾಯದ ಮೇಲೆ, ಕಾರ್ಪೊರೇಟ್ ಜಗತ್ತಿನ ಮೂಗಿನ ನೇರಕ್ಕೆ 'ಟ್ರಿಲಿಯನ್‌ಗಟ್ಟಲೆ' ಮಹತ್ವಾಕಾಂಕ್ಷೆಯ ಬೃಹತ್ ಕಟ್ಟಡವನ್ನು ಕಟ್ಟುತ್ತಿರುವುದು ಈಗ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ. 11 ವರ್ಷಗಳಲ್ಲಿ ಈ ಸರ್ಕಾರ ಆರ್ಥಿಕ ರಂಗದಲ್ಲಿ ತೋರಿಸಿದ ಸಾಧನೆ ಏನೆಂದು ಕೇಳಿದರೆ, ಎತ್ತಿ ತೋರಿಸಬಹುದಾದದ್ದು ಮೂರು ಸಂಗತಿಗಳು. ಒಂದು ಜನಧನ್-ಆಧಾರ್-ಮೊಬೈಲ್ ತ್ರಿವಳಿಗಳ ಮೂಲಕ (JAM- Trinity) ಫಲಾನುಭವಿಗಳಿಗೆ ಸರ್ಕಾರಿ ಸಬ್ಸಿಡಿಗಳ ನೇರ ವರ್ಗಾವಣೆ (DBT)ಗೆ ಈ ಹಿಂದೆ ತೆರೆಯಲಾಗಿದ್ದ ಹಾದಿಯನ್ನು ಸುಗಮಗೊಳಿಸಿದ್ದು. ಎರಡನೆಯದು, ಡಿಜಿಟಲ್ ಮೂಲಸೌಕರ್ಯ ವ್ಯವಸ್ಥೆಯನ್ನು ರೂಪಿಸುವುದಕ್ಕೆ ನಾಂದಿ ಹಾಡಿದ್ದು. ಮೂರನೆಯದು, ಡಿಜಿಟಲ್ ಹಣಪಾವತಿಗಳನ್ನು ಜನಪ್ರಿಯಗೊಳಿಸಿದ್ದು.

ದೇಶದ ಜನಸಾಮಾನ್ಯರ ಆರ್ಥಿಕತೆ ಮೂಲಭೂತವಾಗಿ ಅಡುಗೆಮನೆಯ ಸಾಸಿವೆ ಡಬ್ಬಿಯನ್ನು ಆಧರಿಸಿದಂತಹದು. ಅಂದರೆ ಉಳಿತಾಯ ಕೇಂದ್ರಿತವಾದದ್ದು. ಹಾಗಾಗಿ, ಮ್ಯಾಕ್ರೋಮಟ್ಟದ ಆರ್ಥಿಕ ಶಾಕ್‌ಗಳನ್ನೆಲ್ಲ ಹೇಗೋ ನುಂಗಿಕೊಂಡು, ಏದುಸಿರಿನೊಂದಿಗೆ ದಿನದೂಡುತ್ತಿದ್ದ ಜನಸಾಮಾನ್ಯರಿಗೆ, 2016ರ ನೋಟು ರದ್ದತಿ ನೀಡಿದ ಆಘಾತ ಊಹಿಸಲಾಗದ್ದು. ಅದರ ನೇರ ಹೊಡೆತ ಬಿದ್ದದ್ದು ಅಡುಗೆ ಮನೆಯ ಸಾಸಿವೆ ಡಬ್ಬಿ ಉಳಿತಾಯಗಳ ಮೇಲೆ. ಅಲ್ಲಿಂದೀಚೆಗೆ ದೇಶದ ಆರ್ಥಿಕತೆಯ ವೇಗ ತಗ್ಗುತ್ತಲೇ ಹೋದದ್ದು ಈಗ ಚರಿತ್ರೆಯ ಭಾಗ.

ಹೀಗೆ ಅನಾರೋಗ್ಯಕ್ಕೊಳಗಾದ ಆರ್ಥಿಕತೆಯ ವೇಗ ಇನ್ನೇನು ಸುಧಾರಿಸಿಕೊಳ್ಳಬಹುದು ಎಂಬ ಸ್ಥಿತಿ ತಲುಪಿದಾಗ, 2020ರಲ್ಲಿ ಕೋವಿಡ್ ಜಗನ್ಮಾರಿ ಬಂದು ಅಪ್ಪಳಿಸಿತು. ಈ ಹೊಡೆತಕ್ಕೆ ದೇಶದ ಆರ್ಥಿಕತೆಯ ಒಟ್ಟು ಗಾತ್ರವೇ ಕುಸಿಯಿತು. ಅದರಿಂದ ದೇಶದ ಆರ್ಥಿಕ ಬೆಳವಣಿಗೆಗೆ ಆಗಿರುವ ಹಾನಿ ಅಭೂತಪೂರ್ವ. ನಾವೀಗ ಅಲ್ಲಿಂದ ಚೇತರಿಕೆಯ ಹಾದಿಯಲ್ಲಿದ್ದೇವೆ. 2024-25ರ ಹೊತ್ತಿಗೆ ಆರ್ಥಿಕ ಚೇತರಿಕೆಯು ಇನ್ನೇನು, ಕೋವಿಡ್ ಪೂರ್ವ ಸ್ಥಿತಿಯನ್ನು ದಾಟುತ್ತಿದೆ.

ಈಗ ನರೇಂದ್ರ ಮೋದಿ ಅವರ ಸರ್ಕಾರ 11 ವರ್ಷ ಪೂರೈಸಿರುವ ಸಂದರ್ಭದಲ್ಲಿ ದೇಶವು ಬಡತನದ ವಿರುದ್ಧ ಹೋರಾಟದಲ್ಲಿ ಗೆದ್ದಿದೆ, ಸರ್ಕಾರದ ಸರ್ವಾಂಗೀಣ ಸಾಧನೆಗಳ ಕಾರಣದಿಂದಾಗಿ ಭಾರತ ಇಂದು ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಬಲಿತು ನಿಂತಿದೆ ಎಂಬ ಪ್ರಚಾರ ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಈ ಪ್ರಚಾರದ ಭರದಲ್ಲಿ ಹಲವು ವಿರೋಧಾಭಾಸಗಳು ಕೂಡ ಮುನ್ನೆಲೆಗೆ ಬರುತ್ತಿವೆ. ಸತತ ಎಂಟು ವರ್ಷಗಳಿಂದ ಒಂದಿಲ್ಲೊಂದು ಆರ್ಥಿಕ ಸಂಕಟವನ್ನು ಎದುರಿಸುತ್ತಾ ಬರುತ್ತಿರುವ ದೇಶ ಈಗ ಏಕಾಏಕಿ 'ಪವಾಡ' ಸಾಧಿಸಿದೆ ಎಂದರೆ, ಅದನ್ನು ಸ್ವಸ್ಥ ಮನಸ್ಸೊಂದು ಜೀರ್ಣಿಸಿಕೊಳ್ಳುವುದು ಕಷ್ಟ. 'ಸಾರ್ವಜನಿಕ ನೆನಪು ಕಿರಿದು' ಎಂಬ ತತ್ವವನ್ನು ಆತುಕೊಂಡು ಸರ್ಕಾರ ತನ್ನ ಸಾಧನೆಯ ಪ್ರಚಾರದಲ್ಲಿ ನಿರತವಾಗಿರುವಂತೆ ಕಾಣಿಸುತ್ತಿದೆ.

ಬಡತನ ನಿವಾರಣೆಯ ಸಂಗತಿಯನ್ನೇ ತೆಗೆದುಕೊಳ್ಳಿ. ವಿಶ್ವಬ್ಯಾಂಕಿನ ವರದಿಯೊಂದನ್ನು ಉಲ್ಲೇಖಿಸಿರುವ ಸರ್ಕಾರವು ಪ್ರತಿದಿನ 2.15 ಡಾಲರ್ (ಅಂದಾಜು ₹184) ಆದಾಯದಲ್ಲಿ ಬದುಕುತ್ತಿರುವ ಕಡುಬಡವರ ಸಂಖ್ಯೆ 2011-12ರಲ್ಲಿ ಶೇ 16.2 ಇದ್ದುದು, ಈಗ 2022-23ರಲ್ಲಿ ಶೇ 2.3 ಇಳಿದಿದೆ ಎಂದು ಹೇಳಿಕೊಂಡಿದೆ. ಅಂದರೆ, ಅಂದಾಜು 17.10 ಕೋಟಿ ಭಾರತೀಯರು ಕಡುಬಡತನದಿಂದ ಮೇಲೆದ್ದಿದ್ದಾರೆ. ಇದಲ್ಲದೇ ಪ್ರತಿದಿನ 3.65 ಡಾಲರ್ (ಅಂದಾಜು ₹312) ಆದಾಯದಲ್ಲಿ ಬದುಕುತ್ತಿರುವ ಬಡವರ ಸಂಖ್ಯೆ 2011-12ರಲ್ಲಿ ಶೇ 61.8 ಇದ್ದುದು, ಈಗ 2022-23ರಲ್ಲಿ ಶೇ 28.1ಕ್ಕೆ ಇಳಿದಿದೆ. ಅಂದರೆ, ಅಂದಾಜು 37.10 ಕೋಟಿ ಭಾರತೀಯರು ಬಡತನದಿಂದ ಮೇಲೆದ್ದಿದ್ದಾರೆ ಎಂಬುದು ಸರ್ಕಾರದ ಕ್ಲೇಮು. ಇದಲ್ಲದೇ ಭಾರತದ್ದೇ ಬಹು ಆಯಾಮಗಳ ಬಡತನ ಇಂಡೆಕ್ಸ್ (ಎಂಪಿಐ) ಅಳವಡಿಸಿ ನೋಡಿದರೂ, 2005–06ರಲ್ಲಿ ಶೇ 53.8 ಇದ್ದ ದೇಶದ ಬಡವರ ಸಂಖ್ಯೆ, 2019-21ರಲ್ಲಿ ಶೇ 16.4ಕ್ಕೆ ಇಳಿದಿದೆ ಎಂದು ಸರ್ಕಾರ ಹೇಳುತ್ತಿದೆ. ಅಂದರೆ, ಅಂದಾಜು 145 ಕೋಟಿ ಜನಸಂಖ್ಯೆಯ ದೇಶದಲ್ಲೀಗ ಇರುವ ಕಡುಬಡವರ ಸಂಖ್ಯೆ ಕೇವಲ ಮೂರೂವರೆ ಕೋಟಿ. ಒಟ್ಟು ಬಡವರ ಸಂಖ್ಯೆ 40 ಕೋಟಿ ಮೀರುವುದಿಲ್ಲ.

ಆದರೆ ಇದೇ ಸರ್ಕಾರ, ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅಂತ್ಯೋದಯ ಅನ್ನ ಯೋಜನೆಯ ಅಡಿಯಲ್ಲಿ ಪ್ರತಿ ತಿಂಗಳು 81 ಕೋಟಿಗೂ ಮಿಕ್ಕಿ ಕಡುಬಡವರಿಗೆ ಉಚಿತ ಪಡಿತರ ಒದಗಿಸುವ ಮೂಲಕ ಸಬ್ಸಿಡಿ ನೀಡುತ್ತಿದೆ. ಈ ವಿರೋಧಾಭಾಸವನ್ನು ಸರ್ಕಾರ ಹೇಗೆ ವಿವರಿಸುತ್ತದೆ ಎಂಬ ಬಗ್ಗೆ ಕುತೂಹಲ ಇದೆ.

ಉದಾರೀಕರಣದ ಫಲವಾದ ಆರ್ಥಿಕ ಚೇತರಿಕೆಯ ಕಾರಣಕ್ಕೆ ಭಾರತದಲ್ಲಿ 2006-2016ರ ನಡುವೆ 27 ಕೋಟಿ ಜನ ಬಡತನ ರೇಖೆಯಿಂದ ಮೇಲೆದ್ದು, ಮಧ್ಯಮ-ಕೆಳಮಧ್ಯಮ ವರ್ಗಕ್ಕೆ ತಲುಪಿದ್ದರು. ಆದರೆ, ಕೋವಿಡ್ ಲಾಕ್‌ಡೌನ್ ಪರಿಣಾಮವಾಗಿ, ಅಂದಾಜು 26 ಕೋಟಿ ಮಂದಿ ವಾಪಸ್ ಬಡತನ ರೇಖೆಯ ಕೆಳಗೆ ದೂಡಿಸಿಕೊಂಡರು ಎಂದು ಯುಎನ್‌ಡಿಪಿ (ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ) ಕೋವಿಡ್ ಕಾಲದಲ್ಲಿ ಅಂದಾಜು ಮಾಡಿತ್ತು. ಕೋವಿಡೋತ್ತರ ಅವಧಿಯಲ್ಲಿ ಸಣ್ಣಗಾತ್ರದ ಸಾಲಗಳು ಮತ್ತು ಚಿನ್ನ ಅಡಮಾನ ಸಾಲಗಳು ಆರ್‌ಬಿಐ ಆತಂಕಕ್ಕೆ ಕಾರಣ ಆಗುವಷ್ಟು ಪ್ರಮಾಣದಲ್ಲಿ ಸುಸ್ತಿ ಆಗಿರುವುದು ವಾಸ್ತವ. ಈ ರೀತಿಯ ಸಣ್ಣಗಾತ್ರದ ಸಾಲಗಳು ಸುಸ್ತಿಯಾಗುವುದಕ್ಕೆ ಅಡುಗೆ ಮನೆಯ ಸಾಸಿವೆ ಡಬ್ಬಿ (ಆಪತ್ಕಾಲಕ್ಕೆ ಉಳಿತಾಯ) ಖಾಲಿ ಆಗಿರುವುದು ಕೂಡ ಒಂದು ಮುಖ್ಯವಾದ ಕಾರಣ.

ದಶವಾರ್ಷಿಕ ಕಾನೇಶುಮಾರಿ ಬಿಡಿ, ದೇಶದ ಜನರ ಖರೀದಿ-ಖರ್ಚಿನ ಸಾಮರ್ಥ್ಯಗಳನ್ನು ಅಂದಾಜಿಸುವ ಕುಟುಂಬ ಬಳಕೆ ವೆಚ್ಚ ಸಮೀಕ್ಷೆಯನ್ನೇ (Household Consumption Expenditure Survey) ಸರ್ಕಾರ 2011-12ರ ಬಳಿಕ 11 ವರ್ಷ ನಡೆಸಲಿಲ್ಲ. 2017-18ರ ಸರ್ವೆಯನ್ನು ಸರ್ಕಾರ ಅದು ತನ್ನ ನಿರೀಕ್ಷೆಯಂತಿಲ್ಲ ಎಂಬ ಕಾರಣಕ್ಕೆ ತಿರಸ್ಕರಿಸಿತ್ತು. 2023-24ರ ಸಮೀಕ್ಷೆ ಫಲಿತಾಂಶಗಳು 2024ರ ಡಿಸೆಂಬರ್‌ನಲ್ಲಿ ಬಿಡುಗಡೆಗೊಂಡವು. ನಮ್ಮ ಬಡತನ ಅಂದಾಜಿಸಲು ಇರುವ ಬಹು ಆಯಾಮಗಳ ಇಂಡೆಕ್ಸ್ ಬಗ್ಗೆ, ಜಿಡಿಪಿ ಲೆಕ್ಕಾಚಾರ ವಿಧಾನದ ಬಗ್ಗೆ ವಿವಾದಗಳಿವೆ. ಡೇಟಾಯುಗದಲ್ಲೂ ಅಂಕಿಅಂಶಗಳಿಗೆ ಬರ ಇದೆ. ಆದರೂ ಏಕಾಏಕಿ ಬಡತನ ನಿವಾರಣೆಯನ್ನು ಮಾತ್ರ ಬಹಳ ನಿಖರವಾಗಿ ಅಂದಾಜಿಸಿ ಬಹಿರಂಗಪಡಿಸಲಾಗಿದೆ. ಇವಕ್ಕೆಲ್ಲ ತಾಳಿ-ತಂತಿ ಇದ್ದಂತಿಲ್ಲ.

ಉದಾರೀಕರಣದ ಅತಿದೊಡ್ಡ ಅಡ್ಡ ಪರಿಣಾಮ ಆರ್ಥಿಕ ಅಸಮಾನತೆ. 2022-23ರ ಲೆಕ್ಕಾಚಾರದಂತೆ, ದೇಶದ ಅತ್ಯಂತ ಶ್ರೀಮಂತ ಶೇ 10 ಮಂದಿ ದೇಶದ ಒಟ್ಟು ಸಂಪತ್ತಿನ ಶೇ 65 ಪಾಲನ್ನೂ, ಆದಾಯದ ಶೇ 57.7 ಪಾಲನ್ನೂ ಹೊಂದಿದ್ದರೆ, ಮಧ್ಯಮ ವರ್ಗದ ಶೇ 40ರಷ್ಟು ಜನ ದೇಶದ ಸಂಪತ್ತಿನ ಶೇ 28.6 ಪಾಲನ್ನೂ, ಆದಾಯದ ಶೇ 27.3 ಪಾಲನ್ನೂ ಹೊಂದಿದ್ದಾರೆ. ತಳ ಮಟ್ಟದ ಶೇ 50 ಮಂದಿ ದೇಶದ ಒಟ್ಟು ಸಂಪತ್ತಿನ ಶೇ 6.4 ಪಾಲನ್ನೂ ಆದಾಯದ ಶೇ 15 ಪಾಲನ್ನೂ ಹೊಂದಿದ್ದಾರೆ (ಆಧಾರ: World inequality lab working paper, March 2024). ಫೋರ್ಬ್ಸ್ ಶ್ರೀಮಂತರ ಪಟ್ಟಿಯ ಪ್ರಕಾರ, 2014-2022ರ ನಡುವೆ ದೇಶದ ಶತಕೋಟ್ಯಧಿಪತಿಗಳ ಆದಾಯವು ಒಟ್ಟು ಶೇ 280 ಹೆಚ್ಚಾಗಿದ್ದು, ಅದೇ ಅವಧಿಯ ರಾಷ್ಟ್ರೀಯ ಆದಾಯದಲ್ಲಿನ ಹೆಚ್ಚಳದ ದರಕ್ಕಿಂತ (ಶೇ 27.8) ಇದು 10 ಪಟ್ಟು ಹೆಚ್ಚಿನ ಬೆಳವಣಿಗೆ. ಈ ಅಸಮಾನತೆಗೂ ಬಡತನಕ್ಕೂ ನಡುವೆ ಸಂಬಂಧ ಇದೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾದಂತೆಲ್ಲ ಬಡವರು ಮತ್ತಷ್ಟು ಬಡವರಾಗುತ್ತಾ ಸಾಗಿದ್ದಾರೆ. ಸಾಲ, ಆದಾಯ, ಉಳಿತಾಯಗಳೆಲ್ಲದರ ಅಂಕಿಅಂಶಗಳು ಇದನ್ನೇ ಬೊಟ್ಟು ಮಾಡುತ್ತಿವೆ.

ಅಂಕಿ-ಅಂಶಗಳಲ್ಲಿನ ವೈರುಧ್ಯಗಳು ವಾಸ್ತವವನ್ನು ಹೀಗೆ ಬಿಚ್ಚಿಡುತ್ತಿರುವಾಗ ಮತ್ತು ದೈನಂದಿನ ಜೀವನದಲ್ಲಿ ಪ್ರತಿದಿನ ಆರ್ಥಿಕ ಸಂಕಟದ ಸುದ್ದಿಗಳನ್ನು ಎಲ್ಲೆಡೆ ಕಾಣುತ್ತಿರುವಾಗ ಏಕಾಏಕಿ 'ಬಡತನ ನಿವಾರಣೆ ಆಗಿಬಿಟ್ಟಿದೆ' ಎಂಬ ಪ್ರಕಟಣೆ ಸರ್ಕಾರದ ಕಡೆಯಿಂದಲೇ ಹೊರಟುಬಿಟ್ಟರೆ, ಆ ಪವಾಡ ಸಂಭವಿಸಿದ್ದಾದರೂ ಎಲ್ಲಿ ಎಂಬ ಪ್ರಶ್ನೆ ಮೂಡದಿರುತ್ತದೆಯೆ? ದೇಶದಲ್ಲಿ ಬಡತನ ನಿವಾರಣೆ ಆಗುವುದು ಪ್ರತೀ ಕುಟುಂಬದ ಅಡುಗೆಮನೆಯ ಸಾಸಿವೆ ಡಬ್ಬಿಯಲ್ಲಿ ಉಳಿತಾಯ ಚಿಗುರಿಕೊಂಡಾಗ ಮಾತ್ರ. ಅಲ್ಲಿಯ ತನಕ ಎಲ್ಲ ಕ್ಲೇಮುಗಳೂ ಹೊಣೆಗಾರಿಕೆಯ ಹಂಗಿಲ್ಲದ ರಾಜಕೀಯ ಘೋಷಣೆಗಳಾಗಿಯೇ ಉಳಿಯುತ್ತವೆ.

ಲೇಖಕ: ಸಾಮಾಜಿಕ ವಿಶ್ಲೇಷಕ

ಪದಬಂಧ 6073


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಂಬಲವನ್ನು ಹೀಗೆ ಹೇಳಿ (4)
3.ಪೀಠಿಕೆಯನ್ನು ಈ ರೀತಿಯೂ ಹೇಳುವರು(4)
5.ಕೆಲಸದವರು ಬರುವ ಹಾದಿಯಲ್ಲಿರುವ ರಾಡಿ (3)
7.ಬಿಮ್ಮಾನ ತೋರಿದಾತನ ದುಃಖ (3)
9.ಹೊಟ್ಟೆಕಿಚ್ಚು ಹೀಗೆ ಬಂದಿದೆ (3)
10.ಬಾಣವನ್ನು ಹಿಡಿದಿರುವ ಶೈವ ಭಕ್ತ (3)
11.ವಾಲಿಯ ಮಗನಿವನು (3)
15.ಕೋಲನ್ನು ಹಿಡಿದುದಕ್ಕೇ ಈ ಗದ್ದಲ! (4)
16.ಕಾರನ್ನು ಏರಿದವನು ನಡೆಸಿದ ಆಡಳಿತ(4)

ಮೇಲಿಂದ ಕೆಳಕ್ಕೆ

1.ದೇವರಿಗೆ ಸಲ್ಲಿಸುವ ಮುಡಿಪು (3)
2.ತಗಡಿನಿಂದ ಮಾಡಿರುವ ಮುಚ್ಚುಳವುಳ್ಳ ಕರಡಿಗೆ (2)
3.ವಾರದ ಕೊನೆಗೆ ಕಾಣಿಸಿದ ಅಭ್ಯರ್ಥಿ (5)
4.ಆಯವ್ಯಯಮೊದಲಾದ ವಿಷಯಗಳ ವಿವರಗಳ ಪಟ್ಟಿ (2)
6.ಒಳ್ಳೆಯ ಅವಕಾಶವಿದು (5)
8.ಈತ ಬಿಳಿಯ ಕೂದಲುಳ್ಳವನು (5)
9.ಸಾಯುವ ಸಮಯವಿದು (5)
12.ಒಡ್ಡೋಲಗದಲ್ಲಿ ಅಧಿಕಾರ ನಡೆಸುವಿಕೆ (3)
13.ಮಂಗವಿಲ್ಲಿ ತಿರುಗಿ ನಿಂತಿದೆಯಲ್ಲಾ? (2)
14.ವಾಯಸ ಓಡಿಸುವವನು ಉತ್ತರದ ಕಡೆಯ ಚಿಕ್ಕಪ್ಪ (2)



6072ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲಂಗ 3.ಪಂಜರ
6.ರಿವಾಜು 7.ಸಿಬ್ಬಂದಿ
8.ಪಾದುಕೆ 10.ಚಿತೆ
11.ಬರಲು 13.ತೀರ
15.ವಿನಂತಿ 16.ಗರ್ಗರ
17.ನಗರ 18.ತಗರಿ
19.ಸನ್ನಾಹ

ಮೇಲಿಂದ ಕೆಳಕ್ಕೆ:
1.ಪಶುಪಾಲಕ 2.ಗರಿಕೆ
3.ಪಂಜು 4.ರಸಿಕತೆ
5.ಮಂದಿರ 9.ಅಂಬರ
10.ಚಿಲುಕ 12.ವಿಶ್ರಾಂತಿಗೃಹ
13.ತೀವ್ರಗತಿ 14.ತಂಗಳು
15.ವಿರಸ 17.ನರಿ

ಸುಡೊಕು 6457

	4			2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6456 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜೂನ್ 14, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ತೃತೀಯ ಗಂ. 15-47 ನಕ್ಷತ್ರ: ಉತ್ತರಾಷಾಢ ಗಂ. 24-22 ಯೋಗ: ಬ್ರಹ್ಮ ಗಂ. 13-13 ಕರಣ: ವಿಷ್ಟಿ ಗಂ. 15-47, ವೃಷಭ ಮಾಸದ 31 ನೇ ದಿನ. ಮಳೆ ನಕ್ಷತ್ರ : ಮೃಗಶಿರ 2 ನೇ ಪಾದ.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-07 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 17 ಜುಲ್‌ಹಿಜಾ
ದಿನ ವಿಶೇಷ : ಸಂಕಷ್ಟಹರ ಚತುರ್ಥಿ , ಅದೃಷ್ಟ ಸಂಖ್ಯೆ : 4, 12

ಮೇಷ: ಹಿರಿಯರ ಆಸೆಯಂತೆ ಅಕ್ಕ-ಪಕ್ಕದ ಆಸ್ತಿಯನ್ನು ಖರೀದಿಸುವ ಅವಕಾಶ ಸಿಗಲಿದೆ. ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಶ್ರದ್ಧೆ ಮತ್ತು ಬುದ್ಧಿ ಬಲದಿಂದ ಸಾಧನೆಗೆ ಚ್ಯುತಿ ಬರುವುದಿಲ್ಲ.

ವೃಷಭ: ಸರ್ಕಾರಿ ಕೆಲಸದ ಗುತ್ತಿಗೆದಾರರು ಕಾಮಗಾರಿಗಳನ್ನು ನಿಮ್ಮೆಡೆಗೆ ಮಾಡಿಕೊಳ್ಳುವ ವಿಚಾರದಲ್ಲಿ ವಿಫಲರಾಗಬಹುದು. ಹಾಲಿನ ಡೇರಿ ಪದಾರ್ಥಗಳ ವ್ಯಾಪಾರಸ್ಥರಿಗೆ ಉತ್ಪಾದನೆಯಿಂದ ಲಾಭ ಇರುವುದು.

ಮಿಥುನ: ವೃತ್ತಿಯಲ್ಲಿ ಹೆಚ್ಚು ಸ್ವತಂತ್ರವಾಗಿರಲು ಇಚ್ಛಿಸಿದಲ್ಲಿ ಅವಕಾಶಗಳು ಎದುರಾಗಲಿವೆ. ಪ್ರಾಣಮಿತ್ರರ ಸಹಕಾರದಿಂದ ಜೀವನ ಮಟ್ಟದಲ್ಲಿ ಉನ್ನತ ಸ್ಥಾನ ಮುಟ್ಟುವಿರಿ. ತಂದೆ ಮಕ್ಕಳ ಸಂಬಂಧ ಗಾಢವಾಗಿರುವುದು.

ಕರ್ಕಾಟಕ: ವಿದೇಶದಲ್ಲಿನ ಹುದ್ದೆಗೆ ಕರೆ ಬಂದು ಹೋಗುವ ಆಸೆಗೆ ಪುನಃ ಈ ದಿನ ಜೀವ ಬಂದಂತೆ ಆಗಲಿದೆ. ಆರ್ಥಿಕತೆಯ ಸಮಸ್ಯೆಗೆ ಶ್ರೀಲಕ್ಷ್ಮಿಯನ್ನು ಪೂಜಿಸಿದಲ್ಲಿ ಏಳಿಗೆ ಹೊಂದಲು ಸಾಧ್ಯ.

ಸಿಂಹ: ನಾಟಕ ಹಾಗೂ ಸಿನಿಮಾ ರಂಗದಲ್ಲಿ ಕೆಲಸನಿರ್ವಹಿಸುವವರಿಗೆ ಯಶಸ್ಸು ಇದ್ದು ಪ್ರೋತ್ಸಾಹ ದೊರೆಯಲಿವೆ. ಆರೋಗ್ಯದ ತೊಂದರೆಗಳು ಇಲ್ಲವಾಗುವುವು.

ಕನ್ಯಾ: ವಾಣಿಜ್ಯ ರಂಗದಲ್ಲಿ ಹೊಸ ತಿರುವು ಮೂಡಲಿದೆ. ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡುವುದು ಸಮಂಜಸವಲ್ಲ. ಸಹೋದರರಲ್ಲಿದ್ದ ಸ್ಥಿರಾಸ್ತಿ ವಿಚಾರದ ಮನಸ್ತಾಪ ದೂರಾಗಲಿದೆ.

ತುಲಾ: ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ರೈತವರ್ಗದವರಿಗೆ ಅನುಕೂಲಕರ ದಿನಗಳು. ಅಲಂಕಾರಿಕ ವಸ್ತುಗಳ ಮಾರಾಟಗಾರರಿಗೆ ವ್ಯಾಪಾರ ಉತ್ತಮ. ನೆಂಟರಿಷ್ಟರ ಆಗಮನ ಮನೆಯಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಲಿದೆ.

ವೃಶ್ಚಿಕ: ಜೀವನಶೈಲಿಯು ಬದಲಾಗಿ ಸರಿಯಾದ ಮಾರ್ಗಕ್ಕೆ ಹೋಗಿರುವುದು ಸ್ವಂತ ಅನುಭವಕ್ಕೆ ಬರಲಿದೆ. ನೆರೆಹೊರೆಯವರ ಸಹಕಾರ ಕೇಳುವ ಸಂದರ್ಭ ಬರಲಿದೆ. ಸಮಯಕ್ಕೆ ಸರಿಯಾಗಿ ಆಹಾರ ತೆಗೆದುಕೊಳ್ಳಿ

ಧನು: ಎದುರಾಗುವ ಅನಾರೋಗ್ಯಕ್ಕೆ ಮನೆಮದ್ದು ಮಾಡುವ ಬದಲು ನೇರವಾಗಿ ವೈದ್ಯರನ್ನು ಸಂಪರ್ಕಿಸುವುದು ಸರಿಯಾದ ಮಾರ್ಗ. ಕೊಡು ಕೊಳ್ಳುವಿಕೆಯ ವ್ಯವಹಾರದ ಅಧಿಕ ಲಾಭದ ಆಸೆಯಲ್ಲಿ ಮೋಸ ಹೋಗದಿರಿ.

ಮಕರ: ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಂಡು ಸಂಸಾರದ ಜವಾಬ್ದಾರಿಯನ್ನು ಉತ್ತಮವಾಗಿ ನೋಡಿಕೊಳ್ಳುವಂತೆ ಆಗಲಿದೆ. ಸಾಮಾಜಿಕವಾಗಿ ಸ್ಥಾನ ಹೆಚ್ಚಿ ಒಬ್ಬ ಉತ್ತಮ ಅಧಿಕಾರಿ ಎನಿಸಿಕೊಳ್ಳುವ ಸಂದರ್ಭ ಈಗ ಬರಲಿದೆ.

ಕುಂಭ: ಉದ್ಯೋಗ ಕ್ಷೇತ್ರದಲ್ಲಿ ಬಂದಿರುವ ಸಮಸ್ಯೆಗಳಿಗೆ ಪರಿಹಾರಗಳು ದೊರೆಯಲಿವೆ. ಮಾತೃ ವರ್ಗದವರ ಸಹಾಯದಿಂದ ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು. ಶಿವನ ಆರಾಧನೆಯಿಂದ ನೆಮ್ಮದಿ ಉಂಟಾಗಲಿದೆ.

ಮೀನ: ಒತ್ತಡದ ನಡುವೆಯು ಇತರರಿಗೆ ಸಹಾಯ ಮಾಡುವ ಪರೋಪಕಾರ ಮನೋಭಾವದಿಂದ ಯಶಸ್ಸು ಲಭಿಸಲಿದೆ. ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ಸಂತಸ ಮತ್ತು ಆದಾಯವಿರುವುದು. ಹಣಕಾಸಿನ ವಿಚಾರದಲ್ಲಿ ಜಾಗ್ರತೆ ವಹಿಸಿ.

₹6.15 ಕೋಟಿ ಮೌಲ್ಯದ ಸ್ವತ್ತು ಜಪ್ತಿ

ಇ.ಡಿಯಿಂದ ಕಾಂಗ್ರೆಸ್ ಕಚೇರಿ ಕಟ್ಟಡ, ಶಾಸಕ ಲಖ್ಮಾ ಆಸ್ತಿ ಮುಟ್ಟುಗೋಲು

ನವದೆಹಲಿ(ಪಿಟಿಐ): ಛತ್ತೀಸಗಢದಲ್ಲಿ ನಡೆದಿದೆ ಎನ್ನಲಾದ ಮದ್ಯ ಹಗರಣ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ, ಕಾಂಗ್ರೆಸ್ ಕಚೇರಿ ಹಾಗೂ ಪಕ್ಷದ ಶಾಸಕ ಕವಾಸಿ ಲಖ್ಮಾ ಅವರಿಗೆ ಸೇರಿದ ಆಸ್ತಿಗಳು ಸೇರಿ ಒಟ್ಟು ₹6.15 ಕೋಟಿ ಮೌಲ್ಯದ ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿದೆ ಎಂದು ಮೂಲಗಳು ಹೇಳಿವೆ.

ಶಾಸಕ ಲಖ್ಮಾ, ಅವರ ಪುತ್ರ ಹರೀಶ್ ಲಖ್ಮಾ ಅವರಿಗೆ ಸೇರಿದ ಸ್ವತ್ತುಗಳು ಹಾಗೂ ಸುಕ್ಮಾ ಜಿಲ್ಲೆಯಲ್ಲಿರುವ ಪಕ್ಷದ ಕಚೇರಿ ಕಟ್ಟಡವನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಈ ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ₹2,100 ಕೋಟಿ ಮೊತ್ತದ ಮದ್ಯದ ಹಗರಣಕ್ಕೆ ಸಂಬಂಧಿಸಿದ ತನಿಖೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದೂ ಮೂಲಗಳು ಹೇಳಿವೆ.

ರಾಯಪುರ, ಸುಕ್ಮಾ ಹಾಗೂ ಧಮ್ತಾರಿ ಜಿಲ್ಲೆಗಳಲ್ಲಿರುವ ಶಾಸಕ ಲಖ್ಮಾ ಅವರಿಗೆ ಸೇರಿದ ಸ್ಥಳಗಳಲ್ಲಿ ಕಳೆದ ವರ್ಷ ಡಿಸೆಂಬರ್‌ನಲ್ಲಿ ಇ.ಡಿ ದಾಳಿ ನಡೆಸಿತ್ತು. ನಂತರ, ಶಾಸಕ ಲಖ್ಮಾ ಅವರನ್ನು ಬಂಧಿಸಿತ್ತು.

ಕವಾಸಿ ಲಖ್ಮಾ ಅವರು ಈ ಹಿಂದಿನ ಮುಖ್ಯಮಂತ್ರಿ ಭೂಪೇಶ್ ಬಘೇಲ್ ನೇತೃತ್ವದ ಸರ್ಕಾರದಲ್ಲಿ ಅಬಕಾರಿ ಸಚಿವರಾಗಿದ್ದರು.

‘ಅಗ್ರಿ ಗೋಲ್ಡ್’: ಆಸ್ತಿ ಹಿಂದಿರುಗಿಸಿದ ಇ.ಡಿ


‘ಅಗ್ರಿ ಗೋಲ್ಡ್’ ಸಂಸ್ಥೆಯು ಹಣ ದ್ವಿಗುಣಗೊಳಿಸುವ ಆಮಿಷವೊಡ್ಡಿ ಹೂಡಿಕೆದಾರರಿಗೆ ವಂಚಿಸಿರುವ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಜಪ್ತಿ ಮಾಡಿಕೊಂಡಿದ್ದ ಆಸ್ತಿಗಳ ಪೈಕಿ ₹611 ಕೋಟಿ ಮೌಲ್ಯದ ಆಸ್ತಿಗಳನ್ನು ಆಂಧ್ರ ಪ್ರದೇಶ ಸರ್ಕಾರದ ಸ್ವಾಧೀನಕ್ಕೆ ನೀಡಿದೆ. ಈ ಆಸ್ತಿಗಳ ಈಗಿನ ಮಾರುಕಟ್ಟೆ ಮೌಲ್ಯ ₹1,000 ಕೋಟಿಗೂ ಅಧಿಕ ಎಂದು ಇ.ಡಿ ಶುಕ್ರವಾರ ತಿಳಿಸಿದೆ.

ಅಗ್ರಿ ಗೋಲ್ಡ್ ಸಂಸ್ಥೆಯಿಂದ ವಂಚನೆಗೆ ಒಳಗಾದವರಿಗೆ ಮತ್ತಷ್ಟು ಹಣ ಮರುಪಾವತಿ ಮಾಡಲು ಇದು ನೆರವಾಗಲಿದೆ ಎಂದು ಇ.ಡಿ ಹೇಳಿದೆ. ಈಗಾಗಲೇ ಜಾರಿ ನಿರ್ದೇಶನಾಲಯವು ಫೆಬ್ರುವರಿಯಲ್ಲಿ ₹3,339 ಕೋಟಿ ಮೌಲ್ಯದ ಆಸ್ತಿಗಳನ್ನು (ಈಗಿನ ಮಾರುಕಟ್ಟೆ ಮೌಲ್ಯ ₹6,000 ಕೋಟಿಗೂ ಹೆಚ್ಚಿದೆ) ಸರ್ಕಾರಕ್ಕೆ ಹಿಂದಿರುಗಿಸಿತ್ತು ಎಂದು ಇ.ಡಿ ತಿಳಿಸಿದೆ.

ಈ ಮೂಲಕ ಒಟ್ಟಾರೆ ₹7,000 ಕೋಟಿ ಮೌಲ್ಯದ ಆಸ್ತಿಯನ್ನು ಆಂಧ್ರ ಸರ್ಕಾರಕ್ಕೆ ಹಿಂದಿರುಗಿಸುವ ಪ್ರಕ್ರಿಯೆಯ ಅಂತಿಮ ಹಂತ ಸಾಧಿಸಿದಂತಾಗಿದೆ ಎಂದು ಅದು ಪ್ರಕಟಣೆಯಲ್ಲಿ ವಿವರಿಸಿದೆ. ಅತ್ಯಧಿಕ ಆದಾಯ ಅಥವಾ ವಸತಿ ಪ್ಲಾಟ್ ನೀಡುವ ಭರವಸೆಯೊಂದಿಗೆ ‘ಅಗ್ರಿ ಗೋಲ್ಡ್’ ಕಂಪನಿಗಳು ಜನರಿಂದ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆಗಳನ್ನು ಮಾಡಿಸಿತ್ತು.

ಅತ್ಯಾಚಾರ: ಐಐಟಿ ವಿದ್ಯಾರ್ಥಿ ಬಂಧನ

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆಯಲ್ಲಿ 13 ವರ್ಷದ ಅಂಗವಿಕಲ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಖರಗಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐಐಟಿ) ವಿದ್ಯಾರ್ಥಿಯನ್ನು ಬಂಧಿಸಲಾಗಿದೆ ಎಂದು ಶುಕ್ರವಾರ ಪೊಲೀಸರು ತಿಳಿಸಿದ್ದಾರೆ.



ಬಾಲಕಿ ತಾಯಿ ನೀಡಿದ ದೂರಿನ ಮೇರೆಗೆ 23 ವರ್ಷದ ಆರೋಪಿಯನ್ನು ಬಂಧಿಸಲಾಗಿದ್ದು, ಆತನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಮತ್ತು ಪೋಕ್ಸೋ ಕಾಯ್ದೆಯಡಿ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಆರೋಪಿಯು ಕಲ್ವಾ ಪ್ರದೇಶದಲ್ಲಿ ವಾಸಿಸುತ್ತಿದ್ದ. ಬಾಲಕಿಗೆ ಹೊಸ ಬಟ್ಟೆ ಕೊಡಿಸುವುದಾಗಿ ಆಮಿಷವೊಡ್ಡಿ, ಅತ್ಯಾಚಾರ ಎಸಗಿದ್ದಾನೆ. ತನಿಖಾ ತಂಡವು ಆರೋಪಿ ಮೊಬೈಲ್ ಫೋನ್ ಪರಿಶೀಲಿಸಿದಾಗ, ಅದರಲ್ಲಿ ಲೈಂಗಿಕ ದೌರ್ಜನ್ಯದ ವಿಡಿಯೊ ಮತ್ತು ಇತರ ಯುವತಿಯರ ಆಕ್ಷೇಪಾರ್ಹ ವಿಡಿಯೊ ಮತ್ತು ಫೋಟೊ ಇರುವುದು ತಿಳಿದುಬಂದಿದೆ’ ಎಂದಿದ್ದಾರೆ.

‘ಬೆಂಗಳೂರಿಗೆ ₹1.15 ಲಕ್ಷ ಕೋಟಿ ಕೊಡಿ’

ಒಂದನೇ ಪುಟದಿಂದ...

‘ಕರ್ನಾಟಕದಿಂದ ಕೇಂದ್ರಕ್ಕೆ ಸ್ವೀಕೃತವಾಗುವ ತೆರಿಗೆಯಲ್ಲಿ ಪ್ರತಿ ರೂಪಾಯಿಗೆ ಪ್ರತಿಯಾಗಿ 15 ಪೈಸೆ ಮಾತ್ರ ರಾಜ್ಯಕ್ಕೆ ವಾಪಸ್ ಬರುತ್ತಿದೆ. 14ನೇ ಹಣಕಾಸು ಆಯೋಗದಲ್ಲಿ ನಮ್ಮ ತೆರಿಗೆ ಪಾಲು ಶೇ 4.713ರಷ್ಟಿದ್ದು, ಅದನ್ನು 15ನೇ ಹಣಕಾಸು ಆಯೋಗದಲ್ಲಿ ತೆರಿಗೆ ಪಾಲು ಶೇ 3.647ಕ್ಕೆ ಇಳಿಕೆ ಮಾಡಿದ್ದರಿಂದ ತೆರಿಗೆ ಹಂಚಿಕೆ ಮೊತ್ತದಲ್ಲಿ ನಮ್ಮ ಪಾಲು ಒಟ್ಟಾರೆ ಶೇ 23ರಷ್ಟು ಇಳಿಕೆಯಾಗಿದೆ. ಐದು ವರ್ಷಗಳಲ್ಲಿ ಒಟ್ಟು ₹68,275 ಕೋಟಿ ಕಡಿಮೆ ಆಗಿದೆ. 16ನೇ ಆಯೋಗದಲ್ಲಿ ಈ ಅನ್ಯಾಯ ಮರುಕಳಿಸಬಾರದು ಎಂಬುದಾಗಿ ಹೇಳಿದ್ದೇವೆ’ ಎಂದರು.

‘ಕೇಂದ್ರ ಸರ್ಕಾರ ಸೆಸ್ ಮತ್ತು ಸರ್‌ಚಾರ್ಜ್‌ನಲ್ಲಿ ನಮಗೆ ಮಾತ್ರವಲ್ಲ, ಯಾವ ರಾಜ್ಯಕ್ಕೂ ಪಾಲು ಕೊಡುತ್ತಿಲ್ಲ. ರಾಜ್ಯದಿಂದ 2024–25ರಲ್ಲಿ ಒಟ್ಟು ₹5,41,709 ಕೋಟಿ ಸಂಗ್ರಹವಾಗಿದೆ. ₹8,084 ಕೋಟಿ ನಮಗೆ ನಷ್ಟವಾಗಿದೆ. ಸೆಸ್ ಮತ್ತು ಸರ್‌ಚಾರ್ಜ್ ಶೇ 5 ಮೀರಬಾರದು. ಒಂದು ವೇಳೆ ಶೇ 5 ಮೀರಿದರೆ ರಾಜ್ಯಗಳ ತೆರಿಗೆ ಹಂಚಿಕೆಯ ಪಾಲಿನಲ್ಲಿ ಶೇ 50ರಷ್ಟು ಹೆಚ್ಚಳ ಮಾಡಬೇಕೆಂದು ಹೇಳಿದ್ದೇವೆ’ ಎಂದರು.

‘15ನೇ ಹಣಕಾಸು ಆಯೋಗವು ರಾಜ್ಯಕ್ಕೆ ₹5,495 ಕೋಟಿ ವಿಶೇಷ ಅನುದಾನ ನೀಡಬೇಕು ಎಂದು ಶಿಫಾರಸು ಮಾಡಿತ್ತು. ಆದರೆ ಕೇಂದ್ರ ಸರ್ಕಾರ ಈ ಅನುದಾನವನ್ನು ಒದಗಿಸಲು ನಿರಾಕರಿಸಿತು. ಇದಲ್ಲದೇ ಬೆಂಗಳೂರಿನ ಪೆರಿಫೆರಲ್ ರಿಂಗ್ ರಸ್ತೆಗೆ ₹3,000 ಕೋಟಿ ಹಾಗೂ ಕೆರೆಗಳ ಅಭಿವೃದ್ಧಿಗೆ ₹3,000 ಕೋಟಿ ಶಿಫಾರಸು ಮಾಡಿತ್ತು. ಇವೆಲ್ಲ ಸೇರಿ ಒಟ್ಟು ₹11,495 ಕೋಟಿ ಒದಗಿಸಬೇಕೆಂದು ಶಿಫಾರಸು ಮಾಡಿತ್ತು’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ಸಭೆಯು ಒಂದೂ ಗಂಟೆಗೂ ಹೆಚ್ಚು ಕಾಲ ಸೌಹಾರ್ದಯುತವಾಗಿ ನಡೆದಿದ್ದು, ಆಯೋಗದ ಅಧ್ಯಕ್ಷರು ನಮ್ಮ ಸಲಹೆಗಳನ್ನು ಸ್ವೀಕರಿಸಿದ್ದಾರೆ’ ಎಂದರು.

ಆಯೋಗದ ಅಧ್ಯಕ್ಷ ಡಾ.ಅರವಿಂದ ಪನಗರಿಯ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಇದ್ದರು.

ಬೇರೊಬ್ಬ ಮಹಿಳೆಯನ್ನು ಹತ್ಯೆ ಮಾಡಲು ಯೋಜನೆ ರೂಪಿಸಿದ್ದ ಆರೋಪಿಗಳು

ಸೋನಮ್ 'ಕೊಲೆ' ಬಿಂಬಿಸಲು ಸಂಚು

ಶಿಲ್ಲಾಂಗ್ (ಪಿಟಿಐ): ಬೇರೊಬ್ಬ ಮಹಿಳೆಯನ್ನು ಹತ್ಯೆ ಮಾಡಿ, ದೇಹವನ್ನು ಸುಟ್ಟು, ಸೋನಮ್ ಶವ ಎಂದು ಬಿಂಬಿಸಲು, ಇಂದೋರ್ ಮೂಲದ ಉದ್ಯಮಿ ರಾಜಾ ರಘುವಂಶಿಯನ್ನು ಹತ್ಯೆಗೈದ ಆರೋಪಿಗಳು ಆಲೋಚಿಸಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಸೋನಮ್ ಪ್ರಿಯಕರ ರಾಜ್ ಕುಶ್ವಾಹ ಕೊಲೆಯ ಪ್ರಮುಖ ಸಂಚುಕೋರನಾಗಿದ್ದ ಎಂಬುದು ಗೊತ್ತಾಗಿದೆ. ರಘುವಂಶಿ ಹತ್ಯೆಗೆ ಫೆಬ್ರುವರಿಯಿಂದಲೇ ಆರೋಪಿಗಳು ಸಂಚು ರೂಪಿಸ ತೊಡಗಿದ್ದರು. ಕೊಲೆ ಬಳಿಕ ಸೋನಮ್ ಹೇಗೆ ತಪ್ಪಿಸಿಕೊಳ್ಳಬೇಕು ಎಂಬುದರ ಕುರಿತು ಹಲವು ಯೋಜನೆ ರೂಪಿಸಿದ್ದರು. 'ಸೋನಮ್ ನದಿಯಲ್ಲಿ ಕೊಚ್ಚಿ ಹೋದಳು ಎಂದು ನಂಬಿಸುವುದು ಹಾಗೂ ಇನ್ನೊಬ್ಬ ಮಹಿಳೆಯ ದೇಹವನ್ನು ಸುಟ್ಟು ಅದು ಸೋನಮ್ ಅವರದ್ದು ಎಂದು ಬಿಂಬಿಸಬೇಕೆಂದು ಕೊಂಡಿದ್ದರು' ಎಂದು ಮೇಘಾಲಯ ಪೊಲೀಸರು ತಿಳಿಸಿದರು.



ಸೋನಮ್ ಹಾಗೂ ರಾಜಾ ರಘುವಂಶಿ

ಪ್ರಿಯಕರ ಮತ್ತು ಸಹಚರರು ತನ್ನ ಪತಿಯನ್ನು ಹತ್ಯೆ ಮಾಡಿದ ಬಳಿಕ ಸೋನಮ್, ಬುರ್ಖಾ ಧರಿಸಿ ಮೇಘಾಲಯದಿಂದ ಮಧ್ಯಪ್ರದೇಶಕ್ಕೆ ತೆರಳಿರುವುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ. ರಾಜಾ ರಘುವಂಶಿಯನ್ನು ಹತ್ಯೆ ಮಾಡುವ ಸಂಚನ್ನು ಆರೋಪಿ ರಾಜ್ ಕುಶ್ವಾಹ, ಮದುವೆಗೂ ಮುನ್ನ ರೂಪಿಸಿದ್ದ.

ರಾಜಾ ರಘುವಂಶಿ, ಸೋನಮ್ ಮೇ 11ರಂದು ವಿವಾಹವಾಗಿದ್ದರು. ಮಧುಚಂದ್ರಕ್ಕಾಗಿ ಮೇಘಾಲಯಕ್ಕೆ ತೆರಳಿದ್ದಾಗ ಮೇ 23ರಿಂದ ದಂಪತಿ ನಾಪತ್ತೆಯಾಗಿದ್ದರು. ಜೂನ್ 2ರಂದು ರಘುವಂಶಿ ಅವರ ಶವ ಶಿಲ್ಲಾಂಗ್ ಸಮೀಪದ ಜಲಪಾತದ ಕಮರಿಯಲ್ಲಿ ಸಿಕ್ಕಿತ್ತು. ಸೋನಮ್‌ಗಾಗಿ ಪೊಲೀಸರು ಶೋಧ ಮುಂದುವರಿಸಿದ್ದರು.

ಸೋನಮ್ ಹಾಗೂ ಪ್ರಿಯಕರ ರಾಜ್, ರಾಜ ರಘುವಂಶಿಯ ಹತ್ಯೆಗೆ ಸುಪಾರಿ ನೀಡಿದ್ದರು ಎಂಬುದು ನಂತರ ಬೆಳಕಿಗೆ ಬಂದಿತು. ಇವರಿಬ್ಬರು ಹಾಗೂ ಕೊಲೆ ಆರೋಪಿಗಳಾದ ವಿಶಾಲ್, ಆಕಾಶ್, ಆನಂದ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿಗಳ ಮಂಪರು ಪರೀಕ್ಷೆ ನಡೆಸಿ'

ಇಂದೋರ್ (ಪಿಟಿಐ): ಪ್ರಕರಣದ ಹಿಂದಿನ ಸಂಪೂರ್ಣ ಸತ್ಯ ತಿಳಿಯಬೇಕಾದರೆ ಪ್ರಮುಖ ಆರೋಪಿಗಳಾದ ಸೋನಮ್ ಹಾಗೂ ರಾಜ್ ಕುಶ್ವಾಹ ಅವರ ಮಂಪರು ಪರೀಕ್ಷೆ ನಡೆಸಬೇಕೆಂದು ರಾಜಾ ರಘುವಂಶಿಯ ಹಿರಿಯ ಸಹೋದರ ಸಚಿನ್ ರಘುವಂಶಿ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿನ್, 'ಸೋನಮ್ ಹಾಗೂ ರಾಜ್ ಕುಶ್ವಾಹ ತನಿಖೆಯ ದಾರಿ ತಪ್ಪಿಸುತ್ತಿದ್ದಾರೆ. ಹತ್ಯೆಯ ಮಾಸ್ಟರ್‌ಮೈಂಡ್ ಯಾರೆಂದು ಪರಸ್ಪರ ಆರೋಪಿಸುತ್ತಿದ್ದಾರೆ. ಇವರಿಬ್ಬರೇ ಕೊಲೆ ಸಂಚು ರೂಪಿಸಲು ಸಾಧ್ಯವಿಲ್ಲ. ಇದರಲ್ಲಿ ಇನ್ನೂ ಹೆಚ್ಚು ಜನರು ಭಾಗಿಯಾಗಿದ್ದಾರೆ' ಎಂದು ಸಚಿನ್ ಆರೋಪಿಸಿದ್ದಾರೆ.

ಕಮಲ್ ಇನ್ನೂ ಕ್ಷಮೆ ಕೇಳಿಲ್ಲವೇ?: ಹೈಕೋರ್ಟ್

ಒಂದನೇ ಪುಟದಿಂದ...

ಮನೆಯೊಳಗಣ ಕಿಚ್ಚು: ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಪರ ಪದಾಂಕಿತ ಹಿರಿಯ ವಕೀಲ ಎಸ್.ಬಸವರಾಜ್ ಹಾಜರಾಗಿ, 'ಅರ್ಜಿದಾರರು ಕಾನೂನು ದುರ್ಬಳಕೆ ಮಾಡಿಕೊಂಡು ನಂತರ ನ್ಯಾಯಾಲಯದ ಮುಂದೆ ಬಂದಿದ್ದಾರೆ. ಅವರ ಈ ನಡೆ, ಮನೆಗೆ ಬೆಂಕಿ ಹಾಕಿ, ಅದನ್ನು ನಂದಿಸಲು ಸಹಾಯ ಮಾಡಿ ಎಂದು ಕೇಳುವ ರೀತಿಯಲ್ಲಿದೆ' ಎಂದರು. ಅಂತೆಯೇ, 'ಮನೆಯೊಳಗಣ ಕಿಚ್ಚು ಮನೆಯ ಸುಡದಲ್ಲದೆ, ನೆರೆಮನೆಯ ಸುಡದು ಕೂಡಲ ಸಂಗಮದೇವಾ'... ಎಂಬ ಬಸವಣ್ಣನವರ ವಚನವನ್ನು ಉದ್ಧರಿಸುವ ಮೂಲಕ, 'ಕಮಲ್ ತಮ್ಮ ನಡತೆಯ ಮೂಲಕ ಮನೆಗೆ ಬೆಂಕಿ ಹಚ್ಚಿಕೊಂಡಿದ್ದಾರೆ' ಎಂದು ಛೇಡಿಸಿದರು.

ಮಹಾಭಾರತ, ಮಾರ್ಕಂಡೇಯ ಪುರಾಣ, ಕಥಾ ಸರಿತ್ಸಾಗರ, ಮೃಚ್ಛಕಟಿಕ ನಾಟಕ, ಸ್ಕಂದ ಪುರಾಣ, ಪ್ರಾಕೃತ... ಇತ್ಯಾದಿಗಳಲ್ಲಿ ಕರ್ನಾಟಕ ಪದ ಬಳಕೆಯ ಆಕರ ಗ್ರಂಥಗಳ ಪಟ್ಟಿಯನ್ನೇ ನ್ಯಾಯ ಪೀಠಕ್ಕೆ ವಿವರಿಸಿದ ಬಸವರಾಜು, 'ಪ್ರತಿಯೊಬ್ಬರೂ ಇನ್ನೊಂದು ಭಾಷೆ, ಸಂಸ್ಕೃತಿ, ಪರಂಪರೆ, ಇತಿಹಾಸವನ್ನು ಗೌರವಿಸಬೇಕು ಎಂದು ಸಂವಿಧಾನ ಹೇಳುತ್ತದೆ. ಇದರಿಂದ ದೇಶದ ಏಕತೆ ಮತ್ತು ಸಮಗ್ರತೆ ಕಾಪಾಡಲು ಸಾಧ್ಯ. ತಮಿಳಿನಿಂದ ಕನ್ನಡ ಹುಟ್ಟಿದೆ ಎನ್ನುವ ಮೂಲಕ ಕಮಲ್ ಹಾಸನ್ ನೀಡಿರುವುದು ಮೂರ್ಖ ಹೇಳಿಕೆ ಎನ್ನುವುದನ್ನು ನಾನು ಸಾಬೀತು ಪಡಿಸುತ್ತೇನೆ' ಎಂದರು.

'ಮೂರ್ಖ' ಎಂಬ ಪದ ಬಳಕೆಗೆ ರಾಜ್‌ಕಮಲ್ ಫಿಲ್ಮ್ಸ್ ಪರ ವಕೀಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಅಂತೆಯೇ, ನ್ಯಾಯಮೂರ್ತಿ ನಾಗಪ್ರಸನ್ನ ಅವರೂ ಇದನ್ನು ಆಕ್ಷೇಪಿಸಿದರಲ್ಲದೆ, 'ನ್ಯಾಯಾಲಯದಲ್ಲಿ ಯಾರನ್ನೂ ಮೂರ್ಖ ಎಂದು ಕರೆಯುವುದು ಸರಿಯಲ್ಲ' ಎಂದರು.

ಕಸಾಪ ಅರ್ಜಿ: 'ಕನ್ನಡ ಭಾಷೆಯ ಇತಿಹಾಸ, ಸಂಸ್ಕೃತಿ ನ್ಯಾಯಪೀಠಕ್ಕೆ ಮನವರಿಕೆ ಮಾಡಿ ಕೊಡುವ ಉದ್ದೇಶದಿಂದ ಅರ್ಜಿಯಲ್ಲಿ ನಮ್ಮನ್ನೂ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲು ಅನುಮತಿ ನೀಡಬೇಕು' ಎಂದು ಕೋರಿರುವ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಅರ್ಜಿದಾರರಿಗೆ ಕಾಲಾವಕಾಶ ನೀಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿದೆ.

ಮೋದಿ ಮೌನ: ಕಾಂಗ್ರೆಸ್ ಟೀಕೆ

ನವದೆಹಲಿ (ಪಿಟಿಐ): 'ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧ ನಿಲ್ಲಿಸಿದ್ದು ತಾವೇ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 9ನೇ ಬಾರಿ ಹೇಳಿಕೆ ನೀಡಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರು ನಿರಂತರವಾಗಿ ಮೌನ ವಹಿಸಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿದೆ.

ಯುದ್ಧದ ಕುರಿತು ಟ್ರಂಪ್ ನೀಡಿದ ಹೇಳಿಕೆಯನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

'ಅಹಮದಾಬಾದ್‌ನಲ್ಲಿ ಸಂಭವಿಸಿದ ವಿಮಾನ ದುರಂತದಿಂದ ಇಡೀ ದೇಶವೇ ಶೋಕದಲ್ಲಿ ಮುಳುಗಿದೆ. ಆದರೆ, ಟ್ರಂಪ್ ಮಾತ್ರ ಯುದ್ಧ ನಿಲ್ಲಿಸಿದ್ದು ತಾವೇ ಎಂದು ಹೇಳಿಕೆ ನೀಡುವುದನ್ನು ಮುಂದುವರಿಸಿದ್ದಾರೆ. ಹೀಗಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರು ಮೌನ ವಹಿಸಿದ್ದಾರೆ' ಎಂದು ಹೇಳಿದ್ದಾರೆ.



ಜೈರಾಮ್ ರಮೇಶ್

'ಅವರು (ಟ್ರಂಪ್) ಏನೇ ಸಮಸ್ಯೆಯಿದ್ದರೂ ಪರಿಹರಿಸುವುದಾಗಿ ಹೇಳಿಕೊಂಡಿದ್ದಾರೆ. ಕಾಶ್ಮೀರ ವಿಚಾರವಾಗಿ ಭಾರತ ಹಾಗೂ ಪಾಕಿಸ್ತಾನದ ನಡುವೆ ದೀರ್ಘಕಾಲದಿಂದ ಶತ್ರುತ್ವ ಭಾವನೆಯಿದೆ. ಆದರೆ, ಟ್ರಂಪ್ ಮಾತ್ರ ಎರಡೂ ದೇಶಗಳನ್ನು ಹತ್ತಿರಕ್ಕೆ ತಂದಿರುವುದಾಗಿ ಹೇಳಿಕೆ ನೀಡಿದ್ದಾರೆ' ಎಂದು ತಿಳಿಸಿದ್ದಾರೆ.

'ಥಗ್ ಲೈಫ್': ರಾಜ್ಯಕ್ಕೆ ನೋಟಿಸ್

ನವದೆಹಲಿ: ನಟ ಕಮಲ್ ಹಾಸನ್ ನಟಿಸಿರುವ 'ಥಗ್ ಲೈಫ್' ಸಿನಿಮಾ ಪ್ರದರ್ಶನಕ್ಕೆ ಕರ್ನಾಟಕದಲ್ಲಿ ನಿಷೇಧ ಹೇರಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಶುಕ್ರವಾರ ನಡೆಸಿದ ಸುಪ್ರೀಂ, ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತು.

ಸಿನಿಮಾ ಪ್ರದರ್ಶಿಸಿದರೆ ಹಿಂಸಾಚಾರ ನಡೆಯುತ್ತದೆ ಎಂದು ಕೆಲ ಸಂಘಟನೆಗಳು ಬೆದರಿಕೆಯೊಡ್ಡಿವೆ. ಹೀಗೆ ಸಾಂವಿಧಾನಿಕವಲ್ಲದ ನಿರ್ದೇಶನಗಳ ಮೂಲಕ ರಾಜ್ಯದಲ್ಲಿ ಚಿತ್ರ ಬಿಡುಗಡೆಗೆ ತಡೆಯೊಡ್ಡಲಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಇದಕ್ಕೆ ಜೂನ್ 17ರೊಳಗೆ ಪ್ರತಿಕ್ರಿಯೆ ನೀಡುವಂತೆ ನೋಟಿಸ್ ಜಾರಿಗೊಳಿಸಿತು.

ಸಂಕ್ಷಿಪ್ತ ಸುದ್ದಿ

'ಉಸಿರು ನಿಲ್ಲುವವರೆಗೂ ನಾನೇ ಪಿಎಂಕೆ ಮುಖ್ಯಸ್ಥ'

ವಿಲ್ಲುಪುರಂ (ಪಿಟಿಐ): ತಾವು ಜೀವಂತವಾಗಿರುವವರೆಗೂ ಪಕ್ಷದ ಅಧ್ಯಕ್ಷರಾಗಿ ಮುಂದುವರಿಯುವುದಾಗಿ ತಮಿಳುನಾಡಿನ ಪಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ) ಪಕ್ಷದ ಸಂಸ್ಥಾಪಕ ಎಸ್.ರಾಮದಾಸ್ ಶುಕ್ರವಾರ ಪ್ರತಿಪಾದಿಸಿದ್ದಾರೆ.

ಪಿಎಂಕೆ ಪಕ್ಷದ ನಾಯಕತ್ವದ ವಿಚಾರವಾಗಿ ರಾಮದಾಸ್ ಮತ್ತು ಅವರ ಪುತ್ರ ಅನ್ಬುಮಣಿ ರಾಮದಾಸ್ ನಡುವಿನ ಜಗಳ ಕೊನೆಗಾಣುವಂತೆ ಕಾಣುತ್ತಿಲ್ಲ. ಅನ್ಬುಮಣಿ ಪಕ್ಷದ ಕಾರ್ಯಕಾರಿ ಅಧ್ಯಕ್ಷರಾಗಲು ಮತ್ತು ತನ್ನ ಮಾರ್ಗಸೂಚಿಗಳನ್ನು ಅನುಸರಿಸಲು ಒಪ್ಪಿಕೊಳ್ಳುವುದೊಂದೇ ಪರಿಹಾರ ಎಂದು ರಾಮದಾಸ್ ಅವರು ಹೇಳಿದರು.

'ಧರ್ಮಪುರಿ ಮತ್ತು ಸೇಲಂನಲ್ಲಿ ನಡೆದ ಪಕ್ಷದ ಸಭೆಗಳಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲು ನಾನು ಮೈಕ್ರೊಫೋನ್ ಬಳಸಬಾರದು ಮತ್ತು 200ಕ್ಕಿಂತ ಹೆಚ್ಚು ಕಾರ್ಯಕರ್ತರನ್ನು ಸೇರಿಸಬಾರದು ಎಂದು ಅನ್ಬುಮಣಿ ಹೇಳಿದ್ದರು. ಪಕ್ಷದ ಸದಸ್ಯರು ನನ್ನನ್ನು ಭೇಟಿಯಾಗಲು ಬಯಸಿದರೆ, ನನ್ನ ಕೋಣೆಯಲ್ಲಿ ಮಾತ್ರ ಭೇಟಿ ಮಾಡಬೇಕು ಎಂದು ಆದೇಶವನ್ನು ನೀಡಿದ್ದಾರೆ. ಪಕ್ಷದ ಸಂಸ್ಥಾಪಕರಿಗೆ ಅವರು ಹೇಗೆ ನಿರ್ದೇಶನಗಳನ್ನು ಕೊಡಬಹುದು? ನಾನು ಅವರಿಗೆ ಅಂತಹ ಅಧಿಕಾರ ನೀಡಿಲ್ಲ. ನನ್ನ ಉಸಿರು ನಿಲ್ಲುವವರೆಗೂ ನಾನೇ ಪಿಎಂಕೆ ಅಧ್ಯಕ್ಷ' ಎಂದು ರಾಮದಾಸ್ ಹೇಳಿದ್ದಾರೆ.

ಪಠಾಣ್‌ಕೋಟ್: ಐಎಎಫ್ ಹೆಲಿಕಾಪ್ಟರ್ ಮುಂಜಾಗ್ರತಾ ಭೂಸ್ಪರ್ಶ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ (ಐಎಎಫ್) ಅಪಾಚೆ ಹೆಲಿಕಾಪ್ಟರ್ ಪಂಜಾಬ್‌ನ ಪಠಾಣ್ ಕೋಟ್‌ನಲ್ಲಿ ಶುಕ್ರವಾರ ಮುಂಜಾಗ್ರತಾ ಭೂಸ್ಪರ್ಶ ಮಾಡಿದೆ. ಕಾಪ್ಟರ್‌ನ ಪೈಲಟ್ ಹಾಗೂ ಸಹ ಪೈಲಟ್ ಸುರಕ್ಷಿತವಾಗಿದ್ದಾರೆಂದು ಮೂಲಗಳು ತಿಳಿಸಿವೆ.

ಪಠಾಣ್‌ಕೋಟ್ ವಾಯುನೆಲೆಯಿಂದ ದೈನಂದಿನ ಕಾರ್ಯಾಚರಣೆಗೆ ಹೊರಟಿದ್ದ ಕಾಪ್ಟರ್, ಮಾರ್ಗಮಧ್ಯೆಯೇ ಗ್ರಾಮವೊಂದರಲ್ಲಿ ಮುಂಜಾಗ್ರತಾ ಭೂಸ್ಪರ್ಶ ಮಾಡಿದೆ. ಬಳಿಕ ಮತ್ತೆ ಕಾಪ್ಟರ್ ಅನ್ನು ವಾಯುನೆಲೆಗೆ ತರಲಾಗಿದೆ. ಇದಕ್ಕೆ ಕಾರಣವೇನು ಎಂಬುದು ತಿಳಿದಿಲ್ಲ.



ಮುಂಜಾಗ್ರತಾ ಭೂ ಸ್ಪರ್ಶ ಮಾಡಿರುವ ಐಎಎಫ್ ಕಾಪ್ಟರ್

ಉತ್ತರ ಪ್ರದೇಶದ ಸಹರನ್‌ಪುರದಲ್ಲಿಯೂ ವಾರದ ಹಿಂದಷ್ಟೇ ಐಎಎಫ್‌ನ ಅಪಾಚೆ ಕಾಪ್ಟರ್ ತಾಂತ್ರಿಕ ದೋಷದಿಂದಾಗಿ ಮುಂಜಾಗ್ರತಾ ಭೂಸ್ಪರ್ಶ ಮಾಡಿತ್ತು.

ಮಾಲಕಾನ್‌ಗಿರಿ: ಇಬ್ಬರು ನಕ್ಸಲರ ಸೆರೆ

ಮಾಲಕಾನ್‌ಗಿರಿ, ಒಡಿಶಾ (ಪಿಟಿಐ): 'ಇಲ್ಲಿನ ಮಾಲಕಾನ್‌ಗಿರಿ ಜಿಲ್ಲೆಯ ಮೈಥಿಲಿ ಪೊಲೀಸ್ ಠಾಣಾ ವ್ಯಾಪ್ತಿಯ ತೆಂಟುಲಿಗುಡಾ, ಸದೆಹೈಗುಡಾ ಅರಣ್ಯದಲ್ಲಿ ಇಬ್ಬರು ನಕ್ಸಲರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಛತ್ತೀಸಗಢದ ಸಿಪಿಐ (ಮಾವೋವಾದಿ) ಸಮಿತಿ ಸದಸ್ಯರಾದ ಕೆಶಕಾವಾಸಿ ಹಾಗೂ ರಾಜೇಶ್ ಅಲಿಯಾಸ್ ಶನುಕುಂಜಾಮ್ ಬಂಧಿತರಾಗಿದ್ದು, ಇಬ್ಬರು ತಲೆಗೂ ತಲಾ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಗುರುವಾರ ರಾತ್ರಿಯಿಂದಲೇ ಕಾಡಿನಲ್ಲಿ ಪೊಲೀಸರು ವ್ಯಾಪಕ ಶೋಧ ಕಾರ್ಯ ಆರಂಭಿಸಿದ್ದರು. ಮಾವೋವಾದಿಗಳು ಮುಖಾಮುಖಿಯಾಗುತ್ತಿದ್ದಂತೆಯೇ ಶರಣಾಗುವಂತೆ ಸೂಚಿಸಲಾಯಿತು. ಈ ವೇಳೆ ಪೊಲೀಸರ ಮೇಲೆ ದಾಳಿ ನಡೆಸಿದರು. ಪೊಲೀಸರು ಪ್ರತಿದಾಳಿ ನಡೆಸಿ, ಇಬ್ಬರು ನಕ್ಸಲರನ್ನು ಬಂಧಿಸಿದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ತಂಡದಲ್ಲಿದ್ದ ಉಳಿದವರು ಪರಾರಿಯಾಗಿದ್ದಾರೆ. ಬಂಧಿತರಿಂದ ರಿವಾಲ್ವರ್, ಆರು ಜೀವಂತ ಗುಂಡುಗಳು, ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿನೋದ್ ಪಾಟೀಲ್ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2: ಶೇ 30.39 ಫಲಿತಾಂಶ

ಒಂದನೇ ಪುಟದಿಂದ...

ಫಲಿತಾಂಶ ಉತ್ತಮಪಡಿಸಿಕೊಳ್ಳಲು 11,818 ವಿದ್ಯಾರ್ಥಿಗಳು ಮತ್ತೊಮ್ಮೆ ಪರೀಕ್ಷೆ ಬರೆದಿದ್ದು, ಅವರಲ್ಲಿ 6,635 ವಿದ್ಯಾರ್ಥಿಗಳು ಪರೀಕ್ಷೆ–1ರಲ್ಲಿ ಪಡೆದಿದ್ದಕ್ಕಿಂತ ಅಧಿಕ ಅಂಕ ಗಳಿಸಿದ್ದಾರೆ. ನಾಲ್ಕು ವಿದ್ಯಾರ್ಥಿಗಳು 625ಕ್ಕೆ 625 ಪಡೆಯುವಲ್ಲಿ ಸಫಲರಾಗಿದ್ದಾರೆ. ಅವರಲ್ಲಿ ಒಬ್ಬರು ಸರ್ಕಾರಿ ಶಾಲೆಯ ವಿದ್ಯಾರ್ಥಿ. ಪರೀಕ್ಷೆ–2ರಲ್ಲಿ ಕನ್ನಡ ಭಾಷಾ ವಿಷಯದಲ್ಲಿ 51,185 ವಿದ್ಯಾರ್ಥಿಗಳು, ಇಂಗ್ಲಿಷ್‌ನಲ್ಲಿ 29,529 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಎರಡೂ ಪರೀಕ್ಷೆಗಳಿಂದ ಒಟ್ಟು 6.10 ಲಕ್ಷ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ತೇರ್ಗಡೆಯಾಗಿದ್ದು, ಒಟ್ಟಾರೆ ಫಲಿತಾಂಶ ಶೇ 76.68ಕ್ಕೆ ಏರಿಕೆಯಾಗಿದೆ.


ಪರೀಕ್ಷೆ–3 ಜುಲೈ 5ರಿಂದ

ಎಸ್‌ಎಸ್‌ಎಲ್‌ಸಿ ಪರೀಕ್ಷೆ–3 ಜುಲೈ 5ರಿಂದ ಆರಂಭವಾಗಲಿದ್ದು, ಜುಲೈ 2ಕ್ಕೆ ಮುಕ್ತಾಯವಾಗಲಿದೆ. ಈ ಪರೀಕ್ಷೆಗೂ ಶುಲ್ಕ ವಿನಾಯಿತಿ ನೀಡಲಾಗಿದೆ. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವವರು, ಪುನರಾವರ್ತಿತರಿಗೆ ವಿನಾಯಿತಿ ಸೌಲಭ್ಯ ಇರುವುದಿಲ್ಲ. ಎಲ್ಲರಿಗೂ ಬೋಧನಾ ತರಗತಿ ನಡೆಸಲಾಗುತ್ತದೆ ಎಂದು ಶಾಲಾ ಪರೀಕ್ಷೆ ಮಂಡಳಿ ಹೇಳಿದೆ.

625 ಅಂಕ ಪಡೆದವರು (ಪರೀಕ್ಷೆ–1ರ ಅಂಕ)

- ಲಕ್ಷ್ಮಿ ಬಿ. ಬಿದರಹಳ್ಳಿ, ಜ್ಞಾನಸಿರಿ ಜ್ಯೋತಿ ಶಾಲೆ, ವಿಜಯನಗರ (621)
- ಎಸ್. ಶ್ರೀರಾಮ್ ಶೆಟ್ಟಿ, ಸರ್ಕಾರಿ ಪ್ರೌಢಶಾಲೆ, ಹಾಲಾಡಿ, ಉಡುಪಿ (619)
- ಎಸ್. ಸಂಜನಾ, ಆದಿಚುಂಚನಗಿರಿ ಶಾಲೆ, ಶಿವಮೊಗ್ಗ (624)
- ಎಸ್. ಶಿವೇಂದು ಶ್ರೀಕರ್, ಡಾನ್‌ಬಾಸ್ಕೊ ಶಾಲೆ, ತುಮಕೂರು (623)


ಷೇರುಪೇಟೆ ವಹಿವಾಟು 573



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,888
ಇಂದಿನ ಅಂತ್ಯ	24,718
▼	169
ದಿನದ ಕನಿಷ್ಠ	24,473

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹339-561
ದ್ವಿತಳಿ (ಬಿ.ವಿ)	₹401-669


ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹193.50
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹1,400-1,800
ಮಧ್ಯಮ	₹1,000-1,400
ಸಣ್ಣ	₹500-1,000

ಕೆನರಾ ಬ್ಯಾಂಕ್ ಬಡ್ಡಿ ದರ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ರೆಪೊ ದರ ಆಧರಿಸಿದ ಸಾಲದ ಮೇಲಿನ ಬಡ್ಡಿದರವನ್ನು (ಆರ್‌ಬಿಎಲ್‌ಆರ್) ಶೇ 0.50ರಷ್ಟು ಕಡಿತಗೊಳಿಸಿದೆ.

Canara Bank

ಮನೆ ಮತ್ತು ವಾಹನ ಸಾಲದ ವಾರ್ಷಿಕ ಬಡ್ಡಿ ದರವು ಕ್ರಮವಾಗಿ ಶೇ 7.40 ಮತ್ತು ಶೇ 7.70 ಆಗಿದೆ. ಪರಿಷ್ಕೃತ ಹೊಸ ದರವು ಜೂನ್ 12ರಿಂದ ಜಾರಿಗೆ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ರೆಪೊ ದರವನ್ನು ಶೇ 0.50ರಷ್ಟು ಕಡಿತ ಮಾಡಿತ್ತು. ಇದರ ಬೆನ್ನಲ್ಲೇ ಬ್ಯಾಂಕ್‌ಗಳು ಬಡ್ಡಿ ದರ ತಗ್ಗಿಸಿದ್ದು, ಇದರ ಪ್ರಯೋಜನವನ್ನು ಗ್ರಾಹಕರಿಗೆ ನೀಡುತ್ತಿವೆ.

ಎರಡು ವರ್ಷದಲ್ಲಿ ₹6.57 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ 115 ಒಪ್ಪಂದ: ಎಂ.ಬಿ. ಪಾಟೀಲ

‘2.32 ಲಕ್ಷ ಉದ್ಯೋಗ ಸೃಷ್ಟಿ ನಿರೀಕ್ಷೆ’

ಪ್ರಜಾವಾಣಿ ವಾರ್ತೆ



ಎಂ.ಬಿ. ಪಾಟೀಲ

ಬೆಂಗಳೂರು: ರಾಜ್ಯದಲ್ಲಿ ಎರಡು ವರ್ಷಗಳಲ್ಲಿ ₹6.57 ಲಕ್ಷ ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ 115 ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದ್ದು, 2.32 ಲಕ್ಷ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಎರಡು ವರ್ಷಗಳ ಸಾಧನೆ ಒಳಗೊಂಡ ‘ಪ್ರಗತಿ ಪಥದ ಮುಂದಣ ಹೆಜ್ಜೆ’ ಕೈಪಿಡಿ ಬಿಡುಗಡೆ ಮಾಡಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಸಿದ್ಧಪಡಿಸಿದ ಹೊಸ ಕೈಗಾರಿಕಾ ನೀತಿ 2025-30 ಪ್ರಕಾರ ಮುಂದಿನ ಐದು ವರ್ಷಗಳಲ್ಲಿ ₹7.50 ಲಕ್ಷ ಕೋಟಿ ಹೂಡಿಕೆ ಆಕರ್ಷಿಸಿ, 20 ಲಕ್ಷ ಜನರಿಗೆ ಉದ್ಯೋಗ ನೀಡುವ ಗುರಿ ಇದೆ ಎಂದರು.

ಪ್ರಾದೇಶಿಕ ಸಮತೋಲನ ಆಶಯದಡಿ ಕೈಗಾರಿಕಾ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಎರಡು ವರ್ಷಗಳಲ್ಲಿ ಕೈಗಾರಿಕ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆ, ತಾಲ್ಲೂಕುಗಳಲ್ಲಿ ಹೂಡಿಕೆ ಮಾಡಲು ಉತ್ತೇಜನ ನೀಡಲಾಗಿದೆ. ಉದ್ಯೋಗ ಸೃಷ್ಟಿಯಲ್ಲಿ ಶೇ 75ರಷ್ಟು ಬೆಂಗಳೂರಿನ ಆಚೆಗೆ ಇರಲಿದೆ. ಅದರಲ್ಲೂ ಉತ್ತರ ಕರ್ನಾಟಕ ಭಾಗಕ್ಕೆ ಶೇ 45 ಉದ್ಯೋಗ ನೀಡಲು ಯೋಜನೆ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

‘ವೈಮಾನಿಕ ಕ್ಷೇತ್ರದಲ್ಲಿ ಬೆಂಗಳೂರು ದಾಪುಗಾಲು ಇಡುತ್ತಿದೆ. ವಿಮಾನಗಳ ನಿರ್ವಹಣೆ, ದುರಸ್ತಿ ಮತ್ತು ಸಂಪೂರ್ಣ ನವೀಕರಣದ (ಎಂಆರ್‌ಒ) ಏಷ್ಯಾದ ರಾಜಧಾನಿಯಾಗಿ ರೂಪುಗೊಳ್ಳಲಿದೆ. ಟಾಟಾ, ಇಂಡಿಗೊ, ಲಾಕ್‌ಹೀಡ್ ಸಂಸ್ಥೆಗಳು ಕ್ರಮವಾಗಿ ₹1,460 ಕೋಟಿ, ₹1,100 ಕೋಟಿ ಹಾಗೂ ₹500 ಕೋಟಿ ಹೂಡಿಕೆ ಮಾಡಲಿವೆ’ ಎಂದರು.

ರಾಜ್ಯದಲ್ಲಿ ವ್ಯವಸ್ಥಿತ ಮತ್ತು ವ್ಯಾಪಕ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು 44,165 ಎಕರೆ ವಿಸ್ತೀರ್ಣದಲ್ಲಿ ಪೀಣ್ಯ ಸೇರಿದಂತೆ ಒಟ್ಟು 18 ಕೈಗಾರಿಕಾ ವಸಹಾತುಗಳನ್ನು ವಿಶೇಷ ಬಂಡವಾಳ ಹೂಡಿಕೆ ಪ್ರದೇಶಗಳಾಗಿ ಘೋಷಣೆ ಮಾಡಲಾಗಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಕೈಗಾರಿಕಾ ವಲಯದಲ್ಲಿ ಕೆಐಎಡಿಬಿ ಸಂಗ್ರಹಿಸಿದ ಆಸ್ತಿ ತೆರಿಗೆಯಲ್ಲಿ ಶೇ70ರಷ್ಟು ಮೊತ್ತ ಮೂಲಸೌಕರ್ಯಕ್ಕೆ ಮೀಸಲಿಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಕೆಐಎಡಿಬಿ ಸಿಇಒ ಮಹೇಶ್, ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಉಪಸ್ಥಿತರಿದ್ದರು.

ಏಕಗವಾಕ್ಷಿಗೆ ‘ಮೈಕ್ರೊಸಾಫ್ಟ್’ ಸಹಯೋಗ

ಮೈಕ್ರೊಸಾಫ್ಟ್ ಕಂಪನಿಯ ಸಹಯೋಗದಲ್ಲಿ ಹೂಡಿಕೆದಾರರ ಸ್ನೇಹಿ ಏಕಗವಾಕ್ಷಿ ಅಂತರ್ಜಾಲ ತಾಣ ಅಭಿವೃದ್ಧಿಸಲಾಗಿದೆ. 30 ಇಲಾಖೆಗಳ 100ಕ್ಕೂ ಹೆಚ್ಚು ಸೇವೆಗಳನ್ನು ಈ ತಾಣದಲ್ಲಿ ಸುಲಭವಾಗಿ ಪಡೆಯಬಹುದು ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಹೂಡಿಕೆಯ ಒಪ್ಪಂದಗಳನ್ನು ಕಾಲಮಿತಿಯ ಒಳಗೆ ಅನುಷ್ಠಾನಗೊಳಿಸಲು ಎಲ್ಲ ಇಲಾಖೆಗಳ ಸಹಯೋಗ ಕೋರಲಾಗಿದೆ. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಈ ಕುರಿತು ಸಭೆ ನಡೆಸಲಾಗಿದೆ ಎಂದರು.

‘ಮೂರು ತಿಂಗಳಿನಲ್ಲಿ ಕ್ವಿನ್ ಸಿಟಿ ಆರಂಭ’

ದೊಡ್ಡಬಳ್ಳಾಪುರ-ದಾಬಸ್‌ಪೇಟೆ ಮಧ್ಯದಲ್ಲಿ ₹40,000 ಕೋಟಿ ಹೂಡಿಕೆಯ ಜ್ಞಾನ, ಯೋಗಕ್ಷೇಮ ಮತ್ತು ನಾವೀನ್ಯತೆಯ ‘ಕ್ವಿನ್ ಸಿಟಿ’ಯ ಸಿದ್ಧತೆಗಳನ್ನು ಮೂರು ತಿಂಗಳಲ್ಲಿ ಆರಂಭಿಸಲಾಗುವುದು ಎಂದು ಎಂ.ಬಿ. ಪಾಟೀಲ ಹೇಳಿದರು.

ಕೃತಕ ಬುದ್ಧಿಮತ್ತೆ, ದತ್ತಾಂಶ ವಿಶ್ಲೇಷಣೆ, ಹಣಕಾಸು- ತಂತ್ರಜ್ಞಾನ ಉದ್ಯಮಗಳಿಗೆ ನೆಲೆ ಕಲ್ಪಿಸಲು 1,000 ಎಕರೆ ವಿಸ್ತೀರ್ಣದಲ್ಲಿ ‘ಸ್ವಿಫ್ಟ್ ಸಿಟಿ’ ನಿರ್ಮಿಸಲಾಗುವುದು ಎಂದರು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 573 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರು ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಇರಾನ್‌ನ ಮೇಲೆ ಇಸ್ರೇಲ್ ದಾಳಿ ನಡೆಸಿದ್ದರಿಂದ ಬ್ರೆಂಟ್ ಕಚ್ಚಾ ತೈಲ ದರವು ಹೆಚ್ಚಳವಾಯಿತು. ಇದು ಹೂಡಿಕೆದಾರರ ಭಾವನೆ ಮೇಲೆ ಪರಿಣಾಮ ಬೀರಿತು. ಜೊತೆಗೆ ವಿದೇಶಿ ಬಂಡವಾಳದ ಹೊರಹರಿವು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 573 ಅಂಶ ಇಳಿಕೆಯಾಗಿ, 81,118ಕ್ಕೆ ವಹಿವಾಟು ಕೊನೆಗೊಂಡಿದೆ. ವಹಿವಾಟಿನ ವೇಳೆ 1,337 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 169 ಅಂಶ ಕಡಿಮೆಯಾಗಿ, 24,718ಕ್ಕೆ ಅಂತ್ಯಗೊಂಡಿದೆ.



ಸತತ ಎರಡು ದಿನದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ₹8.35 ಲಕ್ಷ ಕೋಟಿ ಕರಗಿದೆ.

ಅದಾನಿ ಪೋರ್ಟ್ಸ್, ಐಟಿಸಿ, ಎಸ್‌ಬಿಐ, ಇಂಡಸ್‌ಇಂಡ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಟೈಟನ್, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಅಲ್ಟ್ರಾ ಟೆಕ್ ಸಿಮೆಂಟ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಟೆಕ್ ಮಹೀಂದ್ರ, ಟಿಸಿಎಸ್, ಸನ್ ಫಾರ್ಮಾ ಮತ್ತು ಮಾರುತಿ ಸುಜುಕಿ ಇಂಡಿಯಾದ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್ ಕಾಂಗ್ ಮಾರುಕಟ್ಟೆಯು ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಗುರುವಾರದ ವಹಿವಾಟಿನಲ್ಲಿ ₹3,831 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರ್ ಇಂಡಿಯಾ ವಿಮಾನ ಅಪಘಾತ: ವಿಮೆ ಕ್ಲೇಮು ತ್ವರಿತ ಇತ್ಯರ್ಥ–ಎಲ್‌ಐಸಿ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ಅಪಘಾತದ ಸಂತ್ರಸ್ತರ ವಿಮೆಯ ಕ್ಲೇಮುಗಳ ಇತ್ಯರ್ಥ ಪ್ರಕ್ರಿಯೆಯನ್ನು ಸರಳ ಮತ್ತು ತ್ವರಿತಗೊಳಿಸಿರುವುದಾಗಿ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಶುಕ್ರವಾರ ತಿಳಿಸಿದೆ.

ವಿಮಾನ ಅಪಘಾತದಿಂದ ಪಾಲಿಸಿದಾರನು ಮೃತಪಟ್ಟಿರುವುದಾಗಿ ಸರ್ಕಾರದ ದಾಖಲೆ ಅಥವಾ ಕೇಂದ್ರ/ರಾಜ್ಯ ಸರ್ಕಾರ ಅಥವಾ ವಿಮಾನ ಪ್ರಾಧಿಕಾರದಿಂದ ಪಡೆದ ಪರಿಹಾರದ ದಾಖಲೆಯನ್ನು ಮರಣದ ಪ್ರಮಾಣ ಪತ್ರವನ್ನಾಗಿ ಅಂಗೀಕರಿಸಲಾಗುವುದು ಎಂದು ತಿಳಿಸಿದೆ.

ಹಕ್ಕುದಾರರು ತಮ್ಮ ಹತ್ತಿರುವ ಎಲ್‌ಐಸಿ ಶಾಖೆ ಅಥವಾ ವಿಭಾಗವನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ 022-68276827 ಕರೆ ಮಾಡಬಹುದು ಎಂದು ತಿಳಿಸಿದೆ.

ಬಜಾಜ್ ಅಲಯನ್ಸ್ ಲೈಫ್ ಇನ್ಶೂರೆನ್ಸ್ ಸಹ ಕ್ಲೇಮುಗಳ ತ್ವರಿತ ವಿಲೇವಾರಿಗೆ ಡೆಸ್ಕ್ ಅನ್ನು ಸ್ಥಾಪಿಸಿದೆ. ತ್ವರಿತವಾಗಿ ಕ್ಲೇಮುಗಳನ್ನು ಇತ್ಯರ್ಥ ಪಡಿಸುವುದಾಗಿ ತಿಳಿಸಿದೆ. ಪಾಲಿಸಿದಾರರ ಕುಟುಂಬಗಳಿಗೆ ಸಹಾಯ ಮಾಡಲು ಈ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ.

ಜಾಗತಿಕ ನವೋದ್ಯಮ ಬೆಂಗಳೂರಿಗೆ 14 ನೇ ಸ್ಥಾನ

ಪ್ರಜಾವಾಣಿ ವಾರ್ತೆ



ಪ್ರಿಯಾಂಕ್ ಖರ್ಗೆ

ಬೆಂಗಳೂರು: ಜಾಗತಿಕ ನವೋದ್ಯಮ ವ್ಯವಸ್ಥೆ ಸೂಚ್ಯಂಕದಲ್ಲಿ (ಜಿಎಸ್‌ಇಆರ್) ಬೆಂಗಳೂರು ನಗರ 21 ನೇ ಸ್ಥಾನದಿಂದ 14ನೇ ಸ್ಥಾನಕ್ಕೇರಿದೆ.

ಫ್ರಾನ್ಸ್‌ನ ಪ್ಯಾರಿಸ್ ನಗರದಲ್ಲಿ ನಡೆಯುತ್ತಿರುವ ವಿವಾ ಟೆಕ್ನಾಲಜಿ (ವಿವಾಟೆಕ್) ಸಮಾವೇಶದಲ್ಲಿ ಬಿಡುಗಡೆಗೊಳಿಸಿದ ಜಾಗತಿಕ ನವೋದ್ಯಮ ಪರಿಸರ ವ್ಯವಸ್ಥೆ ಸೂಚ್ಯಂಕ ವರದಿಯಲ್ಲಿ ಬೆಂಗಳೂರಿನ ನವೋದ್ಯಮ ಕ್ಷೇತ್ರದ ಸಾಧನೆ ಉತ್ತಮಗೊಂಡಿದೆ ಎಂಬ ಮಾಹಿತಿಯನ್ನು, ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹಂಚಿಕೊಂಡಿದ್ದಾರೆ. ಪ್ರಿಯಾಂಕ್ ಅವರು ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಈ ಸಮಾವೇಶದಲ್ಲಿ ಭಾಗವಹಿಸಿದ್ದಾರೆ.

ನವೋದ್ಯಮ ಕ್ಷೇತ್ರದಲ್ಲಿನ ನಿರ್ವಹಣೆ, ಹೂಡಿಕೆ, ಮಾರುಕಟ್ಟೆ ತಲುಪುವಿಕೆ, ಪ್ರತಿಭೆ ಮತ್ತು ಅನುಭವ, ಜ್ಞಾನ ಮತ್ತು ಉದಯೋನ್ಮುಖ ಸ್ಥಳೀಯ ಕೃತಕ ಬುದ್ಧಿಮತ್ತೆ (ಎಐ) ಶಕ್ತಿಯನ್ನು ಆಧರಿಸಿ ರ್‍ಯಾಂಕಿಂಗ್ ಅನ್ನು ನಿರ್ಧರಿಸಲಾಗುತ್ತದೆ.

ಜಾಗತಿಕ ನಾವೀನ್ಯತೆಯಲ್ಲಿ ದೊಡ್ಡಮಟ್ಟದ ಬದಲಾವಣೆ ಆಗು ತ್ತಿದೆ. ಉನ್ನತ ಮಟ್ಟದ ನವೋದ್ಯಮ ಕೇಂದ್ರದ ‘ಉದಯೋನ್ಮುಖ ತಾರೆ’ಯಾಗಿ ಬೆಂಗಳೂರು ಹೊರಹೊಮ್ಮುತ್ತಿದೆ. ಪ್ಯಾರಿಸ್ 12, ಫಿಲಡೆಲ್ಫಿಯಾ 13 ಮತ್ತು ಸಿಯಾಟೆಲ್ 15ನೇ ರ್‍ಯಾಂಕಿಂಗ್‌ನಲ್ಲಿವೆ. ಬೆಂಗಳೂರು ಈ ನಗರಕ್ಕೆ ಸರಿಸಮಾನವಾಗಿ ಮುನ್ನಡೆಯುತ್ತಿದೆ ಎಂದು ಪ್ರಿಯಾಂಕ್ ಹೇಳಿದ್ದಾರೆ.

ಡೀಪ್ ಟೆಕ್ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದ ಮುನ್ನಡೆಯಲ್ಲೂ ಬೆಂಗಳೂರು ಉತ್ತಮ ಸ್ಥಾನ ಗಳಿಸಿದೆ. ಎಐ ಮತ್ತು ಬಿಗ್ ಡೇಟಾ ವ್ಯವಸ್ಥೆಯಲ್ಲಿ ಬೆಂಗಳೂರು 5 ನೇ ರ್‍ಯಾಂಕಿಂಗ್ ಪಡೆದಿದೆ ಎಂದು ತಿಳಿಸಿದ್ದಾರೆ.

ಇರಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಿಂದ ಬೆಲೆ ಹೆಚ್ಚಳ

ಕಚ್ಚಾ ತೈಲ ದರ ಶೇ 8ರಷ್ಟು ಏರಿಕೆ



ಲಂಡನ್/ ನವದೆಹಲಿ (ರಾಯಿಟರ್ಸ್/ ಪಿಟಿಐ): ಇಸ್ರೇಲ್ ಮತ್ತು ಇರಾನ್ ನಡುವಿನ ಬಿಕ್ಕಟ್ಟು ಉಲ್ಬಣಗೊಂಡಿರುವುದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಶುಕ್ರವಾರ ಶೇ 8ರಷ್ಟು ಏರಿಕೆ ಆಗಿದೆ. ಪ್ರತೀ ಬ್ಯಾರೆಲ್ ದರ 75 ಡಾಲರ್‌ಗೆ ಮುಟ್ಟಿದೆ.

ಗುರುವಾರದ ವಹಿವಾಟಿನಲ್ಲಿ ಪ್ರತೀ ಬ್ಯಾರೆಲ್ ದರವು 68.77 ಡಾಲರ್ ಆಗಿತ್ತು. ಸಂಘರ್ಷವು ಶಮನಗೊಳ್ಳದಿದ್ದರೆ ಬ್ಯಾರೆಲ್ ದರ 100 ಡಾಲರ್‌ಗೆ ಮುಟ್ಟಬಹುದು ಎಂದು ಸುದ್ದಿಸಂಸ್ಥೆ ರಾಯಿಟರ್ಸ್ ವರದಿ ಮಾಡಿದೆ.

ಇಸ್ರೇಲ್ ಸಂಘರ್ಷವನ್ನು ಹೆಚ್ಚಿಸಲು ಪ್ರಯತ್ನಿಸಿದರೆ, ವಿಶ್ವದ ಪ್ರಮುಖ ಮಾರ್ಗವಾದ ಹಾರ್ಮುಜ್ ಜಲಸಂಧಿಯಲ್ಲಿ ತೈಲ ಸಾಗಣೆಗೆ ಅಡ್ಡಿಯಾಗಬಹುದು. ಇದರಿಂದ ಕಚ್ಚಾ ತೈಲದ ಬೆಲೆ ಏರಿಕೆಯಾಗಬಹುದು.

ಇರಾನ್ ಮತ್ತು ಒಮಾನ್ ನಡುವಿನ ಕಿರಿದಾದ ಹಡಗು ಮಾರ್ಗವಾದ ಹಾರ್ಮುಜ್ ಜಲಸಂಧಿಯ ಮೂಲಕವೇ ಸೌದಿ ಅರೇಬಿಯಾ, ಇರಾನ್, ಯುಎಇ, ಕುವೈತ್ ಮತ್ತು ಇರಾಕ್ ತಮ್ಮ ಹೆಚ್ಚಿನ ಕಚ್ಚಾ ತೈಲವನ್ನು ಏಷ್ಯಾಕ್ಕೆ ರಫ್ತು ಮಾಡುತ್ತವೆ. ಈ ಮಾರ್ಗದಲ್ಲಿ ಹಡಗುಗಳ ಸಂಚಾರ ಸ್ಥಗಿತಗೊಂಡರೆ ಕಚ್ಚಾ ತೈಲದ ಬೆಲೆ ಏರಿಕೆಯಾಗಲಿದೆ.

ಪ್ರತಿ ದಿನ ಅಂದಾಜು 2 ಕೋಟಿ ಬ್ಯಾರೆಲ್ ತೈಲ ಈ ಮಾರ್ಗದ ಮೂಲಕ ಪೂರೈಕೆ ಆಗುತ್ತದೆ. ಇದು ವಿಶ್ವದ ಒಟ್ಟು ತೈಲ ಬಳಕೆಯ ಐದನೇ ಒಂದು ಭಾಗದಷ್ಟಾಗಿದೆ.

‘ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ ಬ್ರೆಂಟ್ ಕಚ್ಚಾ ತೈಲ ದರವು ಗರಿಷ್ಠ ಮಟ್ಟಕ್ಕೆ ತಲುಪಿದೆ. ಬಿಕ್ಕಟ್ಟು ಶಮನಗೊಳ್ಳದಿದ್ದರೆ ಹಣದುಬ್ಬರ ಹೆಚ್ಚಾಗುವ ಆತಂಕವಿದೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ತೈಲ ಕಂಪನಿಗಳ ಷೇರು ಮೌಲ್ಯ ಇಳಿಕೆ: ಕಚ್ಚಾ ತೈಲ ಬೆಲೆ ಏರಿಕೆಯಿಂದ ಭಾರತದ ತೈಲ ಮಾರುಕಟ್ಟೆ ಕಂಪನಿಗಳು, ವಿಮಾನಯಾನ, ಪೇಂಟ್ ಮತ್ತು ಟೈರ್ ಕಂಪನಿಗಳ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಡೆಟ್, ಭಾರತೀಯ ತೈಲ ನಿಗಮ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಡೆಟ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಸ್ಪೈಸ್‌ಜೆಟ್ ಮತ್ತು ಇಂಟರ್‌ಗ್ಲೋಬ್ ಏವಿಯೇಷನ್ ಷೇರಿನ ಮೌಲ್ಯ ಕಡಿಮೆಯಾಗಿದೆ. ಬರ್ಗರ್, ಇಂಡಿಗೊ ಮತ್ತು ಏಷ್ಯನ್ ಪೇಂಟ್ಸ್ ಮತ್ತು ಸಿಯಟ್ ಹಾಗೂ ಅಪೋಲೊ ಟೈರ್ಸ್‌ನ ಷೇರಿನ ಮೌಲ್ಯದಲ್ಲೂ ಇಳಿಕೆಯಾಗಿದೆ.

ಚಿನ್ನದ ದರ ₹2,200, ಬೆಳ್ಳಿ ₹1,100 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹2,200 ಏರಿಕೆಯಾಗಿ, ₹1,01,540ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ₹1,900 ಹೆಚ್ಚಳವಾಗಿ, ₹1 ಲಕ್ಷವಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹1,100 ಏರಿಕೆಯಾಗಿ, ₹1,08,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟಿನಿಂದ ಹಳದಿ ಲೋಹದ ಧಾರಣೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ರೂಪಾಯಿ ಮೌಲ್ಯ 59 ಪೈಸೆ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 59 ಪೈಸೆ ಕುಸಿದಿದೆ. ಪ್ರತೀ ಡಾಲರ್ ಮೌಲ್ಯ ₹86.11 ಆಗಿದೆ. ಗುರುವಾರ ನಡೆದ ವಹಿವಾಟಿನಲ್ಲಿ ಪ್ರತೀ ಡಾಲರ್ ಮೌಲ್ಯ ₹85.52 ಆಗಿತ್ತು.

ಮುಂಬೈ ಧಾರಣೆ (ಶೇಂಗಾ)

13-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1380 (1375)
ಒಂದು ವಾರದ ಡೆಲಿವರಿ	1375 (1370)
ಪಾಮ್ ವಾರದ ಡೆಲಿವರಿ	1148 (1148)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹99,250 (97,250)
ಬೆಳ್ಳಿ ಕೆ.ಜಿ	₹1,06,300 (1,05,500)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1370 (1365)
ಸೋಯಾ (ರಿಫೈನ್ಡ್)	₹1170 (1165)
ಸೂರ್ಯಕಾಂತಿ (ರಿಫೈನ್ಡ್)	₹1335 (1325)
ಪಾಮೋಲಿನ್	₹1150 (1150)

ವಿನಿಮಯ ದರ

$ ಡಾಲರ್	86.11
£ ಪೌಂಡ್	116.57
€ ಯುರೊ	99.20
¥ ಯೆನ್ (100ಕ್ಕೆ)	60

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟಾ	
ಚಾಲಿ	38019-42098
ಚಿಪ್ಪು	25029-29099
ಕೋಕ	6869-19199
ಫ್ಯಾಕ್ಟರಿ	5069-24410
ಹೊಸಚಾಲಿ	34019-41629
ಶಿವಮೊಗ್ಗ	
ಬೆಟ್ಟೆ	47099-59400
ಗೊರಬಲು	17009-31500
ರಾಶಿ	45009-57509
ಸರಕು	60300-80100
ಸಿದ್ದಾಪುರ	
ಬಿಳಿಗೋಟು	24609-30619
ಚಾಲಿ	33669-40300
ಕೋಕ	17789-28300
ಕೆಂಪುಗೋಟು	20119-22809
ರಾಶಿ	42119-49199
ತಟ್ಟಿಬೆಟ್ಟೆ	26099-32499
ಶಿರಸಿ	
ಬೆಟ್ಟೆ	24521-37089
ಬಿಳಿಗೋಟು	22009-31599
ಚಾಲಿ	34999-42669
ಕೆಂಪುಗೋಟು	13000-22299
ರಾಶಿ	41808-48079
ಯಲ್ಲಾಪುರ	
ಬಿಳಿಗೋಟು	16099-31569
ಚಾಲಿ	31899-41111
ಕೋಕ	6899-17910
ಕೆಂಪುಗೋಟು	20399-25899
ರಾಶಿ	41609-53429
ತಟ್ಟಿಬೆಟ್ಟೆ	28906-38199

ವೇದನೆ, ವಿಷಾದ, ಸೂತಕದ ಛಾಯೆ

ಒಂದನೇ ಪುಟದಿಂದ...

‘ಸಂಬಂಧಿಕರ ಡಿಎನ್‌ಎ ಮಾದರಿ ಸಂಗ್ರಹಿಸುವ ಕೆಲಸ ನಡೆದಿದೆ. 215 ಮಂದಿ ಮೃತರ ಸಂಬಂಧಿಕರು ಡಿಎನ್‌ಎ ಮಾದರಿಯನ್ನು ನೀಡಲು ಸಂಪರ್ಕಿಸಿದ್ದಾರೆ’ ಎಂದು ವಿವರಿಸಿದರು.

ಸಿಬ್ಬಂದಿ ಮಹಾರಾಷ್ಟ್ರದವರು: ಅಪಘಾತಕ್ಕೀಡಾದ ಬೋಯಿಂಗ್ 787 ಡ್ರೀಮ್‌ಲೈನರ್ (ಎಐ 171) ವಿಮಾನದಲ್ಲಿದ್ದ ಇಬ್ಬರು ಪೈಲಟ್ ಸೇರಿ 10 ಸಿಬ್ಬಂದಿ ಮಹಾರಾಷ್ಟ್ರದವರು.

ಅಧಿಕಾರಿಯೊಬ್ಬರ ಪ್ರಕಾರ, ಕ್ಯಾಪ್ಟನ್ ಸುಮೀತ್ ಪುಷ್ಕರಾಜ್ ಸಭರ್ವಾಲ್ (56) ತಮ್ಮ ವಯೋವೃದ್ಧ ತಂದೆ–ತಾಯಿ ಜೊತೆಗೆ ಮಹಾರಾಷ್ಟ್ರದ ಜಲವಾಯುವಿಹಾರ ಬಡಾವಣೆಯಲ್ಲಿ ವಾಸವಿದ್ದರು.

ಸಹ ಪೈಲಟ್ ಕ್ಲೈವ್ ಕುಂದರ್ ಅವರು, ಮುಂಬೈನ ಪಶ್ಚಿಮ ಉಪನಗರದ ನಿವಾಸಿ ಎಂದು ಅವರ ಸಾಮಾಜಿಕ ಮಾಧ್ಯಮ ಖಾತೆ ಆಧರಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕ್ಯಾಬಿನ್ ಸಿಬ್ಬಂದಿ ದೀಪಕ್ ಪಾಠಕ್ ಠಾಣೆ ಜಿಲ್ಲೆಯ ಬದ್ಲಾಪುರದ ನಿವಾಸಿ. ಲಂಡನ್‌ಗೆ ಹೊರಡುವ ಮೊದಲು ತಾಯಿಯ ಜೊತೆಗೆ ಕಡೆಯದಾಗಿ ಮಾತನಾಡಿದ್ದರು. ಅವರು 11 ವರ್ಷಗಳಿಂದ ಏರ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಅವರ ಸಹೋದರಿ ಮಾಹಿತಿ ಹಂಚಿಕೊಂಡರು.

ಮತ್ತೋರ್ವ ಸಿಬ್ಬಂದಿ ಮೈಥಿಲಿ ಪಾಟೀಲ್ (23) ನವಿ ಮುಂಬೈನ ನಹವಾ ಗ್ರಾಮದ ನಿವಾಸಿ. ಎರಡು ವರ್ಷಗಳ ಹಿಂದೆ ಏರ್ ಇಂಡಿಯಾಕ್ಕೆ ಸೇರಿದ್ದು, ಇವರ ತಂದೆ ಮೋರೇಶ್ವರ್ ಪಾಟೀಲ್ ಅವರು ಒಎನ್‌ಜಿಸಿ ಸಂಸ್ಥೆಯಲ್ಲಿ ಕಾರ್ಮಿಕ ಗುತ್ತಿಗೆದಾರರಾಗಿದ್ದಾರೆ.

‘ವಿಮಾನ ಏರುವ ಮುನ್ನ ತಂದೆಗೆ ಕರೆ ಮಾಡಿದ್ದ ಮೈಥಿಲಿ, ಲಂಡನ್‌ನಲ್ಲಿ ವಿಮಾನ ಇಳಿಯುತ್ತಿದ್ದಂತೆಯೇ ಮತ್ತೆ ಕರೆ ಮಾಡುವುದಾಗಿ ತಿಳಿಸಿದ್ದಳು. ಅಷ್ಟು ಹೊತ್ತಿಗಾಗಲೇ ದುರಂತದಲ್ಲಿ ಮೃತಪಟ್ಟಿದ್ದಾಳೆ’ ಎಂದು ಗ್ರಾಮದ ಮಾಜಿ ಸರಪಂಚ್ ನೋವು ತೋಡಿಕೊಂಡಿದ್ದಾರೆ.

ಮತ್ತೊಬ್ಬ ಸಿಬ್ಬಂದಿ ಅಪರ್ಣಾ ಮಹದಿಕ್ (43) ಇಲ್ಲಿನ ಗೋರೆಗಾಂವ್ ನಿವಾಸಿಯಾಗಿದ್ದು, ಇವರು ಎನ್‌ಸಿಪಿ ನಾಯಕ ಸುನೀಲ್ ತತ್ಕರೆ ಸಂಬಂಧಿ ಎಂದು ಹೇಳಲಾಗಿದೆ. ಉಳಿದಂತೆ ರೋಶ್ನಿ ರಾಜೇಂದ್ರ ಸೊಂಘಾರೆ ಮತ್ತು ಸಾಯಿನಿತಾ ಚಕ್ರವರ್ತಿ ಇಬ್ಬರೂ ದೊಂಬಿವಿಲಿ ನಿವಾಸಿಗಳು.

ಮೃತಪಟ್ಟ ಪ್ರಯಾಣಿಕರಾದ ಮಹಾದೇವ್ ಪವಾರ್ (68) ಪತ್ನಿ ಆಶಾ (60) ಸೋಲಾಪುರ ಜಿಲ್ಲೆಯ ಸಂಗೋಲಾದ ಹತಿಡ್ ಗ್ರಾಮದ ನಿವಾಸಿ. 15 ವರ್ಷದಿಂದ ಗುಜರಾತ್‌ನಲ್ಲಿ ನೆಲಸಿದ್ದು, ಮಗನನ್ನು ಭೇಟಿಯಾಗುವ ಸಂಬಂಧ ಲಂಡನ್‌ಗೆ ಹೊರಟಿದ್ದರು.

ನಾಗಪುರದ ಉದ್ಯಮಿ ಮನೀಶ್ ಕಮ್ದರ್ ಪುತ್ರಿ ಯಶಾ ಕಮ್ದರ್ ಮೋಢಾ, ಈಕೆಯ ಪುತ್ರ ರುದ್ರ, ಅತ್ತೆ ರಕ್ಷಾಬೆನ್ ಅವರು ದುರಂತದಲ್ಲಿ ಅಸುನೀಗಿದ್ದಾರೆ.

ಪದಗಳಿಗೆ ದಕ್ಕದ ನೋವು–ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ‘ಕರುಣಾಜನಕ ಸ್ಥಿತಿಯಲ್ಲಿ, ಏಕಾಏಕಿ ಸಂಭವಿಸಿದ ಇಷ್ಟೊಂದು ಜನರ ಸಾವು ಮೂಡಿಸಿರುವ ಆಘಾತವು ಪದಗಳಿಗೆ ಮೀರಿದ್ದಾಗಿದೆ. ಈ ವಿಮಾನ ಅಪಘಾತವು ಪ್ರತಿಯೊಬ್ಬರನ್ನು ದಿಗ್ಭ್ರಾಂತಗೊಳಿಸಿದೆ...’

ಒಟ್ಟು 265 ಜನರ ಸಾವಿಗೆ ಕಾರಣವಾದ ಭೀಕರ ವಿಮಾನ ಅಪಘಾತದ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಬಳಿಕ ‘ಎಕ್ಸ್’ ಮೂಲಕ ಹೀಗೆ ತಮ್ಮ ನೋವನ್ನು ತೋಡಿಕೊಂಡಿದ್ದಾರೆ.

‘ಮೃತರ ಸಂಬಂಧಿಕರಿಗೆ ಆಗಿರುವ ನೋವು ಮತ್ತು ಅದು ಉಂಟು ಮಾಡಲಿರುವ ಶೂನ್ಯ ಹಲವು ವರ್ಷಗಳವರೆಗೂ ಕಾಡಲಿದೆ. ಓಂ ಶಾಂತಿ’ ಎಂದು ಅನಿಸಿಕೆ ಹಂಚಿಕೊಂಡಿದ್ದಾರೆ.

ಇಲ್ಲಿನ ಆಸ್ಪತ್ರೆಗೆ ತೆರಳಿ, ಅಪಘಾತದಲ್ಲಿ ಬದುಕುಳಿದ ವಿಶ್ವಾಸ್ ಕುಮಾರ್ ರಮೇಶ್ ಅವರ ಆರೋಗ್ಯ ವಿಚಾರಿಸಿದ ಅವರು, ಬಳಿಕ ಗಾಯಾಳುಗಳು ದಾಖಲಾಗಿರುವ ಸಿ7 ವಾರ್ಡ್‌ಗೂ ಭೇಟಿ ನೀಡಿದ್ದರು. ವೈದ್ಯರ ಜೊತೆಗೆ ಚರ್ಚಿಸಿ ಮಾಹಿತಿ ಪಡೆದರು.

ರೂಪಾನಿ ಕುಟುಂಬ ಸದಸ್ಯರ ಭೇಟಿ: ಮೋದಿ ಅವರು ಶುಕ್ರವಾರ ಇಲ್ಲಿ ಗುಜರಾತ್‌ನ ಮಾಜಿ ಮುಖ್ಯಮಂತ್ರಿ, ಅಪಘಾತದಲ್ಲಿ ಮೃತಪಟ್ಟ ವಿಜಯ್ ರೂಪಾನಿ ಅವರ ಕುಟುಂಬ ಸದಸ್ಯರನ್ನು ಭೇಟಿಯಾಗಿ ಸಾಂತ್ವನ ಹೇಳಿದರು. ಮೃತರಲ್ಲಿ 68 ವರ್ಷದ ರೂಪಾನಿ ಅವರೂ ಸೇರಿದ್ದರು.

ಬ್ರಿಟನ್, ಕೆನಡಾ, ಪೋರ್ಚುಗೀಸ್ ಸಂಪರ್ಕದಲ್ಲಿ ಭಾರತ

ನವದೆಹಲಿ (ಪಿಟಿಐ): ಅಹಮದಾಬಾದ್ ವಿಮಾನ ಅಪಘಾತ ದುರಂತ ಕುರಿತಂತೆ ವಿದೇಶಾಂಗ ಸಚಿವಾಲಯವು ಬ್ರಿಟನ್, ಕೆನಡಾ ಮತ್ತು ಪೋರ್ಚುಗೀಸ್ ಜೊತೆಗೆ ನಿರಂತರ ಸಂಪರ್ಕದಲ್ಲಿದೆ.

ಗುರುವಾರ ಸಂಭವಿಸಿದ ಅಪಘಾತದಲ್ಲಿ 169 ಭಾರತೀಯರಲ್ಲದೆ, ಬ್ರಿಟನ್‌ನ 53 ಮಂದಿ, ಕೆನಡಾದ ಒಬ್ಬರು, ಪೋರ್ಚುಗೀಸ್‌ನ ಏಳು ಮಂದಿ ಮೃತಪಟ್ಟಿದ್ದರು.

ಈ ಕುರಿತ ಟ್ವೀಟ್‌ನಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್, ‘ಮೂರು ರಾಷ್ಟ್ರಗಳ ಸಚಿವರು ದುರಂತದ ಕುರಿತು ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಪೂರ್ಣ ಸಹಕಾರ ನೀಡುವುದಾಗಿ ಹೇಳಿದ್ದಾರೆ’ ಎಂದಿದ್ದಾರೆ.

‘ರಫ್ತು ಪ್ರಮಾಣ ಹೆಚ್ಚಳ ನಿರೀಕ್ಷೆ’

ಸ್ಟಾಕ್‌ಹೋಮ್ (ಪಿಟಿಐ): ‘2025–26ರ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ಮೌಲ್ಯ ₹77.48 ಲಕ್ಷ ಕೋಟಿ (900 ಬಿಲಿಯನ್ ಡಾಲರ್) ದಾಟುವ ನಿರೀಕ್ಷೆ ಇದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.



ಪೀಯೂಷ್ ಗೋಯಲ್

ರಷ್ಯಾ–ಉಕ್ರೇನ್ ಸಂಘರ್ಷ, ಇಸ್ರೇಲ್–ಹಮಾಸ್ ಯುದ್ಧ ಮತ್ತು ಕೆಂಪು ಸಮುದ್ರದ ಬಿಕ್ಕಟ್ಟಿನ ನಡುವೆಯೂ ದೇಶದ ರಫ್ತು ಮೌಲ್ಯ 2024–25ರ ಆರ್ಥಿಕ ವರ್ಷದಲ್ಲಿ ₹71 ಲಕ್ಷ ಕೋಟಿಯಷ್ಟಾಗಿತ್ತು. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿತ್ತು ಎಂದು ಹೇಳಿದ್ದಾರೆ.

ಜಾಗತಿಕ ಆರ್ಥಿಕ ಅನಿಶ್ಚಿತ ಸ್ಥಿತಿಯ ನಡುವೆಯೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಫ್ತು ಮೌಲ್ಯ ₹77 ಲಕ್ಷ ಕೋಟಿ ದಾಟುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಸತ್ತೆ ಎನಿಸಿತ್ತು... ಹೇಗೋ ಬದುಕಿದೆ: ವಿಶ್ವಾಸ್

ಒಂದನೇ ಪುಟದಿಂದ...

45 ವರ್ಷದ ವಿಶ್ವಾಸ್ ಅವರು ಪತನಗೊಂಡ ವಿಮಾನದ 11ಎ ಸೀಟಿನಲ್ಲಿ ಕುಳಿತಿದ್ದರು. ವಿಮಾನದಲ್ಲಿ ಇವರ ಸಹೋದರ ಸೇರಿ 242 ಮಂದಿ ಇದ್ದರು.

ಎಕಾನಮಿ ದರ್ಜೆಯ ಈ ಸೀಟು, ಬ್ಯುಸಿನೆಸ್ ಕ್ಲಾಸ್ ಸಾಲಿನ ಸೀಟುಗಳ ನಂತರದ ಸಾಲಿನಲ್ಲಿತ್ತು. ಕಿಟಕಿ ಬದಿಯ ಈ ಸೀಟಿನ ಹತ್ತಿರವೇ ತುರ್ತು ಸಂದರ್ಭದಲ್ಲಿ ಬಳಸುವ ದ್ವಾರವೂ ಇತ್ತು.

‘ನಾನು ಕುಳಿತಿದ್ದ ಭಾಗ ಕಟ್ಟಡಕ್ಕೆ ಅಪ್ಪಳಿಸಿರಲಿಲ್ಲ. ಅಪಘಾತದ ರಭಸಕ್ಕೆ ನಾನು ಕುಳಿತಿದ್ದ ಕಡೆ ಸ್ವಲ್ಪ ಬಿರುಕು ಮೂಡಿತ್ತು. ಹೀಗಾಗಿ, ಹೊರಹೋಗಲು ಅನುವಾಯಿತು. ಸೀಟ್ ಬೆಲ್ಟ್ ಕಳಚಿ ಯೋಚಿಸದೆ ಜಿಗಿದಿದ್ದೆ. ಕೆಳಗೆ ಬಿದ್ದ ಕಡೆ ನೆಲವಿತ್ತು. ನನ್ನ ಎಡಗೈ ಸುಟ್ಟಿತ್ತು. ನಡೆಯಲು ಶಕ್ತನಾಗಿದ್ದೆ. ಎದ್ದು ಜೋರಾಗಿ ಹೆಜ್ಜೆ ಹಾಕುತ್ತಿದ್ದ ನನ್ನನ್ನು ಹಿಡಿದು ಯಾರೋ ಆಂಬುಲೆನ್ಸ್ ಹತ್ತಿಸಿದರು’ ಎಂದರು.

ವಿಮಾನ ಪತನ: ವಿತರಿಸಬೇಕಿರುವ ವಿಮಾ ಮೊತ್ತದ ಅಂದಾಜು

₹1 ಸಾವಿರ ಕೋಟಿ ದಾಟೀತೆ ಪರಿಹಾರ?

● ಮೃತ್ಯುಂಜಯ ಬೋಸ್/ ಮಹೇಶ ಕುಲಕರ್ಣಿ



ಮುಂಬೈ/ಬೆಂಗಳೂರು: ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ‘ಡ್ರೀಮ್‌ಲೈನರ್’ ಪತನಗೊಂಡು ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟವರಿಗೆ ನೀಡಬೇಕಾದ ವಿಮಾ ಪರಿಹಾರ ಮೊತ್ತವು ₹1 ಸಾವಿರ ಕೋಟಿಯಿಂದ ₹1,200 ಕೋಟಿಯಷ್ಟು ಆಗಲಿದೆ ಎಂದು ಅಂದಾಜಿಸಲಾಗಿದೆ.

ಡ್ರೀಮ್‌ಲೈನರ್‌ನಂತಹ ಬೃಹತ್ ವಿಮಾನಗಳ ಕಾರ್ಯಾಚರಣೆ ನಡೆಸುವ ಏಷ್ಯಾದ ವಿಮಾನಯಾನ ಸಂಸ್ಥೆಗಳಿಗೆ ಈ ಪ್ರಮಾಣದ ವಿಮಾ ಪರಿಹಾರವು ಹೊರೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅಹಮದಾಬಾದ್‌ನಲ್ಲಿ ಪತನಗೊಂಡಿರುವ ಡ್ರೀಮ್‌ಲೈನರ್ 2013ರ ಮಾದರಿಯ ವಿಮಾನ. ಇದು ಸರ್ದಾರ ವಲ್ಲಭಭಾಯಿ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗುರುವಾರ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ, ಮೇಘಾನಿನಗರ ಪ್ರದೇಶದಲ್ಲಿ ಪತನಗೊಂಡಿತ್ತು.

230 ಪ್ರಯಾಣಿಕರು ಹಾಗೂ 12 ಸಿಬ್ಬಂದಿ ಸೇರಿ ಒಟ್ಟು 242 ಜನರು ಈ ನತದೃಷ್ಟ ವಿಮಾನದಲ್ಲಿದ್ದರು. ಈ ಪೈಕಿ, ಒಬ್ಬ ಪ್ರಯಾಣಿಕ ಬದುಕುಳಿದಿದ್ದಾರೆ.

ಏರ್ ಇಂಡಿಯಾ ಮುಖ್ಯಸ್ಥರು ಆಗಿರುವ ಟಾಟಾ ಸನ್ಸ್ ಚೇರಮನ್ ಎನ್.ಚಂದ್ರಶೇಖರನ್ ಅವರು, ವಿಮಾನ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ಘೋಷಿಸಿದ್ದಾರೆ.


‘ಬೋಯಿಂಗ್ ವಿಮಾನ (787–8) ಪತನಗೊಂಡಿದ್ದರಿಂದಾಗಿ ಕಂಪನಿಗೆ ಭಾರಿ ನಷ್ಟವಾಗಿದೆ. ವಿಮಾನಕ್ಕೆ ₹600–700 ಕೋಟಿ ವಿಮೆ ಮಾಡಿಸಲಾಗಿತ್ತು’ ಎಂದು ವಿಮಾ ಕ್ಷೇತ್ರದ ಮೂಲಗಳು ಹೇಳುತ್ತವೆ.

ಪ್ರಯಾಣಿಕರು ಮೃತಪಟ್ಟಲ್ಲಿ ಇಲ್ಲವೇ ಗಾಯಗೊಂಡ ಸಂದರ್ಭದಲ್ಲಿ, ಭಾರತದಲ್ಲಿ ವಿಮಾನಯಾನ ಕಂಪನಿಗಳು ‘ಕ್ಯಾರಿಯೇಜ್ ಬೈ ಏರ್ ಆ್ಯಕ್ಟ್–1872’ ಅಡಿ ಪರಿಹಾರ ನೀಡುತ್ತವೆ. ಮಾಂಟ್ರಿಯಲ್ ಒಪ್ಪಂದದ ಅನ್ವಯ ಈ ಕಾಯ್ದೆಗೆ 1999ರಲ್ಲಿ ತಿದ್ದುಪಡಿ ತರಲಾಗಿದೆ.

ಈ ಒಪ್ಪಂದದಂತೆ, ವಿಮಾನ ಅಪಘಾತಗಳಲ್ಲಿ ಮೃತಪಟ್ಟ ಪ್ರಯಾಣಿಕರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ನೀಡಬೇಕು. ಅಹಮದಾಬಾದ್‌ನಲ್ಲಿ ಸಂಭವಿಸಿದ ಅಪಘಾತದಲ್ಲಿ 241 ಪ್ರಯಾಣಿಕರು ಮೃತಪಟ್ಟಿದ್ದಾರೆ. ಹೀಗಾಗಿ, ಪರಿಹಾರ ₹241 ಕೋಟಿ ಆಗಲಿದೆ.

ಆದರೆ, ಕಾನೂನು ಹೋರಾಟಗಳ ಬಳಿಕ ಕ್ಲೇಮುಗಳಲ್ಲಿ ಆಗುವ ಹೆಚ್ಚಳ ಹಾಗೂ ಅಂತಿಮವಾಗಿ ನೀಡಬೇಕಾದ ಮೊತ್ತವನ್ನು ಪರಿಗಣನೆಗೆ ತೆಗೆದುಕೊಂಡಾಗ, ವಿಮಾ ಪರಿಹಾರ ಮೊತ್ತ ₹1,000 ಕೋಟಿಯಿಂದ ₹1,500 ಕೋಟಿ ಆಗಲಿದೆ ಎಂಬ ಅಂದಾಜಿದೆ.

ವಾರಾಣಸಿ: ಬಿಜೆಪಿ ಮುಖಂಡನ ಕೊಲೆ– 16 ಮಂದಿಗೆ ಜೀವಾವಧಿ ಶಿಕ್ಷೆ



ವಾರಾಣಸಿ(ಪಿಟಿಐ): ನಗರದ ಬಿಜೆಪಿ ಮುಖಂಡ ಪಶುಪತಿನಾಥ ಸಿಂಗ್ ಅವರ ಕೊಲೆ ಪ್ರಕರಣದಲ್ಲಿ 16 ಮಂದಿ ಅಪರಾಧಿಗಳಿಗೆ ಇಲ್ಲಿನ ತ್ವರಿತಗತಿ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿ ಶುಕ್ರವಾರ ಆದೇಶಿಸಿದೆ.

‘ತ್ವರಿತಗತಿ ನ್ಯಾಯಾಲಯ ನ್ಯಾಯಮೂರ್ತಿ ಕುಲದೀಪ್ ಸಿಂಗ್ ಅವರು 16 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. ಪ್ರಕರಣದ ಇತರ ಇಬ್ಬರು ಆರೋಪಿಗಳ ವಿರುದ್ಧದ ವಿಚಾರಣೆ ಇನ್ನೂ ನಡೆಯುತ್ತಿದೆ’ ಎಂದು ಪಶುಪತಿನಾಥ ಸಿಂಗ್ ಪರ ವಕೀಲ ಪ್ರೇಮಪ್ರಕಾಶ್ ಗೌತಮ್ ತಿಳಿಸಿದ್ದಾರೆ.

2022ರ ಅಕ್ಟೋಬರ್ 12ರಂದು ಸಿಂಗ್ ಅವರ ಕೊಲೆಯಾಗಿತ್ತು.

ಘಟನೆ: ತಮ್ಮ ಮನೆ ಸಮೀಪದ ಮದ್ಯದ ಅಂಗಡಿ ಮುಂದಿನ ಬಯಲಿನಲ್ಲಿ ಯುವಕರು ಮದ್ಯ ಸೇವನೆ ಮಾಡುತ್ತಿದ್ದುದನ್ನು ಪಶುಪತಿನಾಥ ಸಿಂಗ್ ಆಕ್ಷೇಪಿಸಿದ್ದರು. ಮದ್ಯ ಸೇವನೆ ತ್ಯಜಿಸುವಂತೆಯೂ ಅವರು ಬುದ್ಧಿಮಾತು ಹೇಳಿದ್ದರು.

‘ಆಗ, ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಕೆಲ ಹೊತ್ತಿನ ನಂತರ 30–40 ಜನರಿದ್ದ ಗುಂಪು ಪಶುಪತಿನಾಥ ಸಿಂಗ್ ಅವರ ಮೇಲೆ ಬಡಿಗೆ, ಕಬ್ಬಿಣದ ಸರಳುಗಳಿಂದ ಹಲ್ಲೆ ನಡೆಸಿತ್ತು. ತಂದೆಯ ರಕ್ಷಣೆಗೆ ಧಾವಿಸಿದ್ದ ಪುತ್ರ ರಾಜನ್ ಸಿಂಗ್ ಮೇಲೂ ಗುಂಪು ಹಲ್ಲೆ ನಡೆಸಿತ್ತು’ ಎಂದು ವಕೀಲ ಗೌತಮ್ ತಿಳಿಸಿದ್ದಾರೆ.

‘ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪಶುಪತಿನಾಥ ಸಿಂಗ್ ಅವರು ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾಗಿ ವೈದ್ಯರು ಘೋಷಿಸಿದ್ದರು’ ಎಂದು ತಿಳಿಸಿದ್ದಾರೆ.

ನೀಟ್–ಯುಜಿ ಅಕ್ರಮ: ಇಬ್ಬರ ಕಸ್ಟಡಿ ವಿಸ್ತರಣೆ

ಮುಂಬೈ(ಪಿಟಿಐ): ‘ನೀಟ್–ಯುಜಿ’ ಅಂಕಗಳನ್ನು ತಿರುಚಲು ಯತ್ನಿಸಿದ ಪ್ರಕರಣದ ಇಬ್ಬರು ಆರೋಪಿಗಳ ಸಿಬಿಐ ಕಸ್ಟಡಿಯನ್ನು ಜೂನ್ 16ರವರೆಗೆ ವಿಸ್ತರಿಸಿ ಇಲ್ಲಿನ ನ್ಯಾಯಾಲಯವೊಂದು ಶುಕ್ರವಾರ ಆದೇಶಿಸಿದೆ.

ಸಂದೀಪ್ ಶಾ ಹಾಗೂ ಸಲೀಮ್ ಪಟೇಲ್ ಬಂಧಿತ ಆರೋಪಿಗಳು. ಇವರನ್ನು ಜೂನ್ 10ರಂದು ಬಂಧಿಸಲಾಗಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಅಧಿಕಾರಿಗಳ ಪ್ರಭಾವ ಬಳಸಿ, ಪರೀಕ್ಷೆ ಅಂಕಗಳನ್ನು ತಿರುಚಲಾಗುವುದು ಎಂದು ಆಮಿಷ ಒಡ್ಡಿ, ಕೆಲ ಅಭ್ಯರ್ಥಿಗಳ ಪಾಲಕರಿಂದ ಆರೋಪಿಗಳು ಲಕ್ಷಾಂತರ ರೂಪಾಯಿ ಪಡೆದಿದ್ದರು ಎನ್ನಲಾಗಿದೆ.



CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಸಮ್ಮಾನದಂಗಳದಲ್ಲಿ ಹೊಸ ಚಿಗುರು, ಹಳೆ ಬೇರು

‘ಕಾಸಾಗ್ರ್ಯಾಂಡ್’ ಪ್ರಸ್ತುತ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ 3ನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಇಂದು ಮೂರು ವಿಭಾಗಗಳ ನಾಮನಿರ್ದೇಶನಗಳನ್ನು ಪ್ರಕಟಿಸಲಾಗುತ್ತಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

ಅತ್ಯುತ್ತಮ ಚಿತ್ರಕಥೆ


ಉಪೇಂದ್ರ
ಚಿತ್ರ: ಯುಐ


ದುನಿಯಾ ವಿಜಯ್
ಚಿತ್ರ: ಭೀಮ



ಪೃಥ್ವಿ ಕೊಣನೂರು, ಅನುಪಮ ಹೆಗಡೆ
ಚಿತ್ರ: ಹದಿನೇಳೆಂಟು


ಮಹಾದೇವ ಹಡಪದ
ಚಿತ್ರ: ಪರಜ್ಯ


ವಿಜಯ್ ಕಾರ್ತಿಕೇಯ
ಚಿತ್ರ: ಮ್ಯಾಕ್ಸ್


ಜೈಶಂಕರ್ ಆರ್ಯರ್
ಚಿತ್ರ: ಶಿವಮ್ಮ ಯರೇಹಂಚಿನಾಳ


ಉತ್ಸವ್ ಗೋನವಾರ
ಚಿತ್ರ: ಫೋಟೋ


ರಾಘವೇಂದ್ರ ಎಂ.ನಾಯ್ಕ್
ಚಿತ್ರ: ಮಾರಿಗೋಲ್ಡ್

ಅತ್ಯುತ್ತಮ ಸಂಕಲನ


ಅರವಿಂದ್ ಶಾಸ್ತ್ರಿ
ಚಿತ್ರ: ಬಿಸಿ ಬಿಸಿ ಐಸ್‌ಕ್ರೀಂ


ರಿಕಿ ಮಾರ್ಟಿನ್
ಚಿತ್ರ: ಅಂಶು



ಜ್ಞಾನೇಶ್ ಮಠದ್
ಚಿತ್ರ: ಕೆರೆಬೇಟೆ


ಶಶಾಂಕ್ ನಾರಾಯಣ್
ಚಿತ್ರ: ಶಾಖಾಹಾರಿ


ಸಂಜೀವ್ ಜಾಗೀದಾರ್
ಚಿತ್ರ: ಬ್ಲಿಂಕ್



ಮನು ಶೆಡ್ಗಾರ್
ಚಿತ್ರ: ಫಾರ್ ರಿಜಿಸ್ಟ್ರೇಷನ್

ಅತ್ಯುತ್ತಮ ಗೀತಸಾಹಿತ್ಯ


ಯೋಗರಾಜ ಭಟ್
ಚಿತ್ರ: ಕರಟಕ ದಮನಕ


ವಿ.ನಾಗೇಂದ್ರ ಪ್ರಸಾದ್
ಚಿತ್ರಗಳು: ಕೃಷ್ಣಂ ಪ್ರಣಯ ಸಖಿ, ಕಾಲಪತ್ಥರ್


ಜಯಲಕ್ಷ್ಮಿ ಪಾಟೀಲ್
ಚಿತ್ರ: ಶಿವಮ್ಮ ಯರೇಹಂಚಿನಾಳ


ಪ್ರಮೋದ್ ಮರವಂತೆ
ಚಿತ್ರ: ಜೂನಿ


ಅಥರ್ವ ನವರಂಗೆ, ಹಿಮಾಂಶಿ ಚೌಧರಿ

ಅಥರ್ವ, ಹಿಮಾಂಶಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಥರ್ವ ನವರಂಗೆ ಹಾಗೂ ಹಿಮಾಂಶಿ ಚೌಧರಿ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ಸಿಂಗಲ್ಸ್ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿದರು.

ವಿ.ವಿ.ಪುರಂನ ಮ್ಯಾಚ್ ಪಾಯಿಂಟ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ, ಅಥರ್ವ ನವರಂಗೆ ಅವರು 11–8, 12–10, 11–6ರಿಂದ ಗೌರವ್ ಗೌಡ ಅವರನ್ನು ಸುಲಭವಾಗಿ ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಗೌರವ್ ಗೌಡ 11–8, 11–7, 11–9 ರಿಂದ ಸಿದ್ಧಾರ್ಥ ಧರಿವಾಲ್ ಅವರನ್ನು ಸೋಲಿಸಿದರೆ, ಅಥರ್ವ 9–11, 12–10, 8–11, 11–4, 11–6 ರಿಂದ ಆರ್ಣವ್ ಎನ್. ಅವರನ್ನು ಹಿಮ್ಮೆಟ್ಟಿಸಿದರು.

ತೀವ್ರ ಪೈಪೋಟಿಯಿಂದ ಕೂಡಿದ್ದ ಬಾಲಕಿಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಹಿಮಾಂಶಿ ಅವರು 11–4, 12–10, 5–11, 9–11, 11–4ರಿಂದ ಹಿಯಾ ಸಿಂಗ್ ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಹಿಮಾಂಶಿ ಅವರು 5–11, 3–11, 11–5, 11–2, 11–9 ರಿಂದ ಶಿವಾನಿ ಮಹೇಂದ್ರನ್ ವಿರುದ್ಧ ಹಾಗೂ ಹಿಯಾ ಸಿಂಗ್ ಅವರು 11–3, 11–2, 11–6 ರಿಂದ ಪ್ರೇಕ್ಷಾ ಟಿ. ತಿಲಾವತ್ ಅವರ ಎದುರು ಜಯಸಾಧಿಸಿದರು.

ವೇಲು ಸೋಷಿಯಲ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ವೇಲು ಸೋಷಿಯಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಶುಕ್ರವಾರ 2–1 ಗೋಲುಗಳಿಂದ ಗೌತಮ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ, ವೆಂಕಟೇಶ್ ಅವರು ಎರಡು ಗೋಲು ಗಳಿಸಿ (15 ಹಾಗೂ 16ನೇ ನಿಮಿಷ) ಮಿಂಚಿದರು. ಗೌತಮ ಎಫ್‌ಸಿ ಪರ ಆ್ಯಂಟೊ (47ನೇ ನಿ.) ಏಕೈಕ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಆರ್‌ಬಿಐ ಎಫ್‌ಸಿ ತಂಡವು 1–0ರಿಂದ ಲಾ ಮಾಸಿಯಾ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಬೆಂಗಳೂರು ರೇಸ್

ಕಲಮಿಟ್ಸಿ ಗೆಲ್ಲುವ ನಿರೀಕ್ಷೆ

ಮೇಡ್ಯಾನ್ ಪ್ಲೇಟ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಲಮಿಟ್ಸಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.05ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಕ್ರಾಂಜಿ ಪ್ಲೇಟ್; 2000 ಮೀ. ಗೋಲ್ಡ್ ಎಂಪೈರ್ 3, ರಿಫ್ರೆಶ್‌ಮೆಂಟ್ 4, ಅಮೇಜಿಂಗ್ ಸ್ಟ್ರೈಡ್ 2
2. ಸರ್ ಸೆಸಿಲ್ ಪ್ಲೇಟ್; 1200 ಮೀ. ಅಕಂಥ 8, ಸ್ಮೈಲ್ ಆಫ್ ಬ್ಯೂಟಿ 5, ದಿ ಸ್ಟ್ರೈಕಿಂಗ್ಲಿ 2
3. ಜಸ್ಟೀಸ್ ಪಿ.ಮೇಡಪ್ಪ ಮೆಮೋರಿಯಲ್ ಟ್ರೋಫಿ; 1200 ಮೀ. ಡಾನ್ ಕಾರ್ಲೋಸ್ 3, ಡೆನ್‌ಸೆಟ್ಸೂ 2, ವರ್ಲ್‌ವಿಂಡ್ 12
4. ವರ್ಲ್ಡ್ ಬ್ಲಡ್ ಡೋನರ್ ಡೇ ಕಪ್; 1600 ಮೀ. ಅಲಂಗೀರ್ 1, ಡ್ಯಾರಿಂಗ್ಟನ್ 3, ಪ್ರಿಸ್ಟೈನ್ ಗ್ಲೋರಿ 6
5. ಮೇಡ್ಯಾನ್ ಪ್ಲೇಟ್; 1200 ಮೀ. ಕಲಮಿಟ್ಸಿ 5, ಬೆರ್‍ರೆನಿಟಿ 9, ರಿಕಾರ್ಡೋ 7
6. ರಾಯಲ್ ಕಮಾಂಡ್ ಪ್ಲೇಟ್; 1200 ಮೀ. ಎಲ್ ರೇ 1, ಎಕ್ಲಿಪ್ಸ್ ಪಲ್ಸ್ 5, ಪೋಲ್ ಸ್ಟಾರ್ 3

ಉತ್ತಮ ಬೆಟ್: ಅಲಂಗೀರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್: ಮನುಗೆ ನಿರಾಶೆ

ಶೂಟಿಂಗ್: ಸುರುಚಿ ಸಿಂಗ್‌ಗೆ ಚಿನ್ನ

ಮ್ಯೂನಿಕ್ (ಪಿಟಿಐ): ಭಾರತದ ಶೂಟಿಂಗ್ ಕ್ರೀಡೆಯ ನವತಾರೆ ಸುರುಚಿ ಸಿಂಗ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ಶುಕ್ರವಾರ ಇಲ್ಲಿ ನಡೆದ ಮಹಿಳೆಯರ ವಿಭಾಗದ 10 ಮೀಟರ್ಸ್ ಪಿಸ್ತೂಲ್ ಫೈನಲ್‌ನಲ್ಲಿ ಅವರು ಚಿನ್ನಕ್ಕೆ ಗುರಿಯಿಟ್ಟರು.

19 ವರ್ಷದ ಸುರುಚಿ ಅವರು ಸ್ಪರ್ಧಿಸುತ್ತಿರುವ ಮೂರನೇ ವಿಶ್ವಕಪ್ ಇದಾಗಿದೆ. ವೈಯಕ್ತಿಕ ವಿಭಾಗದಲ್ಲಿ ಹ್ಯಾಟ್ರಿಕ್ ಚಿನ್ನದ ಪದಕ ಸಾಧನೆಯನ್ನೂ ಅವರು ಮಾಡಿದರು. ಹೋದ ಏಪ್ರಿಲ್‌ನಲ್ಲಿ ಬ್ಯೂನಸ್ ಐರಿಸ್ ಮತ್ತು ಲೀಮಾನಲ್ಲಿ ನಡೆದಿದ್ದ ಸ್ಪರ್ಧೆಗಳಲ್ಲಿಯೂ ಅವರು ಬಂಗಾರದ ಪದಕ ಬೇಟೆಯಾಡಿದ್ದರು.

ಇಲ್ಲಿ ನಡೆದ ಫೈನಲ್‌ನಲ್ಲಿ ಅವರು 241.9 ಅಂಕಗಳನ್ನು ಗಳಿಸಿದರು. ಈ ಹಾದಿಯಲ್ಲಿ ಸುರುಚಿ ಅವರು ಫ್ರಾನ್ಸ್‌ನ ಕ್ಯಾಮಿಲಿ ಜೆದ್ರಾಜೆಜೆವಾಸ್ಕಿ (241.7) ಮತ್ತು ಚೀನಾದ ಕಿಂಶನ್ ಯಾವೊ (221.7) ಅವರನ್ನು ಹಿಂದಿಕ್ಕಿದರು. ಕ್ಯಾಮಿಲಿ ಬೆಳ್ಳಿ ಮತ್ತು ಯಾವೊ ಕಂಚು ಗೆದ್ದರು.


ಚಿನ್ನದ ಪದಕದೊಂದಿಗೆ ಸುರುಚಿ ಸಿಂಗ್ ಎಕ್ಸ್ ಚಿತ್ರ

ಫ್ರಾನ್ಸ್ ಸ್ಪರ್ಧಿಯಿಂದ ನಿಕಟ ಪೈಪೋಟಿ ಎದುರಿಸಿದ ಸುರುಚಿ ಅವರು ತಮ್ಮ ಕೊನೆಯ ಅವಕಾಶದಲ್ಲಿ ಗುರಿ ಕಟ್ಟಿದಾಗ 9.5 ಅಂಕಗಳನ್ನು ಬುಟ್ಟಿಗೆ ಹಾಕಿಕೊಂಡರು.

ಮುಖ್ಯಾಂಶಗಳು

- 10 ಮೀಟರ್ಸ್ ಪಿಸ್ತೂಲ್ ಫೈನಲ್‌ನಲ್ಲಿ ಚಿನ್ನಕ್ಕೆ ಗುರಿ
- ವೈಯಕ್ತಿಕ ವಿಭಾಗದಲ್ಲಿ ಹ್ಯಾಟ್ರಿಕ್ ಚಿನ್ನದ ಪದಕ ಗೆದ್ದ ಸಾಧನೆ
- ಫೈನಲ್‌ನಲ್ಲಿ ಕಾಮೆಂಟ್ರಿ ಮಾಡಿದ ಮನು ಭಾಕರ್

ಅರ್ಹತಾ ಘಟ್ಟದಲ್ಲಿ ಸುರುಚಿ ಅವರು 588 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ಈ ಹಂತದಲ್ಲಿ ಭಾರತದ ಡಬಲ್ ಒಲಿಂಪಿಕ್ ಪದಕವಿಜೇತ ಶೂಟರ್ ಮನು ಭಾಕರ್ ಅವರು 574 ಅಂಕಗಳೊಂದಿಗೆ 25ನೇ ಸ್ಥಾನ ಪಡೆದರು.

ಫೈನಲ್‌ನಲ್ಲಿ ಕಾಮೆಂಟ್ರಿ ಮಾಡಿದ ಭಾಕರ್ ಅವರು ಯುವ ಶೂಟಿಂಗ್ ಪಟು ಸುರುಚಿಯವರ ಚಿನ್ನದ ಸಾಧನೆಯನ್ನು ಶ್ಲಾಘಿಸಿದರು.

ಬಿಸಿಸಿಐ ಸಭೆ: ವಿಜಯೋತ್ಸವ ಮಾರ್ಗಸೂಚಿ ಸಾಧ್ಯತೆ?

ಬೆಂಗಳೂರು/ಮುಂಬೈ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮಹತ್ವದ ಸಭೆಯು ಶನಿವಾರ ನಡೆಯಲಿದೆ.

ಇತ್ತೀಚೆಗೆ ಐಪಿಎಲ್ ಪ್ರಶಸ್ತಿ ಗೆದ್ದ ಆರ್‌ಸಿಬಿ ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತ ಪ್ರಕರಣ ನಡೆದಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತಕ್ಕೆ 11 ಜನ ಬಲಿಯಾಗಿದ್ದರು. ಈ ವಿಷಯದ ಕುರಿತು ಮಂಡಳಿ ಸಭೆಯಲ್ಲಿ ಚರ್ಚೆಯಾಗಲಿದೆ ಎನ್ನಲಾಗಿದೆ.

ಈ ರೀತಿಯ ಸಂಭ್ರಮಾಚರಣೆಗಳ ಆಯೋಜನೆಗೆ ಮಾರ್ಗಸೂಚಿಗಳನ್ನೂ ಈ ಸಭೆಯಲ್ಲಿ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಅಲ್ಟಿಮೇಟ್ ಕೊಕ್ಕೊ: ವಿದೇಶಿ ಆಟಗಾರರಿಗೂ ಈ ಬಾರಿ ಅವಕಾಶ

ಗುರುಗ್ರಾಮ (ಪಿಟಿಐ): ಅಲ್ಟಿಮೇಟ್ ಕೊಕ್ಕೊ ಲೀಗ್ ಮೂರನೇ ಆವೃತ್ತಿಯು ನವೆಂಬರ್ 29ರಂದು ಆರಂಭವಾಗಲಿದೆ. ಈ ಸಲದ ಲೀಗ್‌ನಲ್ಲಿ ವಿದೇಶಿ ಆಟಗಾರರಿಗೂ ಆಡುವ ಅವಕಾಶ ನೀಡಲಾಗುವುದು ಎಂದು ಭಾರತ ಕೊಕ್ಕೊ ಫೆಡರೇಷನ್ (ಕೆಕೆಎಫ್‌ಐ) ತಿಳಿಸಿದೆ.

‘ಇದೇ ಮೊದಲ ಬಾರಿಗೆ, ಲೀಗ್‌ನಲ್ಲಿ ಆಡಲು ವಿದೇಶಿ ಆಟಗಾರರಿಗೆ ಅನುವು ಮಾಡಿಕೊಡಲು ನಿರ್ಧರಿಸಲಾಗಿದೆ. ಲೀಗ್ ಅನ್ನು ಜಾಗತಿಕವಾಗಿ ಮತ್ತಷ್ಟು ಜನಪ್ರಿಯಗೊಳಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಕೆಕೆಎಫ್‌ಐ ಅಧ್ಯಕ್ಷ ಸುಧಾಂಶು ಮಿತ್ತಲ್ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2022–23ರಲ್ಲಿ ಆರಂಭವಾಗಿದ್ದ ಚೊಚ್ಚಲ ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಒಡಿಶಾ ಜಗರ್‌ನಟ್ಸ್ ಹಾಗೂ ಎರಡನೇ ಆವೃತ್ತಿಯಲ್ಲಿ ಗುಜರಾತ್ ಜೈಂಟ್ಸ್ ಚಾಂಪಿಯನ್ ಆಗಿದ್ದವು.


ಹೊಸಪೇಟೆಯಲ್ಲಿ ಶುಕ್ರವಾರ ಆರಂಭವಾದ ರಾಜ್ಯಮಟ್ಟದ ಅಂಧರ ಚೆಸ್ ಪಂದ್ಯಾವಳಿಯಲ್ಲಿ ಕೃಷ್ಣ ಉಡುಪ (ಕೆಂಪು ಅಂಗಿ) ಅವರು ಪಂದ್ಯದಲ್ಲಿ ಆಡಿದರು ಪ್ರಜಾವಾಣಿ ಚಿತ್ರ

ಅಂಧರ ಮುಕ್ತ ಚೆಸ್: ಕೃಷ್ಣ ಉಡುಪ, ವೃತಿ ಜೈನ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಶಿವಮೊಗ್ಗದ ಕೃಷ್ಣ ಉಡುಪ ಮತ್ತು ವೃತಿ ಜೈನ್ ಅವರು ಇಲ್ಲಿನ ಸೇವಿಯರ್ ಅಂಗವಿಕಲರ ಸೇವಾ ಸಮಿತಿಯು ರೋಟರಿ ಕ್ಲಬ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ನಾಲ್ಕನೇ ರಾಜ್ಯಮಟ್ಟದ ವಿಜಯನಗರ ಕಪ್ ಅಂಧರ ಮುಕ್ತ ಚೆಸ್ ಟೂರ್ನಿಯಲ್ಲಿ ಮೂರನೇ ಸುತ್ತು ಪ್ರವೇಶಿಸಿದ್ದಾರೆ.

ಪುರುಷರ ವಿಭಾಗದಲ್ಲಿ 15 ಮಂದಿ ಹಾಗೂ ಮಹಿಳೆಯರ ವಿಭಾಗದಲ್ಲಿ 5 ಮಂದಿ ಮೂರನೇ ಸುತ್ತು ಪ್ರವೇಶಿಸಿದ್ದಾರೆ. ಈ ಪೈಕಿ 10 ಮಂದಿ ಅಂತರರಾಷ್ಟ್ರೀಯ ಶ್ರೇಯಾಂಕಿತರಾಗಿದ್ದಾರೆ. ಒಟ್ಟು 120 ಮಂದಿ ಸ್ಪರ್ಧಿಗಳು ವಿವಿಧ ಜಿಲ್ಲೆಗಳಿಂದ ಪಾಲ್ಗೊಂಡಿದ್ದಾರೆ. ಸೋಮವಾರ ಟೂರ್ನಿಯು ಕೊನೆಗೊಳ್ಳಲಿದೆ.

ಫಲಿತಾಂಶ: 1.ಕೃಷ್ಣ ಉಡುಪ, ಶಿವಮೊಗ್ಗ, 2.ದೊಡ್ಡಿ ಶ್ರಾವಿಕಾ, ಶ್ರೀ ಶಾರದಾದೇವಿ ಸಂಸ್ಥೆ, ಶಿವಮೊಗ್ಗ. 3.ಶಿವನಗೌಡ ಎನ್.ಎಂ., ಧಾರವಾಡ. 4.ಜ್ಯೋತಿ ಬಿ., ಬೆಂಗಳೂರು. 5.ರಮೇಶ್ ಎ.ಆರ್., ಬೆಂಗಳೂರು. 6.ಕಾರ್ತಿಕ್ ಎಂ.ಜೆ., ಬೆಂಗಳೂರು. 7.ಕಾರ್ತಿಕ್ ಡಿ., ಬೆಂಗಳೂರು. 8. ಲಿಂಗರಾಜು, ಮೈಸೂರು. 9.ಲಕ್ಷ್ಮೀಕಾಂತ್ ಎ.ಸಿಂಪಿ, ಕಲಬುರ್ಗಿ. 10.ರವಿಕಿರಣ್, ಬೆಂಗಳೂರು.

1.ಗಂಗವ್ವ, ಸನಾತನಂ ಟ್ರಸ್ಟ್, ಧಾರವಾಡ. 2.ಶಶಿಧರ ಕೆ.ಎಂ., ಮೈಸೂರು. 3.ಕೆಂಚಪ್ಪ ಸನಾತನಂ ಟ್ರಸ್ಟ್, ಧಾರವಾಡ. 4.ಕಿರಣ್ ಕುಮಾರ್ ಎ.ಸಿಂಪಿ, ಕಲಬುರ್ಗಿ. 5. ರವೀಶ್ ಪಿ.ಎಸ್., ಕೋಲಾರ. 6.ವೃತಿ ಜೈನ್, ಶಿವಮೊಗ್ಗ. 7.ಧರ್ಮರಾಜು, ತುಮಕೂರು. 8.ಸಚಿನ್ ಜಾಧವ್, ಹುಬ್ಬಳ್ಳಿ. 9.ನವೀನ್ ಮೆರ್ವಾಡೆ, ಗದಗ. 10.ಸಂಗಮೇಶ್, ಶ್ರೀ ಶಾರದಾದೇವಿ ಟ್ರಸ್ಟ್, ಶಿವಮೊಗ್ಗ.

ಚಿಲಿಯಲ್ಲಿ ಹಾಕಿ ಮಹಿಳಾ ಜೂನಿಯರ್ ವಿಶ್ವಕಪ್

‘ಸಿ’ ಗುಂಪಿನಲ್ಲಿ ಭಾರತ ತಂಡ

ಲುಸಾನ್ (ಸ್ವಿಜರ್ಲೆಂಡ್) (ಪಿಟಿಐ): ಭಾರತ ತಂಡವು, ಈ ವರ್ಷದ ಡಿಸೆಂಬರ್‌ನಲ್ಲಿ ಚಿಲಿಯ ಸಾಂಟಿಯಾಗೊದಲ್ಲಿ ನಡೆಯಲಿರುವ ಎಫ್‌ಐಎಚ್ ಹಾಕಿ ಮಹಿಳಾ ಜೂನಿಯರ್ ವಿಶ್ವಕಪ್‌ನಲ್ಲಿ ‘ಸಿ’ ಗುಂಪಿನಲ್ಲಿದೆ. ಪ್ರಬಲ ಜರ್ಮನಿ ಜೊತೆಗೆ ಐರ್ಲೆಂಡ್ ಮತ್ತು ನಮೀಬಿಯಾ ಕೂಡ ಇದೇ ಗುಂಪಿನಲ್ಲಿವೆ.

ಎರಡು ವರ್ಷಗಳಿಗೊಮ್ಮೆ ನಡೆಯುತ್ತಿರುವ ಈ ಟೂರ್ನಿಯ 11ನೇ ಆವೃತ್ತಿಯಲ್ಲಿ 24 ತಂಡಗಳು ಭಾಗವಹಿಸುತ್ತಿವೆ. ಆರು ಗುಂಪುಗಳಿದ್ದು ಒಂದೊಂದರಲ್ಲಿ ನಾಲ್ಕು ತಂಡಗಳಿವೆ. ಟೂರ್ನಿಯು ಡಿಸೆಂಬರ್ 1 ರಿಂದ 13ರವರೆಗೆ ನಡೆಯಲಿದೆ.

ಐದು ಬಾರಿಯ ಚಾಂಪಿಯನ್ ನೆದರ್ಲೆಂಡ್ಸ್ ‘ಎ’ ಗುಂಪಿನಲ್ಲಿದ್ದರೆ, ಎರಡು ಬಾರಿಯ ವಿಜೇತರಾದ ಅರ್ಜೆಂಟೀನಾ ‘ಬಿ’ ಗುಂಪಿನಲ್ಲಿದೆ. ಗುಂಪುಗಳ ಡ್ರಾ ಸಮಾರಂಭ ಶುಕ್ರವಾರ ಸಾಂಟಿಯಾಗೊದಲ್ಲಿ ನಡೆಯಿತು.

ಸಾಂಟಿಯಾಗೊದಲ್ಲೇ ನಡೆದ ಈ ಹಿಂದಿನ ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ 16 ತಂಡಗಳು ಭಾಗವಹಿಸಿದ್ದವು. ಭಾರತ ಈ ಹಿಂದೆ ಟೂರ್ನಿಯನ್ನು ಒಮ್ಮೆಯೂ ಜಯಿಸಿಲ್ಲ. 2013ರಲ್ಲಿ ಜರ್ಮನಿಯ ಮಾಂಚೆಂಗ್ಲಡ್‌ಬಾಕ್‌ನಲ್ಲಿ ನಡೆದ ಟೂರ್ನಿಯಲ್ಲಿ ಮೂರನೇ ಸ್ಥಾನ ಮತ್ತು ದಕ್ಷಿಣ ಆಫ್ರಿಕಾದ ಪೊಚೆಫ್‌ಸ್ಟ್ರೂಮ್‌ನಲ್ಲಿ ನಡೆದ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆದಿದ್ದು ಈ ಹಿಂದಿನ ಉತ್ತಮ ಪ್ರದರ್ಶನವಾಗಿದೆ.

ನಿಧಿ ನೇತೃತ್ವದ ತಂಡವು, ವಿಶ್ವಕಪ್‌ಗೆ ಸಿದ್ಧತೆಯಾಗಿ ಇತ್ತೀಚೆಗೆ ಅರ್ಜೆಂಟೀನಾದ ರೊಸಾರಿಯೊದಲ್ಲಿ ನಡೆದ ನಾಲ್ಕು ರಾಷ್ಟ್ರಗಳ ಟೂರ್ನಿಯಲ್ಲಿ ನಾಲ್ಕು ಪಂದ್ಯಗಳನ್ನು ಗೆದ್ದು, ಎರಡರಲ್ಲಿ ಸೋತು ಮಿಶ್ರಫಲ ಕಂಡಿತ್ತು. ಉರುಗ್ವೆ ತಂಡವನ್ನು ಎರಡು ಬಾರಿ ಸೋಲಿಸಿದ್ದ ಭಾರತ, ಚಿಲಿ ಮತ್ತು ಅರ್ಜೆಂಟೀನಾ ವಿರುದ್ಧ ತಲಾ ಒಂದು ಬಾರಿ ಜಯಗಳಿಸಿತ್ತು.

ಗುಂಪುಗಳು: ಎ ಗುಂಪು: ನೆದರ್ಲೆಂಡ್ಸ್, ಜಪಾನ್, ಚಿಲಿ, ಮಲೇಷ್ಯಾ; ಬಿ ಗುಂಪು: ಅರ್ಜೆಂಟೀನಾ, ಬೆಲ್ಜಿಯಂ, ಜಿಂಬಾಬ್ವೆ, ವೇಲ್ಸ್; ಸಿ ಗುಂಪು: ಜರ್ಮನಿ, ಭಾರತ, ಐರ್ಲೆಂಡ್, ನಮೀಬಿಯಾ; ಡಿ ಗುಂಪು: ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಚೀನಾ, ಆಸ್ಟ್ರಿಯಾ, ಇ ಗುಂಪು: ಆಸ್ಟ್ರೇಲಿಯಾ, ಸ್ಪೇನ್, ಕೆನಡಾ, ಸ್ಕಾಟ್ಲೆಂಡ್; ಎಫ್ ಗುಂಪು: ಅಮೆರಿಕ, ದಕ್ಷಿಣ ಕೊರಿಯಾ, ನ್ಯೂಜಿಲೆಂಡ್ ಮತ್ತು ಉರುಗ್ವೆ.

ಜೂನಿಯರ್ ತಂಡಕ್ಕೆ ಹ್ಯಾಟ್ರಿಕ್ ಜಯ

ಆ್ಯಂಟ್‌ವರ್ಪ್ (ಪಿಟಿಐ): ಭಾರತ ಜೂನಿಯರ್ ಮಹಿಳಾ ತಂಡ ಯುರೋಪ್ ಪ್ರವಾಸದಲ್ಲಿ ಬೆಲ್ಜಿಯಂ ತಂಡವನ್ನು 3–2 ಗೋಲುಗಳಿಂದ ಸೋಲಿಸಿತು. ಇದು ಭಾರತ ತಂಡಕ್ಕೆ ಸತತ ಮೂರನೇ ಜಯ.

ಗುರುವಾರ ನಡೆದ ಪಂದ್ಯದಲ್ಲಿ ಸೋನಮ್ ಅವರು ನಾಲ್ಕನೇ ನಿಮಿಷ ಭಾರತ ತಂಡಕ್ಕೆ ಮುನ್ನಡೆ ಒದಗಿಸಿದರು. ಲಾಲ್ತನ್‌ಲುವಾಂಗಿ 32ನೇ ನಿಮಿಷ ಮತ್ತು 51ನೇ ನಿಮಿಷ ಕನಿಕಾ ಸಿವಾಚ್ ಅವರು ಮತ್ತೆ ಎರಡು ಗೋಲುಗಳನ್ನು ಗಳಿಸಿದರು. ಬೆಲ್ಜಿಯಂ ತಂಡಕ್ಕೆ ಮೇರಿ ಗೋಯೆನ್ಸ್ (37ನೇ ನಿಮಿಷ) ಮತ್ತು ಮಾರ್ತೆ ಮೇರಿ (40ನೇ ನಿಮಿಷ) ಗೋಲು ತಂದಿತ್ತರು.

ಭಾರತ ತಂಡವು ಮುಂದಿನ ಪಂದ್ಯವನ್ನು ಆಸ್ಟ್ರೇಲಿಯಾ ವಿರುದ್ಧ ಶನಿವಾರ ಆಡಲಿದೆ.

ಗೆಲುವಿನ ಸನಿಹ ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ ಅರ್ಧಶತಕ

ಏಡನ್ ಮರ್ಕರಂ ಶತಕ ವೈಭವ

ಲಾರ್ಡ್ಸ್ (ಎಪಿ): ಸತತ ಎರಡನೇ ಬಾರಿ ವಿಶ್ವ ಟೆಸ್ಟ್ ಚಾಂಪಿಯನ್ ಪಟ್ಟಕ್ಕೇರುವ ಆಸ್ಟ್ರೇಲಿಯಾ ತಂಡದ ಕನಸಿಗೆ ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ ಅಡ್ಡಿಯಾದರು. ಚೆಂದದ ಶತಕ ಬಾರಿಸಿದ ಮರ್ಕರಂ ತಮ್ಮ ತಂಡವನ್ನು ಗೆಲುವಿನ ಸನಿಹ ತಂದು ನಿಲ್ಲಿಸಿದ್ದಾರೆ.

ಟಿ20 ಕ್ರಿಕೆಟ್‌ನಲ್ಲಿ ಬೀಸಾಟಕ್ಕೆ ಹೆಸರಾದ ಬ್ಯಾಟರ್ ಮರ್ಕರಂ (ಬ್ಯಾಟಿಂಗ್ 102; 159ಎ, 4X11) ಟೆಸ್ಟ್ ಕ್ರಿಕೆಟ್‌ಗೂ ತಾವು ಸೈ ಎಂಬುದನ್ನು ಸಾಬೀತು ಮಾಡಿದರು. ಲಾರ್ಡ್ಸ್ ಅಂಗಳದಲ್ಲಿ ನಡೆಯುತ್ತಿರುವ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಜಯಿಸಲು ದಕ್ಷಿಣ ಆಫ್ರಿಕಾ ತಂಡಕ್ಕೆ 69 ರನ್‌ಗಳಷ್ಟೇ ಬೇಕಿವೆ. ಅದೇ ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾವು ಗೆಲ್ಲಬೇಕೆಂದರೆ ಇನ್ನೂ 8 ವಿಕೆಟ್‌ಗಳನ್ನು ಗಳಿಸಿ ದಕ್ಷಿಣ ಆಫ್ರಿಕಾವನ್ನು ತಡೆಯಬೇಕು.





ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಅರ್ಧಶತಕದ ಸಂಭ್ರಮ (ಎಡಚಿತ್ರ) ಏಡನ್ ಮರ್ಕರಂ ಶತಕ ಸಂಭ್ರಮ ಎಪಿ/ಪಿಟಿಐ ಚಿತ್ರಗಳು

ಪಂದ್ಯದ ಮೂರನೇ ದಿನವಾದ ಶುಕ್ರವಾರ, ಆಸ್ಟ್ರೇಲಿಯಾ ತಂಡವು ಒಡ್ಡಿದ 282 ರನ್‌ಗಳ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ದಿನದಾಟದ ಕೊನೆಯಲ್ಲಿ 54 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 213 ರನ್ ಗಳಿಸಿತು. ಮರ್ಕರಂ ಮತ್ತು ನಾಯಕ ತೆಂಬಾ ಬವುಮಾ (ಬ್ಯಾಟಿಂಗ್ 60) ಅವರು ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 143 ರನ್‌ಗಳಿಂದಾಗಿ ತಂಡವು ಗೆಲುವಿನ ಹಾದಿಯಲ್ಲಿದೆ.

ಸ್ಟಾರ್ಕ್ ಅರ್ಧಶತಕ: ಬಾಲಂಗೋಚಿ ಬ್ಯಾಟರ್ ಮಿಚೆಲ್ ಸ್ಟಾರ್ಕ್ (ಅಜೇಯ 58; 136ಎಸೆತ) ಅವರ ವಿರೋಚಿತ ಬ್ಯಾಟಿಂಗ್‌ನಿಂದಾಗಿ ಆಸ್ಟ್ರೇಲಿಯಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 65 ಓವರ್‌ಗಳಲ್ಲಿ 207 ರನ್ ಗಳಿಸಿತು. ಮೊದಲ ಇನಿಂಗ್ಸ್‌ನಲ್ಲಿ ತಂಡವು 74 ರನ್‌ಗಳ ಮುನ್ನಡೆ ಸಾಧಿಸಿತ್ತು. ಇದರಿಂದಾಗಿ ಗೆಲುವಿನ ವಿಶ್ವಾಸದಲ್ಲಿತ್ತು.

ಅದಕ್ಕೆ ತಕ್ಕಂತೆ ಸ್ಟಾರ್ಕ್ ಅವರು ಬೌಲಿಂಗ್‌ನಲ್ಲಿಯೂ ಮಿಂಚಿದರು. ರಿಯಾನ್ ರಿಕೆಲ್ಟನ್ ಮತ್ತು ವಿಯಾನ್ ಮಲ್ದರ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಆಗ ದಕ್ಷಿಣ ಆಫ್ರಿಕಾ ತಂಡವು 70 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಆತಂಕದಲ್ಲಿತ್ತು.

ಈ ಹಂತದಲ್ಲಿ ಆತ್ಮವಿಶ್ವಾಸದಿಂದ ಆಡುತ್ತಿದ್ದ ಮರ್ಕರಂ ಅವರೊಂದಿಗೆ ಬವುಮಾ ಸೇರಿಕೊಂಡರು. ಇಬ್ಬರೂ ಸೇರಿ ಬೌಲರ್‌ಗಳಿಗೆ ಬೆವರಿಳಿಸಿದರು. ಸ್ಟಾರ್ಕ್, ಪ್ಯಾಟ್ ಕಮಿನ್ಸ್ ಹಾಗೂ ಸ್ಪಿನ್ನರ್ ನೇಥನ್ ಲಯನ್ ಅವರ ಉತ್ತಮ ಎಸೆತಗಳಿಗೆ ತಕ್ಕ ಉತ್ತರ ನೀಡುವಲ್ಲಿ ಯಶಸ್ವಿಯಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 57.1 ಓವರ್‌ಗಳಲ್ಲಿ 138. ಆಸ್ಟ್ರೇಲಿಯಾ: 56.4 ಓವರ್ ಗಳಲ್ಲಿ 212. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 65 ಓವರ್‌ಗಳಲ್ಲಿ 207 (ಮಿಚೆಲ್ ಸ್ಟಾರ್ಕ್ ಔಟಾಗದೇ 58, ಜೋಶ್ ಹ್ಯಾಜಲ್‌ವುಡ್ 17, ಕಗಿಸೊ ರಬಾಡ 59ಕ್ಕೆ4, ಲುಂಗಿ ಎನ್‌ಗಿಡಿ 38ಕ್ಕೆ3) ದಕ್ಷಿಣ ಆಫ್ರಿಕಾ: 56 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 213 (ಏಡನ್ ಮರ್ಕರಂ ಬ್ಯಾಟಿಂಗ್ 102, ವಿಯಾನ್ ಮಲ್ದರ್ 27, ತೆಂಬಾ ಬವುಮಾ ಬ್ಯಾಟಿಂಗ್ 65, ಮಿಚೆಲ್ ಸ್ಟಾರ್ಕ್ 53ಕ್ಕೆ2)

ಪುಟಿದೇಳುವ ಒತ್ತಡದಲ್ಲಿ ಹರ್ಮನ್ ಪಡೆ

ಎಫ್‌ಐಎಚ್ ಪ್ರೊ ಲೀಗ್: ಇಂದು ಆಸ್ಟ್ರೇಲಿಯಾ ಸವಾಲು

ಆ್ಯಂಟ್‌ವರ್ಪ್ (ಪಿಟಿಐ): ಸತತ ನಾಲ್ಕು ಸೋಲುಗಳಿಂದ ಕಂಗೆಟ್ಟಿರುವ ಭಾರತ ಪುರುಷರ ಹಾಕಿ ತಂಡವು ಶನಿವಾರ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಪುಟಿದೇಳುವ ಒತ್ತಡದಲ್ಲಿದೆ.

ಭಾರತ ತಂಡಕ್ಕೆ ಈ ಸಲದ ಯುರೋಪಿಯನ್ ಲೆಗ್ ಟೂರ್ನಿಯು ನಿರಾಶಾದಾಯಕವಾಗಿದೆ. ಒಲಿಂಪಿಕ್ಸ್ ಚಾಂಪಿಯನ್ ನೆದರ್ಲೆಂಡ್ಸ್ ಎದುರು ಭಾರತ ತಂಡವು ಎರಡು ಪಂದ್ಯಗಳಲ್ಲಿ ಸೋತಿತ್ತು. ಅದರ ನಂತರದ ಎರಡು ಪಂದ್ಯಗಳಲ್ಲಿ ಅರ್ಜೆಂಟಿನಾ ವಿರುದ್ಧವೂ ಸೋಲಿನ ಕಹಿ ಅನುಭವಿಸಿತ್ತು.

ಸದ್ಯ 12 ಪಂದ್ಯಗಳಿಂದ 15 ಅಂಕ ಗಳಿಸಿರುವ ಭಾರತ ತಂಡವು ಐದನೇ ರ‍್ಯಾಂಕ್ ಪಡೆದಿದೆ. ಅಗ್ರ ಮೂರು ತಂಡಗಳಲ್ಲಿ ಸ್ಥಾನ ಪಡೆಯಬೇಕಾದರೆ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿದೆ.



ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಪಿಟಿಐ ಚಿತ್ರ

‘ನಮ್ಮ ತಂಡಕ್ಕೆ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಜಯಿಸುವುದು ಬಹಳ ಮುಖ್ಯವಾಗಿದೆ. ಇದರಿಂದ ನಮಗೆ ಮಹತ್ವದ ಅಂಕಗಳಷ್ಟೇ ಅಲ್ಲ; ತಂಡವನ್ನು ಗೆಲುವಿನ ಹಳಿಗೆ ತರಲು ಸಾಧ್ಯವಾಗುತ್ತದೆ’ ಎಂದು ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಹೇಳಿದರು. ಕೈಬೆರಳಿನ ಗಾಯದಿಂದಾಗಿ ಅವರು ಕಳೆದ ಪಂದ್ಯದಲ್ಲಿ ಆಡಿರಲಿಲ್ಲ.

ನೆದರ್ಲೆಂಡ್ಸ್ ತಂಡದ ಎದುರು ಲಭಿಸಿದ್ದ ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಗೋಲು ಗಳಿಸುವಲ್ಲಿ ಭಾರತ ತಂಡವು ವೈಫಲ್ಯ ಅನುಭವಿಸಿತ್ತು.

ಮೊದಲ ಪಂದ್ಯದಲ್ಲಿ ಭಾರತ 3–4ರಿಂದ ಅರ್ಜೆಂಟಿನಾ ವಿರುದ್ಧ ಗೆಲುವು ಕೈಚೆಲ್ಲಿತ್ತು. ಎರಡನೇ ಪಂದ್ಯದಲ್ಲಿ ಲೇಟ್ ಪೆನಾಲ್ಟಿ ನಿರಾಕರಣೆಗೊಂಡ ಕಾರಣ ಭಾರತ ತಂಡವು 1–2ರಿಂದ ಸೋತಿತು. ಅರ್ಜೆಂಟಿನಾ ತಂಡವು ಎಂಟು ಪೆನಾಲ್ಟಿ ಕಾರ್ನರ್ ಪಡೆಯುವಲ್ಲಿ ಯಶಸ್ವಿಯಾಗಿತ್ತು. ಆದರೆ, ಭಾರತ ತಂಡವು ಕೇವಲ 3 ಅವಕಾಶ ಪಡೆದಿತ್ತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 7ನೇ ಸ್ಥಾನದಲ್ಲಿರುವ ಭಾರತ ತಂಡವು ಜೂನ್ 21 ಮತ್ತು 22ರಂದು ಬೆಲ್ಜಿಯಂ ವಿರುದ್ಧ ಪಂದ್ಯಗಳನ್ನು ಆಡುವುದರೊಂದಿಗೆ ಯುರೋಪಿಯನ್ ಲೆಗ್ ಮುಕ್ತಾಯವಾಗಲಿದೆ.

ತಾಯಿಗೆ ಹೃದಯಾಘಾತ ತವರಿಗೆ ಮರಳಿದ ಗೌತಮ್ ಗಂಭೀರ್

ಬೆಕೆನ್‌ಹ್ಯಾಮ್ (ಇಂಗ್ಲೆಂಡ್) (ಪಿಟಿಐ): ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ತಾಯಿ ಸೀಮಾ ಗಂಭೀರ್ ಅವರಿಗೆ ಹೃದಯಾಘಾತ ಆಗಿದ್ದು ನವದೆಹಲಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಅದರಿಂದಾಗಿ ಗಂಭೀರ್ ಅವರು ಲಂಡನ್‌ನಿಂದ ದೆಹಲಿಗೆ ಮರಳಿದ್ದಾರೆ.



ಇದೇ 20ರಿಂದ ಆರಂಭವಾಗಲಿರುವ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದೊಂದಿಗೆ ಗಂಭೀರ್ ತೆರಳಿದ್ದರು.

‘ಗೌತಮ್ ಅವರ ತಾಯಿಗೆ ಬುಧವಾರ ಹೃದಯಾಘಾತವಾಗಿದೆ. ಅದರಿಂದಾಗಿ ಗುರುವಾರವೇ ಗೌತಮ್ ಮತ್ತು ಕುಟುಂಬದ ಸದಸ್ಯರು ದೆಹಲಿಗೆ ಹೋದರು’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮೂಲಗಳು ತಿಳಿಸಿವೆ.

ಗೌತಮ್ ಅವರ ಅನುಪಸ್ಥಿತಿಯಲ್ಲಿ ಸಹಾಯಕ ಕೋಚ್ ರಿಯಾನ್ ಟೆನ್ ಡಾಷೆಟ್ ಅವರು ತಂಡದ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ. ಅವರೊಂದಿಗೆ ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಮತ್ತು ಬ್ಯಾಟಿಂಗ್ ಕೋಚ್ ಸಿತಾಂಶು ಕೋಟಕ್ ಅವರೂ ಇದ್ದಾರೆ. ಶುಕ್ರವಾರ ಭಾರತ ಮತ್ತು ಭಾರತ ಎ ತಂಡದ ನಡುವಣ ಅಭ್ಯಾಸ ಪಂದ್ಯ ಆರಂಭವಾಗಿದೆ.

‘ಗೌತಮ್ ಅವರ ತಾಯಿಯು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಸದ್ಯ ಐಸಿಯು (ತುರ್ತು ನಿಗಾ ಘಟಕ)ನಲ್ಲಿದ್ದಾರೆ. ಅವರು ಶೀಘ್ರ ಗುಣಮುಖರಾಗುತ್ತಿದ್ದಂತೆಯೇ ಗೌತಮ್ ಇಂಗ್ಲೆಂಡ್‌ಗೆ ಬರಲಿದ್ದಾರೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಕರ್ನಾಟಕದ ಆಟಗಾರನಿಗೆ ಮುಖ್ಯ ಕೋಚ್ ಗಂಭೀರ್ ಸ್ವಾಗತ

ಕರುಣ್‌ಗೆ ಮರಳಿ ಅರಳುವ ಛಲ

ಬೆಕೆನ್‌ಹ್ಯಾಮ್ (ಪಿಟಿಐ): ಭಾರತದ ಕ್ರಿಕೆಟ್ ತಂಡಕ್ಕೆ ಮರುಪ್ರವೇಶ ಮಾಡುವುದು ಅಪರೂಪದ ಸಂಗತಿ. ಅಂತಹ ಅವಕಾಶ ಗಳಿಸಿದ ಕೆಲವೇ ಆಟಗಾರರಲ್ಲಿ ಕನ್ನಡಿಗ ಕರುಣ್ ನಾಯರ್ ಅವರೂ ಒಬ್ಬರಾಗಿದ್ದಾರೆ.

‘ನನಗೆ ಇದು ನಿಜಕ್ಕೂ ವಿಶೇಷ ಎನಿಸುತ್ತಿದೆ. ನಾನು ಅದೃಷ್ಟವಂತ ಮತ್ತು ಈ ಅವಕಾಶಕ್ಕಾಗಿ ಕೃತಜ್ಞನಾಗಿರುವೆ. ಭಾರತ ತಂಡದಲ್ಲಿ ಮತ್ತೊಮ್ಮೆ ಸ್ಥಾನ ಪಡೆಯಲು ನನಗೆ ಸಾಧ್ಯವಾಗಿದೆ. ಈ ಅವಕಾಶವನ್ನು ಎರಡೂ ಕೈಗಳಿಂದ ಬಾಚಿಕೊಂಡು ಯಶಸ್ವಿಯಾಗುವುದೇ ನನ್ನ ಧ್ಯೇಯ’ ಎಂದು ಕರುಣ್ ಅವರು ಬಿಸಿಸಿಐ ಡಾಟ್ ಟಿವಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಕರುಣ್ ಅವರು ಭಾರತ ತಂಡಕ್ಕೆ ಎಂಟು ವರ್ಷಗಳ ನಂತರ ಮರಳಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಗಳಿಸಿದ ಭಾರತದ ಎರಡನೇ ಬ್ಯಾಟರ್ ಎಂಬ ಹೆಗ್ಗಳಿಕೆ ಅವರದ್ದು. ಅವರು ಭಾರತ ಎ ತಂಡದಲ್ಲಿ ಆಡಿದ ನಂತರ ಟೆಸ್ಟ್ ಬಳಗಕ್ಕೆ ಮರಳಿದಾಗ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಸ್ವಾಗತಿಸಿದ್ದರು.

‘ಕಳೆದುಕೊಂಡ ಸ್ಥಾನವನ್ನು ಮರಳಿ ಪಡೆಯುವುದು ಸುಲಭವಲ್ಲ. ನಾವು ಪೇರಿಸುವ ರನ್‌ಗಳು, ಅದರೊಂದಿಗೆ ಎಂದಿಗೂ ಸೋಲದ ಗಟ್ಟಿ ಛಲ ಮುಖ್ಯ ಆಗುತ್ತವೆ. ಇದು ತಂಡದ ಎಲ್ಲರಿಗೂ ಪ್ರೇರಣೆಯಾಗುವಂತಹ ಯಶೋಗಾಥೆ. ಮರಳಿ ಬಂದಿರುವ ಕರುಣ್‌ಗೆ ಸ್ವಾಗತ’ ಎಂದು ಕೋಚ್ ಗಂಭೀರ್ ಅವರು ವಿಡಿಯೊದಲ್ಲಿ ಹೇಳಿದ್ದಾರೆ.



ಬಾಲ್ಯದ ಗೆಳೆಯ ಮತ್ತು ಕರ್ನಾಟಕ ತಂಡದಲ್ಲಿ ಜೊತೆಯಾಗಿ ಆಡಿರುವ ಕೆ.ಎಲ್. ರಾಹುಲ್ ಕೂಡ ಕರುಣ್ ಮರಳುವಿಕೆಯನ್ನು ಸ್ವಾಗತಿಸಿದ್ದಾರೆ.

‘ದೀರ್ಘ ಕಾಲದಿಂದ ಕರುಣ್ ಮತ್ತು ನನ್ನ ಒಡನಾಟವಿದೆ. ಏಕಾಂಗಿಯಾಗಿ ಇಂಗ್ಲೆಂಡ್‌ನಲ್ಲಿ ಕ್ಲಬ್ ಕ್ರಿಕೆಟ್ ಆಡುತ್ತ ಬಹಳಷ್ಟು ಸಮಯ ಶ್ರಮಪಟ್ಟಿದ್ದಾರೆ. ಅವರು ಪಟ್ಟ ಪರಿಶ್ರಮಕ್ಕೆ ಫಲ ಸಿಕ್ಕಿದೆ. ಅವರು ಭಾರತ ತಂಡಕ್ಕೆ ಮರಳಿ ಬಂದಿರುವುದು ಕರುಣ್ ಹಾಗೂ ಅವರ ಕುಟುಂಬಕ್ಕೆ ವಿಶೇಷ ಸಂತಸದ ಸಂಗತಿ. ನಮ್ಮಂತಹ ಗೆಳೆಯರಿಗೂ ಸಂತಸದ ಸಂಗತಿ’ ಎಂದು ರಾಹುಲ್ ಹೇಳಿದ್ದಾರೆ.

‘ಕರುಣ್ ಅವರು ಮರಳಿ ಬಂದಿರುವುದು ಒಂದು ಪ್ರೇರಣೆಯ ಕತೆಯಾಗಿದೆ. ಅವರ ಅನುಭವ ಮತ್ತು ಕೌಂಟಿ ಕ್ರಿಕೆಟ್‌ನಲ್ಲಿ ಕಲಿತ ಸಂಗತಿಗಳಿಂದ ಭಾರತ ಕ್ರಿಕೆಟ್ ತಂಡಕ್ಕೆ ಲಾಭವಾಗಲಿದೆ’ ಎಂದೂ ರಾಹುಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಭಾರತ ತಂಡದ ಡ್ರೆಸಿಂಗ್ ರೂಮ್‌ಗೆ ಮರಳಿರುವ ಈ ಕ್ಷಣವನ್ನು ಮನತುಂಬಿ ಆನಂದಿಸುತ್ತಿದ್ದೇನೆ. ಈ ಅನುಭೂತಿಯು ನನಗೆ ಅಮೂಲ್ಯವಾಗಿದೆ. ನನ್ನೊಳಗೆ ಹಲವಾರು ಭಾವನೆಗಳಿವೆ. ಆದರೆ ಅವುಗಳನ್ನು ವ್ಯಕ್ತಪಡಿಸುವ ಬಗೆ ಈಗ ಹೊಳೆಯುತ್ತಿಲ್ಲ. ಇದೊಂದು ಅನನ್ಯ ಭಾವವಾಗಿದೆ’ ಎಂದು ಕರುಣ್ ನಾಯರ್ ಹೇಳಿದ್ದಾರೆ.

ವಿಮಾನ ದುರಂತ: ಕ್ರಿಕೆಟಿಗರ ಶ್ರದ್ಧಾಂಜಲಿ

ಅಹಮದಾಬಾದಿನಲ್ಲಿ ಗುರುವಾರ ಸಂಭವಿಸಿದ ವಿಮಾನ ಪತನದಲ್ಲಿ ಮೃತರಾದವರಿಗೆ ಭಾರತ ಮತ್ತು ಭಾರತ ಎ ತಂಡಗಳ ಆಟಗಾರರು ಹಾಗೂ ನೆರವು ಸಿಬ್ಬಂದಿ ಶ್ರದ್ಧಾಂಜಲಿ ಸಲ್ಲಿಸಿದರು.

ಉಭಯ ತಂಡಗಳ ನಡುವಣ ಶುಕ್ರವಾರ ಇಲ್ಲಿ ಇಂಟ್ರಾಸ್ಕ್ವಾಡ್ ಅಭ್ಯಾಸ ಪಂದ್ಯ ನಡೆಯಿತು. ಅದಕ್ಕೂ ಮುನ್ನ ಎಲ್ಲ ಆಟಗಾರರೂ ಒಂದು ನಿಮಿಷ ಮೌನಾಚರಣೆ ಮಾಡಿ ಮೃತರಿಗೆ ಗೌರವ ಸಲ್ಲಿಸಿದರು. ತೋಳಿಗೆ ಕಪ್ಪುಪಟ್ಟಿ ಧರಿಸಿಕೊಂಡು ಆಡಿದರು.

ಡಬ್ಲ್ಯುಟಿಸಿಯಲ್ಲಿ ಶ್ರದ್ಧಾಂಜಲಿ: ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಆಟಗಾರರೂ ತಮ್ಮ ತೋಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಆಡಿದರು. ಆ ಮೂಲಕ ಅಹಮದಾಬಾದ್ ವಿಮಾನ ದುರಂತದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

‘ಶುಕ್ರವಾರ ದಿನದಾಟದ ಆರಂಭಕ್ಕೂ ಮುನ್ನ ಉಭಯ ತಂಡಗಳ ಆಟಗಾರರು ಸೇರಿ ಒಂದು ನಿಮಿಷ ಮೌನಾಚರಣೆ ಮಾಡಿದರು’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ ಶನಿವಾರ • ಜೂನ್ 14, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

BDA, RESIDENTIAL & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

Banashankari

"AVAILABLE WANTED BDA Sites Banashankari 6TH Stg,Anjanapura Vishweshwaraiah Lyt 50x80 40x60 30x40 20x30,Value Properties Call Raju:9901315949, 9731814437

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BDA, RESIDENTIAL, Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

"AVAILABLE' WANTED BDA Sites Banashankari 6TH Stage, 20x30,30x40,40x60, 50x80, Genuine Buyers/Sellers : 9902764626 9513332646

BANASHANKARI 6TH Stage, 9th Block, #33/A, 40x60 S/F, 100 Feet Parallel, 2.60Cr. Negotiable. OWNER: 9799099699, 9740075563.

AVAILABLE BSK 6th Stage 50x80 100ft Road NF, 50x80 60ft Road EF 7th Block Contact: 9845062822/ 8660751654

Chandra Layout

SITE FOR SALE 1125sft, 40feet Road, BCC Layout Near Water Tank, Chandra Layout. 9880311959

Gnanabharathi

40X60 EAST Facing Site for Sale BDA Jnanabarathi 2nd Block. Brokers Excuse. Genuine Buyer Call: 8105688602.

Peenya

CHOKKASANDRA 1 grd plots Patel Kempaiah Layout & Ullal near Agastya Vidyanikethan. 9789522759

HRBR Layout

HRBR, RT NAGAR, HAL 3RD BDA Plots/ Houses 2400-3200 Sqft Price 4.80 to 7Cr FALCON: 9845447868

Jakkur

PRIME RESIDENTIAL Corner Plot for Sale, 4400sqft North/ West at Jakkur, Telecom Layout. Call: 9019144869.

Jayanagar

2808 SQFT. Rs.26,000/-. Per Sqft. South Property #23, 8th Main, 4th Cross, Jayanagar 1st East, Byrasandra. Call: 9886124124.

K R Puram

KR PURAM, BLR , Residential vacant plots in a well known developed layout close to Train station, ITPark (adjacent 2 plots 2957 and 4800 sft.) CONTACT PH: 9845674424

Kempegowda Layout

KEMPEGOWDA LAYOUT 50x80,Site #4233,West-facing 3rd Block"L"sector 300feet-road,40x60 Site #547,East-facing 1st Block"K"sector 40feet-road. Contact Owner:8095002424

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

NADAPRABHU KEMPEGOWDA LAYOUT 1st Block 30X40 WEST FACING SITE FOR SALE. Contact: 6366610999

Mysore Road

NADAPRABHU KEMPEGOWDA Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

NAGARABAVI D_GROUP LAYOUT 30x40 Sale, BBMP (E Swatthu) A Khatha, South Face, Near Agasthya School. Call: 9663226688.

SITE SALE, North Facing 40x60 Sqft, Behind Namooru Tindi, Nagarbhavi, No Brokers/ No Agents: 9448377834

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

SMV LAYOUT 5th Block, 30x40 Sale, North Face, Behind Venkateshwara Temple, Near KLE Law College, BDA Allottee. 9663226688.

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

"VISHVESWARAIAH 8TH-BLOCK 40x60 west facing (BDA) Allottee site, Good Location, Genuine Buyers Contact: 9900925309"

AVAILABLE BDA Site Vishweshwariah Layout 3rd Block 30X40 West Facing GOOd Location Genuine Buyers: 7338688111

30X40 BDA Site Sale Vishveshwaraiah Layout 3rd-Block Near BDA Complex & 100Ft Ring Road Parllel 12500/- Negotiable 8970306030

WANTED BDA Sites 30x40, 40x60, 50x80 Vishweshwariah Layout Any Facing, Any Property Contact: 9035470616

VISVESWARAIAH LAYOUT 8th Block 30x40 BDA Site For Sale, 40' Road 14000/- Per Sft.: 9845488488

SMV 4TH Block 50X80 West 80ft Road Commercial Allotted Site 6th Block, 30X40 North 9900224071

Yelahanka

DC CONVERSION BIAAPA Approved A KATHA 30x40 site 30,00,000/- on IVC MAIN ROAD. Near Yelahanka. Ready for Construction. 9663884211

Mysore

DC_CONVERTED RESIDENTIAL land, 7guntas (7623sq/ft) for Sale Close to Arka Dhama, Bogadi highway, Mysore, Call: Raghu- 9845518228

0% BROKERAGE for Buying and Selling any properties in Mysore city. Contact: Mysore Estates Vishwanath Gowda 9590911111

KHB ALLOTTED 30x40 Site at Kenchalgudu, Mysore City 46 Lakhs Clear Documents Owner Contact: 9606866368

Ramanagara

RESIDENTIAL CONVERTED RCUDA Approved (Semi-Commercial) Site For Sale in Ramanagar 10000Sqft 400Meters from highway 40 FeetRoad, 2000/P.Sft Owner- 9900115519

Hegganahalli

PLOT SALE 160ftx100ft For Outright Sale @ Hegganahalli Cross. East Facing Bangalore-91 9900287834/ 9448377834

House

Vishweshwariah Layout

BUILDING FOR_SALE BDA East 30x40 4BHK Triplex Home 7thblock SMV layout Nagarbhavi. 9019962007, 9742974929.

Banashankari

SALE RESIDENTIAL Independent Bungalow in BSK 2nd Stage 36X85, Built-up 10,000sft, West facing, Basement 4 Carparking, G+3 floors with terrace Garden & lift, Ready to Move Verna Developers, Barton Center MG Road 9353128035/ 9916310226 (Brokers excuse)

Basaveshwaranagar

SALE SITE 1600 SQFT A KHATHA WITH EASTHI READY FOR REGISTRATION WITH 5BHK HOUSE 1 CRORE 90 LAKHS 9035883017

Mahalakshmi Layout

RESIDENTIAL HOUSE for sale 1200sft site area, 2400sft builtup area, Mahalakshmi layout Bengaluru, A katha, Clear titles Single Qwner, Tenanted property, G+2floors, fetching 57k rent, West facing, Good location, Near to Metro. 3.30cr. Ph: 99025 99958.

Flat

Basavanagudi

BASAVANAGUDI SALE FLAT BRAND NEW 2050 SFT NEAR KR-PARK OC-CC 3.4 Corer NEGO. SHIVU 9880004149

Frazer Town

FLAT SUITABLE for Residential or Consultancy office for sale at Millers Road, Near Manipal Hospital 1F, 1341sq.ft UDS 857sqft, 14 flats. 'Estates Point'- 9980946638

Residential/ Commercial

Multiple Locations



Sri Rajarajeshwari
Property Junction
HUGE PROPERTY
For Sale in Bangalore
Devanahalli, Whitefield, Hoskote, Doddaballapura, Nelamangala,Kanakapura
7483637817, 9880578159

Commercial Building

Airport Road

FOR SALE Fully Furnished Office Old Airport Road VDB TOUCHDOWN Next to HAL Museum 7447 Sqft 96 Work Stations 5 Cabins 3 Meeting Room 1 Board 1 MD Cabin 6 Carparks. NO PHONE CALLS WHATS APP MESSAGE ONLY TO: 9845031550

Seshadripuram

SALE PRIME Location Seshadripuram vacant Building 6000 Sqft North Facing 42'x70' site full cheque clear titles. Contact 10 AM to 5 PM at 38/1, NSI Street, Behind Seshadripuram Main College. 560020.

Commercial Land

Mysore

2.22 ACRE land for Sale at Gundlupet 2 acres 22 Guntas Commercial converted (Hotel purpose) land for Sale at Agathagowdanahalli off. Mysore Ooty National Highway. Contact; Mysore Estates Vishwanath Gowda 9590911111

Commerical

Banashankari

FOR SALE Commercial BDA Site Banashankari 6th Stage 100ft Road 50x80 North Facing: 9845146725/ 9741466369

Basaveshwaranagar

COMMERCIAL PLOT SALE Basaveswarnagar Main Road 100 Feet Road 3250 Sqft BBMP A Katha West Facing, 21,000/- PSft: 9916014394

Gnanabharathi

COMMERCIAL PROPERTY Ullal Main Road 1500sft South West Corner & Nagarbhavi Kengeri Ring Road 4800sft 9980433004

Vishweshwariah Layout

BDA COMMERCIAL 40X60 Sale KLE Law College Circle South SMV 5th-Block 80ft Road: 9945694783/ 9980433004

RENTAL PROPERTIES

Accommodation Available

Flats

FOR LEASE: 2 Bedroom Flat at SVG Nagara (Near Vijaya Nagara) Contact: 9351225019

REAL ESTATE BUYING

Agricultural Land

Devanahalli

REQUIRED/WANTED AGRICULTURE green zone or converted 4 to 50 acres outright purchase and joint venture for MNC Company and NRI investors in and around Doddaballapura Devanahalli Chikkaballpur Sarjapura Road Hoskote-Chintamani-Malur surroundings, minimum road width 40 feet plus. Payment flexible. Elite Group 9916592400/ 9986682400elitegroupsrealtors@gmail.com

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Villas/Bunglows

Jayanagar

BUY / Sale / Rent- Prestige Falcon City, Total Environment Mantri Serenity Sobha Indraprastha Purvankara Prestige West Woods Brigade Tata Promont Embassy and many more and several protects Plotted, Apartment and Villa projects in Koramangala, Jayanagar, Basavangudi, RMV Layout, Vijayanagar, Rajajinagar. 9591932400.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

MORE Classifieds IN MAIN ISSUE

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

HILIVING ESTATES
The land that keeps on giving



RAMNAGAR, GREATER BANGALORE,
ರಾಮನಗರ, ಗ್ರೇಟರ್ ಬೆಂಗಳೂರು

Starting From
5.5 Guntas

ಮ್ಯಾನೇಜ್ಡ್ ಫಾರ್ಮ್ಲ್ಯಾಂಡ್
Managed 10 Acre Farmland

CLUBHOUSE | HORSE RAISING | CATTLE FARMING | RESORT WITH AMENITIES | SANDALWOOD, MANGO, ARECANUT, COCONUT PLANTATIONS

73 381 111 33
78 999 022 34

hilivingestates.com

Farmlands & Villa Plots
ಫಾರ್ಮ್ಲ್ಯಾಂಡ್ ಗಳು & ವಿಲ್ಲಾ ಪ್ಲಾಟ್‌ಗಳು

LIFETIME VALUE
GUARANTEED RETURNS

Our other farmlands,
ನಮ್ಮ ಇತರ ಫಾರ್ಮ್ಲ್ಯಾಂಡ್ ಗಳು

Sakleshpur - ಸಕ್ಲೇಶಪುರ

Rain by the farm, ರೈನ್ ಬೈ ದಿ ಫಾರ್ಮ್-
Land 50 Acres (1 Acre Starts @ 87lac)

Winds Of Malanadu, ವಿಂಡ್ಸ್ ಆಫ್ ಮಲ್ನಾಡು-
Land 28 Acres (10 Gunta Starts @ 27lac)

Chikkamagaluru - ಚಿಕ್ಕಮಗಳೂರು-

The Chanting hills, ದಿ ಚಾಂಟಿಂಗ್ ಹಿಲ್ಸ್
Land 26 Acres (Half Acre Starts @ 27lac)

Strategic Partner
Hiliving
HI LIVING HOMES
BLOOMFIELDS

PRM/KA/RERA/1251/309/PR/100125/007379



MYSORE RD, KUMBALGODU,
JUST 7 MINS FROM CHALLAGHATTA METRO ST

ಮೈಸೂರು ರಸ್ತೆ ,ಕುಂಬಳಗೋಡು

Dimension starts from 30x40..

BDA/ RERA

MARKET PRICE ~~6999* PER SQFT~~
OUR PRICE 6799* PER SQFT

96 2005 12 12

bloom.hilivinghomes.com

ಸರ್ಕಾರಿ ನೌಕರರ ಬಡಾವಣೆ
(ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನಗಳು)

Government Employees Layout
Booking Open for General Public
Invest in Land Invest in Future
ONLY **240 APPLICATIONS** AVAILABLE



Required Documents
Adhaar Card
Photos
Working ID



RESIDENTIAL & COMMERCIAL PLOTS AVAILABLE

- Just 1km from New DC Office
- 1.5km Foxconn Manufacturing unit (IPhone Company.
- near 10500 Acres - ASia's Largest IT Park (ITIR),Near KIADB Industrial Area.

BOOK NOW
FOR APPLICATIONS & MEMBERSHIP
91084 86860
99805 07277
Only Limited Applications Available

SOCIETY SITES FOR INVESTMENT WITH
PREMIUM AMENTIES

AISHWARYA'S

100% NATURAL

ಚಹಾದ ಪ್ರತಿ ಗುಟುಕಿನಲ್ಲಿ,
ನಿಮ್ಮ ಶಾಂತಿಯ ಕ್ಷಣವನ್ನು ಅನುಭವಿಸಿ.

MONEY BACK GUARANTEE

"ಕರ್ನಾಟಕದ ಅತ್ಯಂತ"
ರುಚಿಕರವಾದ ಚಹಾ
ಅದ್ಭುತ ರುಚಿ • ಮಿತವಾದ ಬೆಲೆ • ಉತ್ಕೃಷ್ಟ ಗುಣಮಟ್ಟ



TRADE ENQUIRIES
Bangalore
Prasanna Kumar ASM
+91 9980 157884
Rest of Karnataka
Satish RSM
+91 97313 03541

Kt Special Tea
SHALIMAR GOLD TEA

www.aishwaryateaindustries.com
aishwaryatea@gmail.com